# ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Wednesday, the 12th July 1972/Ashadha 21, 1894 (Saka)*

The House met in the Assembly Chamber, Vidhana Soudha, at Twelve of the Clock.

MADAM SPEAKER [SMT. K. S. NAGARATHNAMMA] in the Chair.

---

## REVISED BUDGET ESTIMATES FOR 1972-73

### Demands for Grants: Demand No. 18, 20, 38, 51 and 22

† ಶ್ರೀ ಎಚ್. ಸಿದ್ಧವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆದಿವಸ ನಾನು ಮಂಡಿಸಿರತಕ್ಕಂಥ ಡಿಮ್ಯಾಂಡ್ ಮೇಲೆ ವಿಪುಲವಾದ ಚರ್ಚೆಯಾಗಿ ಈ ಸಭೆಯ ಎರಡೂ ಭಾಗದ ಸುಮಾರು 22 ಜನ ಮಾನ್ಯ ಸದಸ್ಯರುಗಳು ಇದರಲ್ಲಿ ಭಾಗವಹಿಸಿದ್ದರು. ವೈಯಕ್ತಿಕವಾಗಿ ನನ್ನ ವಿಚಾರದಲ್ಲಿ ಬಹಳ ಆದರದ ಮಾತುಗಳನ್ನಾಡಿದ್ದಾರೆ. ಅದಕ್ಕಾಗಿ ಅಭಾರಿಯಾಗಿದ್ದೇನೆ ಮತ್ತು ಚಿರಋಣಿಯಾಗಿದ್ದೇನೆ. ಎಷ್ಟರಮಟ್ಟಿಗೆ ಅವರ ಆಶಯವನ್ನು ಪೂರೈಸುವುದಕ್ಕೆ ಭಗವಂತನು ಶಕ್ತಿ ಕೊಡುತ್ತಾನೋ ನನಗೆ ಗೊತ್ತಿಲ್ಲ. ಈ ಇಲಾಖೆಯಲ್ಲಿರುವವರಿಗೆ ತ್ರಿಕರಣಶುದ್ಧಿಯಾಗಿ ನಾನು ನನ್ನ ಕರ್ತವ್ಯವನ್ನು ನಿರ್ವಹಣೆ ಮಾಡುತ್ತೇನೆ ಅನ್ನತಕ್ಕಂಥ ಒಂದು ಭರವಸೆಯನ್ನು ಈ ಸಭೆಗೆ ಕೊಡುತ್ತೇನೆ. ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಯಾವ ರೀತಿಯಿಂದಲೂ ಕುಗ್ಗದ ಒಂದು ದೃಢವಾದ ನಂಬಿಕೆಯನ್ನು ಕೆಲಸದಲ್ಲಿ ಇಟ್ಟುಕೊಂಡು ನನ್ನ ಕಾರ್ಯ ಮಾಡುತ್ತೇನೆ ಎಂದು ಇಷ್ಟು ಮಾತ್ರ ಹೇಳುತ್ತೇನೆ. ಈ ಬೇಡಿಕೆಗಳ ಮೇಲೆ ಮಾತನಾಡಬೇಕಾದರೆ ನನ್ನ ಮಾನ್ಯ ಸ್ನೇಹಿತರಾದ ರಾಮನಗರದ ಶ್ರೀಮಾನ್ ಪುಟ್ಟಸ್ವಾಮಯ್ಯನವರು ನನ್ನ ವಿಚಾರದಲ್ಲಿ ವೈಯುಕ್ತಿಕವಾಗಿ ಒಳ್ಳೆಯ ಮಾತನ್ನು ಆಡಿದ್ದಾರೆ. ಆದರೆ ಅವರು ಅಭಾರ ಸಲ್ಲಿಸಿದರೂ ಅದರಲ್ಲಿ ರಾಜಕೀಯವನ್ನು ಸಹ ಬೆರೆಸಿದ್ದಾರೆ. ನನಗೆ ಅದು ಆಶ್ಚರ್ಯವಾಗುತ್ತದೆ. ಅವರು ಈ ಸಭೆಯನ್ನು ಭಾರತದ ಕಥೆಗೆ ಹೋಲಿಕೆಮಾಡಿ ಮಾನ್ಯ ಅಧ್ಯಕ್ಷರನ್ನು ಕೃಷ್ಣನಿಗೂ, ವಿರೋಧಪಕ್ಷದವರನ್ನು ಪಾಂಡವರಿಗೂ, ನಮ್ಮನ್ನು ಕೌರವರಿಗೂ ಹೋಲಿಕೆ ಮಾಡಿದ್ದಾರೆ. ಆದರೆ ವಾಸ್ತವಾಂಶ ಬೇರೆಯಾಗಿದೆ. ನಾನು ಸರ್ವಜ್ಞನ ನೀತಿಯನ್ನು ಒಪ್ಪತಕ್ಕ ಮನುಷ್ಯ. ಭಾರತದ ಕಥೆಯ ಬಗ್ಗೆ ಸರ್ವಜ್ಞ ಏನು ಹೇಳಿದ್ದಾನೆ ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಂಡರೆ ಸಾಕು. ಅದಕ್ಕಿಂತ ಹೆಚ್ಚು ನಾನು ಹೇಳುವುದಿಲ್ಲ. ಇಷ್ಟರಮಟ್ಟಿಗೆ ಮಾತ್ರ ಹೇಳುತ್ತೇನೆ, ನೀವು ಪಾಂಡವರೂ ಅಲ್ಲ, ನಾವು ಕೌರವರೂ ಅಲ್ಲ, ನಮ್ಮ ಮುಖಂಡರು ದುರ್ಯೋಧನ ಕೂಡ ಅಲ್ಲ, ನಾನು ಕರ್ಣನೂ ಅಲ್ಲ, ನಾವೆಲ್ಲಾ ಹುಲು ಮನುಜರು.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರು ಕೃಷ್ಣ ಎಂಬುದನ್ನಾದರೂ ಒಪ್ಪುತ್ತೀರಾ?

ಶ್ರೀ ಎಚ್. ಸಿದ್ಧವೀರಪ್ಪ.—ನಮ್ಮ ದೃಷ್ಟಿಯಲ್ಲಿ ಇನ್ನು 5 ವರ್ಷವಾದ ಮೇಲೆ ಬಹುಶಃ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಅವರು ಯು. ಎನ್. ಓ. ದಲ್ಲಿ ಅಧ್ಯಕ್ಷರಾಗಿ ಎಷ್ಟರಮಟ್ಟಿಗೆ

† Indicates that the remarks or speeches have not been revised by the member concerned.

(ಶ್ರೀ ಎಚ್. ಸಿದ್ದವೀರಪ್ಪ)

ಹೆಸರು ತೆಗೆದುಕೊಂಡರೋ ಅಷ್ಟೇ ಹೆಸರನ್ನು ತೆಗೆದುಕೊಳ್ಳುತ್ತಾರೆ. ಇದುವರೆಗೆ ಇಂತಹವರು ನಮಗೆ ಅಧ್ಯಕ್ಷರಾಗಿ ಸಿಕ್ಕಿರಲಿಲ್ಲ, ಮುಂದೆ ಕೂಡ ಸಿಗುತ್ತಾರೋ ಇಲ್ಲವೋ ಗೊತ್ತಿಲ್ಲ. ಅವರು ನಮಗೆ ಅಧ್ಯಕ್ಷರಾಗಿ ಈಗ ಸಿಕ್ಕಿರುವುದು ಬಹಳ ಸಂತೋಷವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರು ಈ ರಾಜ್ಯದ ಲಕ್ಷ್ಮಿ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಾ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಮ್ಮನ್ನು ನೋಡಿದರೆ ಗಾಂಧಾರಿಯ ಮಕ್ಕಳಂತೆ ಕಾಣುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಸ್ನೇಹಿತರಿಗೆ ಇಷ್ಟು ಮಾತ್ರ ಹೇಳುತ್ತೇನೆ; ನಾವೆಲ್ಲಾ ಪ್ರಪಂಚದಲ್ಲಿ ಹೇಗೆ ಇದ್ದೇವೆ ಎಂಬ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ:

"ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ ।
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು ॥
ಮದುವೆಗೋ ಮಸಣಕೋ ಹೋಗೆಂಬ ಕಡೆಗೋಡು ।
ಪದ ಕುಸಿಯೆ ನೆಲವಿಹುದು—ಮಂಕುತಿಮ್ಮ ॥

ಇದನ್ನು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಪರಮಾತ್ಮನು ಯಾವ ಕೆಲಸವನ್ನು ನಮಗೆ ಕೊಡುತ್ತಾನೋ ಅದನ್ನು ಮಾಡೋಣ. ಈ ಮಾತನ್ನು ಆಂಗ್ಲ ಕವಿ ಒಬ್ಬನು ಹೇಳಿದ್ದಾನೆ. ಮಾನ್ಯ ಆಮ್ಲರ್‌ಗಂ ಅವರು ನನ್ನ ಬಗ್ಗೆ ಮಾತನಾಡುತ್ತಾ, ಈ ಇಲಾಖೆಯಲ್ಲಿ ಕೆಲಸ ಮಾಡಲು ನಿಮಗೆ ಏನಾದರೂ ವ್ಯಸನ ಇದೆಯೋ ಎಂದು ಕೇಳಿದರು. ನಾನು ಹೇಳುತ್ತೇನೆ; "Honour and shame from no condition, rise, act well your part and therein lies all honour" ಎಂದು ಇವೊತ್ತಿನ ದಿವಸ ನಮಗೆ ಯಾವ ಒಂದು ಖಾತೆಯನ್ನೇ ಕೊಟ್ಟಿರಲಿ, ನಮಗೆ ಕೊಟ್ಟಿರುವ ಕೆಲಸವನ್ನು, ಒಳ್ಳೆಯ ಅಡಿಗೆಯವನಿಗೆ ಎಂತಹ ಸಾಮಾನುಗಳನ್ನು ಕೊಟ್ಟರೂ ರುಚಿಯಾಗಿ ಹೇಗೆ ಅಡಿಗೆ ಮಾಡುತ್ತಾನೋ ಅದರಂತೆ ತ್ರಿಕರಣಶುದ್ಧಿಯಿಂದ ಕೆಲಸ ಮಾಡಿದರೆ ಅದೇ ದೊಡ್ಡ ಕೆಲಸ. ನಮ್ಮ ಪಕ್ಷದ ಮುಖಂಡರ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇವೊತ್ತು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕಂಥ ನಾವು ನಮ್ಮ ದೇಶದಲ್ಲಿ ಯಾವ ಒಂದು ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಮ್ಮ ಪಕ್ಷದ ಒಬ್ಬರು ಮುಖಂಡರನ್ನು ಆರಿಸಿದ್ದೇವೋ ಆ ಮುಖಂಡರಿಗೆ ನಾವು ಲಾಯಲ್ ಆಗಿರುವುದು ಮುಖ್ಯ. ಇಲ್ಲದಿದ್ದರೆ ಪ್ರಜಾಪ್ರಭುತ್ವ ಬೆಳೆಯುವುದಿಲ್ಲ. ಎಲ್ಲರೂ ಲೀಡರ್ ಆಗುವುದಕ್ಕೆ ಸಾಧ್ಯವಿಲ್ಲ. ಒಂದೇಪಕ್ಷ ಆಡಳಿತಕ್ಕೆ ಬರಬೇಕು ಎಂದು ನಿಮ್ಮ ಪಕ್ಷವನ್ನು ತೆಗಳುವುದಕ್ಕೆ ನಾನು ಹೋಗುವುದಿಲ್ಲ. ಹಿಂದೆ ನಾನು ಆ ಕಡೆ ಕುಳಿತಿದ್ದಾಗ ಅನೇಕ ಸಲ ತೆಗಳಿದ್ದೇನೆ.

ಇವೊತ್ತು ನಾವೆಲ್ಲರೂ ಜವಾಬ್ದಾರಿ ಸ್ಥಾನದಲ್ಲಿದ್ದೇವೆ. ಆದ್ದರಿಂದ ನಮ್ಮ ಪಕ್ಷದ ಮುಖಂಡರ ವಿಚಾರದಲ್ಲಿ ನಾವೆಲ್ಲರೂ ಲಾಯಲ್ ಆಗಿ ಇರಬೇಕಾದ್ದು ನಮ್ಮ ಕರ್ತವ್ಯ. ಆದ್ದರಿಂದ ಆ ರೀತಿ ನಾವು ನಮ್ಮ ಕರ್ತವ್ಯವನ್ನು ಮಾಡುತ್ತೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಒಂದು ವಿಷಯವನ್ನು ಮಾನ್ಯ ಸದಸ್ಯರೆಲ್ಲರೂ ಹೇಳಿದರು, ಅದೇನೆಂದರೆ ನಿಮ್ಮ ಹತ್ತಿರ ಹಣ ಇಲ್ಲ, ನೀವು ಬರೀ ಕೈಯಲ್ಲಿ ಏನು ಮಾಡುತ್ತೀರಿ, ಹೇಗೆ ಮಾಡುತ್ತೀರಿ ಎಂದು. ಈ ಇಲಾಖೆಗೆ ಬಡ್ಜೆಟ್ಟಿನಲ್ಲಿ ಇಟ್ಟಿರತಕ್ಕ ಹಣ ಅಷ್ಟೇ ಅಲ್ಲ. ಇದಕ್ಕೆ ಇನ್‌ವಿಜಿಬಲ್ ಸೋರ್ಸಸ್ ಬೇರೆ ಇವೆ. ಯೂನಿಸೆಫ್, ಡಬ್ಲ್ಯು. ಎಚ್. ಒ. ಮತ್ತು ವರ್ಲ್ಡ್ ಬ್ಯಾಂಕಿನಿಂದ ಬರುತ್ತದೆ, ಕೇಂದ್ರ ಸರ್ಕಾರದಿಂದ ಬರುತ್ತದೆ. ಇವೆಲ್ಲಾ ನಮ್ಮ ಬಡ್ಜೆಟ್ಟಿನಲ್ಲಿ ಬರುವುದಿಲ್ಲ. ನಮ್ಮ ಬಡ್ಜೆಟ್ಟನ್ನು ತೆಗೆದುಕೊಂಡು ನೋಡಿದರೆ 1970-71ನೇ ಸಾಲಿನ ಆಕ್ಚುಯಲ್ಸ್ ಮೆಡಿಕಲ್‌ಗೆ 374 ಲಕ್ಷ ರೂಪಾಯಿಗಳು ಖರ್ಚು ಆಗಿದ್ದು 1971–72ರಲ್ಲಿ ಪರಿಷ್ಕೃತ ಅಂದಾಜು 913.8 ಲಕ್ಷ, 72-73ರ ಅಂದಾಜು 984.40 ಲಕ್ಷ. ಇದೇ ರೀತಿ ಪಬ್ಲಿಕ್ ಹೆಲ್ತ್‌ನಲ್ಲಿ ಆಕ್ಚುಯಲ್ಸ್ 70-71ರಲ್ಲಿ 7 0.41 ಲಕ್ಷ ರೂಪಾಯಿಗಳು. 1971-72ರಲ್ಲಿ ಪರಿಷ್ಕೃತ ಅಂದಾಜು 583.65 ಲಕ್ಷ ರೂಪಾಯಿಗಳು. 72-73ರಲ್ಲಿ ಅಂದಾಜು 821 ಲಕ್ಷ ರೂಪಾಯಿಗಳು ಈ ರೀತಿ ಹಣವನ್ನು ಒದಗಿಸಲಾಗಿದೆ. ಇದರ ಜೊತೆಗೆ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಅನೇಕ ಹಣಗಳು ಇವೆ. ಬೆಂಗಳೂರು ಡಿವಿಜನ್‌ನಲ್ಲಿ ಪ್ರಾಯೋಗಿಕವಾಗಿ ಕೈಗೊಳ್ಳುವ

ಆರೋಗ್ಯ ಯೋಜನೆಗೆ ವರ್ಲ್ಡ್ ಬ್ಯಾಂಕಿನಿಂದ ನಮಗೆ 11 ಕೋಟಿ ರೂಪಾಯಿಗಳು ಬರುತ್ತವೆ. ಇದರಲ್ಲಿ ಕೇಂದ್ರ ಸರ್ಕಾರದವರು ಪ್ರಾಯೋಗಿಕವಾಗಿ ಒಂದು ಯೋಜನೆಯನ್ನು ಎರಡು ರಾಜ್ಯಗಳಿಗೆ ಕೊಟ್ಟಿದ್ದಾರೆ. ಒಂದು ಮೈಸೂರು ರಾಜ್ಯ, ಇನ್ನೊಂದು ಉತ್ತರ ಪ್ರದೇಶ ಈ ಎರಡು ರಾಜ್ಯಗಳಿಗೆ ಪ್ರಾಯೋಗಿಕವಾಗಿ ಒಂದು ಯೋಜನೆಯನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಕೆಲಸ ಮಾಡತಕ್ಕ ಜನ ಯಾರು ಇದ್ದಾರೆ ಅವರು ಸರಿಯಾಗಿ ಕೆಲಸ ಮಾಡುತ್ತಾರೆ ಎಂದು ಅವರಿಗೆ ಕಂಡು ಬಂದರೆ, ಆ ಯೋಜನೆಯನ್ನು ಬಾಕಿ ಕಡೆಗೂ ವಿಸ್ತರಿಸುವುದಕ್ಕೆ ಅವಕಾಶ ಇದೆ ಆದ್ದರಿಂದ ಮಾನ್ಯ ಸದಸ್ಯರು ಹಣದ ಕೊರತೆಯನ್ನು ದಯಮಾಡಿ ಮನಸ್ಸಿಗೆ ಹಚ್ಚಿಕೊಳ್ಳಬಾರದು ಎಂದು ನಾನು ಹೇಳುತ್ತೇನೆ. ಹಿಂದೆ ಈ ಬಾಬಿಗೆ ಬಡ್ಜೆಟ್ಟಿನಲ್ಲಿ ಕೊಟ್ಟಿರುವುದನ್ನು ತಿರುವಿಹಾಕಿ ನೋಡಿ ತಮಗೆ ಗೊತ್ತಾಗುತ್ತದೆ, ಬಡ್ಜೆಟ್ಟಿನಲ್ಲಿ ಕೊಟ್ಟಷ್ಟು ಹಣವನ್ನು ಪೂರ್ಣವಾಗಿ ಖರ್ಚು ಮಾಡಿದ್ದರೆ ನಮ್ಮ ಪುಣ್ಯ ಎಂದು ಹೇಳಬಹುದು. ನೌಕರರ ಸಂಬಳದ ಮಟ್ಟಿಗೆ ಮಾತ್ರ ಖರ್ಚು ಮಾಡುತ್ತಾರೆ. ಅದನ್ನೇನೂ ಯೋಚನೆ ಮಾಡಬೇಕಾದ್ದಿಲ್ಲ. ಆದರೆ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಏನಿದೆ ಅದಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಮಾಡುವುದಕ್ಕೆ ಹಣವನ್ನು ಖರ್ಚು ಮಾಡಬೇಕಾಗಿದೆ. ಇದರ ಜೊತೆಗೆ ನಾನು ತಮಗೆ ಇನ್ನೊಂದು ಅಂಕಿಅಂಶವನ್ನು ಕೊಡಬೇಕು ಎಂದರೆ ಈ ಇಲಾಖೆಯಲ್ಲಿ 34,252 ಜನ ನೌಕರರಿದ್ದಾರೆ. ಬಹುಶಃ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಬವರೀ ನಾರಾಯಣ್ ಅವರ ಇಲಾಖೆಯನ್ನು ಬಿಟ್ಟರೆ ಹೆಚ್ಚಿಗೆ ನೌಕರರನ್ನು ಇಟ್ಟುಕೊಂಡಿರತಕ್ಕ ಇಲಾಖೆ ಈ ನಮ್ಮ ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆ ಎಂದು ಕಾಣುತ್ತದೆ. ಈ ಎರಡು ಇಲಾಖೆಗಳಲ್ಲಿ ನೌಕರರು ಮತ್ತು ಅಧಿಕಾರಿಗಳು ತುಂಬಿಕೊಂಡಿರುವುದು ಕಾಣುತ್ತದೆ. ನಮ್ಮ ರಾಜ್ಯದಲ್ಲಿ ಪಟ್ಟಣ ಮತ್ತು ಹಳ್ಳಿ ಎಲ್ಲಾ ಸೇರಿ ಒಟ್ಟು 1,447 ಆಸ್ಪತ್ರೆಗಳು ಇವೆ. ಇದರ ಜೊತೆಗೆ 576 ಆಯುರ್ವೇದ ಆಸ್ಪತ್ರೆಗಳಿವೆ. ಹಾಸಿಗೆಗಳ ಸ್ಟ್ರೆಂಗ್ತ್ ಹಳ್ಳಿಗಳಲ್ಲಿ 4,526 ಇದೆ. ಪಟ್ಟಣಗಳಲ್ಲಿ 23 173 ಹಾಸಿಗೆಗಳಿವೆ. ಎಲ್ಲಾ ಒಟ್ಟು 27,699 ಹಾಸಿಗೆಗಳಿವೆ. ಹೊಸದಾಗಿ ಒಂದು ಹಾಸಿಗೆ ಕೊಡಬೇಕು ಎಂದರೆ ಸಾಲಿಯಾನ 2,982.5 ರೂಪಾಯಿಗಳು ಖರ್ಚಾಗುತ್ತದೆ. 100ಕ್ಕೆ 80 ಭಾಗ ಜನರು ಇರತಕ್ಕ ಹಳ್ಳಿಗಾಡಿಗೆ ಡಾಕ್ಟರುಗಳು ಹೋಗಬೇಕು ಎನ್ನುವ ಮಾತನ್ನು ನಮ್ಮ ಪ್ರಧಾನಿಗಳು ಮೊನ್ನೆತಾನೇ ಹೇಳಿದ್ದಾರೆ. ಪ್ರಪ್ರಥಮವಾಗಿ ಕೇಂದ್ರ ಸರ್ಕಾರದವರು ಮತ್ತು ರಾಜ್ಯಸರ್ಕಾರದವರು ಕೊಡತಕ್ಕಂಥ ನೆರವು, ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ಅನುಕೂಲತೆಗಳು ಏನಿವೆ ಅವುಗಳನ್ನು ಇಲ್ಲಿಯವರೆಗೆ ನಾವು ಯಾರಿಗೆ ಕೊಟ್ಟಿಲ್ಲ ಅಂಥಾ ಜನಗಳಿಗೆ ನಾವು ಮುಖ್ಯವಾಗಿ ಕೊಡಬೇಕು, ಇನ್ನು ಮೇಲೆ ನಮ್ಮ ಗಮನವನ್ನು ಹಳ್ಳಿಗಳ ಕಡೆಗೆ ಕೊಡಬೇಕು ಎನ್ನತಕ್ಕಂಥಾದ್ದು ಕೇಂದ್ರಸರ್ಕಾರದ ಮತ್ತು ರಾಜ್ಯಸರ್ಕಾರದ ನೀತಿಯಾಗಿದೆ. ಇದೇ ರೀತಿ ಹಿಂದೆ ಒಂದು ಸಾರಿ ಒಬ್ಬರು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದಾಗ ನಾನು ಹೇಳಿದ್ದೇನೆ, ಇದುವರೆಗೆ ಯಾವ ಯಾವ ಅನುಕೂಲಗಳನ್ನು ಪಟ್ಟಣಗಳವರು ಅನುಭವಿಸುತ್ತಿದ್ದರೋ ಅದನ್ನು ಸ್ವಲ್ಪ ಕಡಿಮೆ ಮಾಡಿ ಅನುಕೂಲಗಳು ಇಲ್ಲದೆ ಇರತಕ್ಕ ಬಡಜನಗಳು ಯಾರು ಇದ್ದಾರೆ ಅವರಿಗೆ ಅನುಕೂಲಗಳನ್ನು ಒದಗಿಸಲು ಹಣವನ್ನು ಖರ್ಚು ಮಾಡಬೇಕಾಗಿವೆ ಎಂದು. ಆಸ್ಪತ್ರೆಗಳಿಗೆ ವೈದ್ಯಕೀಯ ಸಹಾಯವನ್ನು ಕೊಡತಕ್ಕಂಥಾ ಜವಾಬ್ದಾರಿ ಕಾರ್ಪೊರೇಷನ್‌ಗಳಿಗೆ ಇದೆ. ದೊಡ್ಡ ದೊಡ್ಡ ನಗರಗಳಲ್ಲಿ ಎಂದರೆ ಬೆಂಗಳೂರು, ಮೈಸೂರು ಮತ್ತು ದಾವಣಗೆರೆ ಮುಂತಾದ ಪಟ್ಟಣಗಳಲ್ಲಿ ನಗರಸಭೆಗಳು ಆಸ್ಪತ್ರೆಗಳಿಗೆ ಬೇಕಾದ ಹಣವನ್ನು ಒದಗಿಸಿ ಜನಗಳಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಿಕೊಡುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಹಳ್ಳಿಗಾಡಿನ ಕಡೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಲು ಅವಕಾಶವನ್ನು ಕೊಡಬೇಕು ಎಂದು ನಾವು ಅವರನ್ನು ಕೇಳಿಕೊಂಡಿದ್ದೇವೆ. ಈಗ ದೇಶದಲ್ಲಿರತಕ್ಕ ಖಾಯಿಲೆ ಯಾವುವೆಂದರೆ ಹೊಟ್ಟೆಗೆ ಇಲ್ಲದೇ ಇರತಕ್ಕ ಜನಗಳ ಖಾಯಿಲೆ, ನ್ಯೂಟ್ರೀಷಿಯಸ್ ಫುಡ್ ಇಲ್ಲದೆ ಯಾವ ರೀತಿಯಿಂದಲೂ ಸುಧಾರಿಸಿಕೊಳ್ಳುವುದಕ್ಕೆ ಶಕ್ತಿಯಿಲ್ಲದೇ ಇರತಕ್ಕ ಜನಗಳ ಖಾಯಿಲೆ, ಈ ರೀತಿ 100ಕ್ಕೆ 80 ರಷ್ಟು ಜನ ಇರತಕ್ಕ ಹಳ್ಳಿಗಾಡಿನಲ್ಲಿ ಜನರು ಈ ಖಾಯಿಲೆಗಳಿಂದ ನರಳುತ್ತಿರುತ್ತಾರೆ.

ಪಟ್ಟಣಗಳಲ್ಲಿರತಕ್ಕ ಜನ ಡಿಸೀಜ್ ಆಫ್ ಅಫ್ಲುಯೆನ್ಸ್‌ನಿಂದ ನರಳುತ್ತಿದ್ದಾರೆ ಎಂದು ಒಬ್ಬ ತಜ್ಞರು ಈ ರೀತಿ ಹೇಳಿದ್ದಾರೆ. Sheila Gordon in her book "WORLD PROBLEMS" says as follows :

"We of the richer nations have been fortunate. We have learned some of these lessons already. It took us many centuries to overcome our own ignorance and superstition, and even now most people have some very odd and unscientific ideas—'old wives' tales'—about health and hygiene.

(ಶ್ರೀ ಎಚ್. ಸಿದ್ದವೀರಪ್ಪ)

"Moreover we have our own problems born not of poverty but of affluence.

"Few doctors today in the United Kingdom see cases of malnutrition. Rickets, the vitamin-deficiency disease so common during times of unemployment and depression before the war, has virtually disappeared. But now many doctors are worried by the increasing number of children and adults who are overweight, and therefore likely to develop heart-disease, and other dangerous conditions, in later life.

"It is very pleasant to have shops full of sweets and money to buy them, not so pleasant to have thousands of young people needing false teeth because of dental decay, before they leave school.

"We are fortunate that most of us earn enough money for a few luxuries but not so fortunate that one of our most common luxuries—cigarettes—contain tars that can cause cancer. Lung cancer kills—very painfully—25,000 people in the U.K. every year, and despite the great campaign to

"Warn people of the dangers, despite the fact that a high percentage of doctors who see the effects of the disease have cut out smoking, there has been no appreciable decrease in cigarette sales.

"Life in a modern industrial country is varied, stimulating and for most of us, most of the time, great fun. But for many of us at some time in our lives, it will become too hurried, too complex. We shall have to rely on tranquillisers to calm us, and stimulants to peep us up. Some of us may become part of the half-million people in England and Wales or the million in the United States who need some degree of help from the mental health services."

ಇದು ನಮ್ಮ ದೇಶದಲ್ಲಿರತಕ್ಕಂತಹ ಪದ್ಧತಿ. ಸಾಮಾನ್ಯವಾಗಿ ಪಟ್ಟಣದಲ್ಲಿರುವವರು ಎಲ್ಲಾ ಈ ಡಿಸೀಸ್ ಆಫ್ ಅಫ್ಲುಯೆನ್ಸಿನಿಂದ ನಫರ್ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಆದರೆ ಡಿಸೀಸ್ ಆಫ್ ಅಫ್ಲುಯೆನ್ಸಿನಿಂದ ಪಟ್ಟಣದಲ್ಲಿ ಸಫರ್ ಮಾಡಿದಷ್ಟು ಹಳ್ಳಿಗಾಡಿನಲ್ಲಿ ಸಫರ್ ಮಾಡುತ್ತಾ ಇಲ್ಲ. ಆದ್ದರಿಂದ ಯಾರಿಗೆ ಈ ಬಡತನದಿಂದ ಖಾಯಿಲೆ, ಕಸಾಲೆ ಬರುತ್ತದೆ, ಅವರ ಕಡೆ ಹೆಚ್ಚಿನ ಗಮನ ಕೊಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯವೆಂದು ತಿಳಿದು, ಆ ರೀತಿಯಲ್ಲಿ ಸರ್ಕಾರವು ಕೆಲಸ ಮಾಡುತ್ತಿದೆ. ಆದ್ದರಿಂದ ನಮ್ಮ ರಾಜ್ಯವನ್ನು 1,116 ಬ್ಲಾಕುಗಳಾಗಿ ವಿಂಗಡಿಸಿದ್ದೇವೆ. ಅದರಲ್ಲಿ 15 ಸಾವಿರ ಪ್ರಜೆಗಳು ಒಂದು ಬ್ಲಾಕಿನಲ್ಲಿ ಬರುತ್ತಾರೆ. ಈಗ 261 ಬ್ಲಾಕಿನಲ್ಲಿ ಆಸ್ಪತ್ರೆಗಳು ಇಲ್ಲ. ಅದಕ್ಕೋಸ್ಕರ ನಾಳೆಯ ದಿವಸ ಸ್ಟೈಪೆಂಡರಿ ಬೇಸಿಸ್‌ನಲ್ಲಿ ಏನು ಡಾಕ್ಟರುಗಳನ್ನು ತೆಗೆದುಕೊಳ್ಳುತ್ತೇವೆ, ಅದಕ್ಕಾಗಿ ಒಂದು ಕಮಿಟಿ ಕೂಡ ನೇಮಕ ಮಾಡಿ, ಅದು ಕೆಲಸ ಮಾಡುತ್ತಿದೆ. ಈ 261 ಬ್ಲಾಕಿನಲ್ಲಿ ಸಾಧ್ಯವಾದಷ್ಟು ಆಸ್ಪತ್ರೆಗಳನ್ನು ತೆರೆಯಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಅದೇ ರೀತಿ ಈ ಡಾಕ್ಟರುಗಳು ಏನಿದ್ದಾರೆ, ಅವರು ಬೆಂಗಳೂರಿಗೆ ಹಾಕಿ, ಮೈಸೂರಿಗೆ ಹಾಕಿ, ನಾಗಮಂಗಲಕ್ಕೆ ಹಾಕಿ ಎಂದು ಕೇಳಿದರೆ ಖಂಡಿತವಾಗಿಯೂ ಆ ರೀತಿ ಕೊಡುವುದಿಲ್ಲವೆಂದು ಹೇಳಿದ್ದೇವೆ. ಇದು ದೇಶದಲ್ಲಿ ಬಂದಿರತಕ್ಕಂತಹ ದೊಡ್ಡ ದುರ್ದೈವ. ಈಗ ಒಬ್ಬ ಡಾಕ್ಟರ್ ಮೊದಲು ನಾನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇರಬೇಕು,

ಇಲ್ಲದಿದ್ದರೆ ಮೈಸೂರಿನಲ್ಲಿ, ಇಲ್ಲದಿದ್ದರೆ ಜಿಲ್ಲಾ ಕೇಂದ್ರಗಳಲ್ಲಿ ಅದೂ ಇಲ್ಲದಿದ್ದರೆ ತಾಲ್ಲೂಕು ಹೆಡ್ ಕ್ವಾರ್ಟರ್ಸಿನಲ್ಲಿ ಇರಬೇಕೆಂದು ಆಶೆ ಪಡುತ್ತಾನೆಯೇ ವಿನಹ ಹಳ್ಳಿಗಾಡಿಗೆ ಹೋಗಬೇಕೆಂದು ಮನಸ್ಸು ಮಾಡುತ್ತಾ ಇಲ್ಲ. ಇದು ಏಕೆ ಹೀಗೆ ಆಗುತ್ತದೆ ? ಬಹುಶಃ ಇದು ಡಾಕ್ಟರುಗಳ ತಪ್ಪಲ್ಲವೆಂದು ಕಾಣುತ್ತದೆ. ಕಾರಣ, ಈ ರೀತಿಯ ಟ್ರೈನಿಂಗ್ ಅವರಿಗೆ ಆಗಿದೆ. ಅವರು ಒಂದು ಸಿಟಿಯ ವಾತಾವರಣದಲ್ಲಿ, ಸಿಟಿಯ ಸೌಕರ್ಯಗಳಿಗೆ ಹೊಂದಿಕೊಂಡು ಬೆಳೆದಂತಹ ಜನರಾಗಿರುತ್ತಾರೆ. ಅವರು ಇವತ್ತು ಹಳ್ಳಿಗಾಡಿನಲ್ಲಿ ಹೋಗಿ ಇರಬೇಕಾದರೆ, ಅವರಿಗೆ ಬಂದಿರತಕ್ಕಂತಹ ತೊಂದರೆ ಏನೆಂದರೆ ಅಲ್ಲಿ ಮೊದಲನೆಯದಾಗಿ ವಾಸಕ್ಕೆ ಮನೆ ಇರುವುದಿಲ್ಲ. ಅದೂ ಅಲ್ಲದೆ ಅಲ್ಲಿ ಮುಖ್ಯವಾಗಿ ಶೌಚಕ್ಕೆ ಹೋಗುವ ಒಂದು ದೊಡ್ಡ ಕೊರತೆ ಇದೆ. ಅದರಲ್ಲಿಯೂ ಹೆಣ್ಣುಮಕ್ಕಳಿಗೆ ಬಹಳ ತೊಂದರೆಯಾಗಿದೆ. ನನಗೆ ಒಬ್ಬಳು ಹೆಣ್ಣುಮಗಳು ಡಾಕ್ಟರು "ಹಳ್ಳಿಗಾಡಿನಲ್ಲಿ ಒಂದು ಲ್ಯಾಟ್ರಿನ್ ಕೂಡ ಇರುವುದಿಲ್ಲ; ನಾನು ಹೇಗೆ ತಂಬಿಗೆ ಹಿಡಿದುಕೊಂಡು ಹೊರಗೆ ಹೋಗಲಿ' ಎಂದು ಕೇಳಿದಳು. It appealed me very much. ಈ ರೀತಿ ಹಳ್ಳಿಗಾಡಿನ ಪರಿಸ್ಥಿತಿ ಇರುವುದರಿಂದ ಹೆಚ್ಚಿನ ಜನರು ಆ ಜಾಗಗಳಿಗೆ ಹೋಗುತ್ತಾ ಇಲ್ಲ. ಈ ರೀತಿ ನೀವು ಇರತಕ್ಕಂಥ ಆಸ್ಪತ್ರೆಗಳ ಹತ್ತಿರ ಮನೆಗಳನ್ನು ಕಟ್ಟಿದ್ದರೆ ಅವರು ಅಲ್ಲಿ ಹೇಗೆ ಹೋಗುತ್ತಾರೆಂದು ಕೆಲವರು ಕೇಳಿದರು. ಬಹುಶಃ ಆ ರೀತಿ ಮನೆಗಳು ಇಲ್ಲದಿರುವುದರಿಂದ ಹೆಚ್ಚಿನ ಜನರು ಹಳ್ಳಿಗಾಡಿಗೆ ಹೋಗುತ್ತಾ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೋಸ್ಕರ ನಮ್ಮ ಸರ್ಕಾರದವರು ಈ ವರ್ಷ ಹೌಸಿಂಗ್ ಬೋರ್ಡಿನ ಮುಖಾಂತರ 500 ಮನೆಗಳನ್ನು ಕಟ್ಟಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅದಕ್ಕಾಗಿ ಡಿಬೆಂಚರ್ ರೈಸ್ ಮಾಡಿ, ಎಲ್ಲೆಲ್ಲಿ ಯಾವ್ಯಾವ ಹಳ್ಳಿಗಳಲ್ಲಿ ಡಾಕ್ಟರುಗಳಿಗೆ, ಸ್ಟಾಫುಗಳಿಗೆ ವಾಸಕ್ಕೆ ಮನೆ ಇಲ್ಲ, ಅಂತ ಕಡೆಗಳಿಗೆ ಪ್ರಥಮ ಗಮನಕೊಡಬೇಕೆಂದು ನಾವು ಹೌಸಿಂಗ್ ಬೋರ್ಡಿನವರಿಗೆ ಕೇಳಿಕೊಂಡಿದ್ದೇವೆ. ಇದಕ್ಕೆ ಡಿಬೆಂಚರ್ ರೈಸ್ ಮಾಡುವುದಕ್ಕೂ ನಾವು ಅವಕಾಶ ಕೊಟ್ಟಿದ್ದೇವೆ ಈ ರೀತಿ ಡಾಕ್ಟರುಗಳಿಗೆ ಮತ್ತು ಸ್ಕೂಲ್‌ಮಾಸ್ಟರುಗಳಿಗೆ ಒಂದು ಕೋಟಿ ರೂಪಾಯಿ ಹಣದಿಂದ ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ವಿಚಾರವನ್ನು ತಮಗೆ ಹೇಳಲು ನನಗೆ ತುಂಬಾ ಸಂತೋಷವಾಗುತ್ತದೆ ಇದನ್ನು ಮಾಡಿದರೆ ಡಾಕ್ಟರುಗಳು ಈಗ ಹೋಗುವುದಕ್ಕೆ ಏನು ನಿರಾಕರಿಸುತ್ತಾರೆ, ಅದು ತಪ್ಪಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೆಯೇ ಇವತ್ತು ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಲ್ಲಿಯೂ ವಿದ್ಯುಚ್ಛಕ್ತಿ ವ್ಯವಸ್ಥೆ ಇದೆ. ಅದರ ಜೊತೆಗೆ ಎಲ್ಲೆಲ್ಲಿ ಹೆಚ್ಚು ಆಸ್ಪತ್ರೆಗಳ ಅವಶ್ಯಕತೆ ಇದೆ, ಅಲ್ಲಿ ಆಸ್ಪತ್ರೆಗಳನ್ನು ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ 261 ಬ್ಲಾಕಿನಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಇಲ್ಲ. ಆದ್ದರಿಂದ ಅದನ್ನೂ ಇದರಲ್ಲಿ ಸೇರಿಸಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ನಿನ್ನೆಯ ದಿವಸ ತಾವು ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದೀರಿ. ಇದರ ಬಗ್ಗೆ ನಾನು ಸೆಕ್ರೆಟರಿಯವರಿಗೆ ವಿಚಾರ ಮಾಡಿ ಎಂದು ಹೇಳಿದ್ದೇನೆ. ಅದನ್ನು ಅವರು ವಿಚಾರಮಾಡುತ್ತಿದ್ದಾರೆ.

ಈಗಾಗಲೇ ತಾಲ್ಲೂಕು ಬೋರ್ಡು ಆಸ್ಪತ್ರೆಗಳನ್ನು ಸರ್ಕಾರದವರು ವಹಿಸಿಕೊಂಡ ವಿಷಯದಲ್ಲಿ ತಾವು ಆಗಲೇ ಸ್ತುತ್ಯಾರ್ಹವಾದ ಕಾರ್ಯ ಮಾಡಿದ್ದೀರಿ ಎಂದು ಹೇಳಿದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ಈಗಿರತಕ್ಕಂತಹ ಪರಿಸ್ಥಿತಿಯಲ್ಲಿ ಅನೇಕ ವಿಷಯಗಳನ್ನು ನನ್ನ ಗಮನಕ್ಕೆ ತಂದಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಹೇಳಿದರು. ಬೆಂಗಳೂರು ನಗರದಲ್ಲಿರತಕ್ಕಂತಹ ಅನುಕೂಲಗಳನ್ನು ಹಳ್ಳಿಗಾಡುಗಳಲ್ಲಿ ಇರತಕ್ಕಂತಹ ಜನರಿಗೂ ಸಿಗುವಂತೆ ಮಾಡಬೇಕೆಂದು ಹೇಳಿದರು. ಈಗಾಗಲೇ ಇದು ನನ್ನ ಗಮನಕ್ಕೆ ಬಂದಿದೆ. ನಾನೂ ಇದರ ಬಗ್ಗೆ ಯೋಚನೆ ಮಾಡಿದ್ದೇನೆ. ಬೆಂಗಳೂರು ನಗರದಲ್ಲಿರುವ ವಿಕ್ಟೋರಿಯಾ ಆಸ್ಪತ್ರೆ ಮತ್ತು ಇತರ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಒತ್ತಡವನ್ನು ತಪ್ಪಿಸುವುದಕ್ಕೋಸ್ಕರ ಜಿಲ್ಲಾ ಆಸ್ಪತ್ರೆಗಳು ಏನಿವೆ, ಅಲ್ಲಿ ಪ್ರತಿಯೊಂದು ಸ್ಪೆಷಲೈಸ್ಡ್ ಬ್ರಾಂಚ್‌ಗಳಾದ, ಇ. ಎನ್. ಟಿ. ಪೀಡಿಯಾಟ್ರಿಕ್ಸ್, ಆರ್ಥೋಪೀಡಿಯಾಟ್ರಿಕ್ಸ್—ಮುಂತಾದವುಗಳನ್ನು ಎಲ್ಲೆಲ್ಲಿ ಕೊಡುವುದಕ್ಕೆ ಸಾಧ್ಯವಿದೆ, ಅದೆಲ್ಲವನ್ನೂ ಕೊಡಬೇಕೆಂದು ಮಾಡಿದ್ದೇವೆ. ಶಿವಮೊಗ್ಗದಲ್ಲಿ ಮೆಗ್ಗಾನ್ ಆಸ್ಪತ್ರೆಯಲ್ಲಿರತಕ್ಕಂತಹ ಸ್ಟಾಫ್ ಇಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿರತಕ್ಕಂತಹ ಸ್ಟಾಫಿಗಿಂತ ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲದಂತಿದೆ. ಇವತ್ತು ನಮ್ಮಲ್ಲಿ ಪೋಸ್ಟ್ ಗ್ರಾಜ್ಯುಯೇಟ್ ಮಾಡಿರತಕ್ಕಂತವರೂ ಬರುತ್ತಿದ್ದಾರೆ. ಅವರು ತಾಲ್ಲೂಕು ಮತ್ತು ಜಿಲ್ಲಾ ಲೆವಲುಗಳಲ್ಲಿ ಸೇವೆ ಮಾಡುವುದಕ್ಕೆ ತಯಾರಾಗಿದ್ದಾರೆ. ಅವರನ್ನು ಅಂಥ ಕಡೆಗಳಿಗೆ ಕಳಿಸಬೇಕಾಗುತ್ತದೆ. ಈ ರೀತಿ ಎಲ್ಲಾ ಡಿಪಾರ್ಟ್‌ಮೆಂಟುಗಳನ್ನು ಜಿಲ್ಲಾ ಆಸ್ಪತ್ರೆಗಳಲ್ಲಿಯೂ ತೆರೆಯಬೇಕೆಂದುದು ಸರ್ಕಾರದ ಆಶೆಯಾಗಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿಯೂ

(ಶ್ರೀ ಎಚ್. ಸಿದ್ಧವೀರಪ್ಪ)

ಸಹ 250 ಬೆಡ್ಡಿಗಿಂತ ಕಡಿಮೆ ಇಲ್ಲದ ರೀತಿಯಲ್ಲಿ ಆಸ್ಪತ್ರೆಗಳನ್ನು ಮಾಡಬೇಕೆಂದು ಸರ್ಕಾರದ ಇಚ್ಛೆ.

ನಮ್ಮ ಮಾನ್ಯ ಗುಲ್ಬರ್ಗದ ಸ್ನೇಹಿತರು ಆ ಭಾಗದಲ್ಲಿ ಬಹಳ ತೊಂದರೆ ಇದೆಯೆಂದು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಬೀದರಿನಲ್ಲಿ ಈ ಆಸ್ಪತ್ರೆಯ ಕೆಲಸದ ಕಾರ್ಯ ನಿಲ್ಲಲು ಸರ್ಕಾರದ ಎಕಾನಮಿ ಆರ್ಡರ್ ಕಾರಣವಾಗಿದೆ. ಅದನ್ನು ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಯವರು ಸಹ ಹೇಳಿದ್ದಾರೆ. ಅದನ್ನು ಈಗ ಲಿಫ್ಟ್ ಮಾಡಿದ್ದೇವೆ. ಬೀದರ್ ಸಹ ಬಹಳ ಹಿಂದುಳಿದ ಪ್ರದೇಶ. ಎಷ್ಟೋ ಎಪಿಡೆಮಿಕ್ ಡಿಸೀಸಸ್ ಆ ಪ್ರದೇಶವನ್ನು ತನ್ನ ತವರೂರನ್ನಾಗಿ ಮಾಡಿಕೊಂಡಿದೆ. ಅಂಥ ಕಡೆಯೂ ಆಸ್ಪತ್ರೆಗಳನ್ನು ಕೊಡಬೇಕೆಂದು ಸರ್ಕಾರದ ಆಶಯವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮೆಡಿಕಲ್ ಕಾಲೇಜಿನಲ್ಲಿ ರಿಸರ್ವೇಷನ್ ಮಾಡುವ ಪದ್ಧತಿ ಸರಿಯಾಗಿಲ್ಲವೆಂದು ಹೇಳಿದರು. ಇದು ಒಂದು ಮೂಲಭೂತವಾದ ಪ್ರಶ್ನೆ. ಬಹುಶಃ ಅದಕ್ಕೆ ಈಗಲೇ ಜವಾಬು ಕೊಡತಕ್ಕದ್ದು ಸರಿಯಲ್ಲವೆಂದು ಕಾಣುತ್ತದೆ. ಅದು ಬಹಳ ಯೋಚನೆ ಮಾಡತಕ್ಕಂತಹ ವಿಚಾರ. ಈ ವಿಚಾರದಲ್ಲಿ ಉತ್ತರವನ್ನು ಹೇಳಬೇಕಾದರೆ, ರಾಜ್ಯಾಂಗವನ್ನು ನೋಡಬೇಕು, ಮತ್ತು ಇದುವರೆಗೆ ಮಾಡಿದಂತಹ ಇತರ ಕಾನೂನುಗಳನ್ನು ನೋಡಬೇಕಾಗಿದೆ. ಪಟ್ಟಣದಲ್ಲಿರತಕ್ಕಂತಹ ಮಕ್ಕಳು ಓದಿದ ಹಾಗೆ ಹಳ್ಳಿಗಾಡಿನಲ್ಲಿರತಕ್ಕಂತಹ ಮಕ್ಕಳು ಓದುವುದಕ್ಕೆ ಅಲ್ಲಿ ಆ ರೀತಿಯ ಎನ್‌ವಯರ್ನ್‌ಮೆಂಟ್ ಇರುವುದಿಲ್ಲ. ಅಲ್ಲಿ ವ್ಯವಸಾಯದಲ್ಲಿರತಕ್ಕಂತಹ ಜನರಿಗೆ ಈ ಒಂದು ಒಳ್ಳೆಯ ಅವಕಾಶ ಇರುವುದಿಲ್ಲ. ನಾನು ಓದಿದ್ದಕ್ಕೂ ನನ್ನ ಮಗ ಈಗ ಓದುವುದಕ್ಕೂ ಬಹಳ ವ್ಯತ್ಯಾಸ ಇದೆ. ನಾನು ಓದಿದಾಗ ಇದ್ದಂತಹ ಪದ್ಧತಿಯೇ ಬೇರೆ; ಈಗ ಇರತಕ್ಕಂತಹ ಪದ್ಧತಿಯೇ ಬೇರೆ. ಆ ಕಾಲಕ್ಕೂ ಈ ಕಾಲಕ್ಕೂ ಬಹಳ ವ್ಯತ್ಯಾಸ ಇದೆ. ಅವರು ಈ ಮೆರಿಟ್ ಎಂಬ ಯಾವ ಒಂದು ಯಾರ್ಡ್‌ಸ್ಟಿಕ್ಕನ್ನು ಉಪಯೋಗಿಸುತ್ತಿದ್ದಾರೆ, ಅದರಿಂದ ಹಳ್ಳಿಗಾಡಿನಲ್ಲಿರತಕ್ಕಂತಹ ಮಕ್ಕಳಿಗೆ ಅನುಕೂಲವಾಗುವುದಿಲ್ಲವೆಂಬ ವಾದವನ್ನು ಎತ್ತಿದ್ದಾರೆ. ನಾನು ಇದರ ಬಗ್ಗೆ ಏನೂ ಹೇಳುವುದಿಲ್ಲ. ಈಗ ಹೇಳುವುದು ಸರಿಯಲ್ಲವೆಂದು ತಿಳಿದಿದ್ದೇನೆ.

ಇನ್ನು ಅನೇಕ ಇತರ ಸ್ನೇಹಿತರಾದ ಡಾ. ಪುಟ್ಟದಾಸರು, ವಿರೋಧಪಕ್ಷದ ನಾಯಕರು, ಕಲ್ಮಂಕರ್ ಅವರು, ಮತ್ತು ಮಾನ್ಯ ಪುಟ್ಟಶಾಮಯ್ಯನವರು,—ಮುಂತಾದವರು ಖಾಸಗೀ ಮೆಡಿಕಲ್ ಕಾಲೇಜಿನ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾವು ಇವತ್ತು ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ, ಕಾಲೇಜುಗಳನ್ನು ತೆಗೆದುಕೊಳ್ಳುವುದಕ್ಕಿಂತ, ಸಾಧ್ಯವಾದರೆ ಈಗಿರತಕ್ಕಂತಹ ಖಾಸಗೀ ಕಾಲೇಜುಗಳ ಆಡಳಿತವನ್ನು ನಮ್ಮ ಸಮಾಜವಾದ ಮತ್ತು ಪ್ರಜಾಪ್ರಭುತ್ವಕ್ಕನುಗುಣವಾಗಿ ತಿದ್ದುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ನೋಡಬೇಕಾಗುತ್ತದೆ. ನಾನು ಅವರಿಗೆ ಪದೇ ಪದೇ ಅಪೀಲ್ ಮಾಡಿಕೊಂಡು ಬರೆದಿದ್ದೇನೆ. ಹಣ ಇಲ್ಲದಿರುವುದರಿಂದ ಇದನ್ನು ಬಿಟ್ಟಿದ್ದೇವೆಂದು ನೀವು ಹೇಳಬಹುದು. ಸರ್ಕಾರದವರು ಮನಸ್ಸು ಮಾಡಿದರೆ ಹಣ ಹೇಗೆ ಬೇಕಾದರೂ ಮಾಡಿ ತರಬಹುದು. ಇವೊತ್ತಿನ ದಿವಸ ನಮ್ಮ ಸಮಾಜಕ್ಕೆ ಅನುಗುಣವಾಗಿ, ಬದಲಾದ ಪ್ರಜೆಗಳ ಸ್ಥಿತಿಗತಿಗಳಿಗೆ ಅನುಸಾರವಾಗಿ, ಅವುಗಳನ್ನು ಅರ್ಥಮಾಡಿಕೊಂಡು ಯಾವ ಯಾವ ರೀತಿಯಲ್ಲಿ ಸುಧಾರಣೆ ಮಾಡಬೇಕು ಆ ರೀತಿ ಮಾಡುವುದಕ್ಕೆ ಅವರು ಮೊದಲು ಕೆಲಸ ಮಾಡಬೇಕಾಗಿದೆ. ಇನ್ನು ಅಡ್ಮಿಷನ್ಸ್ ವಿಚಾರ. ನಾವೆಲ್ಲಾ ಪ್ರಜೆಗಳಿಂದ ಆರಿಸಿ ಬಂದವರೇ. ಯಾವಾಗ 97 ಜನ ಮಾನ್ಯ ಸದಸ್ಯರು ನನಗೆ ಲಿಖಿತ ಮೂಲಕ ತಿಳಿಸಿದಾಗಲೇ ಅದನ್ನು ನಾನು ಸ್ವಲ್ಪ ಕಣ್ಣು ಬಿಟ್ಟು ನೋಡಬೇಕಾಯಿತು. ಕೊನೆಯದಾಗಿ ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಈಗಾಗಲೇ ಅಡ್ಮಿಷನ್ ತಿಂಗಳು ಕಮೆನ್ಸ್ ಆಗಿದೆ. ಹೆಚ್ಚಿಗೆ ವಿದ್ಯಾರ್ಥಿಗಳಿಗೆ ತೊಂದರೆಯೇನೋ ಆಗಿದೆ. ತಾವೂ ನಾವೂ ಕೂಟಗೆ ಸಿಕ್ಕದಂತೆ ಸರ್ಕಾರ ಹೇಳಿರತಕ್ಕ ಅಂಶವನ್ನು ಗಮನದಲ್ಲಿಟ್ಟುಕೊಂಡು ಅವರು ಆಲೋಚನೆ ಮಾಡುವುದು ಯುಕ್ತವೆಂದು ಅವರಿಗೆ ಮನವಿಯನ್ನು ಈ ಸ್ಥಳದಿಂದಲೇ ಸಲ್ಲಿಸುತ್ತೇನೆ. ಅದನ್ನು ಬಹುಶಃ ಅವರು ಒಪ್ಪಿಕೊಂಡರೆ ಬಹಳ ಒಳ್ಳೆಯದು. ಅನಿವಾರ್ಯವಾಗಿ ಏನಾದರೂ ಆದರೆ, ಅದರ ಬಗ್ಗೆ ಮುಂದೆ ಏನು ಮಾಡಬೇಕೆಂಬುದನ್ನು ನಾವು ನೋಡಬೇಕಾಗುತ್ತದೆ.

12–30 P.M.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮಣಿಪಾಲ್ ಮೆಡಿಕಲ್ ಕಾಲೇಜು ಒಂದಿದೆ. ಅವರೂ ಸಹ ಹಿಂದೆ ಮನವಿ ಮಾಡಿದ್ದಾರೆ, ಕಸ್ತೂರಿಬಾ ಮೆಡಿಕಲ್ ಹಾಸ್ಪಿಟಲ್‌ನಿಂದ ಅವರು ಏನು

ಕ್ಲಿನಿಕಲ್ ಫೆಸಿಲಿಟೀಸನ್ನು ಪಡೆಯುತ್ತಿದ್ದಾರೋ ಅದನ್ನು ಕೈಬಿಡುವ ಪರಿಸ್ಥಿತಿ ಇದೆ. ಬಿಡಬೇಕೆಂಬ ಪ್ರಸ್ತಾಪಮಾಡುತ್ತಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ಅದು ಸರಿಯಲ್ಲ. ಕ್ಲಿನಿಕಲ್ ಫೆಸಿಲಿಟೀಸ್ ಅವರು ತೆಗೆದು ಕೊಳ್ಳುವುದು, ಬಿಡುವುದು ಮುಖ್ಯವಲ್ಲ, ಮಣಿಪಾಲ್ ಕಾಲೇಜು ಬೇರೆ, ಮಂಗಳೂರು ಕಾಲೇಜು ಬೇರೆ ಯೂನಿವರ್ಸಿಟಿ ಒಪ್ಪಿಕೊಂಡಿರುವ ಮಣಿಪಾಲ್ ಕಾಲೇಜು ಒಂದೇ. ಅದು ಮಂಗಳೂರಿನಲ್ಲಿ ಒಂದು ಬ್ರಾಂಚಾಗಿ ಇವಾಗಲೂ ಕ್ಲಿನಿಕಲ್ ಫೆಸಿಲಿಟೀಸ್ ಇತ್ತು. ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಕ್ಲಿನಿಕಲ್ ಫೆಸಿಲಿಟೀಸನ್ನು ಕೊಟ್ಟಿದ್ದಾರೆ. ಆದರೆ ಕ್ಲಿನಿಕಲ್ ಫೆಸಿಲಿಟೀಸ್ ಕೊಟ್ಟಿದ್ದರಿಂದ ನಮ್ಮ ಕರ್ತವ್ಯ ಆಯಿತು ಎಂಬುದಾಗಿ ತಿಳಿದಿದ್ದರೆ ಅದು ತಪ್ಪು. ಅದು ಒಂದೇ ಮುಖ್ಯವಲ್ಲ. ರಾಜ್ಯದ ಹಿತದೃಷ್ಟಿಯಿಂದ ಎಲ್ಲವನ್ನೂ ನೋಡಿಕೊಂಡು ಕೆಲಸಮಾಡ ಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಣಿಪಾಲ್ ಕಾಲೇಜಿನವರು ಏನು ಡೊನೇಷನ್ ಕಲೆಕ್ಟ್ ಮಾಡಿದ್ದಾರೋ ಅದರಲ್ಲಿ 10-15 ಲಕ್ಷ ರೂಪಾಯಿಗಳನ್ನು ತಮ್ಮ ಗೌರ್ನಮೆಂಟ್ ಹಾಸ್ಪಿಟಲ್ಲಿನ ಮೇಂಟೆನೆನ್ಸ್‌ಗೋಸ್ಕರ ಕೊಡುತ್ತಿದ್ದಾರೆ. ಆದರೆ ಆ ಡೊನೇಷನ್ನನ್ನು ನೀವು ವಸೂಲುಮಾಡ ಬೇಡಿ ಎಂದು ಅವರಿಗೆ ಹೇಳಿದರೆ, ಅದನ್ನು ಅವರು ಕಲೆಕ್ಟ್‌ಮಾಡದೆ ನಿಲ್ಲಿಸಬೇಕಾಗಿ ಬರುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ.—ಅವರು ಸುಮಾರು 20 ವರ್ಷಗಳಾದರೂ ಇನ್ನೂ ಆಡಿಟೆಡ್ ಅಕೌಂಟ್ಸ್ ಕೊಟ್ಟಿಲ್ಲ. ಅಕೌಂಟ್ಸ್ ನಮ್ಮ ಕೈಲಿ ಬಂದರೆ, ಯಾವ್ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಒಂದುವೇಳೆ ಅವರು ಆರೀತಿ ಮಾಡಿದ್ದರೆ, ಅಥವಾ ಆ ರೀತಿಯಾಗಿ ಖರ್ಚುಮಾಡಲು ಕೊಟ್ಟಿದ್ದರೆ ಸರ್ಕಾರದ ಮೂಲಕ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**Sri C. M. ARUMUGAM.**—Has it come to the notice of the Government that the Manipal College reserves seats for the students who just complete S.S.L.C. and further that they have reserved seats to students from South-East Asian countries ? Even though you have appealed to them, they may not be in a position to accommodate students from Mysore because on account of prior arrangement they have reserved seats for a period of 5 to 10 years. Will the Government instruct them to give seats to Mysoreans in preference to seats to students from South-East Asian Countries from whom they take abnormal capitation fees ?

ಶ್ರೀ ಎಚ್. ಸಿದ್ಧವೀರಪ್ಪ.—ಅವರು ಯಾರ್ಯಾರಿಗೆ ಎಷ್ಟೆಷ್ಟು ಸೀಟುಗಳನ್ನು ಕೊಟ್ಟಿದ್ದಾರೆ, ಎಷ್ಟು ಕ್ಯಾಪಿಟೇಷನ್ ಫೀಸ್ ತೆಗೆದುಕೊಂಡಿದ್ದಾರೆ, ಅವುಗಳ ಬಗ್ಗೆ ನನ್ನ ಹತ್ತಿರ ಯಾವ ಇನ್‌ಫರ್ಮೇಷನ್ ಇಲ್ಲ. ನನ್ನಲ್ಲಿ ಯಾವ ಕಾಗದ ಪತ್ರ ಇಲ್ಲದೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಅವರು ಇಂತಿಂಥವರ ಹತ್ತಿರ ಇಷ್ಟಿಷ್ಟು ದುಡ್ಡು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದರೆ ನಾನು ತಮಗೆ ತಿಳಿಸುತ್ತಿದ್ದೆ. ಇಷ್ಟುಮಟ್ಟಿಗೆ ಹೇಳುತ್ತೇನೆ, ನಿಮ್ಮ ಗೌರ್ನಮೆಂಟ್ ಕೋಟಾ ಏನಿದೆಯೋ ಅದರ ಲೆಕ್ಕದಲ್ಲಿ 20 ಸೀಟುಗಳಿವೆ, ಬಾಕಿಯುದನ್ನು ನಾವು ಭರ್ತಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅನೇಕ ಕಾಗದಗಳ ಮುಖಾಂತರ ಈ ವಿಚಾರವನ್ನು ಕೇಳಿಕೊಂಡಿದ್ದಾರೆ. ನಾನು ಅದಕ್ಕೆ ಒಪ್ಪಲಿಲ್ಲ. ನಾನು ಅವರಿಗೆ ಹೇಳಿರುವುದು ಇದು ಸರಿಯಾದುದಲ್ಲ. ಪ್ರತಿಯೊಂದೂ ನೀತಿಗೆ ಅನುಸರಿಸಿ ಹೋಗಬೇಕು, ಅದಕ್ಕಾಗಿ ನಮ್ಮ ಜೊತೆಯಲ್ಲಿ ಪರ್ಯಾಲೋಚನೆಮಾಡುವುದಕ್ಕೆ ಬನ್ನಿ ಎಂದು ಅವರನ್ನು ಕೇಳಿಕೊಂಡಿದ್ದೇನೆ.

ಇನ್ನು ಮಾನ್ಯ ಸ್ನೇಹಿತರೊಬ್ಬರು ಇನ್‌ಫೆಂಟ್ ಮಾರ್ಟಾಲಿಟಿ ಈಗ ಸೇಕಡ 34.5 ಇದೆ. ಮಕ್ಕಳು ಬಹಳವಾಗಿ ಸತ್ತುಹೋಗುತ್ತಿದ್ದಾರೆ. ಇದರ ವಿಚಾರದಲ್ಲಿ ಎಷ್ಟು ಆಸಕ್ತಿ ತೆಗೆದು ಕೊಳ್ಳಬೇಕೋ ಅಷ್ಟು ತೆಗೆದುಕೊಳ್ಳುತ್ತಾ ಇಲ್ಲ. ಪ್ರಿಮೆಚೂರ್ ಬೇಬಿ ಯೂನಿಟ್ ತೆಗೆಯ ಬೇಕೆಂದು ಹೇಳಿದರು. ಅದರ ವಿಚಾರವಾಗಿ ಡಬ್ಲ್ಯು.ಎಚ್.ಓ. ಯೂನಿಸೆಫ್‌ನವರು, ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಯೋಚನಮಾಡಿ ತಕ್ಕ ಕ್ರಮವನ್ನು ತೆಗೆದು ಕೊಳ್ಳಲಾಗುತ್ತದೆ.

ಇನ್ನೊಬ್ಬ ಮಾನ್ಯ ಮಿತ್ರರು ಮಗುವಿನ ಜೊತೆಯಲ್ಲಿ ಇರತಕ್ಕ ತಾಯಿಂದಿರಿಗೆ ಆಸ್ಪತ್ರೆಗಳಲ್ಲಿ ಊಟವನ್ನು ಉಚಿತವಾಗಿ ಕೊಡಬೇಕು. ಇದನ್ನು ಹಿಂದೆ ಕೊಡುತ್ತಿದ್ದರು. ಅದರ ಬಗ್ಗೆ ಸರ್ಕಾರ

(ಶ್ರೀ ಎಚ್. ಸಿದ್ದವೀರಪ್ಪ)

ಯೋಚನೆಮಾಡಬೇಕೆಂದು ಸಲಹೆ ಮಾಡಿದರು. ಇದು ಬಹಳ ಮುಖ್ಯವಾದುದು. ಡಾಕ್ಟರುಗಳನ್ನೂ ಸಹ ನಾನು ಈ ವಿಚಾರವಾಗಿ ಕೇಳಿದ್ದೇನೆ. ಬಡವರು ಬಂದರೆ ಅವರಿಗೆ ಈ ಸೌಕರ್ಯ ಕೊಡಲಾಗುತ್ತದೆ. ಆದರೆ ಇವರು ಕೊಟ್ಟ ಊಟವನ್ನು ಯಾರೂ ತಗೆದುಕೊಳ್ಳುವುದಕ್ಕೆ ಹೋಗುವುದಿಲ್ಲವೆಂದು ಹೇಳುತ್ತಾರೆ. ಬಹುಶಃ ಅದನ್ನೂ ಸಹ ಯೋಚನೆಮಾಡಿ ಸರ್ಕಾರ ಈ ವಿಷಯದ ಕಡೆಗೆ ಸಹಾನುಭೂತಿಯಿಂದ ವಿಚಾರಮಾಡುತ್ತದೆ. ಅಲ್ಲದೆ ಇದಕ್ಕೆ ಎಷ್ಟು ಖರ್ಚಾಗುತ್ತದೆಂಬುದನ್ನೂ ಕೂಡ ತಿಳಿದು ಏರ್ಪಾಡುಮಾಡಲಾಗುತ್ತದೆ.

ಇನ್ನು ಸ್ಕೂಲ್ ಹೆಲ್ತ್ ಸರ್ವಿಸಸ್ ವಿಷಯ. ಈಗಿರತಕ್ಕದ್ದು ಸಾಕಷ್ಟು ಇಲ್ಲ. ಅದನ್ನು ರೀಆರ್ಗನೈಜ್ ಮಾಡಬೇಕು. ಇದನ್ನು ಸಹ ಇನ್ನೂ ಸರಿಯಾಗಿ ನೋಡಬೇಕೆನ್ನುವುದೇ ಸರ್ಕಾರದ ಆಶಯ.

ಇನ್ನು ಹಿರಿಯ ಸ್ನೇಹಿತರಾದಂಥ ಮಾನ್ಯ ಶ್ರೀ ನಾಗಣ್ಣನವರು ಹಾಗೂ ಶ್ರೀ ಲಿಂಗಪ್ಪನವರು ಫ್ಯಾಮಿಲಿ ಪ್ಲಾನಿಂಗ್ ವಿಷಯವಾಗಿ ಖಂಡತುಂಡವಾಗಿ ಖಂಡಿಸಿದ್ದಾರೆ. ಶ್ರೀ ನಾಗಣ್ಣನವರು ಮಾತನಾಡುತ್ತಾ ಬರೀ ಹಿಂದೂಗಳಿಗೇ ಇದನ್ನು ಅನ್ವಯಿಸುತ್ತಿದ್ದಾರೆ, ಈ ರೀತಿಯಾಗಿ ಯಾವ ದೇಶದಲ್ಲಿದೆ ಎಂಬುದಾಗಿ ಕೇಳಿದ್ದಾರೆ. ನನಗೆ ತಿಳಿದಿರುವ ಪ್ರಕಾರ ಅಧಿಕೃತ ವರದಿ ಮೂಲಕ ಹೇಳುವುದಾದರೆ, ಈ ಯೋಜನೆ 36 ದೇಶಗಳಲ್ಲಿ ಇದೆ. ಉದಾಹರಣೆಗೆ ಹೇಳುವುದಾದರೆ, ರಷ್ಯಾ, ಚೈನಾ, ಈಜಿಪ್ಟ್, ಇಂಡೋನೇಷಿಯಾ, ಬಂಗ್ಲಾದೇಶ, ಪಾಕೀಸ್ಥಾನ ಮುಂತಾದ ದೇಶಗಳಲ್ಲಿವೆ.

ಶ್ರೀ ಕೆ. ಎಂ. ನಾಗಣ್ಣ.—ಆ ದೇಶಗಳಲ್ಲಿ ಅದು ಒಂದೇ ಕೋಮಿನವರಿಗೆ ಇದೆಯೋ ಅಥವಾ ಇಡೀ ಕೋಮಿನವರಿಗೆಲ್ಲರಿಗೂ ಇದೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಎಲ್ಲಾ ಜಾತಿಯವರಿಗೂ ಇದೆ. ನಮ್ಮ ದೇಶದಲ್ಲಿಯೂ ಆ ರೀತಿಯೇ ಇದೆ. ನಮ್ಮ ದೇಶದಲ್ಲಿ ಒಂದೇ ಕೋಮಿನವರಿಗೆ ಇದನ್ನು ಅಳವಡಿಸಬೇಕೆಂದು ಹೇಳಿಲ್ಲ. ನಾನು ಮಾನ್ಯ ಸದಸ್ಯರಿಗೆ ಅಂಕಿ ಅಂಶಗಳನ್ನು ಕೊಟ್ಟರೆ ಬಹುಶಃ ನಿಜವಾದ ಅಂಶ ಅವರಿಗೆ ತಿಳಿಯಬಹುದು. ಕ್ರಿಶ್ಚಿಯನ್ನರು, ಮುಸಲ್ಮಾನರು ಎಲ್ಲರೂ ಆಪರೇಷನ್ ಮಾಡಿಸಿಕೊಂಡಿದ್ದಾರೆ. ಆದರೆ ಆಪರೇಷನ್ ಮಾಡಿಸಿಕೊಂಡವರಲ್ಲಿ ಹಿಂದೂಗಳೇ ಜಾಸ್ತಿ ಇದ್ದಾರೆ. ಈ ಬಗ್ಗೆ ಅಂಕಿ ಅಂಶಗಳನ್ನು ಹೇಳಬೇಕೆಂದು ಕೇಳಿದರೆ ಅದನ್ನೂ ಸಹ ಹೇಳುತ್ತೇನೆ. ಮಾನ್ಯ ಶ್ರೀ ನಾಗಣ್ಣನವರು ಅದರ ಬಗ್ಗೆ ವಿವರವಾದ ಅಂಕಿ ಅಂಶಗಳನ್ನು ಬೇಕೆಂದು ಇಷ್ಟಪಟ್ಟರೆ, ಅವರಿಗೆ ಅದನ್ನು ಕಳುಹಿಸುತ್ತೇನೆ. ಹಿಂದೂಗಳಲ್ಲದ ಬಾಕಿಯವರು ಕಡಿಮೆ ಸಂಖ್ಯೆಯಲ್ಲಿ ಇದ್ದಾರೆಂಬ ಅಂಶವನ್ನು ನಾನು ಒಪ್ಪಿಕೊಳ್ಳುತ್ತೇನೆ ಆದ್ದರಿಂದ ಈ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಂ ಎನ್ನುವುದು ಯಾರನ್ನೂ ಬಲವಂತಪಡಿಸುವುದಿಲ್ಲ. ಇದರಲ್ಲಿ ಯಾವ ಕಾಯಿದೆಯೂ ಇಲ್ಲ. ಕಾಯಿದೆ ಇಲ್ಲದೆಯೇ ಮಾಡುವ ಯೋಜನೆ ಇದು.

ಶ್ರೀ ಕೆ. ಎಂ ನಾಗಣ್ಣ.—ನನಗೆ ಒಂದು ದೊಡ್ಡ ಅನುಮಾನ ವ್ಯಕ್ತಪಟ್ಟಿದೆ. ಇನ್ನು ಕೆಲವು ವರ್ಷಗಳ ಮೇಲೆ ಹಿಂದೂಗಳ ಸಂಖ್ಯೆ ಭಾರತ ದೇಶದಲ್ಲಿ ಕಡಿಮೆಯಾಗಿ, ಮುಸಲ್ಮಾನರ ಸಂಖ್ಯೆ ಜಾಸ್ತಿಯಾಗುತ್ತದೆ ಈ ದೇಶದಲ್ಲಿ ಮುಂದೆ ಅಂತಹ ಪರಿಸ್ಥಿತಿ ಬರಬಹುದೆಂದು ನನ್ನ ಸಂದೇಹ. ಅದಕ್ಕಾಗಿ ಯಾವ ಮಟ್ಟದಲ್ಲಿ ಮುಸಲ್ಮಾನರ ಸಂಖ್ಯೆ ಜಾಸ್ತಿಯಾಗುತ್ತದೋ ಅದೇ ಒಂದು ಮಟ್ಟದಲ್ಲಿ ಹಿಂದೂಗಳ ಸಂಖ್ಯೆಯೂ ಜಾಸ್ತಿಯಾದರೆ ಬಹಳ ಒಳ್ಳೆಯದು.

ಶ್ರೀ ಎಸ್. ಹಮೀದ್‌ಷಾ.—ಒಂದು ಸಾವಿರ ವರ್ಷಗಳಾದರೂ ಮುಸಲ್ಮಾರ ಸಂಖ್ಯೆಯು ಹಿಂದೂಗಳ ಸಂಖ್ಯೆಗೆ ಹೋಲುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮೂರು ಮಕ್ಕಳಿಗೆ ಜಾಸ್ತಿ ಆದರೇ ಅಂಥ ನೌಕರರಿಗೆ ಇನ್‌ಕ್ರಿಮೆಂಟ್ ಕೊಡಬಾರದೆಂದು ಒಂದು ಸರ್ಕಾರದ ಆಜ್ಞೆ ಇದೆಯೆಂದು ಹೇಳುತ್ತಿದ್ದಾರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಇನ್‌ಕ್ರಿಮೆಂಟ್ ನಿಲ್ಲಿಸಬೇಕೆಂಬ ವಿಚಾರವೇನೂ ಇಲ್ಲ. ಹಿಂದೆ 1971ರಲ್ಲಿ ಒಂದು ಸರ್ಕಾರಿ ಆರ್ಡರ್ ಹೊರಟಿತ್ತು. ಅದರ ಪ್ರಕಾರ ಸರ್ಕಾರಿ ಕೆಲಸದಲ್ಲಿರತಕ್ಕ ಹೆಣ್ಣು ಮಕ್ಕಳಿಗೆ ಎರಡು ಮಕ್ಕಳಾದ ಮೇಲೆ ಮೂರನೆ ಮಗುವಿನ ಹೆರಿಗೆಗೆ ರಜಾ ಕೇಳಿದರೆ ಕೊಡಬಾರದು ಎಂಬುದಾಗಿತ್ತು. ಇತ್ತೀಚೆಗೆ ಆ ಆರ್ಡರನ್ನು ರದ್ದುಗೊಳಿಸಲಾಗಿದೆ. ಈಗ ಅಂಥ ಯಾವ ಒಂದು ನಿರ್ಬಂಧವೂ ಇರುವುದಿಲ್ಲ. ಹೆಚ್ಚಿಗೆ ಮಕ್ಕಳಾದರೆ ಅವರಿಂದ ಕಷ್ಟವೇ ಅಥವಾ ಸುಖವೇ ಎಂಬುದನ್ನು ಅವರೇ ಆಲೋಚನೆ ಮಾಡಿಕೊಳ್ಳಬೇಕಾಗಿದೆ. ಮಕ್ಕಳೇ ಅವರಿಗೆ ಒಂದು

ಆಸ್ತಿ ಅನ್ನುವುದಾದರೆ ಅದಕ್ಕೇನೂ ಹೇಳುವುದಕ್ಕೆ ಬರುವುದಿಲ್ಲ. ಆದರೆ, ಪ್ರಕೃತಿ ನಿಯಮದಲ್ಲಿ ಬಡವರಿಗೆ ಹೆಚ್ಚು ಮಕ್ಕಳಾಗುತ್ತಿದ್ದರೆ ಶ್ರೀಮಂತರಿಗೆ ಮಕ್ಕಳೇ ಆಗುತ್ತಿಲ್ಲ. ಅದಕ್ಕೆ ಏನು ಹೇಳುವುದಕ್ಕೂ ಆಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರಷ್ಯಾ ದೇಶವಲ್ಲ ಎಷ್ಟು ಮಕ್ಕಳು ಜಾಸ್ತಿ ಆಗುತ್ತವೆ ಅಷ್ಟು ಬಹುಮಾನವನ್ನು ಒಂದೊಂದು ಮಕ್ಕಳಿಗೂ 100 ರೂಬೆಲ್ ಮತ್ತು 150 ರೂಬೆಲೆಗಳನ್ನೂ ಬಹುಮಾನವಾಗಿ ಕೊಡುತ್ತಿದ್ದಾರಂತೆ.

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಗೊತ್ತಿರುವ ಪ್ರಕಾರ ರಷ್ಯಾದಲ್ಲಿ ಕೂಡ ಫ್ಯಾಮಿಲಿ ಪ್ಲಾನಿಂಗ್ ಇದೆ ಎಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲೂ ಕೂಡ ಈ ದಿವಸ ಎಲ್ಲರೂ ಅಂದರೆ ಹಿಂದೂಗಳೂ, ಮುಸಲ್ಮಾನರೂ ಮತ್ತು ಕ್ರೈಸ್ತರೂ ವ್ಯಾಸೆಕ್ಟಮಿ, ಟ್ಯೂಬೆಕ್ಟಮಿ ಮತ್ತು ಐ.ಯು. ಸಿ.ಡಿ. ಮಾಡಿಸಿಕೊಳ್ಳುತ್ತಿದ್ದಾರೆ. ತಮಗೆ ನಾನು ತಿಳಿಸಬೇಕೆಂದರೆ ಕಳೆದ 71-72 ರಲ್ಲಿ ವ್ಯಾಸೆಕ್ಟಮಿ ಮಾಡಿಸಿಕೊಂಡವರ ಸಂಖ್ಯೆ.—ಹಿಂದೂಗಳು 4,990 ; ಮುಸಲ್ಮಾನರು 398 ; ಮತ್ತು ಕ್ರೈಸ್ತರು 61; ಅದೇ ರೀತಿ ಟ್ಯೂಬೆಕ್ಟಮಿ ಮಾಡಿಸಿಕೊಂಡವರ ಸಂಖ್ಯೆ.—ಹಿಂದೂಗಳು. 9,054. ಮುಸಲ್ಮಾನರು 499: ಮತ್ತು ಕ್ರೈಸ್ತರು. 119. ಇದೇ ರೀತಿ ನನ್ನಲ್ಲಿ ಐ.ಯು.ಸಿ.ಡಿ. ಅಂಕೆಗಳೂ ಇವೆ. ಇದರ ಬಗ್ಗೆ ಇನ್ನೂ ಎಫೆಕ್ಟೀವಾಗಿ ಪ್ರೊಪಗ್ಯಾಂಡಾ ನಡೆದಿಲ್ಲ. ಇದನ್ನು ಯಾರೂ ಹೆಚ್ಚಿನ ಸಂಖ್ಯೆಯಲ್ಲಿ ವಿರೋಧಿಸುತ್ತಲೂ ಇಲ್ಲ.

ಇನ್ನು ಡಾ. ಪುಟ್ಟಕಾಮಯ್ಯನವರು ಒಂದು ವಿಚಾರ ಹೇಳಿದ್ದಾರೆ. ಟ್ರಿಪಲ್ ಆಂಟೀಜನ್ ಏನಿದೆ ಇದನ್ನು ಡಿಫ್ತೀರೀಯ ಮೊದಲಾದ ಖಾಯಿಲೆಗಳಿಗೆ ಕೊಡುವುದಕ್ಕೆ ಆರ್ಡರ್ ಮಾಡಿದ್ದೇವೆ. ಇನ್ನು ಡಾ. ಪುಟ್ಟಕಾಮಯ್ಯನವರು ಮತ್ತು ವಿ. ಎಲ್. ಪಾಟೀಲರವರು ಬಹುಶಃ ರಷ್ಯಾಕ್ಕೆ ಹೋಗಿ ಬಂದಿದ್ದಾರೆಂದು ಕಾಣುತ್ತದೆ. ಇವರು ಅಲ್ಲಿಗೆ ಹೋಗಿದ್ದಾಗ ಅವರು, ಆ ನಿಮ್ಮ ಯೋಗ ಮತ್ತು ಆಯುರ್ವೇದ ಎಲ್ಲಿ ! ಎಂದು ಕೇಳಿದರು ಎಂಬುದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಅಲ್ಲಿ ಮಡ್ ಫ್ಯಾಕಿಂಗ್ ಚಿಕಿತ್ಸೆಯನ್ನು ನಡೆಸುತ್ತಿದ್ದಾರಂತೆ. ಅದು ನೇಚರ್ ಕ್ಯೂರಿಗೆ ಸಂಬಂಧ ಪಟ್ಟಿದ್ದು. ಈ ದಿವಸ ನಮ್ಮ ಬೆಂಗಳೂರಿನ ಜಯನಗರದಲ್ಲಿ ಒಂದು ನೇಚರ್ ಆಸ್ಪತ್ರೆ ಇದೆ. ಅಲ್ಲಿಗೆ ಈಗಾಗಲೆ ಮೂವರು ಹೈಕೋರ್ಟಿನ ಜಡ್ಜಿಗಳು ಬಂದು ತಮ್ಮ ಖಾಯಿಲೆಯನ್ನ ವಾಸಿ ಮಾಡಿಕೊಂಡಿದ್ದಾರೆ. ಮಡ್ ಎಫಿಕೆಸಿಟ್ರೀಟ್‌ಮೆಂಟ್ ತಮಗ್ಯಾರಿಗಾದರೂ ಬೇಕಾಗಿದ್ದರೆ ಅಲ್ಲಿಗೆ ಬನ್ನಿ. ಒಂದಾವರ್ತಿ ತಾವು ಅಲ್ಲಿಗೆ ಬಂದಮೇಲೆ ನೀವು ಯಾವ ಡಾಕ್ಟರ ಹತ್ತಿರವೂ ಹೋಗಬೇಕಾ ಕಾಗಿಲ್ಲ ಎಂಬುದು ತಮಗೆ ಗೊತ್ತಾಗುತ್ತದೆ. ತಾವು ಖಾಯಿಲೆ ಬಂದಾಗ ಉಪವಾಸ ಮಾಡಿದರೆ ಬಹಳ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್.—ಹಿರಿಯರು ಹೇಳಿದ್ದಾರಲ್ಲಾ ಲಂಘನಂ ಪರಮೌಷದಂ ಎಂದು.

ಶ್ರೀ ಎಚ್. ಸಿದ್ದವೀರಪ್ಪ.—ಅಷ್ಟೇ ಅಲ್ಲ ಹಳ್ಳಿಗಳ ಕಡೆ ಹೇಳುತ್ತಾರೆ 'ಊಟಬಲ್ಲವನಿಗೆ ರೋಗ ವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ' ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ಇರತಕ್ಕ ಡಾಕ್ಟರುಗಳ ಗತಿಯೇನು !

ಶ್ರೀ ಎಚ್. ಸಿದ್ದವೀರಪ್ಪ.—ರಷ್ಯಾದವರು ನಮ್ಮ ಜನರನ್ನು ನಿಮ್ಮ ಯೋಗ ಮತ್ತು ಆಯುರ್ವೇದ ಎಲ್ಲಿ? ಎಂದು ಕೇಳಿದ್ದಾರೆ ಅಂದಾಗ ನಾವು ಈ ಆಯುರ್ವೇದಕ್ಕೂ ಹೆಚ್ಚಿನ ನಿಗಾ ಕೊಡತಕ್ಕದ್ದು ಬಹಳ ಅಗತ್ಯ. ಅದಕ್ಕಾಗಿಯೇ ಸರ್ಕಾರದವರು ಈಗಾಗಲೇ ಅಲೋಪತಿಕ್ ಶಾಖೆಗೆ ಒಬ್ಬ ಡೈರೆಕ್ಟರ್ ಇರುವಂತೆ ಈ ಆಯುರ್ವೇದಕ್ಕೂ ಒಬ್ಬ ಪ್ರತ್ಯೇಕ ಡೈರೆಕ್ಟರನ್ನು ನೇಮಕ ಮಾಡಬೇಕೆಂದು ಮಾಡಿದ್ದಾರೆ. ಈ ವಿಚಾರದಲ್ಲಿ ಡಾ. ಮೇಲುಕೋಟಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಲಾಗಿದೆ. ಈಗಾಗಲೆ ಹೈದ್ರಾಬಾದಿನಲ್ಲಿ ಒಂದು ಈ ಸಂಸ್ಥೆ ಇದೆ. ವೆಲ್ಲೂರಿನಲ್ಲಿ ವಾಸಿಯಾಗದೆ ಇದ್ದಂಥ ಕೆಲವು ಕಾಯಿಲೆಗಳನ್ನು ಅಲ್ಲಿ ವಾಸಿಮಾಡಲಾಗಿದೆ ಎಂಬುದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು 'ಪಾತಂಜಲಿ ಯೋಗ ರಿಸರ್ಚ್ ಇನ್‌ಸ್ಟಿಟ್ಯೂಟ್' ಎಂಬ ಒಂದು ರಿಸರ್ಚ್ ಇನ್‌ಸ್ಟಿಟ್ಯೂಟ್ ಅಲ್ಲಿ ಕೆಲಸ ಮಾಡುತ್ತಿದೆ. ಇದಕ್ಕೆ ನಮ್ಮ ಸರ್ಕಾರ ಕೂಡ ಹೆಚ್ಚಿನ ಗಮನ ಕೊಡಬೇಕೆಂದಿದೆ.

ಇನ್ನು ಶ್ರೀ ಪುಟ್ಟದಾಸ್ ಅವರು ಈ ಡಾಕ್ಟರುಗಳ ನೇಮಕದ ಬಗ್ಗೆ ಹಾಗೂ ಅವರ ಪ್ರಮೋಷನ್ ವಿಚಾರದಲ್ಲಿ ಸರಿಯಾದ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಮಾಡಿಲ್ಲ ಸೀನಿಯಾರಿಟಿ ಲಿಸ್ಟನ್ನು ಮೈಂಟೈನ್ ಮಾಡಿಲ್ಲ ಎಂದು ಹೇಳಿದ್ದಾರೆ. ಆದರೆ ಈ ದಿವಸ ಅನೇಕ ಸ್ಥಾನಗಳು ಹಾಗೇ ಖಾಲಿ ಬಿದ್ದಿವೆ. ಮೆಡಿಕಲ್ ಕಾಲೇಜಿನಲ್ಲೂ ಅನೇಕ ಸ್ಥಾನಗಳು ಹಾಗೇ ಖಾಲಿ

(ಶ್ರೀ ಎಚ್, ಸಿದ್ದವೀರಪ್ಪ)

ಬದ್ದಿವೆ. ಅದಕ್ಕೆ ಕಾರಣ ಗೊತ್ತಿಲ್ಲ. ಆದರೆ ಹಾಲಿ ಇರತಕ್ಕ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಸಬ್‌ಜೆಕ್ಟಿವಾಗಿದೆಯೇ ವಿನಾ ಅವು ಆಬ್‌ಜೆಕ್ಟಿವಾಗಿಲ್ಲ ಎಂದು ವಾದ ಮಾಡತಕ್ಕವರೂ ಇದ್ದಾರೆ. ಅಂತೂ ಇಲ್ಲಿಯವರೆಗೂ ಅಲ್ಲಿ ಸರಿಯಾಗಿ ಒಂದು ಸೀನಿಯಾರಿಟಿ ಲಿಸ್ಟನ್ನು ಇಟ್ಟಿಲ್ಲ. ಅದಕ್ಕೆ ಈಗ ಎಲ್ಲವನ್ನೂ ಹೊಸದಾಗಿ ರೀಆರ್ಗನೈಜ್ ಮಾಡಬೇಕಾಗಿದೆ. ಎಲ್ಲವನ್ನೂ ಸರಿಪಡಿಸಬೇಕಾಗಿದೆ. ಈ ವಿಚಾರದಲ್ಲಿ ಈಗಾಗಲೇ ನಮ್ಮ ಅಧಿಕಾರಿಗಳಿಗೆ ಇದನ್ನೆಲ್ಲಾ ಚಾಲ್ತೀ ಸಾಲಿನಲ್ಲಿ ಸರಿಪಡಿಸಬೇಕೆಂದು ತಿಳುವಳಿಕೆಯನ್ನು ಕೊಡಲಾಗಿದೆ. ಅದನ್ನೆಲ್ಲಾ ಬೇಗ ಸರಿಪಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಹೆಲ್ತ್ ಮತ್ತು ಮೆಡಿಕಲ್ ಇಲಾಖೆಗಳೆರಡನ್ನೂ ಒಂದು ಗೂಡಿಸಿದಾಗ ಮೆಡಿಕಲ್‌ನವರಿಗೆ ಬಹಳ ಅನ್ಯಾಯವಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ನಾನು ಕೇಳಿದ್ದೇನೆ. ಕೆಲವು ಕಡೆ ಎಲ್. ಎಂ. ಪಿ. ಪಾಸ್‌ಮಾಡಿದ ಡಾಕ್ಟರ ಕೈಕೆಳಗೆ ಎಂ.ಡಿ. ಮತ್ತು ಎಂ. ಎಸ್. ಪಾಸ್ ಮಾಡಿದ ಡಾಕ್ಟರುಗಳು ಕೆಲಸಮಾಡಬೇಕಾಗಿ ಬಂದಿದೆ ಎಂಬ ವಿಷಯ ನನಗೂ ಗೊತ್ತಾಗಿದೆ ಅದರೆ ಒಬ್ಬ ವ್ಯಕ್ತಿ ಡಿ.ಎಚ್.ಓ. ಆಗಬೇಕಾಗಿದ್ದರೆ ಆತನಿಗೆ ಡಿ. ಪಿ. ಎಚ್. ಆಗಿರಲೇಬೇಕು ಎಂಬುದಾಗಿದೆ. ಕೆಲವು ಕಡೆ ಎಲ್. ಎಂ. ಪಿ. ಡಾಕ್ಟರು ಡಿ. ಎಚ್. ಓ. ಆಗಿ ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮಲ್ಲಿ ಈ ದಿವಸ ಡಿ. ಪಿ. ಎಚ್. ಮಾಡಿರತಕ್ಕವರು 19 ಜನರಿದ್ದಾರೆ. ಅವರಲ್ಲಿ ಅವರ ಮೆರಿಟ್ ಆರ್ಡರಿನಲ್ಲಿ 7 ಜನರನ್ನು ನೇಮಕ ಮಾಡಿಕೊಂಡಿದ್ದೇವೆ. ನಾವು ಅವರಿಗೆ ನಿಮ್ಮನ್ನು ಖಾಯಂ ಆಗಿ ಅಲ್ಲ ಹಂಗಾಮಿಯಾಗಿ ಮಾತ್ರ ನೇಮಕ ಮಾಡಿಕೊಂಡಿದ್ದೇವೆ ಎಂದು ಅವರಿಗೆ ತಿಳಿಸಿದ್ದೇವೆ. ಇಲ್ಲಿ ಒಂದು ಸರಿಯಾದ ಸೂತ್ರವನ್ನು ಇವಾಲ್ವ್ ಮಾಡಬೇಕಾಗಿದೆ. ಆದಷ್ಟೂ ಪ್ರಯತ್ನ ಮಾಡಿ ಆಗಿಂತಕ್ಕ ಅನ್ಯಾಯಗಳನ್ನು ತಗ್ಗಿಸುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ. ಮುಂದಕ್ಕೆ ಅನ್ಯಾಯಗಳಾಗುವುದಕ್ಕೆ ಅವಕಾಶ ಕೊಡುವುದಿಲ್ಲ.

ಇನ್ನು ಶ್ರೀ ವಾಟಾಳರು ದೇಸಾಯಿ ಡಾಕ್ಟರನ್ನು ಸದ್ದಿಲ್ಲದಂತೆ ಕಳುಹಿಸಿದ್ದೀರಿ ಎಂದು ಹೇಳಿದರು. ಅವರನ್ನು ನಾನೇನೂ ಕಳುಹಿಸಲಿಲ್ಲ. ಅವರಿಗೆ ಈಗ 50 ವರ್ಷಗಳ ವಯಸ್ಸಾಗಿದೆ. ಅಷ್ಟು ವಯಸ್ಸಾಗಿರತಕ್ಕವರು ಕೆಲಸದಿಂದ ನಿವೃತ್ತಿಯಾಗುತ್ತೇನೆಂದರೆ ಸರ್ಕಾರ ಅನುಮತಿ ಕೊಡುವುದಕ್ಕೆ ಕಾನೂನು ಪ್ರಕಾರ ಯಾವ ಅಡ್ಡಿಯೂ ಇಲ್ಲ. ಅವರಿಗೆ ಈಗ 4 ತಿಂಗಳ ಹಕ್ಕಿನ ರಜಾ ಇತ್ತು. ಅದನ್ನು ಅವರು ಬೇಕೇಬೇಕೆಂದು ಬಲವಂತ ಮಾಡಿದ್ದರಿಂದ ಅದನ್ನು ಮಂಜೂರು ಮಾಡಿದೆ. ಅವರು ರಜಾ ಹೋಗಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರ ಮೇಲೆ ಸಿ. ಬಿ. ಐ. ಅವರೇನಾದರೂ ಪ್ರೋಬ್ ಮಾಡುತ್ತಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಗೊತ್ತಿಲ್ಲ. ವಿಜಿಲೆನ್ಸ್‌ನವರೇನೋ ಎನ್‌ಕ್ವೈರಿ ಮಾಡುತ್ತಿದ್ದಾರೆಂದು ಕೇಳಿದೆ. ನಾನು ತಪ್ಪುಮಾಡಿದ್ದಾರೆಂದು ಹೇಳುವುದಿಲ್ಲ. ಶ್ರೀ ವಾಟಾಳ್ ನಾಗರಾಜ್‌ರವರು ದಯೆಯಿಟ್ಟು ಉತ್ಪ್ರೇಕ್ಷೆ ಮಾಡಬಾರದು. ಈ ಸಂದರ್ಭದಲ್ಲಿ ಮಂಕುತಿಮ್ಮನ ಕಗ್ಗದಿಂದ ಒಂದು ವಾಕ್ಯವನ್ನು ಹೇಳುತ್ತೇನೆ. "ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ, ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ, ಉದ್ಧರಿಸುವೆನು ಜಗವನ್ನೆನ್ನುತಿಹ ಸಖನೆ, ನಿನ್ನುದ್ಧಾರವೆಷ್ಟಾಯ್ತೊ, ಮಂಕುತಿಮ್ಮ."

ಇನ್ನು ಮಿಸೆಸ್ ಶೀಲ ಇರಾನಿಯವರು ಮೆಂಟಲ್ ಹೆಲ್ತ್ ವಿಚಾರ ಹೇಳಿದರು. ನಾವು ಸ್ತುತ್ಯವಾದ ಕಾರ್ಯ ಮಾಡಿದ್ದೇವೆ. ಇದನ್ನು ಹೇಳಿದರೆ ಉತ್ಪ್ರೇಕ್ಷೆ ಮಾಡುತ್ತೇನೆಂದು ತಿಳಿಯಬಾರದು. ನಾನೂ ಸಹ ಒಂದು ಸಲ ಮೆಂಟಲ್ ಆಸ್ಪತ್ರೆಗೆ ಹೋಗಿ ಯಾರಿಗೂ ತಿಳಿಯದಂತೆ ಟೆಸ್ಟ್ ಮಾಡಿಸಿಕೊಂಡು ಬರಬೇಕೆಂದಿದ್ದೇನೆ. ಮಾಡಿಸಿಕೊಂಡು ಬರುವುದು ಒಳ್ಳೆಯದು ಎಂಬ ಅಭಿಪ್ರಾಯ ನನಗಿದೆ. ನರ್ವಸ್ ಬಲ ಎಷ್ಟಿದೆ ಮೆಂಟಲ್ ಎಕ್ಸ್‌ಪ್ರೆಸ್ ಏನಿದೆ ಮುಂತಾದ್ದನ್ನು ಅಲ್ಲಿ ಪರೀಕ್ಷೆ ಮಾಡಿಸಿ ತಿಳಿದುಕೊಳ್ಳುವುದು ಒಳ್ಳೆಯದು. ಅಲ್ಲಿ ಒಳ್ಳೆಯ ತಜ್ಞರಿದ್ದಾರೆ. ನನಗೆ ಕೆಲವು ದಿವಸ ಆ ಆಸ್ಪತ್ರೆಯಲ್ಲಿರಬೇಕೆಂಬ ಆಸೆ ಇದೆ. ಅಲ್ಲಿಯ ಎನ್‌ವೈರನ್‌ಮೆಂಟ್ ಬಹಳ ಚೆನ್ನಾಗಿದೆ. ನಾನು ಒಂದು ದಿನ ಯಾರಿಗೂ ಗೊತ್ತಾಗದಂತೆ ಹೋಗಿ ಒಂದು ಗಂಟೆ ನೋಡಿದೆ. ಅಲ್ಲಿರುವ ಡಾ. ರೆಡ್ಡಿ, ಡಾ. ವರ್ಮ ಒಳ್ಳೆಯ ಕೆಲಸ ಮಾಡುವರು. ಇದನ್ನು ಅನೇಕರು ಹೇಳುತ್ತಿದ್ದಾರೆ. ಬಹುಶಃ ಇಡೀ ಇಂಡಿಯಾದಲ್ಲಿ ಇಲ್ಲಿ ಒಳ್ಳೆಯ ಆಸ್ಪತ್ರೆ ಇರುವುದರಿಂದ ಇದಕ್ಕೆ ಪ್ರೆಸ್ಟೀಜ್ ಬರಬಹುದು. ಬಹುಶಃ ಈ ಸರ್ವಿಸ್ ಡಿಸ್ಟ್ರಿಕ್ಟ್ ಲೆವಲ್‌ನಲ್ಲೂ ಮಾಡಬೇಕಾಗಿ ಬರುವುದು.

ಶ್ರೀ ವಾಟಾಳ್ ನಾಗರಾಜ್.—ಶ್ರೀ ಕೆ. ಕೆ. ಮೂರ್ತಿಯವರು ಒಂದು ಆಸ್ಪತ್ರೆ ಓಪನ್ ಮಾಡಿದ್ದಾರಂತೆ.

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಗೊತ್ತಿಲ್ಲ. ಶ್ರೀ ನಾಗರಾಜ್ ಅವರು ''ರವಿ ಕಾಣದ್ದನ್ನು ಕವಿ ಕಂಡ'' ಎಂಬಂತೆ ಯಾರಿಗೂ ಗೊತ್ತಿಲ್ಲದಿರುವುದು ಏನಾದರೂ ಇದ್ದರೆ ಅದನ್ನು ತಿಳಿದು ಕೊಳ್ಳುವರು. ಅದು ಅವರಿಗೆ ಗೊತ್ತಾಗುವುದು.

ನರ್ಸಿಂಗ್ ಹೋಂ ಮತ್ತು ಕ್ಲಿನಿಕ್ ತೆರೆಯಬೇಕು ಎಂದು ಹೇಳಿದರು. ಅದು ಯಾರಿಗಾಗಿ ತೆರೆಯುವರು? ಡಿಸೀಸಸ್ ಆಫ್ ಅಫ್ಲೂಯೆನ್ಸ್ ಇರುವವರು ಅಲ್ಲಿಗೆ ಹೆಚ್ಚಾಗಿ ಹೋಗುವರು. ಹೇಳಿರುವ ಸಲಹೆ ಸ್ತುತ್ಯವಾಗಿದೆ, ಅದಕ್ಕಾಗಿ ಒಂದು ಬಿಲ್ಲನ್ನು ತಯಾರುಮಾಡುವಂತೆ ಹೇಳಿದ್ದೇನೆ, ಅದಾಗುತ್ತಿದೆ. ಎಲ್ಲರಿಗೂ ಅದರ ಅನುಕೂಲ ದೊರೆಯಬೇಕು. ಸಿನೀಮಾಗಳಿಗೆ ಸಂಬಂಧ ಪಟ್ಟಂತೆ ಕಾನೂನಿದೆ, ಈಟಿಂಗ್ ಹೋಂಗಳಿಗೆ ಕಾನೂನಿದೆ. ಅವುಗಳಿಗೆ ಇರುವಂತೆ ಒಂದು ಬಿಲ್ಲನ್ನು ತಯಾರಿಸಬೇಕಾಗಿದೆ. 1969ರಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಕೇಂದ್ರ ಸರಕಾರದವರು ಒಂದು ಮಾಡಲ್ ಬಿಲ್ಲನ್ನು ಮಾಡಿ ನರ್ಸಿಂಗ್ ಹೋಂ ಮತ್ತು ಕ್ಲಿನಿಕ್‌ಗಳ ವಿಚಾರದಲ್ಲಿ ಯಾವರೀತಿ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದ್ದಾರೆ. ನಾವೂ ಒಂದು ಬಿಲ್ಲನ್ನು ಮಾಡುತ್ತಿದ್ದೇವೆ. ಯೋಚನೆ ಮಾಡಿ ಮುಂದೆ ಅದನ್ನು ಜಾರಿಗೆ ತರಬಹುದು.

ಇನ್ನು ಮೆಡಿಕಲ್ ಕಾಲೇಜ್ ಅಡ್ಮಿಷನ್ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ. ಇದು ಬಹಳ ಕಠಿಣ ವಾದ ಸಮಸ್ಯೆ. ಈ ವರ್ಷದಲ್ಲಿ ಎಷ್ಟು ಹುಡುಗರನ್ನು ತೆಗೆದುಕೊಳ್ಳಬೇಕು ಎಂದು ಗೊತ್ತು ಮಾಡ ಬೇಕು. ಯೂನಿವರ್ಸಿಟಿಯವರು ಸೇಕಡ 50ರಷ್ಟು ತೆಗೆದುಕೊಳ್ಳಬೇಕೆಂದು ಹೇಳುವರು, ಆನ್ಯುಯಲ್ ಇನ್‌ಟೇಕ್ ಒಂದು ಸಾವಿರ ಹುಡುಗರನ್ನು ತೆಗೆದುಕೊಳ್ಳುತ್ತಿದ್ದೇವೆ. ನಾವು 500 ತೆಗೆದುಕೊಳ್ಳಬೇಕು. ಈಗ ಸಮಿತಿ ಇದೆ. ಸರಕಾರ ಎಷ್ಟು ತೆಗೆದುಕೊಳ್ಳಬೇಕು ಎಂದು ಸರಕಾರ ಯೋಚನೆ ಮಾಡುವುದು. ಯಾವ ರೀತಿಯಲ್ಲೂ ಅನ್ಯಾಯವಾಗದಂತೆ ವ್ಯವಸ್ಥೆಮಾಡಲು ಯಥಾ ಶಕ್ತಿ ಪ್ರಯತ್ನ ಮಾಡುತ್ತೇವೆ. ಫಾಲ್ಸ್ ಇನ್‌ಕಂ ಸರ್ಟಿಫಿಕೇಟುಗಳನ್ನು ತರುವರು ಎಂದು ಶ್ರೀ ದಿಗಂಬರ್‌ರಾವ್ ಹೇಳಿದರು, ಪ್ರೈವೇಟ್ ಕಾಲೇಜುಗಳ ವಿಚಾರ ಹೇಳಿದರು. ಫಾಲ್ಸ್ ಸರ್ಟಿಫಿಕೇಟ್ ತಂದರೆ ಅದನ್ನು ಗಮನಕ್ಕೆ ತಂದರೆ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಶ್ರೀ ರುದ್ರಪ್ಪನವರು ಒಂದು ಮುಖ್ಯವಾದ ವಿಚಾರ ಹೇಳಿದ್ದಾರೆ. ಹೋಟಲುಗಳಲ್ಲಿ ಒಳ್ಳೆಯ ಆಹಾರ ಸಿಕ್ಕುವುದಿಲ್ಲ, ಸರಿಯಾದ ವ್ಯವಸ್ಥೆಯಿಲ್ಲ, ಆದುದರಿಂದ ಅವು ಕಾಯಿಲೆಯ ಉಗಮ ಸ್ಥಾನಗಳಾಗಿವೆ ಎಂದು ಅವರು ಹೇಳಿರುವುದು ನಿಜ, ಒಪ್ಪುತ್ತೇನೆ. ಈ ದಿವಸ ಪಬ್ಲಿಕ್ ಹೆಲ್ತ್ ಆಕ್ಟ್ ಹಳೆಯ ಮೈಸೂರಿನಲ್ಲಿದೆ, ಉಳಿದ ಭಾಗಗಳಲ್ಲಿ ಸಹ ಒಂದಿದೆ. ಅಧಿಕಾರಿಗಳು ಬಹುಶಃ ಅವನ್ನು ನೋಡುವರೋ ಇಲ್ಲವೋ ಗೊತ್ತಿಲ್ಲ. ಇಷ್ಟು ಹೇಳುತ್ತೇನೆ. ಎಲ್ಲಿಯವರೆಗೆ ಪಬ್ಲಿಕ್ ಹೆಲ್ತ್ ಆಕ್ಟ್ ಸರಿಯಾಗಿ ಗಮನಿಸಿ ಅದರಂತೆ ಸೂಪರ್‌ವೈಜರಿ ಸಿಬ್ಬಂದಿ ಕೆಲಸ ಮಾಡುವುದಿಲ್ಲ ಅಲ್ಲಿಯವರೆಗೆ ಸಾರ್ವಜನಿಕರ ಆರೋಗ್ಯ ಸರಿಹೋಗುವುದಿಲ್ಲ. ಆಕ್ಟಿನಂತೆ ನಡೆಯಬೇಕಾದ್ದು ಮುಖ್ಯವಾದುದು. ಅದರ ಪ್ರಕಾರ ನಮ್ಮ ಅಧಿಕಾರಿಗಳು ಕೆಲಸಮಾಡಿದರೆ ಜನರ ಆರೋಗ್ಯ ಸುಧಾರಿಸುವುದು. ಆದುದರಿಂದ ಪಬ್ಲಿಕ್ ಹೆಲ್ತ್ ಆಕ್ಟನ್ನು ಇಡೀ ರಾಜ್ಯಕ್ಕೆ ಅನ್ವಯಿಸುವ ರೀತಿಯಲ್ಲಿ ಮಾಡಿ ಅದನ್ನು ನಿಮ್ಮ ಮುಂದಿಡುವ ಅವಕಾಶ ಜಾಗ್ರತೆ ಬರಲಿ ಎಂದು ಹಾರೈಸುತ್ತೇನೆ.

ಸೊಳ್ಳೆ ಕಾಟ. ನನಗೆ ಇದರ ಅನುಭವ ಬಹಳವಾಗಿದೆ. ಜಯನಗರದಲ್ಲಿರುವವರು ರಾತ್ರಿ 7 ಗಂಟೆಯಾದ ಕೂಡಲೆ ಸೊಳ್ಳೆ ಪರದೆಯೊಳಗೆ ಸೇರಿಕೊಳ್ಳಬೇಕು, ಹೊರಗೆ ಬರುವುದು ಕಷ್ಟ. ಜಯನಗರವು ಏಷ್ಯಾ ಖಂಡದಲ್ಲೇ ಬಹಳ ಉತ್ತಮವಾದ ಎಕ್ಸ್‌ಟೆನ್‌ಷನ್ ಆದರೂ ಅಲ್ಲಿ ಸೊಳ್ಳೆ ಕಾಟ ಕಡಮೆಯಾಗಿಲ್ಲ. ಆದರಿಂದ ಮಲೇರಿಯಾ ಇದೆ. ಕಾಲರ, ಸ್ಮಾಲ್‌ಪಾಕ್ಸ್, ಲೆಪ್ರಸಿ, ಎಪಿಡೆಮಿಕ್ ಡಿಸೀಸಸ್ ಇವೆ. ಎಷ್ಟೋ ಹಳ್ಳಿಗಳಲ್ಲಿ ಜನರು ಇವುಗಳಿಗೆ ತುತ್ತಾಗಿದ್ದಾರೆ ಅವು ಗಳಿಗೆ ಪ್ರಿವೆಂಟಿವ್ ಮೆಡಿಸಿನ್ಸ್ ತೆಗೆದುಕೊಳ್ಳಬೇಕು. ಈ ಬಗ್ಗೆ ಜಾಯಿಂಟ್ ಡೈರೆಕ್ಟರಿಗೆ ಆದೇಶ ಕೊಡಲಾಗಿದೆ. ಹೆಚ್ಚಿನ ರೀತಿಯಿಂದ ಕೆಲಸ ಮಾಡಬೇಕು, ಚುರುಕಾಗಿ ಕೆಲಸ ಮಾಡಬೇಕು ಎಂದು ತಿಳಿಸಲಾಗಿದೆ. ಕೇಂದ್ರ ಸರಕಾರದವರನ್ನು ಈ ವಿಚಾರದಲ್ಲಿ ಹೆಚ್ಚಿನ ಸಹಾಯ ನೀಡಬೇಕೆಂದು ಕೇಳಲಾಗಿದೆ.

ಇಷ್ಟೆಲ್ಲಾ ಆದಮೇಲೆ ಅನೇಕರು ಅವರವರ ಕ್ಷೇತ್ರಗಳ ಆಸ್ಪತ್ರೆ ವಿಚಾರ ಹೇಳಿದ್ದಾರೆ. ಶ್ರೀ ಪುಟ್ಟಸ್ವಾಮಯ್ಯನವರು ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಬೇಕೆಂದು ಹೇಳಿದ್ದಾರೆ. ಹೊರಗಡೆ ಸಹ ಜನರು ಈ ಸಂಬಂಧವಾಗಿ ಹೇಳಿದ್ದಾರೆ. ಎಲ್ಲಾ ತಾಲ್ಲೂಕುಗಳ ಆಸ್ಪತ್ರೆಗಳಲ್ಲಿ 25 ಬೆಡ್‌ಗಳಿಗೆ ಕಡಿಮೆ ಇಲ್ಲದಂತೆ ವ್ಯವಸ್ಥೆಮಾಡಬೇಕು ಎಂಬ ನಿಯಮವಿದೆ, ಆಸೆಯೂ ಇದೆ,

(ಶ್ರೀ ಎಚ್. ಸಿದ್ದವೀರಪ್ಪ)

ಅದರಂತೆ ಮಾಡುತ್ತೇನೆ. ಕೆಲವು ಕಡೆ 50 ಬೆಡ್‌ಗಳಿಗೆ ಕೂಡ ಅವಕಾಶವಾಗಬಹುದು. 25 ಆದರೂ ಒದಗಿಸಬೇಕೆಂದು ತೀರ್ಮಾನವಾಗಿದೆ.

ಇನ್ನೊಂದು ಮಾತನ್ನು ಹೇಳುತ್ತೇನೆ. ಅದು ಇಲಾಖೆಯ ರೀ ಆರ್ಗನೈಜೇಷನ್‌ಗೆ ಸಂಬಂಧ ಪಟ್ಟಿದೆ. ಅನೇಕ ಅಧಿಕಾರಿಗಳಿದ್ದಾರೆ. ಅವರು ಒಂದು ಸಾವಿರದಿಂದ ಒಂದೂವರೆ ಸಾವಿರ ರೂಪಾಯಿಗಳವರೆಗೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅವರಿಗೆ ಸರಿಯಾಗಿ ಕೆಲಸ ಹಂಚಬೇಕು. ಜಾಯಿಂಟ್ ಡೈರೆಕ್ಟರು, ಡೈರೆಕ್ಟರು ಮುಂತಾದ ಹೆಚ್ಚು ಸಂಬಳ ಪಡೆಯುವ ಅಧಿಕಾರಿಗಳಿದ್ದಾರೆ. ಅವರಿಗೆ ಸರಿಯಾದ ಜವಾಬ್ದಾರಿಯನ್ನು ವಹಿಸಬೇಕು. ಹಾಗೆ ಮಾಡಿದರೆ ಅವರು ಅದನ್ನು ನಿರ್ವಹಿಸುವರು. ಸರಿಯಾಗಿ ಅವರು ತಮ್ಮ ಜವಾಬ್ದಾರಿ ನಿರ್ವಹಿಸದಿದ್ದರೆ ಕ್ರಮ ತೆಗೆದುಕೊಳ್ಳಬಹುದು. ಆದುದರಿಂದ ರೀಆರ್ಗನೈಜೇಷನ್ ಮಾಡಬೇಕೆಂದು ಯೋಚನೆಮಾಡಲಾಗುತ್ತಿದೆ. ಯಾರಿಗೆ ಯಾವ ಕೆಲಸ ಕೊಡಬೇಕು ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ನಾಲಕ್ಕು ಡಿವಿಜನ್ನುಗಳಿವೆ. ಒಂದೊಂದಕ್ಕೆ ಒಬ್ಬೊಬ್ಬ ಡೆಪ್ಯುಟಿ ಡೈರೆಕ್ಟರಿದ್ದಾರೆ. ಈಗ ಖರ್ಚು ಮಾಡುವುದಕ್ಕಿಂತ ಹೆಚ್ಚು ಹಣ ವ್ಯಯಮಾಡದೆ ಇರುವ ಸಿಬ್ಬಂದಿಯನ್ನು ರೀಆರ್ಗನೈಜ್ ಮಾಡಿ ಅವರಿಂದ ಸರಿಯಾದ ಕೆಲಸ ತೆಗೆದುಕೊಳ್ಳಬೇಕು ಎಂದು ಯೋಚನೆಮಾಡಿದ್ದೇವೆ.

ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಮಾಡುವ ವಿಚಾರದಲ್ಲಿ ಮಾನ್ಯ ಮಿತ್ರರು ಅನೇಕ ವಿಚಾರ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ರೀಟೈಲ್ ಸೆಲರ್ಸ್ ಏನಿದ್ದಾರೆ ಅವರೇ ಡಾಕ್ಟರುಗಳನ್ನು ಕೆಡಿಸಲು ಮೂಲ ಕಾರಣರು. ರೇಟ್ ಕಾಂಟ್ರ್ಯಾಕ್ಟ್ ಸಿಸ್ಟಂನಿಂದ ಅನ್ಯಾಯವಾಗಿದೆ. ಆದುದರಿಂದ ಈ ಸಿಸ್ಟಂ ತೆಗೆದುಹಾಕಬೇಕೆಂದು ಆರ್ಡರು ಮಾಡಲಾಗಿದೆ. ಇದಕ್ಕಿಂತ ಯಾರು ಮ್ಯಾನುಫ್ಯಾಕ್ಚರ್ ಮಾಡುವರೋ ಅವರಿಂದ ತೆಗೆದುಕೊಳ್ಳುವುದು ಸೂಕ್ತ ಎಂದು ಭಾವಿಸಲಾಗಿದೆ. ಆಲ್ ಇಂಡಿಯಾ ಟೆಂಡರ್ ಕರೆದು ಆ ಮೂಲಕ ತೆಗೆದುಕೊಳ್ಳಬೇಕೆಂದಿದ್ದೇವೆ. ಸೇಕಡ ತೊಂಭತ್ತು ಭಾಗ ಈ ದೇಶದಲ್ಲಿ ತಯಾರು ಆಗುವುದರಲ್ಲೇ ತೆಗೆದುಕೊಳ್ಳಬೇಕು, ಹೊರಗಡೆಯಿಂದ ತರಿಸಬಾರದು ಎಂದು ಮಾಡಿದ್ದೇವೆ. ಇದರಿಂದ ಸೇಕಡ 25ರಷ್ಟು ಖರ್ಚು ಕಡಿಮೆಯಾಗಬಹುದು. ಇದರ ಜೊತೆಗೆ 1967ರಲ್ಲಿ ಒಂದು ಹಾಸ್ಪಿಟಲ್ ಫಾರ್ಮಸಿ ಮಾಡಬೇಕೆಂದು ಇದ್ದರು. ಪ್ರತಿಯೊಂದು ಔಷಧಿಯನ್ನೂ ಅಲ್ಲೇ ತಯಾರು ಮಾಡಬೇಕೆಂಬ ಅಭಿಪ್ರಾಯವಿತ್ತು. ಸಾಮಾನುಗಳು ಏನು ಬೇಕೋ ಅವನ್ನು ತರಿಸಿ ತಯಾರಿಸಬೇಕು, ಮೆಡಿಕಲ್ ಗ್ರ್ಯಾಜುಯೇಟ್ಸ್ ಇದ್ದಾರೆ, ಡಿಪ್ಲೊಮಾ ಹೋಲ್ಡರ್ಸ್ ಇದ್ದಾರೆ, ಕಾಲೇಜ್ ಇದೆ, ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಪ್ರತಿಯೊಂದು ಕಡೆ ಫಾರ್ಮಸಿ ಓಪನ್ ಮಾಡಿ ಅಲ್ಲಿ ಸಿಂಥ್‌ಸೈಸ್ ಮಾಡಿ ಔಷಧಿ ತಯಾರಿಸಿದರೆ ಹೊರಗಡೆ ಷಾಪಿನಲ್ಲಿ ಒಂದು ರೂಪಾಯಿ ಕೊಡುವುದಕ್ಕೆ ಹತ್ತು ಪೈಸೆ ಬೀಳುವುದು ಎಂದು ಹೇಳುವುದನ್ನು ಕೇಳಿದ್ದೇನೆ. ತಾವು ಪಾಕೀಸ್ಥಾನದ ಪೇಪರ್‌ನಲ್ಲಿ ಓದಿರಬಹುದು. ಆಯಾಯ ರಾಜ್ಯದಲ್ಲಿ ತಯಾರಾಗತಕ್ಕಂಥ ಔಷಧಿಯನ್ನೇ ಉಪಯೋಗಿಸುತ್ತಾರೆ. ಇಂಗ್ಲೆಂಡ್‌ನಲ್ಲೂ ಈ ರೀತಿ ಇದೆ. ಆದುದರಿಂದ ನಮ್ಮ ದೇಶದಲ್ಲೂ ಕೂಡ ಆ ರೀತಿ ಏತಕ್ಕೆ ಮಾಡಬಾರದು ಅಂತ ಯೋಚನೆ ಮಾಡಿದ್ದೇವೆ. ಅದಕ್ಕಾಗಿ ಪ್ರಾಯೋಗಿಕವಾಗಿ ಈ ವರ್ಷವೇ ಪ್ರಾರಂಭ ಮಾಡಬೇಕೆಂದು ಸರ್ಕಾರ ನಿರ್ಧರಿಸಿದೆ. ಒಟ್ಟು ಈವಾಗ ನಾವು ಈ ಔಷಧಿಗಳಿಗೆ 2 ಕೋಟಿ 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಬಹುಶಃ ಇದನ್ನು ಇಲ್ಲೇ ತಯಾರಿಸುವುದಾದರೆ ಕಾಲಕ ಮೇಣ ಕೊನೇ ಪಕ್ಷ 10 ಕೋಟಿ ರೂಪಾಯಿಯಷ್ಟು ಬೆಲೆ ಬಾಳತಕ್ಕ ಔಷಧಿಗಳನ್ನು ತಯಾರಿಸುವುದಕ್ಕೆ ಸಾಧ್ಯ ಇದೆ ಎಂದು ಹೇಳುತ್ತೇನೆ.

1-00 P.M.

ಇನ್ನು ಡಾಕ್ಟರ್‌ಗಳ ಬಗ್ಗೆ ಹೇಳುವುದಾದರೆ ಅವರು ವಿದ್ಯಾವಂತರು, ಅವರಿಗೆ ಜನರಲ್ಲಿ ಅನುಕಂಪ ಬರಬೇಕು, ತ್ಯಾಗ ಮನೋಭಾವನೆ ಬರಬೇಕು, ಅವರ ಬಗ್ಗೆ ಅನೇಕ ಫಿರ್ಯಾದುಗಳು ಬರುವುದರಿಂದ ಸರ್ಕಾರ ಸುಮ್ಮನೆ ಕೂತಿರಲು ಸಾಧ್ಯವಿಲ್ಲ. ಕಾರಣ ಏನು ಎಂದರೆ ಹಿಂದಿನ ಹಾಗೆ ಜನರು ಈಗ ಸುಮ್ಮನೆ ಇರುವುದಕ್ಕೆ ತಯಾರಾಗಿಲ್ಲ. ನಾವೇ ಪೋಲೀಸರಾಗಿ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳುವ ಕಾಲವೂ ಬರಬಹುದು. ಏತಕ್ಕೆಂದರೆ ಜನರು ಡಾಕ್ಟರ್ ಬಳಿಗೆ ಹೋದಾಗ ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೇ ಹೋದರೆ ಅವರ ಬಗ್ಗೆ ಅಲ್ಲಿಯ ಜನರು ಸರ್ಕಾರಕ್ಕೆ ತಿಳಿಸುತ್ತಾರೆ. ಈ ರೀತಿ ಡಾಕ್ಟರ್ ಬಗ್ಗೆ ಬರತಕ್ಕಂಥ ಫಿರ್ಯಾದುಗಳು ಬಹಳವಾಗಿವೆ. ಆದರೆ 100 ಕ್ಕೆ 90 ಭಾಗ ಡಾಕ್ಟರುಗಳು ಸರಿಯಾಗಿಲ್ಲ ಎಂದು ಹೇಳಿದರೆ ನನ್ನ ಮನಸ್ಸಿಗೆ ನೋವು ಆಗುತ್ತದೆ. ನಾನೇನೂ ಅವರನ್ನು ಎಕ್ಸಾಜರೇಟ್ ಮಾಡುವುದಿಲ್ಲ. ಒಬ್ಬ ಡಾಕ್ಟರ್ ತನ್ನ ಕರ್ತವ್ಯ

ವನ್ನು ಸರಿಯಾಗಿ ನಿರ್ವಹಿಸಿದರೆ ನಮ್ಮ ಜನ ಅವರನ್ನು ದೇವರ ಹಾಗೆ ಕಾಣುತ್ತಾರೆ. ಅವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಊಟ ಹಾಕಿ ಬೇಕಾದ ಹಾಗೆ ಉಪಚಾರ ಮಾಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿರುವ ಡಾಕ್ಟರುಗಳಿಗೆ ಡಿ.ಹೆಚ್.ಓ. ಅವರು ಕಿರುಕುಳ ಕೊಡುತ್ತಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ಅದನ್ನು ನೋಡಿಕೊಳ್ಳೋಣ. ಈವೊತ್ತಿನ ದಿವಸ ಒಬ್ಬ ಡಾಕ್ಟರನ್ನು ತಯಾರು ಮಾಡಬೇಕಾದರೆ ನಮ್ಮ ದೇಶದಲ್ಲಿ ಎಷ್ಟು ದುಡ್ಡು ಖರ್ಚಾಗುತ್ತದೆ ಎಂದು ನಿಮಗೆಲ್ಲಾ ಗೊತ್ತಿದೆ. ಆಸ್ಪತ್ರೆ ಖರ್ಚು ಇತರ ಎಲ್ಲಾ ಖರ್ಚು ಸೇರಿದರೆ ಒಬ್ಬ ಡಾಕ್ಟರನ್ನು ತಯಾರು ಮಾಡಬೇಕಾದರೆ 1 ಲಕ್ಷ 20 ಸಾವಿರ ರೂಪಾಯಿ ಖರ್ಚಾಗುತ್ತದೆ. ಇದು ಬಡ ಬೋರೇಗೌಡನ ದುಡ್ಡು, ಅವನ ಬೊಕ್ಕಸದಿಂದ ಈ ದುಡ್ಡನ್ನು ಖರ್ಚು ಮಾಡಬೇಕು. ಈ ಸೌಕರ್ಯ ಯಾರಿಗೆ ಸಿಕ್ಕುತ್ತದೆ ಎಂದರೆ ನಮ್ಮ ದೇಶದಲ್ಲಿರತಕ್ಕಂಥ ಮಕ್ಕಳಲ್ಲಿ ಒಂದು ಸಾವಿರ ಜನರಲ್ಲಿ ಒಬ್ಬನಿಗೆ ಈ ಸೌಕರ್ಯ ಸಿಕ್ಕುತ್ತದೆ. ಇವರ ಜವಾಬ್ದಾರಿ ಸರ್ಕಾರಕ್ಕೆ ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಆದುದರಿಂದ ಡಾಕ್ಟರ್ ಕೋರ್ಸ್‌ನಲ್ಲಿ ಒಂದು ಸರಿ ಸಿಲಬಸ್‌ನ್ನು ಸೇರಿಸಬೇಕು ಎಂತ ಮಾಡಿದ್ದೇವೆ ಅದು ಏನೆಂದರೆ the ethics of the morality they owe to the country ಎಂದು. ಕೇಂದ್ರ ಸರ್ಕಾರದಲ್ಲೂ ಕೂಡ ನ್ಯಾಷನಲ್ ಸರ್ವಿಸಸ್ ಅಂತ ಒಂದು ಬಿಲ್ ಮಾಡಿದ್ದಾರೆ. ಅದರ ಜೊತೆಗೆ ಮುಂದೆ ಅವರಿಗೆ ಈ ಒಂದು ಡಿಗ್ರಿ ಕೊಡಬೇಕಾದರೆ ಕೊನೆಯಲ್ಲಿ ಅವರು 1 ವರ್ಷವೋ ಅಥವಾ 2 ವರ್ಷವೋ ಹಳ್ಳಿಗಾಡಿಗೆ ಹೋಗಿ ಹಳ್ಳಿಗಾಡಿನವರ ಜೊತೆಯಲ್ಲಿ ನೆಲೆಸಿ ಜನರ ಜೊತೆಯಲ್ಲಿ ಕೆಲಸ ಮಾಡಿದ ಮೇಲೆ ಈ ಒಂದು ಡಿಗ್ರಿ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇಲ್ಲದೇ ಹೋದರೆ ಹಳ್ಳಿಗಾಡಿನವರ ಮನಸ್ಸು ಕೆಟ್ಟು ಹೋಗುತ್ತದೆ, ಸೋಷಿಯಲಿಸ್ಟ್ ಪ್ಯಾಟರ್ನ್ ಆಫ್ ಸೊಸೈಟಿ ಸಹ ಕೆಟ್ಟು ಹೋಗುತ್ತದೆ. ಆದುದರಿಂದ ಅವರು ಯಾವಾಗಲೂ ದುಡ್ಡಿನ ಕಡೆಗೆ ಹೆಚ್ಚಿನ ಗಮನ ಕೊಡದೆ ಯಾವಾಗಲೂ ನಮ್ಮ ಜನತೆಯ ಸೇವೆಯನ್ನು ಮಾಡಬೇಕೆಂದು ಅವರ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕೆಂದು ನಾನು ಅವರಿಗೆ ಅರಿಕೆ ಮಾಡಿಕೊಂಡು ಈ ಒಂದು ವಾಕ್ಯವನ್ನು ಅವರ ಮನಸ್ಸಿಗೆ ಸೆಳೆಯುತ್ತೇನೆ.

"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಗೆ
ಎಲ್ಲರೊಳಗೊಂದಾಗು—ಮಂಕುತಿಮ್ಮ."

ಶ್ರೀ ವಾಟಾಳ್ ನಾಗರಾಜ್.—ನಾಲ್ಕನೇ ವರ್ಗದ ನೌಕರರ ವರ್ಗಾವಣೆ ವಿಚಾರ ಹೇಳಲಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ.—ವರ್ಗದ ವಿಚಾರದಲ್ಲಿ ಅನೇಕ ಸ್ನೇಹಿತರುಗಳು ಹೇಳಿದ್ದಾರೆ. ಇದರ ಬಗ್ಗೆ ನಾನಾದರೂ ಹೇಳುತ್ತೇನೆ. ಕ್ಲಾಸ್ ಫಸ್ಟ್ ಗ್ರೇಡ್ ಆಫೀಸರುಗಳದ್ದು ಸರ್ಕಾರಕ್ಕೆ ಸಂಬಂಧಪಟ್ಟದ್ದು. ಕ್ಲಾಸ್ ಸೆಕೆಂಡ್ ಆಫೀಸರ್ ಮತ್ತು ಬಿಲೋ ಇರತಕ್ಕಂಥವುಗಳದ್ದು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟಿನವರು ಮಾಡುತ್ತಾರೆ. ಈಗ ನಾನು ಇದರ ವಿಷಯವಾಗಿ ವಿಶ್ವಾಸದಿಂದ ಹೇಳುತ್ತೇನೆ. ಏನಾದರೂ ವಿಷಯ ಇದ್ದರೆ ನನಗೆ ಕಾಗದ ಬರೆದು ತಿಳಿಸಿ. I am your representative. ಒಂದು ಉದಾಹರಣೆ ಹೇಳುವುದಾದರೆ ಒಂದು ದಿವಸ ಒಬ್ಬ ಹೆಲ್ತ್ ಆಫೀಸರ್ ನೇರವಾಗಿ ನನ್ನ ಮನೆಗೆ ಬಂದನು. ಆವೊತ್ತಿನ ದಿವಸ ಡೈರೆಕ್ಟರ್ ನನ್ನ ಪಕ್ಕದಲ್ಲೇ ಕೂತಿದ್ದರು. I want transfer ಎಂದು ಹೇಳಿದನು. ಅವನು ಡೈರೆಕ್ಟರ್ ಕಡೆಯೂ ಗಮನ ಕೊಟ್ಟಿಲ್ಲ, ಜಾಯಿಂಟ್ ಡೈರಕ್ಟರ್ ಕಡೆಯೂ ಗಮನ ಕೊಟ್ಟಿಲ್ಲ, ಡೆಪ್ಯೂಟಿ ಡೈರೆಕ್ಟರ್ ಕಡೆಯೂ ಗಮನ ಕೊಟ್ಟಿಲ್ಲ. ಇದು ನೋಡಿದರೆ it brings indiscipline. ನಿಮ್ಮ ಕಷ್ಟ ನನಗೆ ಗೊತ್ತು. ನೀವು ಪ್ರಜೆಗಳ ಪ್ರತಿನಿಧಿಗಳು. ನಿಮ್ಮ ಕ್ಷೇತ್ರದಲ್ಲಿ ಅಲ್ಲಿಯ ಅಮಲ್ದಾರ್, ಪೋಲೀಸ್ ಅಧಿಕಾರಿಗಳು, ಯಾರು ಯಾರು ಇರುತ್ತಾರೋ ಅವರಿಗೆ ಅಲ್ಲಿಯ ಸದಸ್ಯ ನರ್ಸ್ ಇದ್ದ ಹಾಗೆ. ಎಲ್ಲರೂ ಸರಿಯಾಗಿರಬೇಕು. ಸರಿಯಾಗಿ ಇಲ್ಲದೇ ಹೋದರೆ ಅವರ ಮೇಲೆ ನೀವು, ನಿಮ್ಮ ಕ್ಷೇತ್ರದ ನರ್ಸ್ ಕೆಲಸ ಮಾಡಬೇಕಾಗುತ್ತದೆ. ಅಲ್ಲಿಗೂ ಸರಿಹೋಗದಿದ್ದಾಗ ನೀವು ಆ ಮೇಲೆ ನನಗೆ ಹೇಳಬೇಕಾಗುತ್ತದೆ. ಆ ರೀತಿ ನೀವು ಹೇಳುವಾಗ ಒಂದು ರೂಲು ಮಾಡಿಕೊಂಡು, ಒಂದು ಕಾನೂನು ಮಾಡಿಕೊಂಡು ಒಂದು ಶಿಸ್ತು ಮಾಡಿಕೊಂಡು ನೀವು ಆ ಕೆಲಸವನ್ನು ಮಾಡಬೇಕು ಎಂದು ತಿಳಿಸುತ್ತೇನೆ. ಇನ್ನು ಏನಾದರೂ ನಿಮ್ಮ ಮನಸ್ಸಿಗೆ ನೋವಾಗುವಂಥ ವಿಷಯಗಳು ಇದ್ದರೆ ಅದನ್ನೂ ಗಮನದಲ್ಲಿಟ್ಟುಕೊಂಡು ನನಗೆ ತಿಳಿಸಿ. ನೇರವಾಗಿ ನನಗೆ ಕಾಗದ ಬರೆಯಿರಿ.

(ಶ್ರೀ ಎಚ್. ಸಿದ್ದವೀರಪ್ಪ)

ಇನ್ನು ಹೋಮಿಯೋಪಥಿ ವಿಚಾರದ ಬಗ್ಗೆ ಹೇಳುವುದಾದರೆ ಇದಕ್ಕೆ ಒಂದು ಕಮಿಟಿಯನ್ನು ನೇಮಿಸಿದ್ದೇವೆ. ಇದರಲ್ಲಿ ಅವರನ್ನೂ ಸೇರಿಸಿದ್ದೇವೆ. ಅವರ ವಿಚಾರದಲ್ಲಿ ಹೆಚ್ಚಿನ ಗಮನ ಕೊಡುತ್ತೇವೆ.

ಶ್ರೀ ಎಸ್. ಹಮೀದ್‌ಷಾ.—ತಾವು ಯುನಾನಿ ವಿಚಾರದಲ್ಲಿ ಏನೂ ಹೇಳಲಿಲ್ಲಾ.

Sri H. SIDDAVEERAPPA.—Unani includes Ayurveda, ಅದು indigenous system.

ಇದುವರೆಗೆ ಮಾನ್ಯ ಸದಸ್ಯರುಗಳು ನಾನು ಮಾಡಿದ ಭಾಷಣವನ್ನು ಸಾವಧಾನವಾಗಿ ಕೇಳಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—The question is :

"That a Sum not exceeding Rs. 19,73,57,000, inclusive of the Sum granted 'on account', be granted to the Government to defray the charges which will come in course of payment during the financial year for the period ending with 31st day of March 1973 in respect of Demand No. 18 'Medical, Public Health and Family Planning' ".

*The motion was adopted and the Demand was granted.*

## DEMAND No. 20, 22, 38 AND 51.

Sri K. H. PATIL (Minister for Agriculture).—Madam, on the recommendation of the Governor, I beg to move :

"That a Sum not exceeding Rs. 14,95,15,000, inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 20 'Agriculture' ".

MADAM SPEAKER.—Motion moved :—

"That a Sum not exceeding Rs. 14,95,15,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 20 'Agriculture' ".

Along with this Demand, the other Demands Nos. 38 and 51 are also deemed to have been moved.

Sri N. CHIKKE GOWDA (Minister of State for Animal Husbandry).—Madam, on the recommendation of the Governor, I beg to move :

"That a sum not exceeding Rs. 2,83,00,000, inclusive of the sum granted 'on account', be granted to the Government to defray the charges which will come in course of payment

during the financial year for the peroid ending 31st day of March 1973, in respect of Demand No. 22 'Animal Husbandry''.

MADAM SPEAKER.—Motion moved :

"That a sum not exceeding Rs. 2,83,00,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 22 'Animal Husbandry' ".

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ವ್ಯವಸಾಯಕ್ಕೆ ಸಂಬಂಧಪಟ್ಟಂತೆ, ಪಶುಸಂಗೋಪನೆಗೆ ಸಂಬಂಧಪಟ್ಟಂತೆ ಹಾಗೂ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆಗಳನ್ನು ಸಭೆಯ ಮುಂದೆ ಮಾನ್ಯ ಮಂತ್ರಿಗಳು ನಮ್ಮ ಒಪ್ಪಿಗೆಗಾಗಿ ಇಟ್ಟಿರತಕ್ಕ ಕಾಲದಲ್ಲಿ ನಾನು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂಬ ಭಾವನೆಯಿಂದ ಇದ್ದೇನೆ. ಮಂತ್ರಿಗಳು ನೇರವಾಗಿ ಕಳೆದ ಮೂರು ತಿಂಗಳಿನಿಂದ ಈಚೆಗೆ ಅಧಿಕಾರವನ್ನು ಹಿಡಿದಿರುವುದರಿಂದ ನಮ್ಮ ಮೇಲೆ ಹೆಚ್ಚು ಅಪಾದನೆಯನ್ನು ಹೊರಿಸಿದರೆ ನಾವು ಹೊಣೆಗಾರರಾಗುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಹುದು. ಕಳೆದ ಒಂದೂವರೆ ವರ್ಷಗಳಿಂದ ರಾಷ್ಟ್ರಾಧ್ಯಕ್ಷರ ಆಳ್ವಿಕೆಯಿಂದ ಪ್ರಾರಂಭವಾದ ನಿಮ್ಮ ಯುಗದಲ್ಲಿ ಏನೇನು ಪ್ರಗತಿಯನ್ನು ಸಾಧನೆ ಮಾಡಲಾಗಿವೆ ಎನ್ನುವ ಪ್ರಶ್ನೆಯನ್ನು ನಾವು ವಿಮರ್ಶೆ ಮಾಡಬೇಕಾಗಿದೆ. ಈ ಹೊತ್ತು ಎಲ್ಲರೂ ಗ್ರಾಮಾಂತರ ಜನತೆಯ ಅಭೀಷ್ಟೆಯನ್ನು ಈಡೇರಿಸತಕ್ಕ ಹೊಣೆಗಾರಿಕೆಯನ್ನು ಹೊತ್ತಿದ್ದೇವೆ ಎನ್ನುವ ಮಾತನ್ನು ಆಡುತ್ತೇವೆ. ನಾವು ನಮ್ಮ ಪ್ರತಿಯೊಂದು ಘೋಷಣೆಯಲ್ಲಿಯೂ ಕೂಡ ಅವರ ಹಿತಾಸಕ್ತಿಗಳನ್ನು ಕುರಿತೇ ಹೇಳುತ್ತ ಬಂದಿದ್ದೇವೆ. ಮಾನ್ಯ ಮಂತ್ರಿಗಳಿಗೆ ನಾನು ಹೇಳುತ್ತೇನೆ, ಬಜೆಟ್ ಭಾಷಣದ ಮೇಲೆ ಮಾತನಾಡುವಾಗ ಒಂದು ವಿಷಯವನ್ನು ಪ್ರಸ್ತಾಪ ಮಾಡಿದೆ: ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ಬ್ಯಾಂಕ್ ರಾಷ್ಟ್ರೀಕರಣವಾದ ಮೇಲೆ ರಾಷ್ಟ್ರಾಧ್ಯಕ್ಷರು ಒಂದು ಆರ್ಡಿನೆನ್ಸ್ ಹೊರಡಿಸಿದರು. ಆ ರಾತ್ರಿ ಇಂದಿರಾ ಗಾಂಧಿಯವರ ಭಾಷಣವನ್ನು ನಾನು ಕೇಳಿದೆ. ''ಹೊಸ ಗಾಳಿ ಬೀಸುತ್ತಿದೆ, ಕಿಟಿಕಿ ಬಾಗಿಲನ್ನು ತೆಗೆದು ಈ ಹೊಸ ಗಾಳಿಗೆ ತಾವು ಹೊಂದಿಕೊಳ್ಳಬೇಕು'' ಎಂದು ಹೇಳಿದ್ದು ಅವರ ಭಾಷಣದ ಒಂದು ಅಂಶ. ಈ ಹೊತ್ತು ಬ್ಯಾಂಕ್ ರಾಷ್ಟ್ರೀಕರಣವಾದ ವಿಷಯದ ಬಗ್ಗೆ ನಾವು ಯಾರೂ ವಿಚಾರ ಮಾಡುತ್ತಿಲ್ಲ. ಎಷ್ಟರಮಟ್ಟಿಗೆ ಇದರಿಂದ ಗ್ರಾಮಾಂತರ ಜನತೆಯ ಪುರೋಭಿವೃದ್ಧಿಯಾಗಿದೆ, ಇದು ಫಲಕಾರಿಯಾಗಿದೆ ಎಂದು ನಾನು ಕೇಳಬೇಕಾಗಿದೆ. ಎಷ್ಟು ಹಣವನ್ನು ಗ್ರಾಮಾಂತರ ಜನತೆಯ ಅಭ್ಯುದಯಕ್ಕಾಗಿ ರಾಷ್ಟ್ರೀಕರಣವಾದ ಮೇಲೆ ಒದಗಿಸಿದೆ ಎನ್ನುವ ಅಂಕಿ ಅಂಶಗಳನ್ನು ಕೊಟ್ಟರೆ ಬಹಳ ಒಳಿತು ಎನ್ನುವ ವಿಷಯವನ್ನು ನನ್ನ ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೆ. ಬಹುಶಃ ಮಾನ್ಯ ಮಂತ್ರಿಗಳು ಸಾಧ್ಯವಾದರೆ ತಮ್ಮ ಉತ್ತರದಲ್ಲಿ ಅಂಕಿ ಅಂಶಗಳನ್ನು ಕೊಡುವುದಾದರೆ ನಾನು ಸ್ವಾಗತ ಮಾಡುತ್ತೇನೆ.

ಈ ರಾಜ್ಯದಲ್ಲಿ ಇಂದು ಏನಾಗಿದೆ ಎಂದರೆ ಅಧಿಕಾರದ ಹಂಬಲ್ಲ, ಎಲ್ಲರೂ ಅವರನ್ನೇ ಅವಲಂಬಿಸಬೇಕು. 80 ಪರ್ಸೆಂಟ್ ರೈತರು, ಹಳ್ಳಿಗಳಲ್ಲಿ ವಾಸ ಮಾಡತಕ್ಕ ಜನ ವ್ಯವಸಾಯದ ವೃತ್ತಿಯನ್ನೇ ಅವಲಂಬಿಸಿ ಜೀವನ ಮಾಡತಕ್ಕ ಜನ, ಅವರ ಮನಸ್ಸಿಗೆ ಇಚ್ಛೆಯಾಗುವ ಮಾತನ್ನು ಆಡದೆ ಹೋದರೆ ಉಳಿಗಾಲವಿಲ್ಲ, ಸ್ಥಾನ ಸಿಕ್ಕುವುದಿಲ್ಲ. ಆ ಸ್ಥಾನ ಸಿಕ್ಕುವುದಕ್ಕೆ ಈ ಒಂದು ಘೋಷಣೆಯ ರೂಪದಲ್ಲಿ ಅವರನ್ನು ಎಳೆದುಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದ ಹಣಕಾಸಿನ ಸಚಿವರಾದ ಚವಾಣ್ ಅವರು ಪಾರ್ಲಿಮೆಂಟಿನಲ್ಲಿ "Banks set apart Rs. 20 crores for lending to farmers at low rate of interest," ಎಂದು ಹೇಳಿದ್ದಾರೆ. ಇದರಲ್ಲಿ ಎಷ್ಟು ದುಡ್ಡನ್ನು ನಮ್ಮ ರಾಜ್ಯಕ್ಕೆ ತೆಗೆದುಕೊಂಡು ಬಂದಿದ್ದೀರಿ ಎಂದು ನಾನು ಕೇಳಬೇಕಾಗಿದೆ. ಇದನ್ನು ದಯಮಾಡಿ ತಿಳಿಸಬೇಕು ಎಂದು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ. ನಾವು ಟೀಕೆಗೋಸ್ಕರ ಟೀಕೆ ಮಾಡುತ್ತಿದ್ದೇವೆ ಎನ್ನುವ ಭಾವನೆ ಬರುವುದು ಬೇಡ. ತಾವು ಏನು ಹೇಳುತ್ತೀರಿ ಅದನ್ನು ಕಾರ್ಯಗತ ಮಾಡುವ ಬಗ್ಗೆ ಎಷ್ಟು ಮುಂದೆ ಹೋಗಿದ್ದೀರಿ ಎಂದು ನಾನು ಕೇಳಬೇಕಾಗುತ್ತದೆ. ನಮ್ಮ ಸಭಾ ನಾಯಕರು, ಮುಖ್ಯ ಮಂತ್ರಿಗಳು ಮಡಿಕೇರಿಯಲ್ಲಿ ಮಾತನಾಡುವಾಗ ಕಡಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ಸಿಕ್ಕುವ ಹಾಗೆ ಮಾಡಬೇಕು ಎಂದು ಹೇಳಿದ್ದಾರೆ. ನಾನು ಅದನ್ನು ಸ್ವಾಗತ ಮಾಡಿ, ಬೇಗ ಅದನ್ನು ಕಾರ್ಯಗತ ಮಾಡಿರಿ ಎಂದು ಹೇಳಿದೆ. ಅವರು ಹೇಳಿ ಮೂರು ನಾಲ್ಕು ತಿಂಗಳಾಯಿತು. ಈ ದಿಸೆಯಲ್ಲಿ ಎಷ್ಟರಮಟ್ಟಿಗೆ

(ಶ್ರೀ ಹೆಚ್. ಡಿ. ದೇವೇಗೌಡ)

ಸಾಧನೆ ಮಾಡಿದ್ದಾರೆ, ಕಡಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ಕೊಡುವ ವಿಚಾರದಲ್ಲಿ ಏನು ಸಾಧನೆ ಮಾಡಿದ್ದಾರೆಂಬುದನ್ನು ತಿಳಿಸಬೇಕು. ಒಂದು ವೇಳೆ ಕಡಮೆ ದರದಲ್ಲಿ ರೈತರಿಗೆ ಸಾಲವನ್ನು ಕೊಡದೆ ಹೋದರೆ ಆಲ್ಟರ್ನೇಟಿವ್ ಏಜೆನ್ಸೀಸ್ ಮಾಡುತ್ತೇವೆನ್ನುವ ಬೆದರಿಕೆಯನ್ನೂ ಮಾನ್ಯ ಮುಖ್ಯ ಮಂತ್ರಿಗಳು ಪ್ರಯೋಗ ಮಾಡಿದ್ದಾರೆ. ಆ ದಿಸೆಯಲ್ಲಿ ಎಷ್ಟರಮಟ್ಟಿಗೆ ತಮ್ಮ ಕಾರ್ಯವನ್ನು ಸಾಧಿಸಿದ್ದಾರೆಂಬುವುದನ್ನೂ ನಾನು ಕೇಳಬೇಕಾಗುತ್ತದೆ.

ಇಂದು ವ್ಯವಸಾಯದಲ್ಲಿ ಸ್ವಲ್ಪ ಹೆಚ್ಚು ಉತ್ಪನ್ನವಾದರೆ ನಮ್ಮ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ನಿಂದ ಆಯಿತು ಎನ್ನುವ ಒಂದು ದೊಡ್ಡಸ್ತಿಕೆಯ ಮಾತನ್ನು ಹೇಳುವ ಹವ್ಯಾಸವನ್ನು ಬೆಳೆಸಿಕೊಂಡು ಬಂದಿದ್ದೇವೆ. ಒಂದು ವೇಳೆ ಉತ್ಪನ್ನ ಬಿದ್ದು ಹೋದರೆ ಮಳೆ ಸರಿಯಾಗಿ ಆಗಲಿಲ್ಲ, ನ್ಯಾಚುರಲ್ ಕೆಲಾಮಿಟೀಸ್‌ನಿಂದ ಹೀಗಾಯಿತು ಎನ್ನುವ ವಾದವನ್ನು ಹೂಡುತ್ತೇವೆ. ಈ ಹೊತ್ತು 90—92 ಪರ್ಸೆಂಟ್ ಉಳುಮೆಯ ಭೂಮಿ ಮಳೆಯ ಆಧಾರದ ಮೇಲೆಯೇ ಅವಲಂಬನೆಯನ್ನು ಈ ರಾಜ್ಯದಲ್ಲಿ ಮಾಡಿಕೊಂಡಿವೆ. ಹೀಗಿರುವಾಗ ರೈತ ಎಷ್ಟರಮಟ್ಟಿಗೆ ಪ್ರಗತಿಯನ್ನು ಸಾಧಿಸಬಲ್ಲ ಎಂಬುದನ್ನು ನಾವು ಯೋಚನೆ ಮಾಡಬೇಕು. ಉತ್ಪನ್ನ ಜಾಸ್ತಿಯಾದಾಗ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಂಡುದರ ದೆಸೆಯಿಂದ ಆಯಿತು ಎನ್ನುವುದು, ಉತ್ಪನ್ನ ಕಡಮೆಯಾದರೆ ಮಳೆ ಇಲ್ಲದೆ ಇದ್ದುದರಿಂದ ಕಡಮೆಯಾಯಿತು ಎನ್ನುವ ವಾದ ಸರಿಯಾದುದಲ್ಲ. ಈ ದಿಸೆಯಲ್ಲಿ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡುತ್ತಿಲ್ಲ ಎನ್ನುವ ದೃಷ್ಟಿಯಿಂದ ಈ ಮಾತು ನಾನು ಹೇಳುತ್ತಿದ್ದೇನೆ.

ಎಲ್ಲ ಕಡೆ ಭಾರಿ ನೀರಾವರಿ ಯೋಜನೆಗಳನ್ನು ಮಾಡುವುದಕ್ಕಾಗುವುದಿಲ್ಲ; ಎಲ್ಲ ಕಡೆ ಕೆರೆಗಳನ್ನು ಕಟ್ಟುವುದಕ್ಕಾಗುವುದಿಲ್ಲ. ಭೂಮಿಯಿಂದ ನೀರನ್ನು ಮೇಲಕ್ಕೆ ತೆಗೆಯುವುದರಲ್ಲಿ ನಾವು ಸಾಕಷ್ಟು ಪ್ರಗತಿಯನ್ನು ಸಾಧನೆ ಮಾಡಿಲ್ಲ. ಸಣ್ಣ ಸಣ್ಣ ರೈತರಿಗೆ ತಾವೇ ಸ್ವತಃ ಬಾವಿ ಹಾಕಿಕೊಂಡು ಕೆಲಸ ಮಾಡುವುದಕ್ಕೆ ಶಕ್ತಿ ಇಲ್ಲ. ಶ್ರೀ ಅರಸು ಅವರ ಭಾಷಣದ ಕೆಲವು ಭಾಗಗಳನ್ನು ಓದುವುದರಲ್ಲಿ ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. 'ಸಣ್ಣ ರೈತರಿಗೆ ಅನುಕೂಲವಾಗುವುದಕ್ಕೆ ಕಮ್ಯೂನಿಟಿ ಇರಿಗೇಷನ್ ವೆಲ್ಸ್ ಮಾಡಿ, ಅದರಿಂದ ನೀರನ್ನು ಒದಗಿಸಿ ಅನುಕೂಲ ಮಾಡಿಕೊಡುವುದರ ಬಗ್ಗೆ ಪ್ರಯತ್ನ ಮಾಡುವುದು ಒಳ್ಳೆಯದು'' ಎಂದು ಇದೇ ಸಭೆಯಲ್ಲಿ ಅವರು ಪ್ರತಿಪಾದನೆ ಮಾಡಿದ್ದಾರೆ. ಆದರೆ ಅವರೇ ಅಧಿಕಾರಕ್ಕೆ ಬಂದ ಮೇಲೆ ಆ ದಿಸೆಯಲ್ಲಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎಂಬುದು ನಾನು ಕೇಳಬೇಕಾಗುತ್ತದೆ. ಕೇವಲ ಅಂದು ಆಡಳಿತವನ್ನು ಹಿಡಿದಿದ್ದಂತಹ ಜನತೆಯ ಮೇಲೆ ಆರೋಪ ಮಾಡುವ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದರೆ ಅದಕ್ಕೆ ನಾನು ಹೆಚ್ಚು ಮಹತ್ವ ಕೊಡುವುದಿಲ್ಲ. ನಿಜವಾಗಿಯೂ ಅದನ್ನು ಕಾರ್ಯರೂಪಕ್ಕೆ ತರಬೇಕಾಗಿತ್ತು ಎನ್ನುವ ದೃಷ್ಟಿಯಿಂದ ಆ ಮಾತನ್ನು ಹೇಳಿದ್ದರೆ ನಾನು ಮೆಚ್ಚುತ್ತೇನೆ. ಮತ್ತು ಈಗ ತಾವೇ ಆಡಳಿತವನ್ನು ವಹಿಸಿಕೊಂಡಿರುವುದರಿಂದ ಅವರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ನಾನು ಕೇಳಬೇಕಾಗುತ್ತದೆ. ಭೂಮಿಯಲ್ಲಿರುವ ಜಲವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ನಮ್ಮಲ್ಲಿ ಸಾಕಷ್ಟು ಮಾಹಿತಿ ಇಲ್ಲ ಮತ್ತು ಸರ್ವೆಯಾಗಿಲ್ಲ ಈ ನೀರನ್ನು ಉಪಯೋಗಿಸಿಕೊಳ್ಳುವ ಕಡೆಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಕೊಡುವುದು ಸೂಕ್ತ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಇಂದು ರೈತರ ಪ್ರಗತಿಯಾಗಬೇಕಾದರೆ ಅವರಿಗೆ ಬೇಕಾದಂಥ ಬೀಜ, ಗೊಬ್ಬರ ಮತ್ತು ಇತರೇ ಸಲಕರಣೆಗಳನ್ನು ಸಕಾಲದಲ್ಲಿ ಒದಗಿಸಿಕೊಡಬೇಕಾಗುತ್ತದೆ. ಔಷಧದ ಅವಶ್ಯಕತೆ ಇದ್ದರೆ ಒದಗಿಸಿಕೊಡಬೇಕಾಗುತ್ತದೆ. ಇದರ ಬಗ್ಗೆ ಎಷ್ಟರಮಟ್ಟಿಗೆ ಪ್ರಗತಿಯಾಗಿದೆ ಎಂಬುದನ್ನು ನಾವು ನೋಡಬೇಕಾಗಿದೆ. ಇಂದು ಶೇಕಡ 70ರಷ್ಟು ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ಜನರು ಅವಿದ್ಯಾವಂತರಾಗಿರುವುದರಿಂದ, ಇವರನ್ನು ಶೋಷಣೆ ಮಾಡತಕ್ಕಂಥ ವರ್ಗದವರು ಇಂದು ಜಾಸ್ತಿಯಾಗಿದ್ದಾರೆ. ಈ ರೈತರ ಶೋಷಣೆಯಾಗತಕ್ಕಂಥ ಜಾಡ್ಯವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಏನು ಪ್ರಯತ್ನ ಮಾಡಿದ್ದಾರೆಂದು ನಾನು ಕೇಳುತ್ತೇನೆ. ನನ್ನ ಕ್ಷೇತ್ರದಿಂದ ಒಬ್ಬ ರೈತ ನನಗೆ ಇಂದು ಒಂದು ಪತ್ರವನ್ನು ರಿಜಿಸ್ಟರ್ ಪೋಸ್ಟ್‌ನಲ್ಲಿ ಕಳಿಸಿಕೊಟ್ಟಿದ್ದಾನೆ. ಅದರಲ್ಲಿ ಆತ ಏನು ಬರೆದಿದ್ದಾನೆಂದರೆ; ಸರ್ಟಿಫೈಡ್ ಅವಂಥ ಬೀಜವನ್ನು ನಾನು ಖರೀದಿ ಮಾಡಿ ಉಪಯೋಗಿಸಿದೆ, ಆದರೆ ಅದರಿಂದ ನಿರೀಕ್ಷಿಸಿದಂಥ ಫಲ ದೊರಕಿಲ್ಲ, ನಷ್ಟ ಉಂಟಾಗಿದೆ, ಎಷ್ಟು ನಷ್ಟ ಉಂಟಾಗಿದೆಯೋ ಅದಕ್ಕೆ ತಕ್ಕ ಪರಿಹಾರವನ್ನು ನಿಮ್ಮ ಮಂತ್ರಿಗಳಿಂದ ಕೊಡಿಸುವುದಕ್ಕೆ ಸಾಧ್ಯವೇ ಎಂಬುದಾಗಿ ಬರೆದಿದ್ದಾನೆ. ಸೀಡ್ಸನ್ನು ಎಲ್ಲಿ ಖರೀದಿ ಮಾಡಲಾಗಿದೆ ಎಂಬುದಕ್ಕೆ ರಶೀದಿ

ಕೂಡ ಇದೆ. ಬೇಕಾದರೆ ಮಾನ್ಯ ಮಂತ್ರಿಗಳಿಗೆ ಕಳಿಸಿಕೊಡುತ್ತೇನೆ. ಇಂದು ಈ ಬೀಜದ ಮಾರಾಟವನ್ನು ಮೈಸೂರು ಸ್ಟೇಟ್ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರು ವಹಿಸಿಕೊಂಡಿದ್ದಾರೆ. ಇವರು ಸುಮಾರು 4 ಲಕ್ಷ ಕೆ. ಜಿ. ಯಷ್ಟು ಹೈಬ್ರಿಡ್ ಜವಾರನ್ನು ಖರೀದಿ ಮಾಡಿದ್ದಾರೆಂದು ಕೇಳಿದ್ದೇನೆ. ಕೆ. ಜಿ. ಒಂದಕ್ಕೆ 50 ಪೈಸೆ ಯಷ್ಟು ಹೆಚ್ಚು ಕೊಟ್ಟಿದ್ದಾರೆ. ಇದರಲ್ಲಿ ಹಂಚಿಕೆ ಮಾಡಿರುವ ಸುಮಾರು 3 ಲಕ್ಷ ಕೆ. ಜಿ. ಯಲ್ಲಿ ನಿರೀಕ್ಷಿಸಿದ ಫಲ ಕೊಟ್ಟಿಲ್ಲ. ಇದರಿಂದ ರೈತರಿಗೆ ನಷ್ಟವಾಗಿದೆ. ಈ ನಷ್ಟಕ್ಕೆ ಯಾರು ಕಾರಣರು ಎಂಬುದನ್ನು ತಾವು ಹೇಳಬೇಕು. ಇನ್ನೂ 75 ಸಾವಿರ ಕೆ. ಜಿ. ಯಷ್ಟು ಸ್ಟಾಕ್ ಉಳಿದಿದೆ ಎಂದು ನಾನು ಕೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟ ಒಬ್ಬ ಅಧಿಕಾರಿ ಮೊದಲು ಖಾಸಗೀ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದವರು ಎಂದು ಕೇಳಿದ್ದೇನೆ ಮತ್ತು ಅವರನ್ನು ಕೆಲಸದಿಂದ ಕಿತ್ತು ಹಾಕಿದ್ದರು. ಇದೆಲ್ಲಾ ಅನಾಹುತ ರಾಷ್ಟ್ರಪತಿಯವರ ಆಡಳಿತದ ಕಾಲದಲ್ಲಿ ನಡೆದಿದೆ. ಈ ರೀತಿಯ ಅವ್ಯವಹಾರ ನಡೆದಿರುವುದು ನಿಜವಾಗಿದ್ದಲ್ಲಿ ಸರ್ಕಾರದವರು ಸಂಬಂಧ ಪಟ್ಟವರಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಮನಸ್ಸು ಹರಿಸಬೇಕೆಂದು ಕೇಳುತ್ತಿದ್ದೇನೆ. ಮೈಸೂರು ಸ್ಟೇಟ್ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂಬುದು ನಮ್ಮ ಸರ್ಕಾರದ ಒಂದು ಸಂಸ್ಥೆ. ಈ ಸಂಸ್ಥೆಯಲ್ಲಿ ಅನೇಕ ತರಹದ ಅವ್ಯವಹಾರಗಳು ನಡೆದಿರುವ ಬಗ್ಗೆ ಆಪಾದನೆಗಳಿವೆ. ಇದನ್ನು ಕ್ಷಮಿಸುವುದಕ್ಕೆ ಸಾಧ್ಯವಿಲ್ಲ. ಈ ಸಂಸ್ಥೆಯಲ್ಲ ಕೆಲಸ ಮಾಡುವ ಅಧಿಕಾರಿಗಳು ಸರ್ಟಿಫೈ ಮಾಡತಕ್ಕಂಥ ಧೋರಣೆ ಸರಿಯಾಗಿಲ್ಲವೆಂದು ಕೇಳಿದ್ದೇನೆ. ಸರಿಯಾದಂಥ ಬಿಗಿ ಕ್ರಮವನ್ನು ಅನುಸರಿಸುತ್ತಿಲ್ಲ. ಅಡಲ್‌ಟ್ರೇಟ್ ಆದಂಥ ಬೀಜಗಳನ್ನು ಚೀಲಕ್ಕೆ ಹಾಕಿ, ಅದರ ಮೇಲೆ ಸರ್ಟಿಫೈಡ್ ಸೀಲನ್ನು ಹಾಕಿ ರೈತರಿಗೆ ಹಂಚಲಾಗುತ್ತಿದೆ. ಅಧಿಕಾರಿಗಳು ತಮ್ಮ ಸ್ವಂತ ಲಾಭಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ. ಸ್ವಾರ್ಥ ಪ್ರವೃತ್ತಿ ಅಧಿಕಾರಿಗಳಲ್ಲಿ ಇಂದು ನಡೆಯುತ್ತಿದೆ. ಕೆಲವರು ಒಳ್ಳೆಯ ಅಧಿಕಾರಿಗಳು ಇರಬಹುದು. ಅಡಲ್‌ಟ್ರೇಟ್ ಆದಂಥ ಬೀಜಗಳನ್ನು ಹಂಚುವುದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಬಿಗಿಯಾದ ಕ್ರಮ ಕೈಕೊಳ್ಳಬೇಕೆಂಬ ಮಾತನ್ನು ನಾನು ಹೇಳುತ್ತಿದ್ದೇನೆ. ಇದರ ಜೊತೆಗೆ ರೈತರು ಉಪಯೋಗ ಮಾಡತಕ್ಕಂಥ ಗೊಬ್ಬರದ ಬೆಲೆಯು ಕಳೆದ 15 ವರ್ಷಗಳಲ್ಲಿ ಸುಮಾರು 200 ಪರ್‌ಸೆಂಟ್‌ನಷ್ಟು ಜಾಸ್ತಿಯಾಗಿದೆ. ನೈಟ್ರೋಜಿನಸ್ ಗೊಬ್ಬರದ ಬೆಲೆ ಈ ರೀತಿ ಹೆಚ್ಚಿರುವ ಸಂದರ್ಭದಲ್ಲಿ ರೈತರ ಪರಿಸ್ಥಿತಿ ಎಷ್ಟರ ಮಟ್ಟಿಗೆ ಸುಧಾರಿಸಿದೆ ಮತ್ತು ಕಾಸ್ಟ್ ಆಫ್ ಪ್ರೊಡಕ್ಷನ್ ಏನಾಗುತ್ತಿದೆ ಎಂಬುದನ್ನು ನಾವು ನೋಡಬೇಕು. ಇದೇ ವಿಷಯದಲ್ಲಿ ಕೇಂದ್ರದ ಮಂತ್ರಿಗಳಾದ ಶ್ರೀಮಾನ್ ಕೆ. ಹನುಮಂತಯ್ಯನವರು ಕೃಷಿ ಬೆಲೆ ಆಯೋಗ ರಚನೆ ಮಾಡುವುದು ಒಳ್ಳೆಯದೆಂದು ಹೇಳಿದ್ದಾರೆ. ಅದನ್ನು ಯಾರಿಗೆ ಸಲಹೆ ಮಾಡಿದ್ದಾರೆಂಬುದು ನನಗೆ ಗೊತ್ತಾಗಲಿಲ್ಲ. ಕಾಂಗ್ರೆಸ್ 'ಒ' ನವರಿಗೆ ಮಾಡಿದ್ದಾರೋ ಅಥವಾ ಪಿ.ಎಸ್.ಪಿ. ಅವರಿಗೆ ಮಾಡಿದ್ದಾರೋ ಎಂಬುದು ಗೊತ್ತಾಗಲಿಲ್ಲ. ನಮಗೆ ಮಾಡಿದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ, ಏಕೆಂದರೆ ನಾವು ಚುನಾವಣೆಯಲ್ಲಿ ಫೇಲ್ ಆಗಿದ್ದೇವೆ. ಆದ್ದರಿಂದ ಈಗ ಅಧಿಕಾರದಲ್ಲಿರುವವರಿಗೇ ಸಲಹೆ ಮಾಡಿರಬಹುದು. ಈ ಒಂದು ಸಲಹೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಇರತಕ್ಕಂಥ ಅಡಚಣೆಗಳಾದರೂ ಏನು ಎಂದು ನಾನು ಸರ್ಕಾರದವರನ್ನು ಕೇಳುತ್ತೇನೆ. ಇವೊತ್ತು ಮಾರಾಟದ ಬೆಲೆ ಏನಿವೆಯೋ ಅದಕ್ಕುತೆ ರೈತರು ಉತ್ಪನ್ನದ ಖರ್ಚಿಗೆ ತಕ್ಕಂಥ ಬೆಲೆ ಇಲ್ಲವಾಗಿದೆ. ವ್ಯವಸಾಯ ಇಲಾಖೆಯ ಡೆವಲಪ್‌ಮೆಂಟ್ ಕಮೀಷನರ್ ಅವರು ಒಬ್ಬ ಕೂಲಿಯ ಮಿನಿಮಮ್ ವೇಜಸ್ 5 ರೂಪಾಯಿ ಇರಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಅದಕ್ಕೆ ನಾನು ಸಂತೋಷಪಡುತ್ತೇನೆ. ವ್ಯವಸಾಯವನ್ನೇ ಅವಲಂಬಿಸಿಕೊಂಡಿರುವ ವ್ಯವಸಾಯ ಕೂಲಿಗಾರರು ಏನಿದ್ದಾರೆ, ಅವರು ತಮ್ಮ ಜೀವನವನ್ನು ನಡೆಸುವುದಕ್ಕೆ 5 ರೂಪಾಯಿ ಬೇಕಾಗುತ್ತದೆ ನಿಜ. ಆದರೆ ರೈತರು ಬೆಳೆದಂಥ ಪದಾರ್ಥಗಳಿಗೆ ಸರಿಯಾದ ಮಾರುಕಟ್ಟೆ ಇಲ್ಲದಿದ್ದರೆ, ರೈತರು ಯಾವ ರೀತಿಯಲ್ಲಿ ಕೂಲಿಗಾರರಿಗೆ 5 ರೂಪಾಯಿಗಳವರೆಗೆ ಕೂಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ? ಬಹುಶಃ ಇದು ಅರ್ಥಹೀನವಾದ ಸಲಹೆ ಎಂದು ಹೇಳಬೇಕಾಗುತ್ತದೆ. ಕೇಂದ್ರದ ಒಬ್ಬರು ಮಂತ್ರಿಗಳು ಕೃಷಿ ಬೆಲೆ ಆಯೋಗ ರಚನೆ ಮಾಡಬೇಕೆಂದು ಏನು ಸಲಹೆ ಮಾಡಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಅದು ಕೇವಲ ಹೇಳಿಕೆಯಲ್ಲಿಯೇ ಉಳಿಯಬಾರದು. ಅದು ಕಾರ್ಯರೂಪಕ್ಕೆ ಬರಬೇಕು. ಇದು ಕೇಂದ್ರ ಸರ್ಕಾರದ ಪಾಲಿಸಿಯಾದ್ದರಿಂದ, ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರದವರು ಕೇಂದ್ರದ ಮೇಲೆ ಒತ್ತಾಯ ಮಾಡಬೇಕೆಂದು ಹೇಳುತ್ತಿದ್ದೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸಕ್ಕರೆ ಬೆಲೆ ವಿಚಾರದಲ್ಲಿ ಕೇಂದ್ರದ ನೀತಿ ಅಸಮಾಧಾನಕರವಾಗಿದೆ ಎಂದು ಹೇಳಿದಾರೆ. ಈಗ ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರಗಳಿರುವುದರಿಂದ, ಅಸಮಾಧಾನವಾಗುವುದಕ್ಕೆ ಅವಕಾಶವಾದರೂ ಎಲ್ಲಿದೆ ಎಂದು ಕೇಳುತ್ತೇನೆ? ಈಗ ರೈತರ ಹೆಸರಿನಲ್ಲಿ, ಬಡವರ ಹೆಸರಿನಲ್ಲಿ ಮತ್ತು ದೀನದಲಿತರ ಹೆಸರಿನಲ್ಲಿ ರಾಜ್ಯವನ್ನಾಳುತ್ತಿದ್ದೇವೆಂದು ಹೇಳಿದ್ದಾರೆ. ಇದರ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ

(ಶ್ರೀ ಹೆಚ್. ಡಿ. ದೇವೇಗೌಡ)

ನಡುವೆ ಹೊಸ ಯುಗವೊಂದು ಪ್ರಾರಂಭವಾಗಿದೆ ಎಂಬುದಾಗಿ ಬೇರೆ ಹೇಳಿಕೊಂಡಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಗೊಬ್ಬರದ ಬೆಲೆ ಕಳೆದ 15 ವರ್ಷಗಳಲ್ಲಿ ಏನು ಶೇಕಡ 200 ರಷ್ಟು ಹೆಚ್ಚಿದೆ, ಅದಕ್ಕನುಗುಣವಾಗಿ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟು ಹೆಚ್ಚಿದೆ ಎಂಬುದನ್ನು ತಾವು ಆಲೋಚನೆ ಮಾಡಿ, ಅದಕ್ಕನುಗುಣವಾಗಿ ಬೆಲೆ ನಿಗದಿ ಮಾಡಲು ಏನಾದರೂ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇಂದು ಗೊಬ್ಬರದ ಮಾರಾಟ ಒಂದು ದೊಡ್ಡ ಸ್ಕ್ಯಾಂಡಲ್ ಆಗಿದೆ. ಇದನ್ನು ಹೇಳುವುದಕ್ಕೆ ಅಸಹ್ಯವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಮಾರಾಟವಾದ ಗೊಬ್ಬರದಲ್ಲಿ ಮರಳು ಇದ್ದುದು ಪತ್ರಿಕೆಯಲ್ಲಿ ವರದಿಯಾಗಿದೆ. ಇಂದು ರೈತರಿಗೆ ಗೊಬ್ಬರದ ಅವಶ್ಯಕತೆ ಇರುವುದರಿಂದ ಅವರು ಏನು ಕೊಟ್ಟರೂ ಸಹ ತೆಗೆದುಕೊಂಡು ಹೋಗುತ್ತಾರೆ. ಏನು ಕೊಟ್ಟರೂ ತೆಗೆದುಕೊಂಡು ಹೋಗುತ್ತಾರೆಂದು ಅಡಲ್ಟರೇಷನ್ ಮಾಡುವುದು ಸರಿಯಲ್ಲ. ಇದನ್ನು ತಪ್ಪಿಸುವುದಕ್ಕೆ ಅಧಿಕಾರಿಗಳು ಎಷ್ಟರಮಟ್ಟಿಗೆ ಕಾರ್ಯಸಾಧನೆ ಮಾಡಿದ್ದಾರೆಂದು ಕೇಳಬೇಕಾಗುತ್ತದೆ. ಇಂತಹ ವಿಷಯದಲ್ಲಿ ಎಷ್ಟು ಕೇಸ್‌ಗಳನ್ನು ಬುಕ್ ಮಾಡಿದ್ದಾರೆಂದು ಕೇಳುತ್ತೇನೆ. ಈ ಇಲಾಖೆಯಲ್ಲಿ ಅಧಿಕಾರಿಗಳ ಸಂಖ್ಯೆಯೇನೂ ಕಡಿಮೆಯಾಗಿಲ್ಲ, ಮತ್ತು ಅಧಿಕಾರಿಗಳ ಕೊರತೆ ಈ ಇಲಾಖೆಯಲ್ಲಿ ಇಲ್ಲ. ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿ ಬೆಳೆದಿದೆ. ಈ ಕಾರಣದಿಂದ ನಿಮ್ಮ ಡೈರೆಕ್ಟರ್ ಅವರು ಅಧಿಕಾರಿಗಳ ನೆರವಿನಿಂದ ಅಡಲ್ಟರೇಷನ್ ಬಗ್ಗೆ ಎಷ್ಟು ಕೇಸ್‌ಗಳನ್ನು ಬುಕ್ ಮಾಡಿದ್ದಾರೆಂದು ಕೇಳಬೇಕಾಗುತ್ತದೆ. ಇರತಕ್ಕಂಥ ಗೊಬ್ಬರವನ್ನು ಮಾರಾಟ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಮತ್ತು ಮಾರಾಟ ಮಾಡುವ ಗೊಬ್ಬರದಲ್ಲಿ ಸರಿಯಾದಂಥ ಗೊಬ್ಬರ ಇರುವುದಿಲ್ಲ. ಇದು ಎರಡೂ ಸಹ ದೊಡ್ಡ ಸಮಸ್ಯೆಯಾಗಿದೆ.

ಇಂದು ಪೆಸ್ಟಿಸೈಡ್ಸ್‌ನ್ನು ಕೃಷಿ ಕಾರ್ಪೊರೇಷನ್ ಅವರು ಮಾರಾಟ ಮಾಡುತ್ತಿದ್ದಾರೆ. ಅದಕ್ಕಾಗಿ ಅವರು ಏಜೆಂಟ್ಸ್‌ನ್ನು ಸಹ ಇಟ್ಟಿದ್ದಾರೆ. ಇದರಲ್ಲಿಯೂ ಸಹ ಅವ್ಯವಹಾರ ನಡೆಯುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ನಿಮ್ಮಲ್ಲಿ ಏನು ಕಾರ್ಯಕ್ರಮ ಇದೆ ಎಂದು ಕೇಳುತ್ತೇನೆ.

1-30 P.M.

ಇದಲ್ಲದೆ ಕಾಟನ್ ಸ್ಕೀಮ್ ಮತ್ತು ಇನ್ನಿತರ ಬೇರೆ ಬೇರೆ ಸ್ಕೀಮುಗಳು ಇವೆ. ಇದಕ್ಕೆ ಸಬ್ಸಿಡಿ ಕೊಡುತ್ತಾರೆ. ಸಬ್ಸಿಡಿ ಕೊಡತಕ್ಕ ಪೆಸ್ಟಿಸೈಡ್ಸ್‌ನ್ನು ಮಾರಾಟ ಮಾಡತಕ್ಕ ಪ್ರೈವೇಟ್ ಏಜೆಂಟ್ಸ್ ಇದ್ದಾರೆ ಅಗ್ರೋ ಇಂಡಸ್ಟ್ರೀಸ್ ಕೆಳಗೆ ಮಾರಾಟ ಮಾಡತಕ್ಕವನು ಸಬ್ಸಿಡಿ ಹಣವನ್ನು ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಇದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಏನು ಹಿಡಿತವನ್ನು ಹಾಕಿದ್ದೀರಿ ? ಅದುದರಿಂದ ಈ ಒಂದು ದಿಶೆಯಲ್ಲಿ ಗಮನಕೊಡುವುದು ಸೂಕ್ತ ಎಂದು ಹೇಳುತ್ತಿದ್ದೇನೆ. ಮುಖ್ಯ ಮಂತ್ರಿಗಳು ಈ ವಿಷಯ ಬಂದಾಗ ಒಂದು ಮಾತು ಹೇಳಿದರು. ಬಹಳ ನೋವು ಆಯಿತು. ಈ ರಾಜ್ಯಕ್ಕೆ ಬೇಕಾಗತಕ್ಕ ಗೊಬ್ಬರದ ಪ್ರಮಾಣ ಎಷ್ಟು ಎಂದು ನಮ್ಮ ಅಧಿಕಾರಿಗಳು ಕೇಂದ್ರಕ್ಕೆ ತಿಳಿಸದೆ ಇರುವುದರಿಂದ ನಾವು ರಾಜ್ಯದಲ್ಲಿ ಕೊರತೆ ಅನುಭವಿಸುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದರು. ಅಧಿಕಾರಿಗಳಿಗೆ ಅಷ್ಟೊಂದು ಕಷ್ಟವಾದ ಕೆಲಸವಾಗಿದೆಯೇ ? ರಾಜ್ಯಕ್ಕೆ ಎಷ್ಟು ಗೊಬ್ಬರ ವರ್ಷಕ್ಕೆ ಬೇಕು ಎನ್ನುವುದನ್ನು ಗೌರ್ನರ್ ಆಡಳಿತದಲ್ಲಿ ಇದ್ದಂಥ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರಕ್ಕೆ ಮಾಹಿತಿ ಕೊಡದ ಪರಿಣಾಮವಾಗಿ ಈ ಪರಿಸ್ಥಿತಿ ಉಂಟಾಗಿದೆ. ಎನ್ನುವ ಮಾತನ್ನು ಮುಖ್ಯ ಮಂತ್ರಿಗಳು ಹೇಳಿ ಅವರ ಅಸಹಾಯಕತೆಯನ್ನು ಈ ಸಭೆಯಲ್ಲಿ ತೋರಿಸಿಕೊಂಡರು ಅಧಿಕಾರಿಗಳ ತಪ್ಪು ಆಗಿದ್ದರೆ ಯಾವನೇ ಅಧಿಕಾರಿ ಇರಲಿ ಆತನ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ರಾಜ್ಯ ಸರ್ಕಾರವನ್ನು ಪ್ರತಿನಿಧಿಸತಕ್ಕ ಕಾಲದಲ್ಲಿ, ಅವರು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡದಿದ್ದರೆ, ಯಾರು ಹೊಣೆಗಾರರು ಎನ್ನುವುದನ್ನು ನಿಗದಿ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಬರೇ ಅಗ್ರೋಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಇರತಕ್ಕವರು ಮಾತ್ರ ಅವ್ಯವಹಾರಕ್ಕೆ ಕೈಹಾಕಿದ್ದರೆ, ಸೊಸೈಟಿಗಳು ಮಾರಾಟ ಮಾಡತಕ್ಕದ್ದು ಎಲ್ಲಾ ಸರಿಯಾಗಿ ನಡೆಯುತ್ತಿದೆ ಎಂದು ಹೇಳುವುದಿಲ್ಲ. ಅದನ್ನು ತಪ್ಪಿಸುವುದಕ್ಕೆ ಬಿಗಿಯಾದ ಕ್ರಮ ಹಾಕಬೇಕು. ಆ ದೃಷ್ಟಿಯಿಂದ ಸರ್ಕಾರಕ್ಕೆ ಈ ಸೂಚನೆ ಕೊಡುತ್ತಿದ್ದೇನೆ. ಅದರ ಜೊತೆಗೆ ಮೊದಲೇ ತಿಳಿಸಿದಂತೆ ಪೆಸ್ಟಿಸೈಡ್ಸ್ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ವಹಿಸಿದರೆ, ಸಬ್ಸಿಡಿ ಹಣ ದುರುಪಯೋಗ ಆಗದೇ ಸರಿಯಾದ ರೀತಿಯಲ್ಲಿ ರೈತರಿಗೆ ಒದಗಿಸುವ ವ್ಯವಸ್ಥೆ ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅವರು ಅಧಿಕಾರಕ್ಕೆ ಬಂದ ಹೊಸದರಲ್ಲಿ ಪ್ರತಿ ಜಿಲ್ಲೆಯಲ್ಲಿ ಸಾಯಿಲ್ ಟೆಸ್ಟಿಂಗ್

ಲ್ಯಾಬರೇಟರಿ ಹಾಕುತ್ತೇವೆಂದು ಹೇಳಿದರು. ರೈತರಿಗೆ ಎಷ್ಟು ಪ್ರಮಾಣದ ಗೊಬ್ಬರವನ್ನು ಯಾವ ಭೂಮಿಯಲ್ಲಿ ಉಪಯೋಗ ಮಾಡಬೇಕು ಎನ್ನುವುದು ಗೊತ್ತಿಲ್ಲ. ಗ್ರಾಮ ಸೇವಕನಿಗೆ ಸಾಕಷ್ಟು ಮಾಹಿತಿ ಇಲ್ಲ. ವ್ಯವಸಾಯದ ಇಲಾಖೆಯ ಪ್ರಗತಿ ಗ್ರಾಮ ಸೇವಕನನ್ನು ಅವಲಂಬನೆ ಮಾಡಿದೆ. ಶ್ರೀ ಕೆ. ಎಚ್. ಪಾಟೀಲರು ಒಬ್ಬರನ್ನೇ ಹೊಣೆಗಾರರಾಗಿ ಮಾಡುವುದಿಲ್ಲ. ನಮ್ಮ ಧೋರಣೆ ನಮ್ಮ ಯೋಜನೆ, ಏನು ಇದೆ ಇದರಲ್ಲಿ ಮೂಲ ದೋಷ ಇದೆ. ಒಬ್ಬ ಗ್ರಾಮ ಸೇವಕನಿಗೆ 8-10 ತಿಂಗಳ ಟ್ರೈನಿಂಗ್ ಕೊಡುತ್ತೀರಿ. ಅವನು ಎಷ್ಟರಮಟ್ಟಿಗೆ ಅದರ ಬಗ್ಗೆ ಮಾಹಿತಿ ಪಡೆದಿರುತ್ತಾನೆ ಎಂದರೆ ಒಂದು ಬೆಳೆಗೆ ರೋಗ ಬಂದರೆ ಅಸಿಸ್ಟೆಂಟ್ ಡೈರೆಕ್ಟರ್‌ಗೆ ತೋರಿಸಿದರೆ ಅವರಿಗೂ ಹೇಳತಕ್ಕ ಶಕ್ತಿಯಿಲ್ಲ. ಅದನ್ನು ಅಗ್ರಿಕಲ್ಚರ್ ಯುನಿವರ್ಸಿಟಿ ರೀಸರ್ಚ್‌ಗೆ ಕಳುಹಿಸಿಕೊಡುತ್ತಾರೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಸಬ್‌ಡಿವಿಜನ್ ಮಟ್ಟದ ಅಧಿಕಾರಿಗಳು ಹೇಳುವುದು ಗ್ರಾಮ ಸೇವಕನು ಹೇಳುವುದು ಮೇಲೆ ಅವಲಂಬಿಸಿದೆ. ಇದರಮೇಲೆ ಡ್ಯೂಯಲ್ ಕಂಟ್ರೋಲ್ ಇದೆ. ಅವರು ಕೆಲಸಮಾಡುವುದು ಎನ್.ಇ.ಎಸ್.ನಲ್ಲಿ ಅಡ್ಮಿನಿಸ್ಟ್ರೇಷನ್ ಕಂಟ್ರೋಲ್ ಇರುವುದು ವ್ಯವಸಾಯದ ಇಲಾಖೆಯಲ್ಲಿ ಬಿ.ಡಿ.ಓ ಕೆಲಸಮಾಡುವುದಕ್ಕೆ ಅನೇಕಸಾರಿ ಹೋಗುವುದಿಲ್ಲ. ಅವನ ಕೆಲಸ ಸಮರ್ಪಕವಾಗಿಲ್ಲ ಎಂದು ಬಿ. ಡಿ. ಓ. ಬರೆದರೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಡಿಸ್ಟ್ರಿಕ್ಟ್ ಆಫೀಸರ್ ಅವನ ಬಗ್ಗೆ ಕ್ರಮ ತಗೆದುಕೊಳ್ಳಬೇಕು. ಬಿ.ಡಿ.ಓ ಬರೆದ ಶಿಫಾರಸ್ಸು ಎಷ್ಟೋ ಸಾರಿ ಮೇಲಕ್ಕೆ ಹೋದಾಗ ಬಿದ್ದು ಹೋಗುತ್ತವೆ. ಆ ತರಹ ಡ್ಯೂವಲ್ ಕಂಟ್ರೋಲ್ ಇದೆ. ಸರ್ಕಾರ ಇದನ್ನು ಆಲೋಚನೆ ಮಾಡಬೇಕಾಗುತ್ತದೆ. ಗ್ರಾಮ ಸೇವಕನಿಗೆ 10 ಗ್ರಾಮ ಕೊಟ್ಟಿರುತ್ತಾರೆ. ಅವನಿಗೆ ವರ್ಷಕ್ಕೆ ಒಂದು ಗ್ರಾಮ ಫಿಕ್ಸ್‌ಮಾಡಿ, ಫಿಸಿಕಲ್ ಪರಫಾರಮೆನ್ಸ್ ಏನು ಎಂದು ವರ್ಷದ ಅಂತ್ಯದಲ್ಲಿ ಸರಿಯಾದ ರೀತಿ ಮಾಹಿತಿ ಕೊಡುವ ಹಾಗೆ ಮಾಡಿ. ಏನು ಪ್ರೊಡಕ್ಷನ್ ಆ ಗ್ರಾಮದಲ್ಲಿ ಇನ್‌ಕ್ರೀಸ್ ಆಗಿದೆ ಎಂದು ಮಾಹಿತಿ ಕೊಟ್ಟು ಅವನ ಕೆಲಸವನ್ನು ಸಮರ್ಥನೆ ಮಾಡಿಕೊಳ್ಳುವುದಾದರೆ ಸರಿ. ಸರ್ಕಾರದವರು ಮೂರೂವರೆ ಸಾವಿರ ರೂಪಾಯಿ ಇವೊತ್ತು ಆತನಮೇಲೆ ಖರ್ಚು ಮಾಡುತ್ತಿದ್ದಾರೆ. ಅವನಿಗೆ ಜವಾಬ್ದಾರಿ ಇಲ್ಲ. ಬಹುತೇಕವಾಗಿ ಹಳ್ಳಿಗಳಲ್ಲಿ ರಾಜಕಾರಣಿಗಳನ್ನು ಸ್ವಾಗತಮಾಡುವುದಕ್ಕೆ ಅವನು ಅನುಕೂಲವಾಗಬಹುದು. ಯಾವುಯಾವುದೇ ಸಮಾರಂಭಗಳಲ್ಲಿ ಓಟ್ ಆಫ್ ಥ್ಯಾಂಕ್ಸ್ ಹೇಳುವುದಕ್ಕೆ, ದೇವತಾ ಪ್ರರ್ಥನೆ ಮಾಡುವುದಕ್ಕೆ, ಅವನಿಗೆ ಸಂಬಳ ಸಾರಿಗೆ ಕೊಟ್ಟು ಇಟ್ಟುಕೊಂಡಿದ್ದೀರಿ. ಅವನ ಕೆಲಸವನ್ನು ರೀಆರ್ಗನೈಸ್ ಮಾಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಹಾಗೆಯೇ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಅತ್ಯಂಥ ಅವಶ್ಯಕ. ಜಿಲ್ಲೆಗಳಿಗಿಂಥ ತಾಲ್ಲೂಕು ಮಟ್ಟದಲ್ಲಿ ಅವು ಇದ್ದರೆ ನಾನು ಸಂತೋಷಪಡುತ್ತೇನೆ. ಯಾವ ಭೂಮಿಗೆ ಎಷ್ಟು ಫರ್ಟಿಲೈಸರ್ ಹಾಕಬೇಕು ಎನ್ನುವ ಮಾಹಿತಿ ಗೊತ್ತಿಲ್ಲ. ರೈತನಿಗೆ ಇದರ ಬಗ್ಗೆ ಸಾಕಷ್ಟು ಮಾಹಿತಿ ಕೊಟ್ಟರೆ ಒಳ್ಳೆಯದು. ಹೆಚ್ಚುಕಡಿಮೆ ಕೆಮಿಕಲ್ ಫರ್ಟಿಲೈಸರ್ ಹಾಕಿದರೆ ಭೂಮಿ ಕೆಟ್ಟುಹೋಗುತ್ತದೆ. 41 ಲಕ್ಷ ಟನ್ ಆರ್ಟಿಫಿಷಿಯಲ್ ಮೆನ್ಯೂರ್ ಉತ್ಪನ್ನ ಮಾಡುತ್ತಾರೆ ಎಂದು ಬೋಗಸ್ ಅಂಕಿಅಂಶಗಳು ಕೊಟ್ಟಿದ್ದಾರೆ. ಇದನ್ನೆಲ್ಲಾ ರೆವ್ಯೂ ಮಾಡಿದರೆ ವಿಧಾನಸೌಧದ ಕಂಪೋಸ್ಟ್ ಪಿಟ್ ಕೂಡ ಲೆಕ್ಕ ಹಾಕಿಕೊಳ್ಳಬೇಕಾಗುತ್ತದೆ. ಆರೀತಿ ಬನ್ನು ತಟ್ಟಿಕೊಳ್ಳುವ ಅಂಕಿ ಅಂಶಗಳು ಬೇಡ ಎಂದು ಹೇಳುತ್ತೇನೆ. ಹೆಚ್ಚಿಗೆ ಸಾಯಿಲ್ ಕನ್ಸರ್ವೇಷನ್ ವಿಚಾರದಲ್ಲಿ ಅವ್ಯವಹಾರ ನಡೆಯುತ್ತಿದೆ. ಲ್ಯಾಬರೇಟರಿ ಚಾರ್ಜಸ್ ಕೊಡುತ್ತಾರೆ ಅದರಲ್ಲಿ ಅವ್ಯವಹಾರ ನಡೆಯುತ್ತಿದೆ. ಇದರ ಬಗ್ಗೆ ಮಂತ್ರಿಗಳು ಸ್ವಲ್ಪಮಟ್ಟಿಗೆ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟ್ ಬಗ್ಗೆ ಪ್ರತಿಯೊಂದು ತಾಲ್ಲೋಕಿನಲ್ಲೂ ಸರ್ವೀಸ್ ಮಾಡುತ್ತಾರೆ. ಆದರೆ ಅದು ಅಷ್ಟು ಸಮರ್ಪಕವಾಗಿ ನಡೆದಿಲ್ಲ. ಈ ದಿಶೆಯಲ್ಲಿ ಹೆಚ್ಚು ಅವಕಾಶ ಮಾಡಿಕೊಡುವ ಪ್ರಯತ್ನಮಾಡಬೇಕು ಎಂದು ಹೇಳುತ್ತೇನೆ.

ಶ್ರೀಮಾನ್ ಚಿಕ್ಕೇಗೌಡರು ಅವರ ಇಲಾಖೆ ಬಗ್ಗೆ ಹೆಚ್ಚು ಆಸಕ್ತಿಯಿಂದ ಕೆಲಸಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಅಧಿಕಾರಿಗಳು ಆಸ್ತಿಪಾಸ್ತಿಗಳನ್ನು ತನಿಖೆ ಮಾಡುವ ಬಗ್ಗೆ ತಾವು ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಅವರನ್ನು ಪ್ರಶ್ನೆ ಕೇಳಬೇಕಾಗುತ್ತದೆ. ಮಂತ್ರಿಗಳ ಕೆಲಸ ಶಾಶ್ವತವಾಗಿ ಇರುವುದಿಲ್ಲ. ಎಂ. ಎಲ್. ಎ. ಶಾಶ್ವತವಾಗಿ ಇರುವುದಿಲ್ಲ. ನಾವು ಇಲ್ಲಿಗೆ ಬಹಳ ಜವಾಬ್ದಾರಿಯಿಂದ ಬಂದಿದ್ದೇವೆ. ಅಧಿಕಾರಿಗಳು ಕಂಟ್ರಾಕ್ಟರುಗಳ ಜೊತೆಗೆ ಶಾಮೀಲಾಗಿ ಸರ್ಕಾರಕ್ಕೆ 70 ಕೋಟಿ ರೂಪಾಯಿ ಲಾಸ್ ಮಾಡಿದ್ದಾರೆ ಎಂದು ಹಿರಿಯ ರಾಜಕಾರಿಣಿಗಳು ಈ ಸಭೆಯ ಉಪನಾಯಕರು ಹೇಳಿದ್ದನ್ನು ಕೋಟ್ ಮಾಡಿದ್ದೇನೆ. ಮಂತ್ರಿಗಳು ಅಧಿಕಾರಿಗಳು ಶಾಮೀಲಾದರೆ ಬೇಲಿ ಎದ್ದು

(ಶ್ರೀ ಹೆಚ್. ಡಿ. ದೇವೇಗೌಡ)

ಹೊಲ ಮೇಯಿದ ಹಾಗೆ ಆಗುತ್ತದೆ. ಆ ರೀತಿ ದುರ್ದೈವದ ಪ್ರಸಂಗ ನಡೆಯಬಾರದು ಎಂದು ಕೇಳಿಕೊಳ್ಳುತ್ತೇನೆ. ಶ್ರೀ ಕೃಷ್ಣರವರು ಮಂತ್ರಿಗಳಾಗಿರುವ ಪ್ರಸಂಗದಲ್ಲಿ ಇದು ನಡೆಯುವುದಾದರೆ ನಾನು ವಿಷಾದಪಡಬೇಕಾಗಿದೆ. ಅವರ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ಅವರು ಹಿಂದೆ ಈ ಸಭೆಯಲ್ಲಿ ಭಾಷಣ ಮಾಡುವ ಕಾಲದಲ್ಲಿ ಹೊರಗೆ ಇದ್ದರೂ ಅವರ ಭಾಷಣ ಕೇಳಲು ಓಡಿ ಬರುತ್ತಿದ್ದೆ. ಶ್ರೀ ಕೃಷ್ಣರವರು ಇರುವಂಥ ಮಂತ್ರಿ ಮಂಡಲದಲ್ಲಿ ಇಂಥ ವ್ಯವಹಾರಗಳು ನಡೆದರೆ, ರಾಜ್ಯದಲ್ಲಿ ಗೌರವ ಉಳಿಯುತ್ತದೆಯೇ ?

ನೀವು ಅಧಿಕಾರದಲ್ಲಿರುವ ಕಾಲದಲ್ಲಿ ಇಂಥ ಅವ್ಯವಹಾರ ನಡೆಯುವುದಕ್ಕೆ ಅವಕಾಶ ಕೊಟ್ಟರೆ ಕಳಕಳಿಯಿಂದ ಹೇಳುತ್ತೇನೆ ತಾವು ರಾಜೀನಾಮೆ ಕೊಟ್ಟು ಒಬ್ಬ ಆರ್ಡಿನರಿ ಸದಸ್ಯನಾಗಿ ಕೂತುಕೊಳ್ಳುವುದು ಒಳ್ಳೆಯದು ಮತ್ತು ತಮ್ಮ ಗೌರವವೂ ಉಳಿಯುತ್ತದೆ. ಹಿಂದೆ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ರಾಜ್ಯಕ್ಕೆ ಬಂದಾಗ ಮುಖ್ಯ ಮಂತ್ರಿಗಳಾಗುತ್ತಾರೆ ಎಂದು ಜನರು ಕೂಗುವುದಕ್ಕೆ ಪ್ರಾರಂಭ ಮಾಡಿದರು. ಶ್ರೀಮಾನ್ ನಿಜಲಿಂಗಪ್ಪನವರು ಅವರನ್ನು ಇಲ್ಲಿಗೆ ತಂದರು. ನೀವು ಕೃಷ್ಣಪ್ಪನವರ ಹಾಗೆ ಆಗಿಬಿಟ್ಟೀರಿ ಎಂದು ಶಂಕೆ ಇದೆ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಶ್ರೀಮಾನ್ ಚಿಕ್ಕೇಗೌಡರ ಇಲಾಖೆಗೆ ಬಂದರೆ, ಮೊದಲು ನಾನು ಬೆಂಗಳೂರು ಡೈರಿಯ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಸುಮಾರು 10-12 ರೂರಲ್ ಡೈರಿಗಳನ್ನು ತೆಗೆದಿದ್ದಾರೆ, ಒಂದೊಂದು ಡೈರಿಯಲ್ಲಿ ಪ್ರತಿ ದಿವಸ 10 ಸಾವಿರ ಲೀಟರ್ ಹಾಲು ಹ್ಯಾಂಡಲ್ ಮಾಡುವ ಗುರಿ ಇಟ್ಟುಕೊಂಡಿದ್ದಾರೆ. ಇದರ ಪ್ರಗತಿ ಇವತ್ತು ಹೆಚ್ಚು ಸಮರ್ಪಕವಾಗಿ ನಡೆದಿಲ್ಲ. ತಾವು ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಈ ಡೈರಿಗಳು ಎರಡೂವರೆ ಸಾವಿರ ಲೀಟರ್, ನಾಲ್ಕು ಸಾವಿರ, ಕೆಲವು ಐದು ಸಾವಿರ ಲೀಟರು ಹಾಲು ಹ್ಯಾಂಡಲ್ ಮಾಡುತ್ತಿವೆ. ಎಂದು ಇಲಾಖೆಯಿಂದ ಗೊತ್ತಾಗಿದೆ. ತತ್ಪರಿಣಾಮವಾಗಿ 8-10 ಸಾವಿರ ರೂಪಾಯಿಗಳವರೆಗೆ ನಷ್ಟವಾಗುತ್ತಿದೆ, ಇದನ್ನು ಚುರುಕುಗೊಳಿಸುವುದಕ್ಕೆ ಇದರಲ್ಲಿ ಟ್ರೈನ್ಡ್ ಪರ್ಸೊನೇಲ್ ಹಾಕಿಲ್ಲ. / ಯಾರಿಗೆ ಜವಾಬ್ದಾರಿ ಕೊಡಬೇಕು ಅಂಥ ವ್ಯಕ್ತಿಗಳನ್ನು ನಿಗದಿಮಾಡಿಲ್ಲ ಎನ್ನುವುದು ಇದರಲ್ಲಿ ಮೂಲವಾಗಿರುವ ದೋಷ. ಇದರ ಬಗ್ಗೆ ಸರ್ಕಾರ ಗಮನವನ್ನು ಹರಿಸಬೇಕು. ಈ ದೃಷ್ಟಿಯಿಂದ ಈ ಒಂದು ಮಾತನ್ನು ಹೇಳುತ್ತಿದ್ದೇನೆ. ಜೊತೆಗೆ ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಕಾಲದಲ್ಲಿ ನಾವು 25 ವರ್ಷ ಹಿಂದಕ್ಕೆ ಹೋಗಿದ್ದೇವೆ ಎಂದರೆ ತಪ್ಪಾಗಲಾರದು. ಮಾನ್ಯ ಕೆ. ಎಚ್. ಪಾಟೀಲರು ಮತ್ತು ಮಾನ್ಯ ಕೃಷ್ಣ ಅವರು, ಅವರ ಶಕ್ತಿ ಮೀರಿ ಪ್ರಯತ್ನ ಮಾಡಿದರೂ ಸಾಧ್ಯವಾಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ವಿಚಾರಣೆ ನಡೆಸುತ್ತೀರಾ ಎಂದು ಕೇಳಬೇಕಾಗುತ್ತದೆ. ಇದರ ಬಗ್ಗೆ ವಿಚಾರಣೆ ನಡೆಸುತ್ತೇವೆ ಎಂದು ಈ ಸಭೆಯಲ್ಲಿ ನಮಗೆ ಆಶ್ವಾಸನೆ ಕೊಡಬೇಕು ಈಗಾಗಲೇ ಬೆಂಗಳೂರು ಡೈರಿಯ ಬಗ್ಗೆ ವಿಜಿಲೆನ್ಸ್ ಕಮಿಷನರ್ ಮುಂದೆ ಆಪಾದನೆ ಪಟ್ಟಿ ಇದೆ. ರೂರಲ್ ಡೈರೀಸ್‌ಗೆ ಸುಮಾರು 20 ಲಕ್ಷ ರೂಪಾಯಿಯ ಮೆಷಿನರಿ ಹೋದ ಸಾರಿ ಕೊಂಡಿದ್ದಾರೆ. ಕೆಲವು ಮೆಷಿನರಿಗಳು ಐಡಲ್ ಆಗಿ ಬಿದ್ದಿವೆ. ರಾಷ್ಟ್ರಾಧ್ಯಕ್ಷರ ಆಳ್ವಿಕೆಯಲ್ಲಿ ಅವನ್ನು ಏತಕ್ಕೆ ಕೊಳ್ಳಬೇಕಾಯಿತು ! ಅದರ ಅವಶ್ಯಕತೆ ಏನು ಇತ್ತು ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಶ್ರೀಮಾನ್ ಚಿಕ್ಕೇಗೌಡರು ಇದರ ಕಡೆ ಗಮನಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ರೈತನ ಮಗನಾಗಿ ಇದರ ಬಗ್ಗೆ ವಿಚಾರಣೆ ನಡೆಸುತ್ತಾರೆ ಎಂದು ಆಶ್ವಾಸನೆ ಇಟ್ಟುಕೊಂಡಿದ್ದೇನೆ. ಅಲ್ಲ ನಡೆದಿರತಕ್ಕ ಅವ್ಯವಹಾರ ಏನು ಎನ್ನುವುದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕು. 20 ಲಕ್ಷ ರೂಪಾಯಿಗಳ ಡೈರಿಗೆ ಸಂಬಂಧಪಟ್ಟ ಮೆಷಿನರಿ ಪರ್ಚೇಸ್ ಮಾಡಿದ್ದಾರೆ. ಇದರ ಬಗ್ಗೆ ವಿವರಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಇದರ ಪೇಮೆಂಟ್ ಮಾಡುವುದಕ್ಕೆ ಡೈರೆಕ್ಟರ್ ಹಲವಾರು ಬಾರಿ ಬೊಂಬಾಯಿಗೆ ಹೋಗಿದ್ದರು. ಅದರ ಅವಶ್ಯಕತೆ ಏನು ಇತ್ತು ? ದಯಮಾಡಿ ಇದರ ಬಗ್ಗೆ ವಿಚಾರಣೆ ಮಾಡಬೇಕು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇದರ ಜೊತೆಗೆ ನನ್ನ ಎರಡನೆಯ ಆಪಾದನೆ ಇದು. ಯೂನಿಸೆಫ್‌ನಿಂದ ಮಿಲ್ಕ್ ಕ್ರೀಮ್ ಬಂತು. ಆ ಮಿಲ್ಕ್ ಕ್ರೀಮ್ ಉಪಯೋಗ ಮಾಡುವುದಕ್ಕೆ ಸರಿಯಾದದು ಅಲ್ಲ, ಅದು ಮಿಸ್‌ಫಿಟ್ ಎಂದು ನಿರ್ಣಯ ತೆಗೆದುಕೊಂಡರು. ನಿರ್ಣಯ ತೆಗೆದುಕೊಂಡ ನಂತರ ಟೆಕ್ನಿಕಲ್ ಎಕ್ಸ್‌ಪರ್ಟ್ ಹೇಳುತ್ತಾರೆ ಅದನ್ನು ಉಪಯೋಗ ಮಾಡುವುದಕ್ಕೆ ಸಾಧುವಾಗಿದೆ ಎಂದು. ಆದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ನಿರ್ಣಯ ತೆಗೆದುಕೊಂಡಿದ್ದಾರೆಂದು ಉಪಯೋಗ ಮಾಡುವುದು ಸರಿಯಲ್ಲ, ಅದು ಯೋಗ್ಯವಾದುದು ಅಲ್ಲ ಎಂದು ಅದನ್ನು ಏನು ಮಾಡಿದರು? ನಂತರ

ಇದನ್ನು ಕ್ಯಾಟಲ್ ಫೀಡ್‌ಗೆ ಕೊಟ್ಟು ಬಿಡುವುದು ಸರಿಯೆಂದು ನಿರ್ಣಯ ತೆಗೆದುಕೊಂಡು, ಬೆಂಗಳೂರು ಶೇಷಾದ್ರಿಪುರದಲ್ಲಿರುವ ಶ್ರೀ ಮಿಲ್ಕ್ ಸಪ್ಲೈಸ್ ಅವರಿಗೆ ಒಂದು ಕೆ. ಜಿ. ಗೆ. 20 ಪೈಸೆಯಂತೆ ಕೊಟ್ಟರು. ಅವರು ಅದನ್ನು ಜಾಯ್ ಐಸ್ ಕ್ರೀಮ್ ಫ್ಯಾಕ್ಟರಿಗೆ ಮಾರಿದರು. ಅನೇಕರ್ ಮಿಲ್ಕ್ ಸಪ್ಲೈಸ್ ಸೊಸೈಟಿ ಮುಖೇನ ಅದು ಹಾಲಿಗೆ ಪರಿವರ್ತನೆಯಾಗಿ ಮತ್ತೆ ಈ ಡೈರಿಗೆ ವಾಪಸ್ ಬಂತು. ಇದರ ಬಗ್ಗೆ ಡೈರಿಯ ಕೆಲವು ಅಧಿಕಾರಿಗಳು ಕಾರ್ಪೋರೇಷನ್ ಕಮಿಷನರ್‌ಗೆ ಅರ್ಜಿ ಬರೆದರು. ಇಂಥ ಉಪಯೋಗಕ್ಕೆ ಬರಲಾಗದೆ ಇದ್ದಂಥ ರಿಜೆಕ್ಟ್ ಆಗಿರುವ ಕ್ರೀಮ್ ಅನ್ನು ಹಾಲಿಗೆ ಪರಿವರ್ತನೆ ಮಾಡಿ ಜನತೆಗೆ ಕುಡಿಸುತ್ತಿದ್ದಾರೆ, ಇದರ ಬಗ್ಗೆ ವಿಚಾರಣೆ ಮಾಡಿ ಎಂದು ಕಾರ್ಪೋರೇಷನ್ ಕಮಿಷನರ್ ಲಿಖಿತ ಮೂಲಕ ಬರೆದರು. ತಾವು ಅಧಿಕಾರಕ್ಕೆ ಬಂದು ಮೂರು ತಿಂಗಳಾಯಿತು. ಈ ಅಪವಾದನೆ ನಿಮ್ಮ ಮುಂದೆ ಇದೆ. ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಬೇಕಾಗುತ್ತದೆ. ಸುಮಾರು ಎರಡು ಲಕ್ಷ ರೂಪಾಯಿಗಳ ಮಿಲ್ಕ್ ಕ್ರೀಮನ್ನು ಕೆ.ಜಿ. ಒಂದಕ್ಕೆ 15 – 20 ಪೈಸೆಯಂತೆ ಮಾರಿದ್ದಾರೆ. ಇದು ತಮಗೆ ಸಮಾಧಾನವನ್ನುಂಟುಮಾಡುವುದಾದರೆ, ತಾವು ಅಧಿಕಾರಿಗಳನ್ನು ಸಮರ್ಥನೆ ಮಾಡುವುದಾದರೆ, ನಾನು ಹೆಚ್ಚು ವ್ಯಾಖ್ಯಾನ ಮಾಡುವುದಿಲ್ಲ ಬೇಲಿಯೇ ಎದ್ದು ಹೊಲ ಮೇದಂತಾಗುತ್ತದೆ ಎಂದು ಮಾತ್ರ ಹೇಳುತ್ತೇನೆ. ಈ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ನಂಬಿಕೆ ನನಗೆ ಇದೆ. ಅದಕ್ಕೆ ಕಾರಣ ಏನು ಎಂದರೆ ಗುಜರಾತಿನಿಂದ ಒಬ್ಬ ಅಧಿಕಾರಿಯನ್ನು ಜನರಲ್ ಮ್ಯಾನೇಜರ್ ಆಗಿ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ತಂದರು. ಅವರು ಶ್ರೀ ಮಿಲ್ಕ್ ಸಪ್ಲೈಸ್ ಪ್ರೊಪ್ರೈಟರ್ ಸಂಬಂಧಿಕರು. ಅವರೂ ಮತ್ತು ಶ್ರೀ ಮಿಲ್ಕ್ ಸಪ್ಲೈಸ್ ಪ್ರೊಪ್ರೈಟರ್ ಶಾಮಿಲಾಗಿ ಇಂಥ ಒಂದು ವ್ಯವಹಾರ ನಡೆಸುವುದಕ್ಕೆ ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಕಾಲದಲ್ಲಿ ಅವಕಾಶವಾಯಿತು. ಅದಾದಮೇಲೆ ಬಟರ್ ಮ್ಯಾನ್ಯುಫ್ಯಾಕ್ಚರ್ ಮಾಡುವುದಕ್ಕೆ ಕ್ರೀಮ್ ಪರ್ಚೇಸ್ ಮಾಡಿದರು. ಟೆಂಡರ್ ಕಾಲ್‌ಫಾರ್ ಮಾಡಿದರು. ಶ್ರೀ ಮಿಲ್ಕ್ ಸಪ್ಲೈಸ್ ಅವರು ರೇಟ್ ಹಾಕಿದರೆ ಕಷ್ಟವಾಗುತ್ತದೆ ಎಂದು ಬ್ಲ್ಯಾಂಕ್ ಕೊಟೇಷನ್ ಕವರ್ ಅನ್ನು ಸೀಲ್‌ಮಾಡಿ ಹಾಕಿದರು. ಕೊಟೇಷನ್ ಎಲ್ಲಾ ಬಂತು. ಯಾರು ಯಾರು ಕೊಟೇಷನ್ ಕೊಟ್ಟಿದ್ದಾರೋ ಅವರ ಮುಂದೆ ಕೊಟೇಷನ್‌ಗಳನ್ನು ಒಡೆಯಬೇಕಾಗಿತ್ತು. ಆದರೆ ಅವರು ಮುಂದೆ ಕೊಟೇಷನ್ ಒಡೆಯಲಿಲ್ಲ. ನಾಳೆ ಒಡೆಯೋಣ ಎಂದು ಹೇಳಿ ರಾತ್ರಿ ಮನೆಯಲ್ಲಿ ಕೊಟೇಷನ್ಸ್ ಒಡೆದರು. ಶ್ರೀ ಮಿಲ್ಕ್ ಸಪ್ಲೈಸ್‌ಗೆ ಕಾಂಟ್ರ್ಯಾಕ್ಟ್ ಕೊಡಬೇಕೆಂದು, ಕೊಟೇಷನ್ ಫಿಲ್ ಅಪ್ ಮಾಡಿಕೊಂಡರು. ಮಾರನೆಯ ದಿನ ಬೆಳಿಗ್ಗೆ ಲೋಯಸ್ಟ್ ಕೊಟೇಷನ್ ಕೊಟ್ಟಂಥ ಮಹನೀಯರು, ಅದನ್ನು ನೋಡಿದಮೇಲೆ ಶ್ರೀ ಮಿಲ್ಕ್ ಸಪ್ಲೈಸ್ ಅವರ ಕೊಟೇಷನ್ ಅನ್ನು, ಆಫೀಸರ್ ಬರೆದಿದ್ದ ಫೋಟೋಸ್ಟ್ಯಾಟ್ ಕಾಪಿಯನ್ನು ವಿಜಿಲೆನ್ಸ್ ಕಮಿಷನ್ಸ್ ಮುಂದೆ ಪ್ರೊಡ್ಯೂಸ್ ಮಾಡಿದರು. ಆ ಮಹನೀಯರು ಆಮೇಲೆ ಶ್ರೀ ಧರ್ಮವೀರ ಅವರ ಹತ್ತಿರ ಹೋದರು. ಅವರು ನೀವು ಸ್ವಲ್ಪ ಅದೇ ರೇಟಿನಲ್ಲಿ ಸಪ್ಲೈ ಮಾಡಿಬಿಡಿ, ಏತಕ್ಕೆ ಸುಮ್ಮನೆ ಜಗಳ ಮಾಡಿಕೊಳ್ಳುತ್ತೀರಿ ಎಂದು ವಯಿ ಮಿಡಿಯ ಮಾಡಿ ಕಳುಹಿಸಿದರು. ಈ ಕೊಟೇಷನ್ ವ್ಯವಹಾರ ಶ್ರೀ ಧರ್ಮವೀರ ಅವರ ಕಾಲದಲ್ಲಿ ಅಲ್ಲಿಗೆ ಸ್ಥಗಿತವಾಯಿತು. ಅದಾದಮೇಲೆ ಮತ್ತೆ ಫ್ಲಷ್ ಸೀಸನ್ ಬಂತು. ನಮ್ಮಲ್ಲಿ ಸಾಕಷ್ಟು ಬಟರ್ ಮ್ಯಾನ್ಯುಫ್ಯಾಕ್ಚರ್ ಮಾಡುತ್ತೇವೆ, ನಾವು ಕೊಟೇಷನ್ ಕೇಳುವುದು ಬೇಡ ಎಂದು ಡೈರಿಯ ಅಧಿಕಾರಿಗಳು ರಿಪೋರ್ಟ್ ಕೊಟ್ಟರು. ಆದರೂ ಸಹ ಅದಕ್ಕೆ ಡಿಮ್ಯಾಂಡ್ ಬರುತ್ತದೆ ಎಂದು ಹೇಳಿ ಪರ್ಚೇಸ್ ಮಾಡುವುದನ್ನು ಕಂಟಿನ್ಯೂ ಮಾಡಿದರು. ಈ ಅಧಿಕಾರಿಯ ಕಾಲದಲ್ಲಿ ಈ ರೀತಿ 90 ಟನ್ ಬೆಣ್ಣೆ ಮಾಡಿದ್ದಾರೆ.

ಅವಿಭಾಜ್ಯ ಕಾಂಗ್ರೆಸ್ ಇದ್ದಾಗಲೇ ಶ್ರೀಮಾನ್ ದೇವರಾಜ್ ಅರಸ್ ಅವರು ಇಲಾಖೆಯ ಮಂತ್ರಿಗಳಾಗಿದ್ದಾಗ ಈ ಬೆಣ್ಣೆಯ ವ್ಯವಹಾರ ಪ್ರಾರಂಭವಾಯಿತು. ಅದು ಅವರ ಕಾಲದಲ್ಲಿ ಶುರುವಾಗಿದೆ. ದಯವಿಟ್ಟು ತಾವು ಡೈರಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಿ ಡೈರಿ ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲ. ಆದ್ದರಿಂದ ದಯಮಾಡಿ ಈ ಡೈರಿ ವ್ಯವಹಾರದ ಬಗ್ಗೆ ಮಾನ್ಯ ಮಂತ್ರಿಗಳು ಗಮನಕೊಡಬೇಕೆಂದು ನಾನು ಹೇಳುತ್ತೇನೆ. ಈ ಡೈರಿಯಲ್ಲಿ ಸುಮಾರು ಒಂದೂವರೆ ವರ್ಷದಿಂದ ಅವ್ಯವಹಾರ ನಡೆಯುತ್ತಿದೆ. ಶ್ರೀಮಾನ್ ಚಿಕ್ಕೇಗೌಡರು ಈಗ 3 ತಿಂಗಳಿಂದ ಮಂತ್ರಿಗಳಾಗಿದ್ದಾರೆ. ಆದರೆ ಈ ಡೈರಿಯ ಅವ್ಯವಹಾರ ಹಿಂದಿನಿಂದಲೂ ನಡೆಯುತ್ತಿದೆ. ಅದಕ್ಕೋಸ್ಕರ ಅಲ್ಲಿ ನಡೆಯುತಕ್ಕ ಅವ್ಯವಹಾರಗಳು ಏನಿವೆ ಅವುಗಳ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಮಿಲ್ಕ್‌ಕ್ಯಾನ್ ಬಗ್ಗೆ ಹೇಳುವುದಾದರೆ ಸುಮಾರು 60 ರೂಪಾಯಿಗಳ ಹೊಸ ಕ್ಯಾನ್‌ಗಳನ್ನು ಕೊಂಡುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಹಳೆಯ ಕ್ಯಾನ್‌ಗಳ ರಿಪೇರಿಯಾಗುತ್ತಿದೆ. ಈ ಕ್ಯಾನ್‌ಗಳ ರಿಪೇರಿಯನ್ನು ಒಬ್ಬ ಗುಜರಾತಿನ ಕಂಟ್ರ್ಯಾಕ್ಟರಿಗೆ ವಹಿಸಿದ್ದಾರೆ. ತಮಗೆ ಪ್ರಾಮಾ

(ಶ್ರೀ ಹೆಚ್. ಡಿ. ದೇವೇಗೌಡ)

ಣಿಕವಾಗಿ ಮನಸ್ಸಿದ್ದರೆ, ಇಚ್ಛೆ ಇದ್ದರೆ ಇದಕ್ಕೆ ಯಾರು ಯಾರು ಹೊಣೆಗಾರರು ಎಂಬುದನ್ನು ಕೇಳಬೇಕಾಗುತ್ತದೆ.

ಸೂಪರ್‌ಟೈಮ್ ಸ್ಕೇಲ್ ಅಧಿಕಾರಿಯೊಬ್ಬರು ಇದರಲ್ಲಿ ಸೇರಿ ಆ ಡೈರಿಯಲ್ಲಿ ಬಹಳ ಅವ್ಯವಹಾರಗಳನ್ನು ಮಾಡಿದ್ದಾರೆ. ಇಂಥಾ ಅಧಿಕಾರಿಗಳಿಗೆ ಬೆಂಬಲ ಕೊಡುವುದು ಸರಿಯಲ್ಲ. ಈ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇದರ ಜೊತೆಗೆ ಈ ಡೈರಿಯಲ್ಲಿ ಜನರಲ್ ಮ್ಯಾನೇಜರೊಬ್ಬರನ್ನು ನೇಮಕಮಾಡತಕ್ಕ ವಿಷಯದಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಅಡ್ವರ್ಟೈಜ್ ಮಾಡಿದರು. ಆ ಡೈರಿಯಲ್ಲಿ ಕೆಲಸ ಮಾಡುತ್ತಿದ್ದ ಎಂ.ಎಸ್.ಸಿ. ಡೈರಿ ಟೆಕ್ನಿಕಲ್ ಫಸ್ಟ್ ರ್ಯಾಂಕ್ ಪಡೆದಿದ್ದ ವ್ಯಕ್ತಿಗೆ ನೀವು ಆ ಕೆಲಸಕ್ಕೆ ಅಪ್ಲಿಕೇಷನ್ ಹಾಕಬೇಡಿ ಎಂದು ಮೆಮೋ ಕೊಟ್ಟರು. ಹಿಂದೆ ಆ ಡೈರಿಯಲ್ಲಿದ್ದ ಅಧಿಕಾರಿಯೊಬ್ಬರ ಸಂಬಂಧೀಕರಿಗೆ ಆ ಹುದ್ದೆಯನ್ನು ಕೊಡಲು ಆ ರೀತಿ ಮಾಡಿದ್ದಾರೆ. ಅವರನ್ನು ನೇಮಕ ಮಾಡತಕ್ಕ ಕಾಲದಲ್ಲಿ ಹಾಲಿ ಡೈರಿಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಗೆ ನೀವು ಅಪ್ಲಿಕೇಷನ್ ಹಾಕಬೇಡಿ ಎಂದು ಹೇಳಿದರೆ ಇದನ್ನು ನಿಜವಾಗಿಯೂ ಡಿಕ್ಟೇಟರ್‌ಷಿಪ್ ಎಂದು ಹೇಳಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಫೈಲನ್ನು ಮಾನ್ಯ ಮಂತ್ರಿಗಳು ನೋಡಲು ತಮ್ಮ ಗಮನವನ್ನು ಆ ಕಡೆ ಹರಿಸಿದ್ದಾರೆಯೇ ಎಂದು ನಾನು ಅವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಆ ಎಂ. ಎಸ್. ಸಿ. ಡೈರಿ ಟೆಕ್ನಿಕಲ್ ಫಸ್ಟ್ ರ್ಯಾಂಕ್ ಪಡೆದ ವ್ಯಕ್ತಿ ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಅರ್ಜಿಯನ್ನು ಹಾಕಿದಾಗ ಅವರ ವಿರುದ್ಧ ಕಾನ್‌ಫಿಡೆನ್ಷಿಯಲ್ ರಿಪೋರ್ಟ್ 6 ಪುಟದಷ್ಟು ಬರೆದು ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಕಳುಹಿಸಿ ಅವರನ್ನು ಸೆಲೆಕ್ಟ್ ಮಾಡದಂತೆ ಮಾಡಿದರು. ಈ ಮಟ್ಟಕ್ಕೆ ಅವರು ಹೋಗಬಾರದಾಗಿತ್ತು. ಈಗ ಡೈರಿಯ ಜನರಲ್ ಮ್ಯಾನೇಜರ್ ಸಂಬಳವನ್ನು 900-1,800 ರೂಪಾಯಿಗಳ ಸ್ಕೇಲ್ ಮಾಡಿದ್ದಾರೆ. ಈ ಹುದ್ದೆಯನ್ನು ಮಾಸ್ಟರ್ ಡಿಗ್ರಿ ಪಡೆದುಕೊಂಡು ಡೈರಿ ಟೆಕ್ನಿಕ್‌ನಲ್ಲಿ ಫಸ್ಟ್ ರ್ಯಾಂಕ್ ಪಡೆದ ವ್ಯಕ್ತಿಗೆ ಕೊಡದೆ ಯಾರೋ ಒಬ್ಬರು ತಮಗೆ ಬೇಕಾದವರಿಗೆ ಕೊಟ್ಟಿದ್ದಾರೆ. ಇದು ರಾಷ್ಟ್ರಪತಿಯವರ ಆಳ್ವಿಕೆಯ ಕಾಲದಲ್ಲಿ ರಾಜ್ಯಪಾಲರು ಆಡಳಿತ ನಡೆಸುತ್ತಿದ್ದಾಗ ನಡೆದಿದೆ. ಎಷ್ಟರಮಟ್ಟಿಗೆ ಈ ವ್ಯವಹಾರ ನಡೆದಿದೆ ಎನ್ನುವುದನ್ನು ವಿಜಿಲೆನ್ಸ್ ಕಮೀಷನ್ ಮುಂದೆ ನಾನು ಪ್ರೂವ್ ಮಾಡುವುದಕ್ಕೆ ತಯಾರಾಗಿದ್ದೇನೆ. ಈ ರಾಜ್ಯದ ಒಬ್ಬರು ನಾಯಕರು ಹೇಳಿದರು ಅದನ್ನು ರೈಟಿಂಗ್‌ನಲ್ಲಿ ಕೊಡಿ ಅದನ್ನು ನಾವು ವಿಚಾರ ಮಾಡುತ್ತೇವೆ ಎಂದು. ಈ ದೃಷ್ಟಿಯಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿ ಯಾರೇ ಆಗಿರಲಿ ಆ ಅಧಿಕಾರಿಯ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಈ ಮಾನ್ಯ ಸಭೆಯ ಸದಸ್ಯರಾಗಿರಲಿ, ಲೋಕಸಭೆಯ ಸದಸ್ಯರಾಗಿರಲಿ, ಸಾರ್ವಜನಿಕರಿಗೆ ಸಂಬಂಧಪಟ್ಟ ಒಂದು ಇನ್‌ಫರಮೇಷನ್ ತಿಳಿದುಕೊಳ್ಳಲು ಅಧಿಕಾರಿಗಳಿಗೆ ಫೋನ್ ಮಾಡಿದಾಗ ಸರಿಯಾದ ರೀತಿಯಲ್ಲಿ ವರ್ತಿಸಿ ಅವರಿಗೆ ಇನ್‌ಫರ್ಮೇಷನ್ ಕೊಡದೇ ಹೋದರೆ ಹೇಗೆ ? ಲೋಕಸಭೆಯ ಸದಸ್ಯರೊಬ್ಬರು ಈ ಇಲಾಖೆಯ ಅಧಿಕಾರಿಯೊಬ್ಬರಿಗೆ ಫೋನ್ ಮಾಡಿ ಒಂದು ಇನ್‌ಫರ್‌ಮೇಷನ್ ಕೇಳಿದಾಗ ಆ ಅಧಿಕಾರಿಗಳು ಸರಿಯಾಗಿ ವರ್ತಿಸಿಲ್ಲ. ಈ ಐ.ಎ.ಎಸ್. ಅಧಿಕಾರಿಗಳು ಚುನಾವಣೆಯಲ್ಲಿ ಗೆದ್ದು ಬಂದರೆ ಆಗ ಅವರಿಗೆ ಅದರ ಕಷ್ಟಗೊತ್ತಾಗುತ್ತದೆ. ಒಂದು ಚುನಾವಣೆಯಲ್ಲಿ ಗೆದ್ದು ಬರಬೇಕಾದರೆ ಅದರ ಕಷ್ಟ ಎಷ್ಟಿದೆ ಎಂಬುದು ನನಗೆ ಗೊತ್ತಿದೆ. ಈ ದೃಷ್ಟಿಯಿಂದ ಈ ಸಭೆಯ ಸದಸ್ಯರಾಗಲೀ, ಅಥವಾ ಲೋಕಸಭೆಯ ಸದಸ್ಯರಾಗಲೀ ಯಾರಾದರೂ ಅಧಿಕಾರಿಗಳಿಗೆ ಯಾವುದಾದರೂ ಒಂದು ಇನ್‌ಫರ್ಮೇಷನ್‌ಗೋಸ್ಕರ ಫೋನ್ ಮಾಡಿದರೆ ಅವರಿಗೆ ಆ ವಿಷಯವನ್ನು ಹೇಳಬೇಕು ನಿರಾಕರಣೆ ಮಾಡುವುದು ಸರಿಯಲ್ಲ. ಮಾನ್ಯ ಎಂ.ಪಿ. ಗಳಾದ ಶ್ರೀ ಮಲ್ಲೇಗೌಡರು ಯಾವುದೋ ಒಂದು ಇನ್‌ಫರ್ಮೇಷನ್ ಕೇಳಿದಾಗ ಅಧಿಕಾರಿಗಳು ಈ ರೀತಿ ಒಂದು ನಿಕೃಷ್ಟ ಭಾವನೆ ವರ್ತಿಸಿದ್ದಾರೆ. ಕೆಲವರು ಈಗ ಗೌಡರ ಕಾಲ ಹೋಯಿತು ಎಂದು ಹೇಳುತ್ತಿದ್ದಾರೆ ಒಂದು ಕಾಲ ಎಲ್ಲದಕ್ಕೂ ಬರುತ್ತದೆ. ಆದ್ದರಿಂದ ದಯವಿಟ್ಟು ಇಂಥ ಸನ್ನಿವೇಶಗಳು ಉಂಟಾಗುವುದಕ್ಕೆ ಅವಕಾಶ ಕೊಡಬಾರದು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಅಧಿಕಾರಿಗಳು,—ಸಣ್ಣವರು ಮತ್ತು ದೊಡ್ಡವರು— ಎಷ್ಟು ಆಸ್ತಿ ಮಾಡಿಕೊಂಡಿದ್ದಾರೆಂಬುದರ ಬಗ್ಗೆ ವಿಚಾರಣೆ ಮಾಡಿದರೆ ಗೊತ್ತಾಗುತ್ತದೆ. ಮಾತನಾಡುವುದಕ್ಕೆ ಬಹಳ ವಿಷಯಗಳು ಇವೆ. ಆದರೆ ಕಾಲಾವಧಿ ಕಡಿಮೆಯಾಗಿರುವುದರಿಂದ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ.

2-00 P.M.

ಇನ್ನು ಫಾರೆಸ್ಟ್ ಇಲಾಖೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಶ್ರೀಮಾನ್ ಕೆ. ಎಚ್. ಪಾಟೀಲರು ಸ್ಯಾಂಡಲ್‌ವುಡ್‌ನಲ್ಲಿ ಸುಮಾರು ಒಂದು ಕೋಟಿ ರೂಪಾಯಿಯಷ್ಟು ನಷ್ಟ ಸರ್ಕಾರಕ್ಕೆ ಆಗಿದೆಯೆಂದು ಹೇಳಿದ್ದಾರೆ. ಆಮೇಲೆ ಸುಮಾರು 50 ಲಕ್ಷ ರೂಪಾಯಿಯಷ್ಟು ಸ್ಯಾಂಡಲ್‌ವುಡ್‌ನ್ನು ಹಿಡಿದ್ದಾರೆ ಎಂಬುದನ್ನು ಸಹ ಹೇಳಿದ್ದು ನಾನು ಕೇಳಿದ್ದೇನೆ. ಹಾಗೆಯೇ ಉಪಯೋಗಕ್ಕೆ ಬಾರದಿದ್ದುದನ್ನು ಅಧಿಕಾರಿಗಳು ರಾಶಿ ಹಾಕಿದ್ದು, ಅದರ ಬಗ್ಗೆ 50 ಲಕ್ಷ ರೂಪಾಯಿಯನ್ನು ರಿಕವರಿ ಮಾಡಿದ್ದಾರೆಂದು ಸಹ ಹೇಳಿದ್ದಾರೆ. ಇವರು ಹೆಚ್ಚು ಬಿಗಿಯಾದಂತಹ ಹಿಡಿತವನ್ನು ಇಟ್ಟುಕೊಂಡು ಕೆಲಸಮಾಡುವುದಕ್ಕೆ ಹೊರಟಿದ್ದಾರೆ ಬಹಳ ಸಂತೋಷ. ಅದೇ ರೀತಿಯಲ್ಲಿ ಹಿಂದಿನ ಸರ್ಕಾರ ಕೂಡ ಯಾವುದಾದರೂ ರಾಜ್ಯಕ್ಕೆ ನಷ್ಟವಾಗತಕ್ಕ ಕಾಂಟ್ರಾಕ್ಟನ್ನು ಕೊಟ್ಟಿದ್ದರೆ, ಅದರ ಬಗ್ಗೆಯೂ ಸಹ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವೊತ್ತಿನ ದಿವಸ ರಾಜ್ಯದ ಬೊಕ್ಕಸಕ್ಕೆ ಯಾವುದೇ ರೀತಿಯ ಏಟು ಬೀಳುವುದಾದರೆ, ಅಂಥವುಗಳ ಬಗ್ಗೆ ತಾವು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಇದರ ಜೊತೆಗೆ ಒಬ್ಬ ಅಧಿಕಾರಿಯನ್ನು ಇದರ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಹಾಕಿದ್ದೀರಿ ಎಂದು ಕೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ನಾವು ಯಾವ ಅಧಿಕಾರಿಯನ್ನೂ ವಿಜಿಲೆನ್ಸಿಗಾಗಲಿ, ಇನ್‌ಕ್ವಾಯರಿಗಾಗಲಿ ಹಾಕಿಲ್ಲ. ಈಗ ಭೂಮಿಯ ಒಳಗೆ ಹುಗಿದಿಟ್ಟ ಕಟ್ಟಿಗೆಗಳನ್ನು ಸಹ ತೆಗೆಸಿದ್ದೇವೆ. ಅದೇ ಟ್ರಕ್‌ನಲ್ಲಿ ಹಿಡಿದಂತಹ ಕಟ್ಟಿಗೆಗಳು ಮತ್ತಿತರ ರೀತಿಯಲ್ಲಿ ಹಿಡಿದಂತಹ ಕಟ್ಟಿಗೆಗಳು ಇವೆಲ್ಲವನ್ನೂ ಎಷ್ಟೆಷ್ಟು ಎಂದು ಪಂಚನಾಮೆ ಮಾಡುವುದರ ಸಲುವಾಗಿ ಒಬ್ಬ ಅಧಿಕಾರಿಯನ್ನು ನೇಮಿಸಿದ್ದೇವೆ. ಅವರು ಕಾರಕೂನಿ ಕೆಲಸ ಮಾಡುತ್ತಾರೆಯೇ ಹೊರತು ಹೆಚ್ಚೇನೂ ಮಾಡುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಇಷ್ಟು ಸ್ಟ್ರಿಕ್ಟಾಗಿ ಈ ಸ್ಯಾಂಡಲ್‌ವುಡ್ ರ‍್ಯಾಕೆಟ್ಟನ್ನು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾವ ಅಧಿಕಾರಿಯನ್ನು ನೇಮಕ ಮಾಡಿದ್ದೀರಿ, ಅವರ ಚರಿತ್ರೆ ಚೆನ್ನಾಗಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಅದರ ಬಗ್ಗೆ ಸ್ವಲ್ಪ ಎಚ್ಚರಿಕೆಯಿಂದ ಇರಬೇಕೆಂದು ಹೇಳುತ್ತಿದ್ದೇನೆ.

ಇನ್ನು ಈ ಐ.ಎಫ್.ಎಸ್. ಲಿಸ್ಟಿನ ಮೇಲೆ ಯಾರೋ ಒಬ್ಬರು ಸುಪ್ರೀಂ ಕೋರ್ಟಿಗೆ ಹೋದುದರಿಂದ ಸ್ಟೇ ಪಡೆದಿದ್ದರು. ಈಗ ಆ ಸ್ಟೇ ವೆಕೇಟ್ ಆಗಿದೆ. ಆದ್ದರಿಂದ ಇನ್ನೂ ಆ ಲಿಸ್ಟನ್ನು ಜಾರಿಗೆ ಕೊಡದಿದ್ದರೆ, ಆದಷ್ಟು ಜಾಗ್ರತೆ ಅದನ್ನು ಜಾರಿಗೆ ಕೊಡಬೇಕೆಂದು ಕೇಳಿಕೊಂಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಇನ್ನೊಬ್ಬ ಸದಸ್ಯರನ್ನು ಮಾತನಾಡಲು ಕರೆಯುವುದಕ್ಕೆ ಮುನ್ನ ಈ ಡಿಮ್ಯಾಂಡನ್ನು ಆರು ಗಂಟೆಗೆ ಓಟಿಗೆ ಹಾಕಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಆದಷ್ಟು ಕಡಿಮೆ ಸಮಯದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಯವರಿಗೆ ಒಬ್ಬರಿಗೆ ಒಂದೂವರೆ ಗಂಟೆ, ಇನ್ನೊಬ್ಬರಿಗೆ ಒಂದು ಗಂಟೆ ಬೇಕೆಂದು ಹೇಳಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇದರಲ್ಲಿ ಇನ್ನೊಬ್ಬ ಮಂತ್ರಿಯವರೂ ಬರಬೇಕು. ಫಿಷರೀಸ್ ಇಲಾಖೆಯೂ ಇದರಲ್ಲಿ ಇದೆ.

ಅಧ್ಯಕ್ಷರು.—ಹಾಗಿದ್ದರೆ ಇನ್ನೂ ಜಾಸ್ತಿ ಸಮಯ ಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಇವತ್ತು ಆರು ಗಂಟೆಗೆ ಮುಗಿಸುವ ಬದಲು ಏಳು ಗಂಟೆಯವರೆಗೆ ಕೂತುಕೊಳ್ಳೋಣ. ನಾಳೆ ಬೆಳಿಗ್ಗೆ ರಿಪ್ಲೈ ಕೊಟ್ಟು, ನಂತರ ರೆಗ್ಯುಲರ್ ಬಿಸಿನೆಸ್ ತೆಗೆದುಕೊಳ್ಳಬಹುದು.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್.—ನಮಗೆ ಟೈಂ ಅಲಾಟ್ ಮಾಡುವಾಗ ವಿರೋಧ ಪಕ್ಷದಷ್ಟೇ ಅಲಾಟ್ ಮಾಡುವುದಕ್ಕಿಂತ ಜಾಸ್ತಿ ಮಾಡಬೇಕಾಗುತ್ತದೆ. ಏಕೆಂದರೆ ನಾವು ಜಾಸ್ತಿ ಜನ ಇದ್ದೇವೆ.

Sri C. M. ARUMUGAM.—Every day the timings are being changed. Every day we are losing the question hour which is most important one. I feel that there should be some definite procedure with regard to the timings of this House.

**Sri K. H. PATIL.**—On behalf of this side of the House I assure that we are prepared to follow the time decided upon by the Speaker. Only in order to enable some hon. Members to speak on the demands I said we could have the reply to-morrow.

**Mr. SPEAKER**—Now I call upon hon. member Sri F. S. Thavare to speak.

† ಶ್ರೀ ಎಫ್. ಎಸ್. ತಾವರೆ (ಹಾವೇರಿ).—ಮಾನ್ಯ ಅಧ್ಯಕ್ಷರೇ, ಒಕ್ಕಲುತನದ ಸಚಿವರು ತಮ್ಮ ಬೇಡಿಕೆಗಳನ್ನು ಮಂಡಿಸಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ಸೂಚನೆಗಳನ್ನು ಇಡಬಯಸುತ್ತೇನೆ. ಒಕ್ಕಲುತನದೊಳಗೇ ಒಂದು ಮಹಾಕ್ರಾಂತಿ ಆಯಿತು. ಕಳೆದ 10—12 ವರ್ಷಗಳ ಹಿಂದೆ ಈ ವಿಭಾಗದಲ್ಲಿ ಹೆಚ್ಚಿನ ಇಳುವರಿ ಕೊಡುವ ಒಂದು ಸಂಶೋಧನೆ ನಡೆದು ಹೆಚ್ಚಿಗೆ ಬೀಜಗಳು ಸಾಮಾನ್ಯ ರೈತರಿಗೆ ಸಿಕ್ಕಿ ರೈತನ ಬೆಳೆಯಲ್ಲಿ ಒಂದಕ್ಕೆ ನಾಲ್ಕರಷ್ಟು, ನಾಲ್ಕಕ್ಕೆ ಹತ್ತರಷ್ಟು ಉತ್ಪಾದನೆ ಹೆಚ್ಚಿದೆ. ಅಂತೆಯೇ ದೇಶದಲ್ಲಿ ಬಹಳಮಟ್ಟಿಗೆ ಸ್ವಾವಲಂಬನೆ ಸಾಧನೆ ನಡೆಯಿತು. ಈ ಪ್ರಸಂಗದೊಳಗೆ ಅಂತಹ ಸಂಶೋಧನೆ ಮಾಡಿದಂಥ ಜನರನ್ನು ಅಭಿನಂದಿಸುತ್ತಾ ಒಂದು ಮಾತನ್ನು ಅವರ ಲಕ್ಷ್ಯಕ್ಕೆ ತರಬಯಸುತ್ತೇನೆ. ಯಾವಾಗ ಹೆಚ್ಚು ಇಳುವರಿ ಕೊಡತಕ್ಕ ಬೆಳೆ ಬಂತೋ ಆಗ ಅವರ ಸಂಗಡವೇ ಅನೇಕ ರೋಗರುಜಿನಗಳು ಹಾಗೂ ಕ್ರಿಮಿಕೀಟಾದಿಗಳು ಒಟ್ಟಿಗೇ ಹುಟ್ಟಿಕೊಂಡು ಬಂದಿವೆ ಎಂಬ ಭಯ ರೈತನನ್ನು ಆವರಿಸಿದೆ. ಇಂಥಾದ್ದನ್ನು ಹೋಗಲಾಡಿಸಲು ಪ್ರಯತ್ನಪಡುತ್ತಿರುವ ಒಕ್ಕಲುತನದ ವಿಭಾಗದಲ್ಲಿರುವ ಜನಗಳಿಗೆ ಹಾಗೂ ಸಂಶೋಧಕರಿಗೆ ಮತ್ತು ಸಂಶೋಧಕ ಸಂಸ್ಥೆಗಳಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹೆಚ್ಚು ಇಳುವರಿ ಕೊಡತಕ್ಕ ಫಸಲುಗಳನ್ನು ಬೆಳೆಯುವಾಗ ಅವು ರೋಗ ರುಜಿನಗಳ ಬಾಧೆಗೆ ಎಡೆಯಾಗದಂತೆ ನೋಡಿಕೊಳ್ಳುವ ಸಂಶೋಧನೆ ಈ ದೇಶದಲ್ಲಿ ನಡೆಯಬೇಕು. ಹೆಚ್ಚು ಇಳುವರಿ ಕೊಡುವ ಫಸಲಿನ ಜೊತೆಗೆ ಹಾಗೂ ಬೀಜಗಳನ್ನು ಕೊಂಡುಕೊಳ್ಳುವುದರ ಜೊತೆಗೆ ಔಷಧಿಗಳನ್ನೂ ಸಹ ಕೊಂಡುಕೊಳ್ಳಬೇಕು. ಹೆಚ್ಚು ಇಳುವರಿ ಕೊಡಬೇಕಾದರೆ ಅದಕ್ಕೆ ಬರತಕ್ಕ ರೋಗರುಜಿನಗಳನ್ನು ಹೋಗಲಾಡಿಸುವುದರ ಕಡೆಗೆ ಮೊದಲು ಗಮನಕೊಡಬೇಕು. ಹೆಚ್ಚು ಇಳುವರಿ ಫಸಲನ್ನು ತೆಗೆಯಲು ರೈತರ ಆರ್ಥಿಕ ಪರಿಸ್ಥಿತಿ ಮತ್ತು ಅವರ ಬುದ್ಧಿವಂತಿಕೆ ಎಷ್ಟಿದೆಯೆಂಬುದನ್ನು ನಾವು ನೋಡಬೇಕು. ಯಾವ್ಯಾವ ಕಾಲಕ್ಕೆ ಯಾವ್ಯಾವ ರೀತಿಯಲ್ಲಿ ಹೆಚ್ಚು ಇಳುವರಿ ಫಸಲನ್ನು ತೆಗೆಯಬಹುದು ಎಂಬ ಜ್ಞಾನ ರೈತನಿಗೆ ಬಂದ ಕಾಲಕ್ಕೆ ಹೊಸ ತರಹ ಬೀಜವನ್ನು ಅವನಿಗೆ ಸರಬರಾಜು ಮಾಡಿದರೆ ಒಳ್ಳೆಯದು. ಹಾಗಲ್ಲದೆ 108 ಕಾಂಪ್ಲಿಕೇಟೆಡ್ ಸಮಸ್ಯೆಗಳನ್ನು ರೈತರ ಮುಂದೆ ಇಟ್ಟರೆ ರೈತನಾದವನು ನಾಳೆ ಅದರ ವಿಷಯದಲ್ಲಿ ಪರಿಜ್ಞಾನವಿಲ್ಲದೆ ಸಾಕಷ್ಟು ಔಷಧಿಗಳನ್ನು ಕೊಳ್ಳದೆ, ಕಷ್ಟನಷ್ಟಗಳಿಗೆ ಒಳಗಾಗಿ ಇನ್ನು ಮುಂದೆ ಹೆಚ್ಚು ಇಳುವರಿ ಕೊಡುವ ಬೆಳೆಗಳನ್ನು ಬಿಡಬೇಕಾಗಿ ಬಂದೀತು. ಒಟ್ಟಿನಲ್ಲಿ ರೋಗರುಜಿನಗಳನ್ನು ಹೋಗಲಾಡಿಸಬೇಕು. ಬೀಜಗಳ ಬಗ್ಗೆ ಹೆಚ್ಚಿನ ಪರಿಶೋಧನೆಯಾಗಬೇಕೆಂದು ನಾನು ಒಕ್ಕಲುತನದ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದರ ಸಂಗ್ರಹಣೆ ಕಾರ್ಯ ಹಾಗೂ ಹೆಚ್ಚು ಇಳುವರಿ ಕೊಡುವ ಬೀಜೋತ್ಪಾದನೆಗೆ ಪ್ರೋತ್ಸಾಹ ಕೊಡುವ ನ್ಯಾಷನಲ್ ಸೀಡ್ ಕಾರ್ಪೊರೇಷನ್ ಸಂಸ್ಥೆಯನ್ನು ನಾವು ಅಭಿನಂದಿಸಬೇಕಾಗಿದೆ. ದುರ್ದೈವದಿಂದ ಇವತ್ತು ದೇಶದೊಳಗೆ ಒಂದು ಕಠಿಣ ಪರಿಸ್ಥಿತಿ ಇರುವಾಗ ಆ ಒಂದು ಸಂಸ್ಥೆ ಬಂದು ನಮಗೆ ಹೆಚ್ಚಿನ ಸಹಾಯ ಮಾಡಿದೆ. ಆದರೆ ಇದರಲ್ಲಿ ರಾಜ್ಯ ಸರ್ಕಾರ ಯಾವ ಹಿಡಿತವನ್ನು ಇಟ್ಟುಕೊಂಡಿದ್ದ ಹಾಗೆ ಕಾಣಲಿಲ್ಲ. ಇದರಲ್ಲಿ ಅನೇಕ ಬಂಡವಾಳ ಷಾಹಿಗಳು ವ್ಯಾಪಾರ ವರ್ಗದವರು ಇದ್ದಾರೆ. ಒಕ್ಕಲುತನ ಮಾಡಬೇಕೆಂದು ಇಚ್ಛೆಯುಳ್ಳವರು ಇದರೊಳಗೆ ಪ್ರವೇಶ ಮಾಡುತ್ತಾ ಇಲ್ಲ. ದಡ್ಡರಾದಂಥ ರೈತರನ್ನು ಹಿಂದೆ ಹಾಕಿ ಬುದ್ಧಿಜೀವಿಗಳಾದ ನಮಗೆ ಸಿಕ್ಕುವ ಲಾಭವನ್ನು ಪಡೆದುಕೊಂಡು ಹೋಗೋಣವೆಂಬ ದುರುದ್ದೇಶದಿಂದ ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನ ಅನುಕೂಲವನ್ನು ಶ್ರೀಮಂತರು ಹಾಗೂ ವ್ಯಾಪಾರಸ್ಥರು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ಒಂದು ಅಪವಿತ್ರತೆ ಸಾಕಷ್ಟು ಪ್ರಮಾಣದಲ್ಲಿ ಅಲ್ಲಿ ತುಂಬಿ ತುಳುಕಾಡುತ್ತಿದೆ. ಇದನ್ನು ಹೀಗೆಯೇ ಬಿಟ್ಟರೆ, ಮುಂದೆ ಅಲ್ಲಿ ಅನೀತಿಯುತವಾದ ವ್ಯವಹಾರ ನಡೆದು ಈ ಸಂಸ್ಥೆ ಕೆಳಮಟ್ಟಕ್ಕೆ ಇಳಿಯುತ್ತದೆ ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಿಳಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನವರು ರೈತರಿಗೆ ಬಿತ್ತನೆ ಬೀಜಗಳನ್ನು ಬೆಳೆಯುವುದಕ್ಕೆ ಸ್ಕೀಮುಗಳನ್ನು ಮಂಜೂರು ಮಾಡುತ್ತಾರೆ. ಹಾಗೆ ಒಂದೊಂದು ಸ್ಕೀಮನ್ನು ಒಬ್ಬೊಬ್ಬರಿಗೆ ಮಂಜೂರು ಮಾಡಿ ಅವರಿಗೆ ರಿಜರ್ವ್ ಮಾಡಿದಮೇಲೆ ಅಲ್ಲಿ ರೈತರು ಸಾವಿರಾರು ರೂಪಾಯಿಗಳನ್ನು

ಖರ್ಚುಮಾಡಿ ಬಿತ್ತನೆ ಬೀಜಗಳನ್ನು ತಯಾರಿಸುತ್ತಾರೆ. ಹಾಗೆ ಅವರು ತಯಾರಿಸಿದ ಹೊಸ ಬೀಜಗಳನ್ನು ಕೆ. ಜಿ. ಒಂದಕ್ಕೆ 10 ರೂಪಾಯಿ ಪ್ರಕಾರ ಮಾರುತ್ತಿದ್ದಾಗ ಕೆಲವು ಕಡೆ ರೈತರು ಏನು ಈ ಬೀಜಗಳನ್ನು ಉತ್ಪಾದನೆ ಮಾಡಿರುತ್ತಾರೆ ಅಂಥವರ ಬೀಜಗಳನ್ನು ಅವರ ಹತ್ತಿರವೇ ಬಿಟ್ಟುಬಿಡುತ್ತಿರುವುದರಿಂದ ಅವರು ಆ ಹಳೆಯ ಬಿತ್ತನೆ ಬೀಜಗಳನ್ನು ಕೆ. ಜಿ. ಒಂದಕ್ಕೆ 2—3 ರೂಪಾಯಿಗಳಿಗೆ ಮಾರಾಟ ಮಾಡುತ್ತಿರುತ್ತಾರೆ. ಆ ಬಿತ್ತನೆ ಬೀಜಗಳಲ್ಲಿ ಹಳೆಯದು ಯಾವುದು ಹೊಸದು ಯಾವುದು ಎಂಬುದನ್ನು ಕಂಡ ಹಿಡಿಯುವುದು ಕಷ್ಟವಾದ್ದರಿಂದ ಅನೇಕರು ಆ ಹಳೇ ಬಿತ್ತನೆ ಬೀಜಗಳನ್ನು ಕೊಂಡು ಹಾಳಾಗಿ ಹೋಗಿದ್ದಾರೆ. ಹೀಗಾಗಿ ಆ ಬಿತ್ತನೆ ಬೀಜದ ಕ್ವಾಲಿಟಿ ಕೂಡ ಹಾಳಾಗಿ ಸರ್ವನಾಶವಾಗಿದೆ. ಆದುದರಿಂದ ಈ ಬಿತ್ತನೆ ಬೀಜಗಳನ್ನು ತಯಾರು ಮಾಡುವುದಕ್ಕೆ ಯಾರು ಯಾರಿಗೆ ತಾವು ಪರವಾನಿಗೆಯನ್ನು ಕೊಡುತ್ತೀರೋ ಅಂಥವರಿಂದ ಅಲ್ಲಿ ಉತ್ಪನ್ನವಾಗತಕ್ಕ ಬಿತ್ತನೆಬೀಜಗಳನ್ನು ತಮ್ಮ ತಾಬಾಕ್ಕೆ ತೆಗೆದುಕೊಳ್ಳಬೇಕು. ಏನು ಒಂದಾವರ್ತಿ ಉತ್ಪಾದನೆ ಮಾಡಿದ ಬಿತ್ತನೆ ಬೀಜ ಹಳತಾಗುತ್ತದೆ ಆಗ ಅದನ್ನು ಬಿತ್ತನೆ ಖಂಡಿತ ಕೊಡಬಾರದು. ಅದನ್ನು ಜನರಿಗೆ ಊಟಕ್ಕೋ ಅಥವಾ ಇನ್ನಾವುದಕ್ಕಾದರೂ ಉಪಯೋಗಿಸುವಂತೆ ಮಾಡಬೇಕು, ಹೀಗೆ ಮಾಡದಿದ್ದರೆ ಆ ಬಿತ್ತನೆ ಬೀಜದ ಪಾವಿತ್ರ್ಯತೆ ಉಳಿಯುವುದಿಲ್ಲ. ಇನ್ನೂ ಒಂದು ವಿಚಾರ ಎಂದರೆ ಅಲ್ಲಿ ಬಿತ್ತನೆ ಬೀಜಗಳನ್ನು ಉತ್ಪಾದನೆ ಮಾಡುವುದಕ್ಕೆ ರೈತನಿಗೇನು ಸೈಟುಗಳನ್ನು ರಿಜರ್ವ್ ಮಾಡುತ್ತಾರೆ ಅಂಥ ಕಡೆಗಳಲ್ಲಿ ಅವನು ಬೆಳೆಯತಕ್ಕ ಬಿತ್ತನೆ ಬೀಜಗಳನ್ನು ಆಗಿಂದಾಗ್ಗೆ ಸರ್ಕಾರದವರು ಅವನಿಂದ ಅವನ್ನು ಕೊಂಡು ತಮ್ಮ ತಾಬಾಕ್ಕೆ ತೆಗೆದುಕೊಳ್ಳಬೇಕು. ಹಾಗೆ ತೆಗೆದುಕೊಳ್ಳದೆ ಆ ರೈತನಲ್ಲೇ ಬಿಟ್ಟರೆ ಅನೇಕರ ಹಾಳಾಗುತ್ತಾರೆ. ಇದಕ್ಕೆ ಅವಕಾಶ ಕೊಡದಂತೆ ಸರ್ಕಾರದವರು, ಸೂಕ್ತ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಆದರೆ ಸರ್ಕಾರದವರಲ್ಲ ಇಲ್ಲಿಯವರೆಗಾದರೂ ಈ ಬಿತ್ತನೆ ಬೀಜಗಳ ವಿಚಾರದಲ್ಲಿ ಒಂದು ನಿಶ್ಚಿತವಾದ ಯೋಜನೆಯಿಲ್ಲ. ಎಲ್ಲಿ ಯಾವ ಬಿತ್ತನೆ ಬೀಜಗಳನ್ನು ತಯಾರು ಮಾಡಬೇಕು? ಎಷ್ಟು ಬಿತ್ತನೆ ಬೀಜಗಳನ್ನು ತಯಾರು ಮಾಡಬೇಕು? ಎಂಬ ಒಂದು ನಿರ್ಧಾರ ಸರ್ಕಾರದಲ್ಲಿ ಇಲ್ಲ. ಅವರು ಇಂಥ ಬಿತ್ತನೆ ಬೀಜಗಳನ್ನು ಕೋಲಾರದಲ್ಲೇ ಬೆಳೆಯಬೇಕು ಇಂಥ ಬಿತ್ತನೆ ಬೀಜಗಳನ್ನು ಮಂಡ್ಯದಲ್ಲೇ ಬೆಳೆಯಬೇಕು ಇಂಥ ಬಿತ್ತನೆ ಬೀಜಗಳನ್ನು ಧಾರವಾಡದಲ್ಲೇ ಬೆಳೆಯಬೇಕು ಎಂಬ ಒಂದು ನಿಲುವನ್ನು ಅವರು ತೆಗೆದುಕೊಳ್ಳಬೇಕು. ನಮ್ಮ ಇತಿಹಾಸದಲ್ಲೇ ಕೇಳದಿದ್ದಂಥ ಒಂದು ರೀತಿಯಲ್ಲಿ ನಮ್ಮ ಹಾವೇರಿ ತಾಲ್ಲೂಕಿನಲ್ಲಿ ಒಂದು ಎಕರೆಯಲ್ಲಿ ಮೊದಲೇನು ಒಂದು ಜೋಳದ ಬೆಳೆಯನ್ನು ಬೆಳೆಯುತ್ತಿದ್ದರು ಅದಕ್ಕೆ ಮೇಲೆ 5—10 ಕ್ವಿಂಟಾಲುಗಳನ್ನು ಜಾಸ್ತಿ ಬೆಳೆಯುವುದಕ್ಕೆ ಪ್ರಾರಂಭ ಮಾಡಿದರು. ಅಂಥ ಒಂದು ಉತ್ತಮ ತಳೀ ಬೀಜವನ್ನು ತಯಾರು ಮಾಡಿದರು. ಅದು ಖಂಡಿತ ವಾಗಿಯೂ ಒಂದು ಹೆಮ್ಮೆಯ ವಿಷಯ. ಅವರು ಎಕರೆಗೆ 4—5 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅಂಥ ಸಂದರ್ಭದಲ್ಲಿ ಅವರು ತಯಾರಿಸಿದ ಬಿತ್ತನೆ ಬೀಜವನ್ನು ಈ ದಿವಸ ಈ ಅನೇಕ ಕಾರಣಗಳಿಂದ ಕೇಳತಕ್ಕವರೇ ಇಲ್ಲ. ಅವರು ಈ ಬಿತ್ತನೆ ಬೀಜಗಳನ್ನು ತಯಾರಿಸುವುದಕ್ಕಾಗಿ ಊರಲ್ಲಿ ಸೆಟ್ಟರ ಹತ್ತಿರ ದುಬಾರಿ ಬಡ್ಡಿಗೆ ಹಣವನ್ನು ತಂದು ಅವರೆಲ್ಲಾ ದೊಡ್ಡ ಸಾಲವಂದಿರಾಗಿದ್ದಾರೆ. ಆದ್ದರಿಂದ ಅವರಿಗೆ ಆ ತೊಂದರೆಯನ್ನು ತಪ್ಪಿಸಲು ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನವರು ಅಥವಾ ನಮ್ಮ ಸರ್ಕಾರದವರು ಯಾರಾದರೂ ಆ ಬಿತ್ತನೆ ಬೀಜಗಳನ್ನು ಕೂಡಲೆ ಖರೀದಿ ಮಾಡಿ ತೆಗೆದುಕೊಳ್ಳತಕ್ಕಂಥ ಒಂದು ಪರಿಸ್ಥಿತಿ ಈ ದಿವಸ ಉಂಟಾಗಿದೆ. ಸರ್ಕಾರದವರು ಈ ವಿಚಾರದಲ್ಲಿ ಒಂದು ಸ್ಥಿರವಾದ ಯಾವ ಯೋಜನೆಯನ್ನೂ ಮಾಡದಿರುವುದೇ ಇದಕ್ಕೆಲ್ಲಾ ಕಾರಣ. ಮೇಲಾಗಿ ಇಲ್ಲಿ ಆಫೀಸುಗಳಲ್ಲಿ ಕುಳಿತು ಕೆಲಸ ಮಾಡತಕ್ಕ ಚಿಕ್ಕ ಪುಟ್ಟ ನೌಕರರೇ ಇದ್ದಾರೆ ಅವರು ರೈತನಿಗೆ ಅಗತ್ಯವಾಗಿ ಬೇಕಾಗತಕ್ಕ ಬಿತ್ತನೆ ಬೀಜ ಗೊಬ್ಬರ ಇತ್ಯಾದಿಗಳಿಗೆ ಬೇಡಿಕೆಯನ್ನು ಕಳುಹಿಸಿದರೆ ಅವರಿಗೆ ಬಿತ್ತನೆ ಬೀಜದ ಅಗತ್ಯ ಮೇ ಅಥವಾ ಏಪ್ರಿಲ್ ತಿಂಗಳಲ್ಲಿ ಇದೆಯೆಂದು ಅವನ್ನು ಸರಬರಾಯಿ ಮಾಡ ವಂತೆ ಬರೆದರೆ ಜನರು ಬಿತ್ತನೆಯಲ್ಲಾ ಪೂರೈಸಿ ಜೋಳದ ಬಿತ್ತನೆ ಮುಗಿದು ಅದರ ಎಡೆಗೆ ಹೊಡೆಯತಕ್ಕ ಕಾಲಕ್ಕೆ ಇವರು ಆ ಬಿತ್ತನೆ ಬೀಜಗಳನ್ನು ಕಳುಹಿಸುತ್ತಾರೆ. ಅದಕ್ಕೆ ಕಾರಣ ಇವರಲ್ಲಿ ಯಾವ ಒಂದು ಪೂರ್ವಯೋಜನೆಯೂ ಇರುವುದಿಲ್ಲ. ಇದನ್ನು ನೋಡಿ ಜನರು ನಗುತ್ತಾರೆ. ಇಂಥ ಅಧಿಕಾರಿಗಳೂ ನೌಕರರೂ ಈ ದಿವಸ ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆಲ್ಲಾ ಕಾಲಕಾಲಕ್ಕೆ ಸಾಕಷ್ಟು ಸಂಬಳಗಳನ್ನು ಕೊಡಲಾಗುತ್ತಿದೆ. ಇಂತಕ್ಕ ಜನರಾದರೋ ಅಪರಿಮಿತವಾಗಿದ್ದಾರೆ. ಇಂಥ ಒಂದು ಕಳಂಕವನ್ನು ತಪ್ಪಿಸಬೇಕಾಗಿದ್ದರೆ ಇದಕ್ಕೆ ಕೂಡಲೆ ಒಂದು ಪೂರ್ವಸಿದ್ಧತ ಯೋಜನೆಯನ್ನು ಸರ್ಕಾರದವರು ಹಾಕಿಕೊಳ್ಳಬೇಕು. ನಮ್ಮಲ್ಲಿ ರೈತನಿಗೆ ಯಾವಯಾವ ವಿಭಾಗಕ್ಕೆ ಎಷ್ಟು ಗೊಬ್ಬರ ಬೇಕಾಗುತ್ತದೆ, ಎಷ್ಟು ಬಿತನ್ತೆ ಬೀಜ ಬೇಕಾಗುತ್ತದೆ, ಎಷ್ಟು ಔಷಧಿಗಳು ಯಾವ ಯಾವ ಭಾಗಕ್ಕೆ ಏನೇನು ಔಷಧಿಗಳು ಬೇಕಾಗುತ್ತದೆಂಬುದನ್ನೆಲ್ಲಾ ಸಿದ್ಧಗೊಳಿಸಿ ಅವನ್ನು ಸ್ಟಾಕ್ ಮಾಡಿಡಬೇಕು. ಅವುಗಳನ್ನು ರೈತನು ಕೇಳಿದ ಕೂಡಲೆ ಹೊತ್ತಿಗೆ

(ಶ್ರೀ ಎಫ್. ಎಸ್. ತಾವರೆ)

ಸರಿಯಾಗಿ ಅವುಗಳನ್ನು ಸರಬರಾಯಿ ಮಾಡಬೇಕು. ಹಾಗೆ ಮಾಡದೆ ಈ ದಿವಸ ಧಾರ್ವಾಡದಲ್ಲಿ ಯಾರಾದರೂ ಬಿತ್ತನೆ ಬೀಜ ಬೇಕೆಂದರೆ ಆತನನ್ನು ಮುಂಡ್ಯಾಕ್ಕೆ ಹೋಗು ಎಂಬುದು, ಮತ್ತು ಕೋಲಾರದಲ್ಲಿ ಯಾರಾದರೂ ಗೊಬ್ಬರ ಕೇಳಿದರೆ ಅವರನ್ನು ಧಾರ್ವಾಡಕ್ಕೆ ಹೋಗಿ ಎನ್ನುವುದು ಸರಿಯಾದ್ದಲ್ಲ. ಇವುಗಳನ್ನೆಲ್ಲಾ ಸರಿಯಾಗಿ ರೆಡಿ ಮಾಡಿ ಒಂದು ಕಡೆ ಇಟ್ಟುಕೊಳ್ಳದೆ ಆಯಾಯಾ ಸ್ಥಳಗಳಲ್ಲಿ ಅವುಗಳನ್ನು ಇಟ್ಟು ಅವು ರೈತರಿಗೆ ಹೊತ್ತಿಗೆ ಸರಿಯಾಗಿ ಸಿಕ್ಕುವಂತೆ ಮಾಡಬೇಕು. ಈ ಬಗ್ಗೆ ಇಂಥ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ಮಾಡಬೇಕು.

ಇದೇ ಸಂದರ್ಭದಲ್ಲಿ ಇನ್ನೂ ಒಂದು ಮಾತನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ದೇಶದಲ್ಲಿ ಪ್ರಾಣಿಗಳಿಗೆ ಅನೇಕ ಬಗೆಯ ರೋಗಗಳು ಅಂದರೆ ಚಪ್ಪೇ ರೋಗ, ಗಂಟಲ ರೋಗ ಇತ್ಯಾದಿಗಳು ಬರುತ್ತವೆ. ಇವುಗಳನ್ನೆಲ್ಲಾ ಒಂದು ರಾಷ್ಟ್ರೀಯ ರೋಗಗಳೆಂದು ಪರಿಗಣಿಸಿ ಇವುಗಳಿಗೆ ಚಿಕಿತ್ಸೆ ಮಾಡಬೇಕು. ಇದರ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ಹೊರಬೇಕು. ಇನ್ನು ಬೆಳೆಗೆ ಬರತಕ್ಕ ರೋಗ ನಿವಾರಣೆಗೆ ಇಲ್ಲಿ ಸಭೆಯಲ್ಲಿ ನಾವು ಬಿ. ಎಸ್. ಸಿ. ಪೌಡರ್ ಅಥವ ಫಾಲೀಡಾಲ್ ಔಷಧಿಯನ್ನು ಕಳುಹಿಸುವುದಕ್ಕೆ ಏರ್ಪಾಡನ್ನು ಮಾಡಿದ್ದೇವೆಂದು ಹೇಳಿದರೆ ಸಾಲದು. ಈ ಔಷಧಿಗಳು ಜನರಿಗೆ ಸಕಾಲಕ್ಕೆ ಮುಟ್ಟುತ್ತಿಲ್ಲ. ಇಲ್ಲಿಗೆ ಕೆಲವಾರು ವರ್ಷಗಳಿಂದ ಅಂದರೆ 1950 ರಿಂದ ಧಾರ್ವಡ ಜಿಲ್ಲೆಯಲ್ಲಿ ಜೋಳದ ಬೆಳೆಗೆ ಬೆಂಕಿ ರೋಗ ಎಂದು ಬರುತ್ತಿದೆ. ಅದಕ್ಕೆ ಇಲ್ಲಿಯವರೆಗೂ ಸರ್ಕಾರದವರು ಕಾರ್ಯಕ್ರಮ ಕೈಗೊಂಡಿಲ್ಲ. ಅನೇಕರು ಹಾಳಾಗಿ ಹೋಗಿದ್ದಾರೆ. 1964-65ರಲ್ಲಿ ಮೊದಲು ಬಿ. ಎಸ್. ಸಿ. ಪೌಡರನ್ನು ಸ್ಪ್ರೇಮಾಡಿಸಿದರು. ಅದರಿಂದೇನೂ ಅನುಕೂಲವಾಗಲಿಲ್ಲ. ಆ ಚಿಟ್ಟೆಹುಳುಗಳ ಕಾಟ ಇನ್ನೂ ಹೆಚ್ಚಾಯಿತು. ಆಗ ಮತ್ತೆ 1966-67 ರಲ್ಲಿ ಏರಿಯಲ್ ಸ್ಪ್ರೇ ಮಾಡಿಸಲಾಯಿತು. ಆ ಒಂದು ಕಾರಣದಿಂದ ರೈತರು ಲಕ್ಷಗಟ್ಟಲೆ ಸಾಲವಂದಿಗರಾಗಿದ್ದಾರೆ. ಅವರ ಗೋಳನ್ನು ಕೇಳತಕ್ಕವರೇ ಇಲ್ಲ. ಇನ್ನು ಈ ವರ್ಷ ಅಲ್ಲಿನ ರೈತರಿಗೆ ಒಂದು ಸೇರು ಕೂಡ ಜೋಳ ಆಗುವಂತೆ ಕಾಣುವುದಿಲ್ಲ. ಅಲ್ಲಿ ಈಗಾಗಲೇ ಬೆಂಕೀಹುಳದ ಕಾಟ ವಿಪರೀತವಾಗಿದೆ. ಇದು ಜೂನ್ ತಿಂಗಳು. ಜುಲೈ ತಿಂಗಳು ಬರುವುದಲ್ಲದೆ. ಬೆಳೆಯಾಗುತ್ತದೆ ಎಂಬ ಭರವಸೆ ಅವರಿಗಿಲ್ಲ. ಅಲ್ಲಿ 8—10 ಲಕ್ಷ ಎಕರೆಗಳಲ್ಲಿ ಇಟ್ಟಿದ್ದ ಜೋಳದ ಬೆಳೆಯೆಲ್ಲಾ ಹಾಳಾಗಿದೆ. ಆದ್ದರಿಂದ ಸರ್ಕಾರದವರು ಇಂಥ ಸಂದರ್ಭದಲ್ಲಿ ಒಂದು ಊರಲ್ಲಿ ಬರತಕ್ಕ ರೋಗ ಅಲ್ಲಿಗೆ ಸೀಮಿತವಾದ್ದು ಎಂದು ತೀರ್ಮಾನ ಮಾಡದೆ ಅದನ್ನು ಒಂದು ರಾಷ್ಟ್ರೀಯ ಮಟ್ಟದಲ್ಲಿ ಪರಿಗಣಿಸಿ ಅದಕ್ಕೆ ಚಿಕಿತ್ಸೆ ಮಾಡಬೇಕು. ಇದರ ಸಂಪೂರ್ಣ ಖರ್ಚುವೆಚ್ಚಗಳನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು. ಅದರ ಸಂಪೂರ್ಣ ಹೊಣೆಗಾರಿಕೆಯನ್ನು ಸರ್ಕಾರವೇ ಹೊರಬೇಕು. ಈ ದಿವಸ ನಮ್ಮ ಭಾಗದಲ್ಲಿ ಅಂದರೆ ರಾಣಿಬೆನ್ನೂರು ಹಾವೇರಿ ಅಲ್ಲೆಲ್ಲಾ ಜನರು ಬೆಳೆ ಹೋಗಿ ಬಹಳ ಕಂಗಾಲಾಗಿದ್ದಾರೆ. ಆದ್ದರಿಂದ ಸರ್ಕಾರದವರೇ ಅಲ್ಲಿ ಇದನ್ನು ಸಂಪೂರ್ಣವಾಗಿ ತಡೆಗಟ್ಟತಕ್ಕ ಹೊಣಗಾರಿಕೆಯನ್ನು ಹೊರಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

2-30 P.M.

Sri N. B. SIRDESAI (Khanapur).—Madam Speaker, I rise to oppose all the Demands tabled by the Hon'ble Minister for Agriculture and Forests and the Demand tabled by the Hon'ble Minister of State for Animal Husbandry, on some principles and grounds. I am not opposing the demands for the sake of opposition only. My constructive suggestions will help the Minister to streamline and overhaul the administration of the Department. I want the Minister, and the Government to be more realistic, more vigilant, honest and humane. If you discharge your duties towards the public most honestly and make your officers to work honestly, I am sure, you wi l be known as Dharmaviras. If you do not discharge your duties honestly, you will be called Adharma Veeras. I do not wish that you should be called as Adharmaveeras. This has no reference to the name of the Governor of Mysore. It is said God sees the people w th His thousand eyes. If the Hon. Minister has

regard to the representations submitted by the MLA's and the local leaders, he will also have that insight because thousands of people in the State will make you known who is who and what is what. You must know your Department with such a vision and find out who is who and what is what. So, I request you not to disregard to representations submitted by the MLAs and the local representatives. You must remember the slogans given out to the people on the eve of elections. You must remember them every day. You must exercise strict vigilance over the work of your officers in order to implement your promises made to the people.

With regard to your officers, I must say here that they are lethargic. Your Department is known for corruption and malpractices. If the Public Works Department is known as enemy No. 1 of the country then the Forest Department can be called as enemy No. 2 of the nation. The Officers of your department have neglected their duties and the Government has connived at their negligence. So, I request you not to spare the erring and the negligent officers of your Department. From a reliable source, I may tell you that much of the forest revenue is swallowed by the officers of your Department and the contractors. The officers are fed by the contractors. Therefore the officers connived at the wrong doings of the contractors. I may inform you that without the co-operation of your officers, the smugglers would not have carried on their business of smuggling. Crores of rupees worth of sandalwood, rosewood and timber have been smuggled uptill now. This smuggling has taken place at the connivance of the officers of your Department. Therefore the officers are wholly and solely responsible for the smuggling business. Thus the forest revenue which has been swallowed by your officers could have been saved with strict vigilance over their work and that amount could have been utilised for the benefit of the State.

As regards the knowledge af rules, I may bring to your kind notice that the Secretary of your Department is not conversant with the simple rules. When the Government desires to furnish certain information to the MLAS immediately, the Secretary pleads ignorance of the rules. The Secretary feels that information could be supplied at his whims and fancies and at the time when he likes. This is not desirable because when the Government themselves want to supply information to the MLAS, the Secretary should not stand in the way. If this is the attitude of the Head of the Department then what of other lower officers ? I therefore request you to issue instructions to all the officers of your department not to disregard the representations made by the MLAS or the local leaders. We approach the Officers or the Government to elicit certain information which will be required by the people. We should not be denied of such a facility. We are the elected representatives of the people and we owe a duty to the people. This Government is formed of the people, for the people and by the people. This Government is not constituted by the officers.

(SRI N. B. SIRDESAI)

As regards the afforestation programme of your Department, I would suggest here that this afforestation of the eucalyptus trees should be carried on on the barren lands and the pasture lands and in places where there is no growth of trees. This should not be undertaken in cleared up forest coupes. The plantation of the timber and Sandalwood treesshould be undertake on a large scale as that would bring much revenue and also earn foreign exchange to the State. You might be well aware of the great demand for soft wood and the rosewood. Inspite of this great demand for such a wood, Government is concentrating its attention upon the plantation of the eucalyptus trees. I do not decry plantation of eucalyptus because that would increase the forest area but more attention should be paid towards increasing the output of soft-wood and the rosewood which is in great demand.

I may bring to your notice another fact *i.e.*, though your Department is keeping quiet over the smuggling of timber and other products of the forest, and they are not taking any action against them but your Department is not sparing the cultivators who cut one or two trees for preparing agricultural implements. Your officers are punishing the agriculturists for minor offences but they are conniving at the major offences. That is the greatest mistake on the part of Government.

The **roads** in the forest area are not being maintained and repaired. They should be maintained and repaired atleast in my taluka.

As regards Vanamahotsava, I may tell you that each year pits are dug in the same pits and in the same old pits, the trees are planted. That has come to my notice. So, instead of celebrating Vanamahotsava in backyards and other public places, better celebrate it in the forest area or in places where the lands have been reserved.

Then as regards the forest land, I request the Hon. Minister to release the forest lands to the landless cultivators who are in need of the forest lands. The lands which have been granted to the personnel of your Department who are retired should not be taken over and they should be continued with the possession of the land granted to them. The request of the Military personnel should not be disregarded and the lands should be released to them for cultivation. There is one suggestion as regards the waste lands. These lands are not fit for cultivation. Some waste lands have been granted to some people. They should be taken over by the Forest Department and made use of for eucalyptus plantation.

As regards Horticulture, I would like to bring to the notice of the Government that there is a place called Pohavajra Falls near Jamboti Village in my Taluka where you can establish a Hill Station. I made this request several times, but the Government have not paid any attention to my request. Kindly attend to it.

As regards applied nutrition programme, I would like to bring to the notice of the Government that the Government has not sanctioned the scheme to my Taluka which is a Malnad and backward Taluka. I take it as an injustice done to my Taluka.

As regards the Animal Husbandry there is a big complaint that the Veterinary Graduates have not been treated on par with the Medical Graduates with regard to remuneration, status etc. These Veterinary Graduates also have to study more subjects and the duration of the course is also the same as that of M.B.B.S. But their request has not been conceded by Government and they and treated as low paid officials. In fact their life is always at risk because they have to handle more ferocious animals. The human doctors are treating only the human beings. It is wrong on the part of the Government to treat them below the rank of a Human Doctor. They should be treated on par with the human doctors as their duties and roles are one and the same.

As regards agriculture, I would like to speak one or two words. The fertilizers like Urea and Ammonium Sulphate are not supplied to my Taluka. The soil testing Laboratories must be located. in each Taluka to facilitate the soil testing operation for the cultivators. The fertilizers should be supplied to my Taluka immediately. This is my sincere request and I hope the Government would consider my request and see all facilities are provided to my Taluka. With these few words I conclude my speech. Thank you.

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಸಭಾ ಅಧ್ಯಕ್ಷರೇ, ವ್ಯವಸಾಯ ಡಿಮ್ಯಾಂಡ್ ನಂಬರ್ 31 ರಲ್ಲಿ ಮೀನುಗಾರಿಕೆಯ ವಿಷಯದಲ್ಲಿ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಪ್ಲಾನ್ ಹಾಗೂ ನಾನ್ ಪ್ಲಾನ್ ಸ್ಕೀಮ್‌ಗಳಲ್ಲಿ ಮೀನುಗಾರಿಕಾ ಅಭಿವೃದ್ಧಿಗೆ ನಿಗದಿ ಮಾಡಲ್ಪಟ್ಟ ಹಣ ಬಹಳ ಕಡಿಮೆಯೆಂದು ನನಗನಿಸುತ್ತದೆ. ಮತ್ಸ್ಯೋದ್ಯಮ ತೀವ್ರವಾಗಿ ಬೆಳೆಯುವ ಉದ್ಯಮವಾಗಿದೆ. ನಮ್ಮ ದೇಶಕ್ಕೆ ಅತೀ ಜರೂರಾಗಿ ಬೇಕಾದ ವಿದೇಶ ವಿನಿಮಯ ಈ ಉದ್ಯಮದ ಮೂಲಕ ವರ್ಷಂಪ್ರತಿ 40 ಕೋಟಿ ರೂಪಾಯಿ ದೊರೆಯುತ್ತದೆ. ಮೈಸೂರು ರಾಜ್ಯದ 200 ಮೈಲಿ ಉದ್ದದ ಕರಾವಳಿಯಲ್ಲಿ ಈ ಸಂಪತ್ತು ವಿಪುಲವಾಗಿದ್ದು, ಈ ಸಂಪತ್ತನ್ನು ವೃದ್ಧಿಪಡಿಸುವರೇ ? ಕೋಟ್ಯಾಂತರ ರೂಪಾಯಿಗಳ ಯೋಜನೆ ತೀರಾ ಅವಶ್ಯವಾಗಿದೆ.

ಇನ್ನು ನಾನ್ ಪ್ಲಾನ್‌ನಲ್ಲಿ 1972–73 ರ ಅವಧಿಯಲ್ಲಿ ಬರೇ 66 ಲಕ್ಷ ರೂಪಾಯಿ ವಿಂಗಡಿಸಿ ಇಟ್ಟಿರುತ್ತೀರಿ. ಈ ಹಣದಲ್ಲಿ ಕೆಲವಂಶ ಅನಗತ್ಯವಾಗಿ ಖರ್ಚಾಗಿ ಹೋಗುವ ಸಂಭವವಿದೆ. ಉದಾಹರಣೆಗೆ $1\frac{1}{2}$ ಲಕ್ಷ ರೂಪಾಯಿ ಫಿಷ್ ಕ್ಯೂರಿಂಗ್ ಯಾರ್ಡ್ಸ್ ಗೆ ಇಟ್ಟಿದ್ದೀರಿ. ಈಗ ಕೆಲವು ವರ್ಷಗಳಿಂದ ಮೀನುಗಾರರು ಮೀನು ಜೋಪಾನೆಗೆ ಈ ಯಾರ್ಡ್ಸ್‌ಗೆ ಬರುವುದಿಲ್ಲವಾದುದರಿಂದ ಈ ಯಾರ್ಡ್ಸ್‌ನ್ನು ಮುಚ್ಚುವುದು ಒಳ್ಳೆಯದು.

ಇನ್ನು 15 ಲಕ್ಷ ರೂಪಾಯಿ ಫಿಷರೀಸ್ ಸ್ಕೂಲ್‌ಗಳಿಗೆ ಖರ್ಚಾಗುತ್ತದೆ. ಈ ಸ್ಕೂಲ್‌ಗಳನ್ನು ವಿದ್ಯಾ ಇಲಾಖೆಯವರು ವಹಿಸಿಕೊಳ್ಳುತ್ತಾರೆ ಎಂಬುದನ್ನು ಕೇಳಿದ್ದೇನೆ. ಹಾಗಾಗಿ ಈ ಹಣವನ್ನು ಇನ್ನಿತರ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬಹುದು.

ಇನ್ನು 20 ಲಕ್ಷ ರೂಪಾಯಿಗಳನ್ನು ತುಂಗಭದ್ರಾ ಯೋಜನೆ ಅಭಿವೃದ್ಧಿಗೆ ವಿಂಗಡಿಸಿದ್ದೀರಿ. ಈ ಬೋರ್ಡಿನ ಮೂಲಕ ಒಂದು ಫಿಷ್ ನೆಟ್ ಮೇಕಿಂಗ್ ಪ್ಲಾಂಟಿಗೆ ತುಂಬಾ ಖರ್ಚಾಗುತ್ತದೆ. ಈ ಯಂತ್ರದಿಂದ ಬಡಮೀನುಗಾರರಿಗೆ ಕಷ್ಟವಾಗುತ್ತದೆ. ಅಂದರೆ ಮೀನುಗಾರರು ಮಳೆಗಾಲದಲ್ಲಿ ಮತ್ತು ತಮ್ಮ ಬಿಡುವು ಸಮಯದಲ್ಲಿ ತಮ್ಮ ಕೈಯಿಂದಲೇ ಈ ಮೀನಿನ ಬಲೆಯನ್ನು ಹೆಣೆಯುತ್ತಾರೆ.

(ಶ್ರೀಮತಿ ಮನೋರಮಾ ಮಧ್ವರಾಜ್)

ಇದು ಒಂದು ಗುಡಿಕೈಗಾರಿಕೆಯೂ ಆಗಿದೆ. ಹಾಗಾಗಿ ಈ ಯಂತ್ರದಿಂದ ಬಡ ಮೀನುಗಾರರ ಕೈಕಸುಬಿಗೆ ಧಕ್ಕೆ ಬರುತ್ತದೆ. ಹಾಗೂ ಅವರ ಜೀವನೋಪಾಯವು ಬಹಳ ಕಷ್ಟಮಯವಾಗುತ್ತದೆ.

ಇನ್ನು 5½ ಲಕ್ಷ ರೂಪಾಯಿ ಯಾಂತ್ರಿಕ ಮೀನುಗಾರರ ತರಬೇತಿಗೆ ಖರ್ಚು ಮಾಡುತ್ತೀರಿ. ಈಗ್ಗೆ ಎರಡು ವರ್ಷಗಳಿಂದ, ತರಬೇತು ಪಡೆದ ಮೀನುಗಾರರ ಯುವಕರಿಗೆ ಯಾಂತ್ರಿಕ ದೋಣಿಗಳ ವಿತರಣೆಯಾಗಲಿಲ್ಲ. ಹಾಗಾಗಿ ಇಷ್ಟರಲ್ಲಿ ತರಬೇತು ಪಡೆದ ಎಲ್ಲಾ ಮೀನುಗಾರ ಯುವಕರಿಗೆ ಯಾಂತ್ರಿಕ ದೋಣಿ ವಿತರಣೆಯಾಗುವ ತನಕ ಈ ಕೇಂದ್ರವನ್ನು ಮುಚ್ಚುವುದು ಒಳ್ಳೆಯದು.

ಈ ಎಲ್ಲ ಉಳಿತಾಯದ ಹಣವನ್ನು ಬಡಮೀನುಗಾರರ ದೈನಂದಿನ ಜೀವನಾವಶ್ಯಕತೆಗಳಿಗೆ ವಿನಿಯೋಗಿಸಬೇಕು. ಮೀನುಗಾರರ ಹಳ್ಳಿಗಳಿಗೆ ನೀರು ಸರಬರಾಜು, ವಸತಿ ಸೌಕರ್ಯ ಹಾಗೂ ವೈದ್ಯಕೀಯ ಸವಲತ್ತುಗಳನ್ನು ಒದಗಿಸಬೇಕು. ಎಲ್ಲ ಮೀನುಗಾರ ಹಳ್ಳಿಗಳನ್ನು ರಾಜರಸ್ತೆಗಳಿಗೆ ಸೇರ್ಪಡಿಸುವಂತಾಗಬೇಕು. ಸಾರಿಗೆ ಸಂಪರ್ಕ ವಿಷಯದಲ್ಲಿ ನಾನು ಸರಕಾರವನ್ನು ಅಭಿನಂದಿಸುತ್ತೇನೆ. 30 ಕ್ಕಿಂತಲೂ ಹೆಚ್ಚು ಫೀಡರ್ ರೋಡ್ಸ್ ನಿರ್ಮಾಣವಾಗಿರುವುದರಿಂದ ಮೀನುಗಾರರಿಗೆ ತುಂಬಾ ಪ್ರಯೋಜನವಾಗಿದೆ.

ಇನ್ನು ಎರಡನೇ ಹಂತವಾಗಿ ಫೀಡರ್ ರೋಡ್ಸ್‌ಗೆ ಸಮುದ್ರ ಕಿನಾರೆಯಿಂದ ಪ್ಯಾರಲೆಲ್ ರೋಡ್ಸ್ ನಿರ್ಮಾಣವಾಗಬೇಕು. ನನ್ನ ಕ್ಷೇತ್ರದಲ್ಲಿ ಮಟ್ಟು ಗ್ರಾಮದಿಂದ ಮಲ್ಪೆ ಪಡುಕರೆ ವರೆಗಿನ 10 ಮೈಲು ಉದ್ದದ ರಸ್ತೆ ಕೂಡಲೇ ನಿರ್ಮಾಣವಾಗಬೇಕೆಂದು ನಾನು ಮಾನ್ಯ ಸರಕಾರವನ್ನು ವಿನಂತಿಸುತ್ತೇನೆ. ಪರಗಟ್ಟ ರಸ್ತೆಯನ್ನು ಹೊಳೆ ತನಕ ವಿಸ್ತರಿಸಬೇಕಾಗಿಯೂ ಕೇಳುತ್ತೇನೆ. ಇದಕ್ಕೆ ಬೇಕಾದ ಸ್ಥಳವನ್ನು ಭೂಮಿಯ ಮಾಲೀಕರು ಧರ್ಮಾರ್ಥವಾಗಿ ಬಿಟ್ಟು ಕೊಡುವುದಾಗಿ ಒಪ್ಪಿದ್ದಾರೆ.

ಈ ವರ್ಷ ಮೀನುಗಾರಿಕಾ ರಸ್ತೆ ನಿರ್ಮಾಣಕ್ಕೆ ಬರೇ ಒಂದು ಲಕ್ಷ ರೂಪಾಯಿ 'ಪ್ಲಾನ್ ಸ್ಕೀಮು'ನಲ್ಲಿ ಮೀಸಲಿಡಿಸಿ ಇಟ್ಟಿದ್ದಾರೆ. ಈ ಹಣದಲ್ಲಿ ಒಂದು ಮೈಲ ರಸ್ತೆ ಕೂಡ ನಿರ್ಮಾಣ ಮಾಡಲಿಕ್ಕೆ ಸಾಧ್ಯವಿಲ್ಲ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ಯಾರಲೆಲ್ ರಸ್ತೆಗಳ ನಿರ್ಮಾಣಕೆ ಕನಿಷ್ಠ ಒಂದು ಕೋಟಿ ರೂಪಾಯಿ ಯೋಜನೆಯನ್ನಾದರೂ ಮಾಡಬೇಕಾಗಿಯೂ, ಈ ವರ್ಷ ಕನಿಷ್ಠ 20 ಮೈಲು ರಸ್ತೆಯಾಗಬೇಕಾದ್ದು ಅನಿವಾರ್ಯವೆಂದೂ ಹೇಳುತ್ತೇನೆ.

ಈಗಾಗಲೇ ನಿರ್ಮಾಣವಾಗಿದ್ದ ಮೀನುಗಾರಿಕಾ ರಸ್ತೆಗಳ ದುರಸ್ತಿ ಕಾರ್ಯವನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಂಡದ್ದು ಬಹಳ ಸಂತೋಷದ ಸಂಗತಿ. ಈ ರಸ್ತೆಗಳು ಈಗ ಬಹಳ ನಿಕೃಷ್ಟಾವಸ್ಥೆಯಲ್ಲಿದ್ದು ಅದನ್ನು ಕೂಡಲೇ ದುರಸ್ತಿಗೊಳಿಸಿ ಸಾಗಾಟಕ್ಕೆ ಅನುಕೂಲತೆ ಮಾಡಿಸಿಕೊಡಬೇಕಾಗಿ ಲೋಕೋಪಯೋಗಿ ಇಲಾಖಾ ಸಚಿವರನ್ನು ವಿನಂತಿಸುತ್ತೇನೆ.

ನಾನು ಮೊದಲೇ ತಿಳಿಸಿದ್ದಂತೆ ಮಲ್ಪೆ, ಹೊನ್ನಾವರ, ಕಾರವಾರಗಳನ್ನು ಮೀನುಗಾರಿಕಾ ಬಂದರನ್ನಾಗಿ ಅಭಿವೃದ್ಧಿಗೊಳಿಸಬೇಕಾಗಿಯೂ ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಗುಂಡೂರಾವ್ (ಸೋಮವಾರಪೇಟೆ).—ಸನ್ಮಾನ ಸಭಾಧ್ಯಕ್ಷಿಣಿಯವರೇ ಪ್ರಥಮವಾಗಿ ನಮ್ಮ ಅರಣ್ಯ ಮತ್ತು ಕೃಷಿ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಮುಖ್ಯವಾಗಿ ಈ ಅರಣ್ಯ ಇಲಾಖೆಯಲ್ಲಿ ಹಿಂದಿನ ಸರ್ಕಾರದಲ್ಲಿ ಆಗಿರುವಂಥ ಅನ್ಯಾಯ, ಅನಾಚಾರ, ಅಕ್ರಮಗಳನ್ನು ಈಗ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಾನು ಬರುತ್ತಾ ಇರುವಂಥ ಜಿಲ್ಲೆ ಕೊಡಗು ಜಿಲ್ಲೆ. ಈ ಜಿಲ್ಲೆ ಅರಣ್ಯ ಸಂಪತ್ತು ಬಹಳ ಹೆಚ್ಚಾಗಿರುವಂಥ ಜಿಲ್ಲೆ. ಈ ಜಿಲ್ಲೆಯಲ್ಲಿ ಸಾಧಾರಣವಾಗಿ 10-15 ವರ್ಷಗಳಿಂದಲೂ ಅರಣ್ಯ ಲೂಟಿಯಾಗುತ್ತಾ ಇರುವುದನ್ನು ನೋಡಿದರೆ ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೋ ಅಥವಾ ಸಮಾಜವಾದದಲ್ಲಿ ಇದ್ದೇವೋ ಅಥವಾ ಬಂಡವಾಳಶಾಹಿಗಳ ಕೈಯಲ್ಲಿ ಇದ್ದೇವೊ ಎನ್ನುವುದು ನನ್ನ ಮನಸ್ಸಿಗೆ ಗೊತ್ತಾಗುವುದಿಲ್ಲ. ಮುಖ್ಯವಾಗಿ ಕೊಡಗಿನಲ್ಲಿ ಸುಮಾರು 60 ಮೈಲಿ ಇರುವ ಕೇರಳ ಬಾರ್ಡರ್‌ನಲ್ಲಿ ಅರಣ್ಯ ಕಳ್ಳ ಸಾಗಾಣಿಕೆ ನಡೆಯುತ್ತಾ ಇರುವುದರಿಂದ ನನ್ನ ಒಂದು ಅಂದಾಜಿನಲ್ಲಿ ಸುಮಾರು 30 ಕೋಟಿ ರೂಪಾಯಿ ಹಣದಷ್ಟು ಮರಗಳು ಕೇರಳಕ್ಕೆ ಕಳ್ಳ ಸಾಗಾಣಿಕೆಯಾಗಿದೆ ಎಂದು ಹೇಳುತ್ತೇನೆ. ಕಳೆದ 10-15 ವರ್ಷಗಳಲ್ಲಿ 30 ಕೋಟಿ ರೂಪಾಯಿ ಬೆಲೆ ಬಾಳುವ ರೋಸ್‌ವುಡ್ ಕೊಡಗಿನ ಅರಣ್ಯದಿಂದ ಕೇರಳಕ್ಕೆ ಸಾಗಿ ಅಲ್ಲಿಂದ ಹೊರದೇಶಗಳಿಗೆ ಹೋಗಿದೆ. ನಾನು ಅರಣ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ, ಶರಾವತಿ

ಬಗ್ಗೆ ತನಿಖೆ ಆಗಲಿ. ಬೇರೆ ತನಿಖೆ ಆಗಲಿ ಎಂದು ಏನು ಹೇಳುತ್ತಾರೆ, ಅದಕ್ಕಿಂತ ಮುಖ್ಯವಾಗಿ ಕೊಡಗಿನ ಅರಣ್ಯದಿಂದ ಈ 15 ವರ್ಷಗಳಲ್ಲಿ ಮರಗಳ ಕಳ್ಳ ಸಾಗಾಣಿಕೆಯಾಗಲು ಯಾರು ಯಾರು ಕಾರಣರು, ಏನೇನು ಅನ್ಯಾಯ ಮತ್ತು ಅಕ್ರಮಗಳು ನಡೆದಿವೆ ಎನ್ನುವುದಕ್ಕೆ ಒಂದು ತನಿಖೆ ನಡೆಸುವುದಕ್ಕೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಕೊಡಗಿನಲ್ಲಿ ಸಾವಿರಾರು ಎಕರೆ ಮಲೆಗಳ ಪ್ರದೇಶವಿದೆ. ಇದು ಕೇರಳ ಬಾರ್ಡರಿಗೆ ಹೊಂದಿಕೊಂಡಿದ್ದು 60 ಮೈಲು ದೂರದವರೆಗೂ ಅರಣ್ಯ ಇಲಾಖೆಗೆ ಸೇರದೆ ಇರುವುದರಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ಯಾವುದೇ ತರಹ ರಕ್ಷಣೆ ವ್ಯವಸ್ಥೆ ಅಲ್ಲಿ ಇಲ್ಲ. ಕೇರಳದ ಜನ ಗುಂಪು ಕೂಡಿಕೊಂಡು ಬಂದು ಮರಗಳನ್ನು ಕಡಿದು ಹೊಳೆಯಲ್ಲಿ ಸಾಗಿಸಿಕೊಂಡು ಹೋಗುತ್ತಾರೆ. ಅರಣ್ಯ ಇಲಾಖೆಯವರಾಗಲೀ, ಪೋಲೀಸ್ ಇಲಾಖೆಯವರಾಗಲೀ ಇವನ್ನೆಲ್ಲ ನೋಡಿಕೊಂಡಿರಬೇಕಾಗುತ್ತದೆ; ಏನು ಮಾಡುವುದಕ್ಕೂ ಆಗುವುದಿಲ್ಲ. ಇವರ ಹತ್ತಿರ ಒಂದು ಕೋವಿ ಇದ್ದರೆ ಅವರ ಹತ್ತಿರ 13 ಕೋವಿ ಇರುತ್ತವೆ, ಇವರು ಹತ್ತು ಜನರಿದ್ದರೆ ಅವರು ಸಾವಿರಾರು ಜನರಿರುತ್ತಾರೆ. ಪ್ರತಿಯೊಬ್ಬರಿಗೂ ಜೀವ ಭಯ ಇರುತ್ತದೆ. ಕೊಡಗಿನ ಅರಣ್ಯ ಸಂಪತ್ತು ಎಷ್ಟು ಲೂಟಿಯಾಗಿದೆ ಎನ್ನುವುದನ್ನು ವಿವರಿಸುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮಂತ್ರಿಗಳಾದರೂ ಸಹ ಇನ್ನು ಮುಂದೆ ಈ ರೀತಿ ಆಗದಂತೆ ಸರಿಯಾದ ಸಿಬ್ಬಂದಿ ಇಟ್ಟು, ವಿಶೇಷ ಪೋಲೀಸ್ ಸಿಬ್ಬಂದಿ ಇಟ್ಟು ಈ ಹೊತ್ತು ಕ್ರಮ ತೆಗೆದುಕೊಂಡರೆ ಇನ್ನಾದರೂ 20—30 ಕೋಟಿ ರೂಪಾಯಿ ಬೆಲೆ ಬಾಳುವ ಮರಗಳ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಬಹುದು ಎಂದು ಕೇಳಿಕೊಳ್ಳುತ್ತೇನೆ.

ಟಿಂಬರ್ ವ್ಯಾಲ್ಯುಯೇಷನ್ ಮಾಡುವಾಗ ಎ.ಬಿ.ಸಿ. ಎಂದು ವಿಂಗಡಿಸಿ ಮರದ ಬೆಲೆ ಕಟ್ಟುತ್ತಾರೆ. ಹಿಂದೆ ಹೀಗೆಯೇ ಮಾಡಬೇಕು ಎಂದು ಇತ್ತು. ಈವಾಗ ಏನಾಗಿದೆ ಎಂದರೆ ಅಧಿಕಾರಿಗಳ ವಿವೇಚನೆಗೆ ಬಿಟ್ಟಿದ್ದಾರೆ. ಇದರಿಂದ 'ಎ' ವರ್ಗದ ಮರವನ್ನು 'ಸಿ' ವರ್ಗವೆಂದು ಮಾಡುತ್ತಾರೆ, 'ಬಿ' ವರ್ಗವನ್ನು 'ಎ' ವರ್ಗವೆಂದು ಮಾಡುತ್ತಾರೆ. ಇದರಿಂದ ಯಾವ ತರಹ ಪ್ರಯೋಜನ ಸರ್ಕಾರಕ್ಕೆ ಇಲ್ಲ, ಜನತೆಗೆ ಪ್ರಯೋಜನವಿಲ್ಲ. ಸಂಬಂಧಪಟ್ಟ ಅಧಿಕಾರಿಗೆ ಮಾತ್ರ ಬೇಕಾದಷ್ಟು ಪ್ರಯೋಜನವಾಗುತ್ತಿದೆ. ಯಾರು ಜಾಸ್ತಿ ಹಣ ಕೊಡುತ್ತಾರೆ ಆವಾಗ 'ಎ' ವರ್ಗದ ಮರವನ್ನು 'ಸಿ' ವರ್ಗ ಎಂದು ಮಾಡಿ ಬೆಲೆ ಕಟ್ಟುತ್ತಾರೆ, ಕಡಮೆ ಹಣ ಕೊಟ್ಟರೆ 'ಸಿ' ವರ್ಗದ ಮರವನ್ನು 'ಎ' ವರ್ಗ ಎಂದು ಮಾಡಿ ಬೆಲೆ ಕಟ್ಟುತ್ತಾರೆ. ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಅನ್ಯಾಯವಾಗುತ್ತಿದೆ. ಈ ಪದ್ಧತಿಯನ್ನು ರದ್ದು ಮಾಡಿ, ಹಿಂದೆ ಯಾವ ರೀತಿ ಬೆಲೆ ನಿಗದಿ ಮಾಡುವ ಕ್ರಮವಿತ್ತು ಅದನ್ನೇ ಜಾರಿಗೆ ತರಬೇಕು. ಇಲ್ಲದೆ ಹೋದರೆ ಮಾನ್ಯ ಮಂತ್ರಿಗಳ ದಕ್ಷತೆ ಎಷ್ಟೇ ಇದ್ದರೂ ಸಹ ಅಧಿಕಾರಿಗೆ ಡಿಸ್ಕ್ರಿಕ್ಷನ್ ಕೊಟ್ಟಿರುವುದರಿಂದ ಅನಾನುಕೂಲತೆಯನ್ನು ತಪ್ಪಿಸುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದೇನೆ.

2,900 ಎಕರೆ ಅರಣ್ಯ ಪ್ರದೇಶವನ್ನು ಗುಜರಾತಿನ ಒಬ್ಬ ಮಾರ್ವಾಡಿ ಕೇಶವಲಾಲ್ ಬುಡಾನಿ ಎಂಬುವವರಿಗೆ ಲೀಸಿಗೆ ಕೊಟ್ಟಿದ್ದಾರೆ ಅಥವಾ ಕೊಡಬೇಕೆಂದಿದ್ದಾರೆಂದು ಗೊತ್ತಾಗಿದೆ. ಇದರೊಳಗೆ ಅಕ್ರಮ, ಅನ್ಯಾಯ ಇದೆ. ಈ ಗುಜರಾತಿ ನಮ್ಮ ಊರಿನ ಹತ್ತಿರ ಮೂರು ಸಾವಿರ ಎಕರೆ ಜಾಗವನ್ನು ಪಡೆದಿದ್ದಾನೆ. ಹಿಂದಿನ ಸರ್ಕಾರವಿದ್ದಾಗ ಆ ಜಾಗವನ್ನು ಕೊಡಬಾರದೆಂದು ನಾವು ಸತ್ಯಾಗ್ರಹ ಮಾಡುವವರೆಗೂ ಹೋಗಿದ್ದೆವು. ಅವರು ಯಾವುದೋ ರೀತಿಯಿಂದ ಅರಣ್ಯ ಸಚಿವರನ್ನು, ರವೆನ್ಯೂ ಸಚಿವರನ್ನು, ಮುಖ್ಯ ಮಂತ್ರಿಯವರನ್ನು, ಕೈಗಾರಿಕಾ ಮಂತ್ರಿಗಳನ್ನು, ಎಲ್ಲರನ್ನೂ ಕರೆಸಿಕೊಂಡು ಹೇಗೋ ಮಾಡಿ ಆ ಜಾಗವನ್ನು ಹೊಳೆ ದಡದಲ್ಲಿ ತೆಗೆದುಕೊಂಡಿದ್ದಾರೆ. ಬಹಳ ದೊಡ್ಡ ಅರಣ್ಯ ಸಂಪತ್ತು ಇದ್ದ ಜಾಗ ಅದು. ಆ ಜಾಗವನ್ನು ಅಧಿಕಾರವಿಲ್ಲದೆ, ಸರ್ಕಾರದ ಹುಕುಂ ಇಲ್ಲದೆ, ರವೆನ್ಯೂ ಅಧಿಕಾರಿಗಳ ಆಜ್ಞೆ ಇಲ್ಲದೆ, ಅರಣ್ಯ ಇಲಾಖೆಯ ಅಧಿಕಾರಿಗಳ ಆಜ್ಞೆ ಇಲ್ಲದೆ ತಾನು ಆ ಜಾಗವನ್ನು ಆಕ್ರಮಣ ಮಾಡಿ, 80 ಸಾವಿರ ರೂಪಾಯಿ, ಒಂದು ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಮರಗಳನ್ನು, ಸಾವಿರಾರು ಮರಗಳನ್ನು ಕಡಿದು ದೊಡ್ಡದಾಗಿ ಬೆಂಕಿ ಹಾಕಿ ಸುಟ್ಟು ಹಾಕಿರುತ್ತಾರೆ. ಅವರು ಆರೊಮ್ಯಾಟಿಕ್ಸ್ ಮಾಡುತ್ತೇನೆಂದು ಹೇಳಿಕೊಂಡು ಈಗ 2,900 ಎಕರೆ ಜಮೀನು ತೆಗೆದುಕೊಳ್ಳಬೇಕೆಂದಿರುವುದು ಇಂಟರ್ ನ್ಯಾಷನಲ್ ಸ್ಮಗ್ಲಿಂಗ್ ಗ್ಯಾಂಗ್ ಇದ್ದ ಹಾಗೆ. ಫ್ರಾನ್ಸ್, ಇಟಲಿ ದೇಶಗಳಿಂದ ಯಾರನ್ನಾದರೂ ಕರೆದುಕೊಂಡು ಈ ಜಾಗ ಮೈಸೂರು ಸರ್ಕಾರ ಕೊಟ್ಟಿದೆ, ಇದು ನನ್ನ ಜಾಗ, ಈ ಮೂರು ಸಾವಿರ ಎಕರೆ ಜೊತೆಗೆ ಇನ್ನೂ ಮೂರು ಸಾವಿರ ಎಕರೆ ಸೇರಿಸಿಕೊಳ್ಳುತ್ತೇನೆಂದು ಹೇಳಿ ಇಂಟರ್ ನ್ಯಾಷನಲ್ ಕೊರಾಬೊರೇಷನ್ ಮಾಡಿ ಅಲ್ಲಿಂದ ಎಷ್ಟೋ ಡಾಲರ್ ಹಣವನ್ನು ತಂದು, ನೀಲಗಿರಿ ಸಸಿಗಳನ್ನು ನೆಟ್ಟು ಆರೊಮ್ಯಾಟಿಕ್ಸ್ ಬೆಳೆಯುತ್ತೇನೆ ಎಂದು ಹೇಳುತ್ತಿರುವಂಥ ವ್ಯಕ್ತಿಗೆ 2,900 ಎಕರೆ ಲೀಸ್ ಅಥವಾ ಗ್ರಾಂಟ್ ಆಗಿ

(ಶ್ರೀ ಆರ್. ಗುಂಡೂರಾವ್)

ಕೊಡುವುದನ್ನು ನಾನು ಒಪ್ಪುವುದಿಲ್ಲ. ಮಾನ್ಯ ಮಂತ್ರಿಗಳು ಈ ಜಮೀನನ್ನು ಕೊಡದೇ ಹಾಗೆಯೇ ನಿಲ್ಲಿಸಬೇಕು. ಒಂದು ಗಾಡಿ ಸಿಕ್ಕಿದೆ ಹೋದರೆ ಅಥವಾ ಒಂದು ಲಾರಿ ಸಿಕ್ಕಿದೆ ಹೋದರೆ ಪ್ರಾಸಿಕ್ಯೂಟ್ ಮಾಡುತ್ತೇವೆಂದು ಹೇಳುವಾಗ ಮೂರು ಸಾವಿರ ಎಕರೆ ಜಾಗದಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕ ಟಿಂಬರ್ ಸುಟ್ಟು ಹಾಕಿರುವಾಗ ಸರ್ಕಾರ ಏನು ಮಾಡಿದೆ? ಯಾವ ಕನ್ಸರ್ವೇಟರ್ ಯಾವ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಅಥವಾ ಇನ್ನು ಬೇರೆ ಯಾರಿಗಾದರೂ ಆ ಜಾಗಕ್ಕೆ ಹೋಗುವುದಕ್ಕೆ ಏನು ಧೈರ್ಯವಿದೆ? ಸರ್ಕಾರಿ ಜಾಗದಲ್ಲಿರುವ ಮರಗಳನ್ನು ಸಾಮಾನ್ಯ ರೀತಿಯಲ್ಲಿ ಕಡಿಯುವುದಕ್ಕೆ ಆಗದೆ, ಬುಲ್‌ಡೋಜರು ತೆಗೆದುಕೊಂಡು ಹೋಗಿ ಮರವನ್ನು ಕಡಿದು ಬೆಂಕಿ ಹಚ್ಚಿದ್ದಾರೆ. ಇಂಥ ವ್ಯಕ್ತಿಗೆ ಯಾವುದೇ ತರಹ ಅನುಕೂಲವನ್ನೂ ಮಾಡಬಾರದು, ಜಮೀನು ಕೊಡುವುದಕ್ಕೆ ಯಾವುದೇ ತರಹ ಒಪ್ಪಿಗೆಯನ್ನು ಕೊಡಬಾರದೆಂದು ನಾನು ಈ ಸಂದರ್ಭದಲ್ಲಿ ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಗಂಧದ ಮರದ ಕಳ್ಳ ಸಾಗಾಣಿಕೆ ವಿಚಾರದಲ್ಲಿ ಉಗ್ರವಾದ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ ಸಾಕಷ್ಟು ರೀತಿಯಲ್ಲಿ ಕಳ್ಳ ಸಾಗಾಣಿಕೆಯನ್ನು ಹಿಡಿಯುತ್ತಿದ್ದಾರೆ. ಇದರಲ್ಲಿ ಸಹ ಒಳ್ಳೆಯ ರೀತಿಯ, ವ್ಯವಸ್ಥಿತವಾದ ರಾಕೆಟ್ ಇದೆ. ಈ ಬಗ್ಗೆ ಕೂಡ ಆಳವಾಗಿ ಹೋಗಿ ವಿಚಾರ ಮಾಡಿದರೆ ರ್‍ಯಾಕೆಟ್ ಏನು ಎನ್ನುವುದು ಗೊತ್ತಾಗುತ್ತದೆ. ಇತ್ತೀಚೆಗೆ ಕೆಲವು ಕೇಸುಗಳು ಸಿಕ್ಕಿವೆ ಅದು ಸಾಲದು. ಇನ್ನೂ ಪ್ರತಿ ದಿವಸ ಮೈಸೂರಿನಿಂದ ಗುಜರಾತ್ ಮತ್ತು ರಾಜಸ್ಥಾನಕ್ಕೆ ಲಾರಿಗಟ್ಟಲೆ ಗಂಧದ ಮರ ಹೋಗುತ್ತಿದೆ. ಇದನ್ನು ನಿಲ್ಲಿಸುವುದಕ್ಕೆ ಕ್ರಮ ಕೈಕೊಳ್ಳಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಕೂಡಗಿಯಲ್ಲಿ ದೊಡ್ಡ ವ್ಯವಸಾಯ ಮತ್ತು ವೆಟರಿನರಿ ಕಾಲೇಜನ್ನು ಮಾಡುವುದಕ್ಕೆ ಅವಕಾಶ ಇದೆ. ಹಿಂದಿನ ಕೊಡಗು ಸರ್ಕಾರವಿದ್ದಾಗ ಬಹಳ ದೊಡ್ಡ ವ್ಯವಸಾಯ ಮತ್ತು ಪಶು ಸಂಗೋಪನಾ ಕೇಂದ್ರವನ್ನು ಮಾಡಬೇಕೆಂದು ಆಲೋಚನೆ ಮಾಡಿದ್ದರು. ಮಾನ್ಯ ಸಚಿವರು ಇದರ ಬಗ್ಗೆ ಗಮನಕೊಟ್ಟು ಕೂಡಗಿಯಲ್ಲಿ ಈ ಕೇಂದ್ರವನ್ನು ಉತ್ತಮಪಡಿಸಿ, ವೆಟರಿನರಿ ಹಾಸ್ಪಿಟಲು ತೆರೆದು ಡಾಕ್ಟರುಗಳನ್ನು ನೇಮಿಸತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ನಾನು ಪ್ರಥಮವಾಗಿ ಅರಣ್ಯ ಇಲಾಖೆಯ ಬೇಡಿಕೆಯನ್ನು ಮತ್ತು ವ್ಯವಸಾಯ ಇಲಾಖೆಯ ಬೇಡಿಕೆಯನ್ನು ಕಟ್ಟುವಾಗಿ ವಿರೋಧ ಮಾಡುತ್ತ ಎರಡು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಾಡು ಮಲೆನಾಡು ಪ್ರದೇಶದಲ್ಲಿ ಹೆಚ್ಚಾಗಿರತಕ್ಕದ್ದು. ನಮ್ಮ ದುರದೃಷ್ಟಕ್ಕೆ ಕಾಡನ್ನು ರಕ್ಷಣೆ ಮಾಡುವುದಕ್ಕೆ ಕಾಡಿನ ಮಧ್ಯೆ ಬೆಳೆದು ಬಂದಂಥ ಒಬ್ಬ ಮಂತ್ರಿ ಸಿಕ್ಕಿಲ್ಲ. ಮೈದಾನ ಪ್ರದೇಶದಿಂದ ಬಂದಂಥ ಮಂತ್ರಿಗಳು ಈ ಜವಾಬ್ದಾರಿಯನ್ನು ಈಗ ತೆಗೆದುಕೊಂಡಿದ್ದಾರೆ. ಅವರ ಆಸಕ್ತಿ ಬಗ್ಗೆ ಮತ್ತು ಅವರು ಕೆಲಸಮಾಡುತ್ತಾರೆ ಎನ್ನುವ ಬಗ್ಗೆ ನನಗೆ ನಂಬಿಕೆ ಇದೆ. ಕಾಡನ್ನು ರಕ್ಷಣೆ ಮಾಡುತ್ತಾರೆಂಬ ಅಪಾರವಾದ ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆ. ಅಷ್ಟು ಮಾತ್ರಕ್ಕೆ ನಾವು ತೃಪ್ತಿಯಾಗುವ ಹಾಗೆ ಇಲ್ಲ. ಅನೇಕ ಕಡೆ ಸಂಪೂರ್ಣವಾಗಿ ಕಾಡು ನಾಶವಾಗಿದೆ. ಅದರಲ್ಲಿಯೂ ಕೂಡ ಅರಣ್ಯ ಇಲಾಖೆಯ ಯೋಜನೆಯೇ ಮುಖ್ಯವಾಗಿ ಈ ಕಾಡಿನ ಸರ್ವನಾಶಕ್ಕೆ ಕಾರಣವಾಗಿದೆ ಎನ್ನುವುದನ್ನು ವಿಷಾದದಿಂದ ನಾವು ಹೇಳಿಕೊಳ್ಳಬೇಕಾಗಿದೆ.

3-00 P.M.

ನಿಮ್ಮ ಯೋಜನೆಯಲ್ಲಿ ವರ್ಕಿಂಗ್ ಪ್ಲಾನ್ ಎಂದು ಮಾಡಿಕೊಂಡು ಇರತಕ್ಕ ಕಾಡನ್ನು ಕಡಿದು ಮತ್ತು ಆ ಪ್ರದೇಶದಲ್ಲಿ ಹೊಸದಾಗಿ ಕಾಡನ್ನು ಬೆಳೆಸಬೇಕು ಎಂದು ಯೋಜನೆ ಇಟ್ಟುಕೊಂಡಿದ್ದೀರಿ. ಆ ಯೋಜನೆಯ ಪ್ರಕಾರ 100 ಎಕರೆಗೆ ಕಾಡನ್ನು ಕಡಿಯುವುದಕ್ಕೆ ಅನುಮತಿ ಕೊಟ್ಟರೆ ಡಿ.ಎಫ್.ಒ. ಮತ್ತು ರೇಂಜ್ ಆಫೀಸರ್ ಷರೀಕಾಗಿ 100 ಎಕರೆ ಪ್ರದೇಶ ಇರುವ ಕಾಡನ್ನು ನಾಶ ಮಾಡಿ, 50 ಎಕರೆಯಲ್ಲಿ ಹೊಸದಾಗಿ ಗಿಡವನ್ನು ಹಾಕುತ್ತಾರೆ. ಕಳೆದ ಐದು ವರ್ಷಗಳಿಂದ ಯಾವ ಯಾವ ರೇಂಜ್ ಆಫೀಸರಿಗೆ ಎಷ್ಟೆಷ್ಟು ಕಾಡನ್ನು ಬೆಳೆಸುವುದಕ್ಕೆ ಹಣ ಕೊಟ್ಟಿದ್ದೀರಿ, ಎಷ್ಟು ಎಕರೆ ಬೆಳೆದಿದ್ದಾರೆ, ಎಷ್ಟು ಎಕರೆ ಉಳಿದಿದೆ ಎಂದು ರೇಂಜ್ ಆಫೀಸರಿಂದ ವರದಿ ತರಿಸಿಕೊಳ್ಳಿ. ನನಗೆ ತಿಳಿದಿರುವಂತೆ ಶೇಕಡ 70 ಭಾಗ ಕಾಡು ಉಳಿದಿರಬಹುದು. ಕಳೆದ 15 ವರ್ಷಗಳ ಅಂಕಿ ಅಂಶದ ಪ್ರಕಾರ ಸುಮಾರು

10 ಸಾವಿರ ಎಕರೆ ಮೇಲೆ ಹೊಸ ಗಿಡಗಳನ್ನು ಹಾಕುವುದಕ್ಕೆ ಹಣ ಕೊಟ್ಟಿದ್ದಾರೆ, ಇವತ್ತು ಅಲ್ಲಿ ಎರಡು ಸಾವಿರ ಎಕರೆ ಕಾಡು ಕೂಡ ಬೆಳೆಸಿಲ್ಲ. ಒಬ್ಬೊಬ್ಬ ರೇಂಜರು 10-20 ಸಾವಿರ ಹೊಸ ಗಿಡಗಳನ್ನು ನೆಡುವ ಹೆಸರಿನಲ್ಲಿ ಸಂಪಾದನೆ ಮಾಡಿದ್ದಾರೆ. ತಾವು ವಿಶೇಷ ಅಧಿಕಾರಿಯನ್ನು ನೇಮಿಸಿ ಎಷ್ಟೆಷ್ಟು ದೊಡ್ಡ ದೊಡ್ಡ ಕಾಡನ್ನು ಕಡಿಸಿ ಎಷ್ಟೆಷ್ಟು ಹೊಸ ಗಿಡಗಳನ್ನು ಬೆಳೆಸುವ ಪ್ರದೇಶವನ್ನು ಮಾಡಿದ್ದಾರೆ, ಎಷ್ಟು ಗಿಡಗಳು ಉಳಿದಿವೆ, ಖರ್ಚು ಮಾಡಿರುವ ಹಣ ಎಷ್ಟು ಎಂಬುದನ್ನು ಪರಿಶೀಲನೆ ಮಾಡಿ ಅವರಿಂದ ವರದಿ ತರಿಸಿಕೊಂಡರೆ, ನಿಜವಾದ ವಿಚಾರ ಗೊತ್ತಾಗುತ್ತದೆ ಎಂದು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರುವುದಕ್ಕೆ ಇಚ್ಛೆಪಡುತ್ತೇನೆ. ಅರಣ್ಯ ಪ್ರದೇಶದಲ್ಲಿ ಸಾಗುವಳಿಗೆ ಯೋಗ್ಯವಾಗಿರತಕ್ಕ ಪ್ರದೇಶವನ್ನು ಸಾಗುವಳಿಗೆ ಕೊಡುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ. ತಾವು ಕೊಟ್ಟಿರತಕ್ಕ ಅಂಕಿ ಅಂಶದ ಪ್ರಕಾರ ನಮ್ಮಲ್ಲಿ ಇರತಕ್ಕ ಕಾಡು ಶೇಕಡ 18ರಷ್ಟು ಮಾತ್ರ ಇದೆ. ಇವರಲ್ಲಿ ಸಾಗುವಳಿಗೆ ಬರತಕ್ಕ ತರೀ ಜಮೀನು ಯಾವುದು ಇದೆ, ಅದರಲ್ಲಿ ಪ್ರಮಾಣಿಕವಾಗಿ ಒಳ್ಳೆಯ ಕಾಡನ್ನು ಬೆಳೆಸುವುದಕ್ಕಾಗುವುದಿಲ್ಲ. ಅದು ಜಲದಿಂದ ಕೂಡಿರುವ ತಗ್ಗು ಪ್ರದೇಶ ಇರುವುದರಿಂದ ಅಂಥ ಕಡೆ ಕಾಡನ್ನು ಬೆಳೆಸುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ಖುದ್ದು ಪರಿಶೀಲನೆ ನಡೆಸಿ ಸಾಗುವಳಿಗೆ ಯಾವ ಜಮೀನು ಯೋಗ್ಯವಾಗಿದೆ ಎಂದು ನೋಡಿ ಅದನ್ನು ಬಿಡುಗಡೆ ಮಾಡುವುದಕ್ಕೆ ಹಿಂದು ಮುಂದು ನೋಡಬಾರದು. ಹಿಂದಿನ ಸರ್ಕಾರ ಕೂಡ ಒಂದು ತೀರ್ಮಾನ ಕೈಕೊಂಡು ಅನೇಕ ಜಮೀನುಗಳನ್ನು ಬಿಡುಗಡೆ ಮಾಡುವುದಕ್ಕೆ ಆಜ್ಞೆ ಮಾಡಿ ಫೈನಲ್ ಡಿಸಫಾರಸ್ಟೇಷನ್ ನೋಟಿಫಿಕೇಷನ್ ಹಾಗುವ ಸಂದರ್ಭ ಇತ್ತು. ಅದನ್ನು ತಾವು ತಡೆ ಹಿಡಿದಿದ್ದೀರಿ ಎಂದು ಕೇಳಿದ್ದೇನೆ. ಅದನ್ನು ತಡೆಹಿಡಿಯದೆ ಫೈನಲ್ ನೋಟಿಫಿಕೇಷನ್ ಅನ್ನು ತಾವು ಹೊರಡಿಸಬೇಕೆಂದು ತಮ್ಮನ್ನು ಕೇಳುತ್ತೇನೆ. ಜೊತೆಗೆ ಕಾಡಿನಲ್ಲಿ ಅತಿಕ್ರಮಣ ನಡೆದಿದೆ. ಸಣ್ಣ ಪುಟ್ಟ ಜನರು ಅತಿಕ್ರಮಣ ಮಾಡಿದರೆ ಅವರಿಗೆ ಸಾಕಷ್ಟು ಹಿಂಸೆ ಕೊಡುತ್ತಾರೆ. ದೊಡ್ಡವರು ಅತಿಕ್ರಮಣ ಮಾಡಿದರೆ ಅವರ ಮೇಲೆ ತಮ್ಮ ಕಣ್ಣು ಬೀಳುವುದಿಲ್ಲ. ಅವರನ್ನು ಶಿಕ್ಷೆಗೆ ಗುರಿ ಪಡಿಸಿಲ್ಲ. ಅಂಥ ಕೆಲವು ಉದಾಹರಣೆಯನ್ನು ಕೊಡುತ್ತೇನೆ. ನರಸಿಂಹರಾಜಪುರ ತಾಲ್ಲೂಕಿನಲ್ಲಿ ವರ್ಗೀಸ್, ಕುಡಗಲು ಮನೆ ಹತ್ತಿರ ಆಗಸ್ಟೀನ್, ಶೃಂಗೇರಿಯ ಹತ್ತಿರ ಶ್ರೀಕಂಠ ಭಟ್ಟ, ಹಲ್ಲೂಕು ಭಟ್ಟ ಇವರು ದೊಡ್ಡ ಪ್ರಮಾಣದಲ್ಲಿ ಅತಿಕ್ರಮಣ ಪ್ರವೇಶಮಾಡಿ ಶ್ರೀಗಂಧದ ಕಾಡನ್ನು ಲೂಟಿ ಹೊಡೆದಿದ್ದಾರೆ. ಅವರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳಬೇಕು. ಉದಾಹರಣೆಗೋಸ್ಕರ ಇದನ್ನು ಕೊಟ್ಟಿದ್ದೇನೆ. ಹಿಂದಿನ ಸರ್ಕಾರ ಉದಾರಣೆಯನ್ನು ತೋರಿಸಿ ಮೆದು ಮರಗಳನ್ನು ದೊಡ್ಡ ಕಂಪನಿಗಳವರಿಗೆ ಕೊಟ್ಟಿದ್ದಾರೆ. ಕೆಲವು ಕಂಪನಿಗಳು ಮಾತ್ರ ಈ ರಾಜ್ಯದಲ್ಲಿ ಕಾರ್ಖಾನೆಗಳನ್ನು ಹೊಂದಿವೆ. ಇನ್ನು ಕೆಲವು ಕಂಪನಿಗಳು ಈ ರಾಜ್ಯದಲ್ಲಿ ಯಾವುದೇ ತರಹ ಕಾರ್ಖಾನೆಗಳನ್ನು ಹೊಂದಿಲ್ಲ. ಇವರಿಗೆ ಕೊಡತಕ್ಕ ಮರವನ್ನು ನೋಡಿದರೆ ದಿಗ್ಭ್ರಮೆಯಾಗುತ್ತದೆ. ನನಗೆ ತಿಳಿದ ಪ್ರಕಾರ ಹೆಚ್ಚು ಕಡಿಮೆ ಸರ್ಕಾರದ ತಲೆಯಮೇಲೆ ಕೂತುಕೊಂಡು ಆರ್ಡರ್ ಬರೆಸುವ ಮಟ್ಟಿಗೆ ಆ ಕಂಪನಿಗಳು ಹೋಗುತ್ತವೆ. ಅವರನ್ನು ನೋಡಿದರೆ ಸರ್ಕಾರದವರು ಹೆದರುತ್ತಾರೆ. ಏಕೆಂದರೆ ಚುನಾವಣೆಯ ಕಾಲದಲ್ಲಿ ಇವರ ಪಕ್ಷಕ್ಕೆ ಸಹಾಯ ಮಾಡಿದ ಉದಾಹರಣೆ ಗೊತ್ತಿದೆ. ಅವರನ್ನು ತಡೆಹಿಡಿಯಬೇಕು. ನಿಜವಾಗಿ ಪ್ರಮಾಣಿಕವಾಗಿ ಮಾರ್ಕೆಟ್ಟಿನಲ್ಲಿ ಒಳ್ಳೆಯ ದರ ಇದ್ದರೆ ಕಡಿಮೆ ದರದಲ್ಲಿ ಲಕ್ಷಾಂತರ ರೂಪಾಯಿ ಮರವನ್ನು ಅವರಿಗೆ ಕೊಟ್ಟಿದ್ದಾರೆ. ಯಾವ ಕಂಪನಿ ರಾಜ್ಯದಲ್ಲಿ ಕಾರ್ಖಾನೆ ಹೊಂದಿಲ್ಲ, ಅವರಿಗೆ ಮರ ಕೊಡಬೇಕಾದ ಅಗತ್ಯವಿಲ್ಲ. ನಮ್ಮ ಮರ ಹಾಳಾಗುತ್ತದೆ ಎಂದು ಭಾವಿಸಬೇಡಿ. ನಮ್ಮಲ್ಲಿ ಬೆಳೆಯುತಕ್ಕ ಮರವನ್ನು ಯಾರು ಬೇಕಾದರೂ ಉಪಯೋಗಮಾಡಿಕೊಳ್ಳುತ್ತಾರೆ. ನಮ್ಮ ರಾಜ್ಯದಲ್ಲಿ ಕಾರ್ಖಾನೆ ನಡೆಸುವವರಿಗೆ ಕೊಟ್ಟರೆ ನಮ್ಮಲ್ಲಿ ಕಾರ್ಖಾನೆಗಳನ್ನು ಜಾಸ್ತಿ ಮಾಡಿದಂತಾಗುತ್ತದೆ. ಮತ್ತು ಅಲ್ಲಿ ಉದ್ಯೋಗ ಜಾಸ್ತಿಮಾಡಿದಂತಾಗುತ್ತದೆ. ವಿಮ್‌ಕೋ ಕಂಪನಿ ಯಾವುದೇ ಕಾರ್ಖಾನೆಯನ್ನು ನಮ್ಮ ರಾಜ್ಯದಲ್ಲಿ ಹೊಂದಿಲ್ಲ. ಕೇರಳ ರಾಜ್ಯದಲ್ಲಿ ಬಲಿಯಪಟ್ಟದಲ್ಲಿ ಕಾರ್ಖಾನೆಯನ್ನು ಹೊಂದಿದ್ದಾರೆ. ವಿಮ್‌ಕೋ ಕಂಪನಿ ಅವರು ರಾಜ್ಯದ ಹೊರಗೆ ಮರ ಸಾಗಿಸಿಕೊಂಡು ಹೋಗುತ್ತಾರೆ. ಅವರಿಗೆ ಕೊಟ್ಟಿರತಕ್ಕ ಮರಗಳನ್ನು ಬೇರೆ ಕಡೆಗೆ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ನಿಜವಾಗಿ ಅವರ ಕಾರ್ಖಾನೆಯಲ್ಲಿ ಉಪಯೋಗ ಮಾಡುತ್ತಿದ್ದಾರೆಯೇ ಎಂದು ಯಾರು ನೋಡಿದ್ದಾರೆ? ಅಷ್ಟು ಪ್ರಮಾಣದಲ್ಲಿ ಅವರಿಗೆ ಮರ ಕೊಡತಕ್ಕ ಅಗತ್ಯ ಏನು ಇದೆ ನಮ್ಮ ರಾಜ್ಯದಲ್ಲಿ ಮರಗಳಿಗೆ ಬೇಡಿಕೆ ಇಲ್ಲವೇ ! ಸಣ್ಣಪುಟ್ಟ ಪ್ಯಾಕಿಂಗ್ ಕೇಸ್ ಮಾಡತಕ್ಕವರು, ಮ್ಯಾಚ್‌ಸ್ಟಿಕ್ಸ್ ಮಾಡತಕ್ಕ ಬೇಕಾದಷ್ಟು ಸಣ್ಣಪುಟ್ಟ ಕೈಗಾರಿಕೆಗಳು ನಮಗೆ ಮರ ಕೊಡಿ ಎಂದು ಕೇಳುವಾಗ, ಅವರಿಗೆ ಕೊಡುತ್ತಾ ಇಲ್ಲ. ದೊಡ್ಡ ಉದ್ದಿಮೆದಾರರಿಗೆ, ಮುಂಬೈಯಲ್ಲಿ ಕಾರ್ಖಾನೆ ಇಟ್ಟುಕೊಂಡು ಲಕ್ಷಾಂತರ ರೂಪಾಯಿ ಮರ ಸಾಗಿಸಿಕೊಂಡು ಹೋಗಿ ಎರಡು ರೂಪಾಯಿಯಂತೆ ಕೊಟ್ಟ ಮರವನ್ನು 5-10 ರೂಪಾಯಿಗಳವರೆಗೂ ಮಾಡಿಕೊಂಡಿರುವ ನಿದರ್ಶನಗಳು ಇವೆ. ವಿಮ್‌ಕೋ ಕಂಪನಿ ಮತ್ತು ಇನ್ನೊಂದು ಕಂಪನಿಯವರು ರಾಜ್ಯದ ಹೊರಗಡೆ ಮರಗಳನ್ನು ಸಾಗಿಸಿಕೊಂಡು

(ಶ್ರೀ ಕಾಗೋಡು ತಿಮ್ಮಪ್ಪ)

ಹೋಗುತ್ತಿದ್ದಾರೆ. ಇದನ್ನು ಸರ್ಕಾರದವರು ತಡೆಹಿಡಿಯಬೇಕು. ದೊಡ್ಡ ಕಂಪನಿಗಳಿಗೆ ಮರ ಕಡಿಯುವುದಕ್ಕೆ ಅವಕಾಶ ಕೊಟ್ಟರೆ, ಅವರು ಕಡಿಯತಕ್ಕ ಮರಗಳ ಲಾಪ್ಸ್ ಮತ್ತು ಟಾಪ್ಸ್ ಅಲ್ಲಿಯೇ ಬಿಡುತ್ತಾರೆ. ಅವನ್ನು ಯಾರೂ ತೆಗೆದುಕೊಂಡು ಹೋಗಬೇಕು ? ಅಲ್ಲಿಯೇ ಬಿಟ್ಟು ಹೋಗಿರತಕ್ಕ ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕ ಈ ಲಾಪ್ಸ್ ಮತ್ತು ಟಾಪ್ಸ್ ಅನ್ನು ಇವತ್ತಿನ ವರೆಗೂ ಯಾರಿಗೂ ಕೊಟ್ಟಿಲ್ಲ. ಒಂದು ಮರ ಕಡಿದಾಗ 200 ಅಡಿ ಸುತ್ತಮುತ್ತ ಪ್ರದೇಶದ ಕಾಡನ್ನು ನಾಶ ಮಾಡುತ್ತಾರೆ. ಇದರಿಂದ ಕಾಡು ದೊಡ್ಡ ಪ್ರಮಾಣದಲ್ಲಿ ನಾಶವಾಗುತ್ತಿದೆ. ತಾವು ಖುದ್ದಾಗಿ ಬಂದು ನೋಡಿದರೆ ಎಷ್ಟರಮಟ್ಟಿಗೆ ಕಾಡನ್ನು ನಾಶಮಾಡಿದ್ದಾರೆಂದು ಗೊತ್ತಾಗುತ್ತದೆ. ಲಾಗ್ಸ್ ಮತ್ತು ಟಾಪ್ಸ್ ಅನ್ನು ಏತಕ್ಕೆ ವಿತರಣೆ ಮಾಡುವುದಿಲ್ಲ ? ಸಾಗರ ಪ್ರದೇಶದಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿದೆ. ಇದನ್ನು ಕೇಳಿದರೆ ಯಾರಿಗೂ ಕೊಡುವುದಿಲ್ಲ. ದೊಡ್ಡ ಕಂಪನಿಗಳವರಿಗೆ ಯಾವ ದರದಲ್ಲಿ ಕೊಡುತ್ತೀರೋ ಅದೇ ದರದಲ್ಲಿ ಎಲ್ಲರಿಗೂ ಕೊಡಬೇಕು ಎಂದು ಹೇಳುತ್ತೇನೆ. ಈ ದೊಡ್ಡ ಕಂಪನಿಗಳವರು ರೌಂಡ್ಸ್ ಲ್ಯಾಗ್ಸ್ ತೆಗೆಯುತ್ತಾರೆ, ಅದೇ ದರದಲ್ಲಿ ಲಾಪ್ಸ್ ಮತ್ತು ಟಾಪ್ಸ್ ವಿತರಣೆ ಮಾಡುವುದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಸಂಪಾದನೆಯಾಗುತ್ತದೆ. ಇದು ಅನಾವಶ್ಯಕವಾಗಿ ಕೊಳೆತು ಹಾಳಾಗುತ್ತದೆ. ಆದ್ದರಿಂದ ಸಣ್ಣ ಉದ್ದಿಮೆದಾರರಿಗೆ ಇದನ್ನು ವಿತರಣೆ ಮಾಡಿ ಅವರಿಗೆ ಪ್ರಯೋಜನವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ನಮ್ಮ ಶಿಕಾರಿಪುರದಲ್ಲಿ ಶ್ರೀಗಂಧದ ಕಳ್ಳಸಾಗಾಣಿಕೆಯನ್ನು ಪತ್ತೆ ಹಚ್ಚುವುದಕ್ಕೆ ಒಬ್ಬ ಅಧಿಕಾರಿಯನ್ನು ಕಳುಹಿಸಿದ್ದಾರೆ. ಮಾನ್ಯ ದೇವೇಗೌಡರು ಹೇಳಿದ ಹಾಗೆ ಕಳ್ಳನನ್ನು ಹಿಡಿಯುವುದಕ್ಕೆ ದೊಡ್ಡ ಕಳ್ಳನನ್ನು ಕಳುಹಿಸಿದ್ದಾರೆ. ಹಿಂದಿನ ಅರಣ್ಯಮಂತ್ರಿಗಳು ಅವರಿಗೆ ಒಂದು ಷೋಕಾಸ್ ನೋಟೀಸ್ ಕೊಟ್ಟಿದ್ದು ಸರ್ಕಾರದ ಫೈಲಿನಲ್ಲಿದೆ. ಇವರು ಹುದ್ದೆಯಲ್ಲಿದ್ದಾಗ ನಡೆಸಿರತಕ್ಕ ಅಕ್ರಮಗಳು ಇವೆ.

ಶ್ರೀ ಕೆ. ಎಚ್. ಪಾಟೀಲ್.—ಅಧಿಕಾರಿಗಳ ವಿಚಾರ ಮಾತನಾಡಿ ಸಂತೋಷಪಡಬೇಕಾದರೆ ನನ್ನ ಅಡ್ಡಿ ಇಲ್ಲ. ಆ ಅಧಿಕಾರಿಯನ್ನು ಕಳುಹಿಸಿರುವುದು ಮೆಷರ್ ಮಾಡುವುದಕ್ಕೆ. ಅದನ್ನು ನಾವು ನೀವು ಹೋಗಿ ಮಾಡುವುದಕ್ಕಾಗುವುದಿಲ್ಲ ಅಥವಾ ಸೆಕ್ರೆಟರಿಯನ್ನು ಕಳುಹಿಸಿ ಮಾಡಿಸುವುದಕ್ಕಾಗುವುದಿಲ್ಲ. ಇದರ ಬಗ್ಗೆ ರಿಪೋರ್ಟು ಮಾಡುವುದಕ್ಕೆ ಕಳುಹಿಸಿದ್ದೇನೆ, ಆ ರಿಪೋರ್ಟಿನ ಮೇಲೆ ಯಾವ ತರಹ ಎನ್‌ಕ್ವೈರಿ ಮಾಡಬೇಕು ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ. ಯಾರಿಗೂ ಏನೂ ಎನ್‌ಟ್ರಸ್ಟ್ ಮಾಡಿಲ್ಲ. ಈ ವಿಷಯದಲ್ಲಿ ದೂಷಿಸುವುದಕ್ಕಿಂತ ಮೊದಲು ತಿಳಿದು ಮಾತನಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ನಾಲ್ಕು ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಶ್ರೀಗಂಧದ ಮರಗಳನ್ನು ಶೇಖರಣೆ ಮಾಡಿದ್ದಾರೆಂದು ವರದಿ ಕೊಟ್ಟಿದ್ದಾರೆ. ಹೊಸನಗರದಲ್ಲಿ ಆ ಪ್ರಕರಣ ಹಿಡಿದಿದ್ದಾರೆಂದು ಇದೇ ಸದನದಲ್ಲಿ ಹೇಳಿದ್ದಾರೆ ಆದರೆ, ಅದನ್ನು ಆಕ್ಷನ್ ಮುಖಾಂತರ ವಿತರಣೆ ಮಾಡಿದಾಗ 30,000 ರೂಪಾಯಿಗಳು ಬಂದಿವೆ. ಉಳಿದದ್ದು ಎಲ್ಲಿ ಹೋಯಿತು ?

ಶ್ರೀ ಕೆ. ಎಚ್. ಪಾಟೀಲ್.—ವಿತರಣೆ ಪೂರ್ತಿಯಾಗಿಲ್ಲ. ಬೆಲೆ ಬಾಳುವ ಮರ ಇದ್ದರೂ, ಕಡಿಮೆ ಬೆಲೆಗೆ ಕೇಳಿದ್ದರಿಂದ ಆಕ್ಷನ್ ಕ್ಯಾನ್ಸಲ್ ಮಾಡಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಡಿಮೆ ಬೆಲೆಗೆ ಕೇಳಿರುವುದಕ್ಕೆ ಅಧಿಕಾರಿಗಳ ಕುಮ್ಮಕ್ಕು ಇದೆ ಎಂದು ನನಗೆ ತಿಳಿದುಬಂದಿದೆ.

ಸರ್ಕಾರಕ್ಕೆ ವರದಿ ಕೊಡುವಾಗ ಉದ್ದೇಶ ಇದೆ. ಅವರು ಒಂದು ಸಾರಿ ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ಆಗಬೇಕೆಂಬ ಆಕಾಂಕ್ಷೆ ಇರುವುದರಿಂದ, ಸರ್ಕಾರದ ಮನಸ್ಸನ್ನು ಹೆಚ್ಚು ಒಲಿಸಿಕೊಳ್ಳುವ ದೃಷ್ಟಿಯಿಂದ ಅಂಥ ವರದಿಕೊಡುವುದಕ್ಕೆ ಸಾಧ್ಯ.

ಶ್ರೀ ಕೆ. ಎಚ್. ಪಾಟೀಲ್.—ಕೆಳಮಟ್ಟದಲ್ಲಿ ಸರ್ಕಾರದ ಮನಸ್ಸನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಗಂಧದ ಮರವನ್ನು ಕಡಿದು ಸ್ಥಳದಲ್ಲಿ ಇರತಕ್ಕ ಲೇಬರರ್ಸ್‌ನ್ನು ಮಾತ್ರ ಹಿಡಿದಿದ್ದಾರೆ. ನಮಗೆ ಗೊತ್ತಿದೆ, ಹುಬ್ಬಳ್ಳಿ ಪ್ರದೇಶದಲ್ಲಿ ಗಂಧ ಸಾಗಾಣಿಕೆ ಮಾಡುವ ಒಬ್ಬ ಪ್ರಮುಖ ವ್ಯಾಪಾರಿ ಇದ್ದಾರೆ, ಅವರನ್ನು ಶೋಧನೆ ಮಾಡುವುದಕ್ಕೆ ಪ್ರಯತ್ನ ಪಟ್ಟಿಲ್ಲ, ಬಿಟ್ಟಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಅಂಥವನು ಇದ್ದಾನೆಂದು ಅಧಿಕಾರಿ ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಗಂಧದ ಕಳ್ಳಸಾಗಾಣಿಕೆ ಮಾಡುವಂಥ ದೊಡ್ಡ ಗ್ಯಾಂಗ್ ಇದೆ. ಅವರನ್ನು ಬಲಹಾಕದೆ ಹೋದರೆ, ಶ್ರೀಗಂಧದ ಕಳ್ಳಸಾಗಾಣಿಕೆ ತಡೆಯುವುದಕ್ಕೆ ಆಗುವುದಿಲ್ಲ. ಒಂದು ಲಾರಿಗೆ 2—2 ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಇಟ್ಟುಕೊಂಡು ಲಾರಿಯಲ್ಲಿ ಕಳ್ಳಸಾಗಾಣಿಕೆ ಮಾಡುತ್ತಾರೆ. ಮೇಲ್‌ಮಟ್ಟದಲ್ಲಿ ಯಾರು ಕಳ್ಳಸಾಗಾಣಿಕೆ ಮಾಡುತ್ತಾರೆ, ಅವರನ್ನು ಪತ್ತೆ ಹಚ್ಚಿ ಶೋಧನೆ ಮಾಡಬೇಕು, ನಮ್ಮ ಊರಿನಲ್ಲಿ ಅಜುಬಾಜುನಲ್ಲಿ ಒಂದು ಗಂಧದ ಮರವೂ ಉಳಿದಿಲ್ಲ ಎಲ್ಲಾ ನಿರ್ನಾಮವಾಗಿ ಹೋಯಿತು. ಆದುದರಿಂದ ಸಂಕಟದಿಂದ ಹೇಳಬೇಕಾಗಿದೆ. ಸ್ವಾಮಿ ಇನ್ನು ಮಲೆನಾಡಿಗೆ ಒಂದು ವಿಶೇಷ ಸೌಕರ್ಯ ಹಿಂದೆ ಒಂದು ಕಾಲದಲ್ಲಿ ಇತ್ತು. ಎಂ. ಆರ್. ಪಿ. ಲೈಸೆನ್ಸ್ ಮೂಲಕ ವ್ಯವಸಾಯಗಾರರು ರಿಯಾಯಿತಿ ದರದಲ್ಲಿ ಮರಗಳನ್ನು ಪಡೆದು ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶವಿತ್ತು. ಹೊಸದಾಗಿ ಫಾರೆಸ್ಟ್ ಆಕ್ಟ್ ತಂದು ಈ ಮೂಲಭೂತವಾದ ಹಕ್ಕನ್ನು ನಾಶಪಡಿಸಿದರು. ಬೇರೆ ತರಹದಲ್ಲಿ ಏನಾದರೂ ಸಹಾಯ ಮಾಡುತ್ತೇವೆ ಎಂದು ಸರ್ಕಾರದವರು ಭರವಸೆ ಕೊಟ್ಟಿದ್ದಾರೆ. ಅದನ್ನು ಇವತ್ತಿನವರೆಗೂ ಕಾರ್ಯಗತ ಮಾಡಿಲ್ಲ. ಎಂ. ಆರ್. ಪಿ. ಇದ್ದಂಥ ಕಾಲದಲ್ಲಿ, ಕೆಲವು ದುರುಪಯೋಗ ಆದಂಥ ಘಟನೆಗಳು ನಡೆದಿದ್ದುವು ಮಲೆನಾಡು ಪ್ರದೇಶದಲ್ಲಿ ಇರತಕ್ಕ ಜನರಿಗೆ ನೂರಾರು ವರ್ಷಗಳಿಂದ ಇದ್ದಂಥ ಸೌಕರ್ಯವನ್ನು ಸರ್ಕಾರದವರು ಹಠಾತ್ತನೆ ಕಿತ್ತುಕೊಂಡರೆ ಅದರಿಂದ ಹೆಚ್ಚು ವ್ಯಥೆಯಾಗುತ್ತದೆ, ವಿಷಾದವಾಗುತ್ತದೆ. ಆದ್ದರಿಂದ ಸರ್ಕಾರ ಆದರೂ ಕೂಡ ಮಲೆನಾಡು ಪ್ರದೇಶದ ಒಂದೆರಡು ಜಿಲ್ಲೆಗಳಲ್ಲಿ ಹಿಂದೆ ಇದ್ದಂಥ ಎಂ. ಆರ್. ಪಿ. ಲೈಸೆನ್ಸ್ ಕೊಡಬೇಕು. ವ್ಯವಸಾಯಗಾರರು ಮನೆ ಕಟ್ಟುವ ಸಂದರ್ಭದಲ್ಲಿ ನಾಟವನ್ನು ಒಂದು ಗೊತ್ತಾದ ದರದಲ್ಲಿ ಕೊಡುವುದಕ್ಕೆ ಆಲೋಚನೆ ಮಾಡಬೇಕು. ಯಾವ ತಪ್ಪು ಮಾಡದೆ ಇದ್ದಂಥ ಮಲೆನಾಡು ವ್ಯವಸಾಯಗಾರರು ಅವರಿಗೆ ಇದ್ದಂಥ ಸೌಕರ್ಯವನ್ನು ಕಳೆದುಕೊಂಡಿದ್ದಾರೆ. ಅವರ ಪ್ರತಿನಿಧಿಗಳು ಯಾರಾದರೂ ಮಂತ್ರಿಗಳ ಸ್ಥಾನದಲ್ಲಿ ಇದ್ದಿದ್ದರೆ ಇಂಥ ದುರ್ದಶೆ ಮಲೆನಾಡು ಪ್ರದೇಶದಲ್ಲಿ ಇರತಕ್ಕ ಜನರಿಗೆ ಬರುತ್ತಾ ಇರಲಿಲ್ಲ. ಆದುದರಿಂದ ಸರ್ಕಾರ ಇದನ್ನು ಪುನರ್‌ಪರಿಶೀಲನೆಮಾಡಿ ಮಲೆನಾಡಿನ ಜನರಿಗೆ ಯಾವುದಾದರೂ ಗೊತ್ತಾದ ಪ್ರಮಾಣದಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಉಚಿತವಾಗಿ ನಾಟವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಜೊತೆಗೆ ತಮ್ಮ ಇಲಾಖೆಯಲ್ಲಿ ಅಧಿಕಾರಿಗಳು ಸಾಕಷ್ಟು ಪ್ರಮಾಣದಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಹಣ ಸಂಪಾದನೆ ಮಾಡಿಕೊಂಡಿದ್ದಾರೆ. ಅದರಲ್ಲಿ 3 ಜನ ಡಿ. ಎಫ್. ಓ. ರವರನ್ನು ಸಸ್ಪೆಂಡ್ ಮಾಡಿದ್ದೀರಿ. ಅದರಲ್ಲಿ ಒಬ್ಬ ಕದೀಮ ಇದ್ದಾರೆ ಅವರ ಇತಿಹಾಸ ಕೇಳಿದ್ದೇನೆ. ಒಂದು ಕೋಟಿ ರೂಪಾಯಿಗಳಷ್ಟು ಶ್ರೀಗಂಧದ ಕಳ್ಳಸಾಗಾಣಿಕೆ ಮಾಡುವುದಕ್ಕೆ ಅವರೇ ಮುಖ್ಯಸ್ಥರು. ತಮ್ಮ ಮಕ್ಕಳ ಹೆಸರಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ರಿಸರ್ವ್ ಮಾಡಿದ್ದಾರೆ. ಅವರು ಬೆಂಗಳೂರು ನಗರದಲ್ಲಿ ಸುಮಾರು 10 ಲಕ್ಷ ಬೆಲೆ ಬಾಳುವ ಮನೆಗಳನ್ನು ಕಟ್ಟಿದ್ದಾರೆ ಇಷ್ಟು ಸಂಪಾದನೆ ಮಾಡುವುದಕ್ಕೆ ಹೇಗೆ ಸಾಧ್ಯವಾಯಿತು ಇದೇ ರೀತಿ ಅಬ್ದುಲ್ ಷರೀಫ್ ಅವರು ಸಹ ಸಂಪಾದನೆ ಮಾಡಿದ್ದಾರೆ. ಇನ್ನೂ ಬೇಕಾದಷ್ಟು ಜನ ಇಲಾಖೆಯಲ್ಲಿ ಇದ್ದಾರೆ. ಅವರನ್ನು ಬಯಲಿಗೆ ಎಳೆದು ಅವರನ್ನು ಶಿಸ್ತಿನ ಕ್ರಮಕ್ಕೆ ಒಳಪಡಿಸಬೇಕು. ನಾಮಕಾವಸ್ತೆ 3 ಜನ ಸಸ್ಪೆಂಡ್ ಮಾಡಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—3 ಮಂದಿ ಸಸ್ಪೆಂಡ್ ಮಾಡಿದ್ದೇವೆ.

[MR. DEPUTY SPEAKER in the Chair]

ಶ್ರೀ ಕಾಗೋಡು ತಿಮ್ಮಪ್ಪ.—ಇವರು ಕೇವಲ ಮೂರು ಜನ ಅಲ್ಲ.

ಶ್ರೀ ಕೆ. ಎಚ್. ಪಾಟೀಲ್.— ಟೀಕೆ ಮಾಡುವುದು ಮಾಡಿರಿ ಯಾತಕ್ಕೆ ನಾಮಕಾವಸ್ತೆ ಸಸ್ಪೆಂಡ್ ಮಾಡುತ್ತಾರೆ?

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರಕ್ಕೆ ಇಷ್ಟು ನಷ್ಟ ಆಗಿರಬೇಕಾದರೆ ಅರಣ್ಯ ಸಂಪತ್ತು ಇಷ್ಟೊಂದು ನಷ್ಟ ಹೊಂದಿರಬೇಕಾದರೆ ಇದಕ್ಕೆ ಜವಾಬ್ದಾರಿ ಅಧಿಕಾರಿಗಳು ಮುಖ್ಯವಾಗಿ ಕಾರಣಕರ್ತರು. ಇವರು ಸರಿಯಾಗಿ ಇದ್ದಿದ್ದರೆ ಬಹುಶಃ ಇಷ್ಟೊಂದು ನಡೆಯುತ್ತಾ ಇರಲಿಲ್ಲ. ಯಾವುದಾದರೂ ಡಿ.ಎಫ್.ಓ. ವಾಪಸ್ ಬರುವಾಗ ಎರಡುವರೆ ಮೂರು ಲಕ್ಷ ರೂಪಾಯಿ ಸಂಪಾದನೆ ಮಾಡಿರುತ್ತಾರೆ. ಡಿ.ಎಫ್.ಓ. ಹೋದಾಗ ಮನೆ ಕಟ್ಟದೆ ಇರುತ್ತಾರೆಯೇ ತೋರಿಸಿಕೊಡಿ! ಆದುದರಿಂದ ತಮ್ಮ ಇಲಾಖೆಯಲ್ಲಿ ಅಕ್ರಮವಾಗಿ ಸಂಪಾದನೆ ಮಾಡಿಕೊಂಡಿರುವಂಥ ಅಧಿಕಾರಿಗಳು ಸಾಕಷ್ಟು ಪ್ರಮಾಣದಲ್ಲಿ ಇದ್ದಾರೆ. ಇಲ್ಲಿಯವರೆಗೆ ಶಿಕ್ಷೆ ಮಾಡದೆ ಇರುವ ಕಾರಣಕ್ಕಾಗಿ ಅವರು

(ಶ್ರೀ ಕಾಗೋಡು ತಿಮ್ಮಪ್ಪ)

ಹಾಗೆ ಮುಂದುವರಿದುಕೊಂಡು ಬಂದು, ಇಲಾಖೆಯಲ್ಲಿ ಅವರದೇ ಸಿಬ್ಬಂದಿ ವರ್ಗವನ್ನು ನಿರ್ಮಾಣ ಮಾಡಿದ್ದಾರೆ. ಯಾವುದೇ ತಪ್ಪುಮಾಡಿದರೂ, ಯಾರ ಮುಖಾಂತರವಾದರೂ ನಾನಾತರಹ ಇನ್‌ಫ್ಲೂಯೆನ್ಸ್ ತಂದು ತಪ್ಪಿಸಿಕೊಳ್ಳುತ್ತಾರೆ. ಅವನು ಎಷ್ಟೋ ರೀತಿಯಲ್ಲಿ ತಪ್ಪಿಸಿಕೊಳ್ಳುತ್ತಾನೆ. ಅವರ ಜಾಲ ಇವೊತ್ತು ನಮ್ಮ ಇಲಾಖೆಯಲ್ಲಿ ಇರುವುದರಿಂದ ಅಪಾರವಾಗಿ ಅರಣ್ಯ ನಾಶವಾಗಿದೆ. ಆದ್ದರಿಂದ ಶ್ರೀಗಂಧ ವಿನಾಶ ಹೊಂದುತ್ತಿದೆ. ಇನ್ನು ಅನೇಕ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸುವ ದೃಷ್ಟಿಯಲ್ಲಿ ತಮ್ಮ ಪ್ರಯತ್ನ ಶೀಘ್ರಗತಿಯಲ್ಲಿ ನಡೆಯಬೇಕೆಂದು ತನ್ಮೂಲಕ ಇಲಾಖೆಯನ್ನು ಭದ್ರಪಡಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ದಾಮೋದರ ಮೂಲ್ಕಿ (ಮೂಡಬಿದ್ರಿ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ವ್ಯವಸಾಯ ಇಲಾಖೆಯ ಬೇಡಿಕೆಗಳನ್ನು ಅನುಮೋದಿಸುತ್ತಾ, ಈ ಇಲಾಖೆಯಲ್ಲಿ ಕಂಡುಬರುವ ಲೋಪದೋಷಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಚ್ಛಿಸುತ್ತೇನೆ. ಮೊಟ್ಟಮೊದಲನೆಯದಾಗಿ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಉಂಟಾದ ಅನಾಹುತವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಚ್ಛಿಸುತ್ತೇನೆ. ಯಾವಾಗಲೂ ನಮ್ಮ ಜಿಲ್ಲೆಯಲ್ಲಿ ಜೂನ್ 7ಕ್ಕೆ ಮತ್ತು ಜೂನ್ 10ಕ್ಕೆ ಮಳೆ ಬರುವುದು ವಾಡಿಕೆ. ಆದರೆ ಈ ಸಲ 20 ದಿನ ತಡವಾಗಿ ಮಳೆಯಾಗಿದೆ. ಆದರೆ ರೈತರು ವಾಡಿಕೆಯಂತೆ 7 ಮತ್ತು 10 ನೇ ತಾರೀಖುಗಳಿಗನುಗುಣವಾಗಿ ಬೆಳೆಯನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದರು. ಮಳೆ ಬರುವುದು ನಿಧಾನವಾದ್ದರಿಂದ ಬೆಳೆದಂಥ ಬೆಳೆಗೆ ಹುಳ ಬಿದ್ದು ಬೆಳೆಯೆಲ್ಲಾ ಹಾಳಾಯಿತು. ಇದರಿಂದ ರೈತರು ತೊಂದರೆಗೆ ಒಳಗಾಗಿದ್ದಾರೆ. ಕಳೆದ 50 ವರ್ಷಗಳಿಂದ ಈ ರೀತಿ ತಡವಾಗಿ ಮಳೆ ಬಂದಿರಲಿಲ್ಲ. ಈ ಸಾಲನಲ್ಲಿ ತಡವಾಗಿ ಬಂದಿದ್ದರಿಂದ ರೈತರಿಗೆ ತೊಂದರೆಯಾಗಿದೆ. ಇದನ್ನು ವ್ಯವಸಾಯ ಇಲಾಖೆಯವರು ಗಮನಕ್ಕೆ ತಂದುಕೊಂಡು ಅಲ್ಲಿಯ ರೈತರಿಗೆ ಉತ್ತಮವಾದ ಬೀಜಗಳನ್ನು, ಗೊಬ್ಬರವನ್ನು, ಇನ್‌ಸೆಕ್ಟಿಸೈಡ್ಸನ್ನು ಉಚಿತವಾಗಿ ಹಂಚಿಕೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ವ್ಯವಸಾಯ ಇಲಾಖೆಯಿಂದ ಬಹುಶಃ ವಿದ್ಯೆ ಇದ್ದ ರೈತರಿಗೆ ಏನಾದರೂ ಪ್ರಯೋಜನ ಆಗಬಹುದೆಂದು ನನ್ನ ಅಭಿಪ್ರಾಯ. ಅವಿದ್ಯಾವಂತ ರೈತರಿಗೆ ಈ ಇಲಾಖೆಯಿಂದ ಯಾವ ಅನುಕೂಲಗಳು ಸಿಗುವುದಿಲ್ಲವೆಂದು ಹೇಳಬೇಕಾಗಿದೆ. ನಾನೂ ಒಬ್ಬ ಕೃಷಿಕನಾಗಿದ್ದೇನೆ. ಕಳೆದ 5—10 ವರ್ಷಗಳಿಂದ ನಾನು ಸರ್ಕಾರದವರು ನೇಮಕ ಮಾಡುವ ಗ್ರಾಮ ಸೇವಕರನ್ನು ನಮ್ಮ ಕ್ಷೇತ್ರದಲ್ಲಿ ನೋಡಿಲ್ಲ. ಗ್ರಾಮಸೇವಕರ ಕೆಲಸಕ್ಕೆ ಸರ್ಕಾರದವರು ಹೆಚ್ಚಾಗಿ ಪೇಟೆಯಲ್ಲಿರುವವರನ್ನು ಆರಿಸಿರುವುದರಿಂದ ಅವರು ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇವರು ಡಾಮರು ರಸ್ತೆಗಳನ್ನು ಬಿಟ್ಟು ಬೇರೆ ರಸ್ತೆಗಳಲ್ಲಿ ನಡೆಯುವುದಿಲ್ಲ. ಇವರು ತಮ್ಮ ಸ್ನೇಹಿತರನ್ನು ಹಿಡಿದುಕೊಂಡು, ತಮಗೆ ಬೇಕಾದವರ ಜಮೀನುಗಳಲ್ಲಿ ನಾಲ್ಕೈದು ಕಡೆಗಳಲ್ಲಿ ಬೋರ್ಡ್ ಹಾಕಿಸಿ ಇಂತಹ ತಳಿಗಳನ್ನು ಬೆಳೆಯಲಾಗಿದೆ ಎಂದು ಬೋರ್ಡ್‌ಗಳಲ್ಲಿ ಬರೆಸಿಬಿಡುತ್ತಾರೆ. ಅಲ್ಲಿಗೆ ಅವರ ಕೆಲಸ ಪೂರೈಸಿತು. ಈ ಒಂದು ಪರಿಸ್ಥಿತಿ ಬದಲಾಗಬೇಕು. ಗ್ರಾಮದಲ್ಲಿರುವ ಎಲ್ಲ ರೈತರಿಗೂ ಈಗಿನ ಹೊಸ ತಳಿಗಳ ಪರಿಚಯ ಗ್ರಾಮಸೇವಕರಿಂದ ಆಗುವಂತೆ ಏರ್ಪಾಡು ಮಾಡಬೇಕು. ಇನ್ನು ಮುಂದೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮಸೇವಕರಿಂದ ಹೆಚ್ಚಿನ ಕೆಲಸವಾಗುವಂತೆ ಸರ್ಕಾರದವರು ನೋಡಿಕೊಳ್ಳಬೇಕು. ಈಗ ವ್ಯವಸಾಯ ಇಲಾಖೆಯವರು ರೈತರ ಅನುಕೂಲಕ್ಕಾಗಿ ಬುಕ್‌ಲೆಟ್ಸ್‌ನ್ನು ತಯಾರಿಸಿ ಕಳಿಸಿಕೊಡುತ್ತಿದ್ದಾರೆ. ಇವು ಕೇವಲ ಅಧಿಕಾರಿಗಳ ಮನೆಯಲ್ಲಿ ಮತ್ತು ಲೈಬ್ರರಿಯಲ್ಲಿ ಕಂಡುಬರುತ್ತವೆಯೇ ಹೊರತು, ಎಲ್ಲ ರೈತರಿಗೂ ಇವು ಸಿಗುತ್ತಿಲ್ಲ. ಎಲ್ಲ ಅವಿದ್ಯಾವಂತ ರೈತರಿಗೂ ಸಹ ಇದರ ಒಂದು ತಿಳುವಳಿಕೆ ಸಿಗುವಂತೆ ಮತ್ತು ಅವರಿಗೆ ಮನದಟ್ಟಾಗುವಂತೆ ತಿಳಿಸಲು ಸೂಕ್ತ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಈಗ ತೋಟಗಾರಿಕೆ ಇಲಾಖೆ ಎಂದು ಇದೆ. ಈ ಇಲಾಖೆಯು ಅಗತ್ಯ ಇದೆಯೇ, ಎಂದು ಮಾನ್ಯ ಸಚಿವರನ್ನು ಕೇಳಬೇಕಾಗಿದೆ. ತಮಗೆ ಬೇಕಾದಂಥ ಕೆಲವು ಜನರಿಗೆ ಉತ್ತಮವಾದ ಹುದ್ದೆಗಳನ್ನು ಕೊಡುವುದಕ್ಕಾಗಿ ಈ ಇಲಾಖೆಯನ್ನು ಇಟ್ಟಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಈ ಇಲಾಖೆಯಲ್ಲಿ ಇತ್ತೀಚೆಗೆ ನಡೆದಂಥ ಒಂದು ಸಣ್ಣ ವಿಷಯವನ್ನು ಸಚಿವರ ಗಮನಕ್ಕೆ ತರಲಚ್ಛಿಸುತ್ತೇನೆ. ಶ್ರೀ ಯಶವಂತ ಎಲ್ ಡೆಪ್ಯೂಟಿ ಡೈರೆಕ್ಟರ್ ಆಗಿ ಬೆಳಗಾಂನಲ್ಲಿ ಇದ್ದರು. ಅವರನ್ನು ಬೆಟ್ಟಹಳ್ಳಿಗೆ ಡೆಪ್ಯುಟೇಷನ್ ಮೇಲೆ ಟ್ರಾನ್ಸ್‌ಫರ್ ಮಾಡಲಾಯಿತು. ಆದರೆ ಬೆಟ್ಟಹಳ್ಳಿಯಲ್ಲಿರುವ ಕೇಂದ್ರಸರ್ಕಾರದ ಕೇಂದ್ರದವರು ತಮ್ಮ ಸೇವೆಯು ಅಗತ್ಯ ಇಲ್ಲ ಎಂದು ಅವರಿಗೆ ಹೇಳಿಬಿಟ್ಟರು.

ಅವರು ಹಿಂದಕ್ಕೆ ಬಂದಾಗ ಅವರನ್ನು ಸರ್ಕಾರದವರು ಎಲ್ಲಿಗೂ ಮತ್ತೆ ಟ್ರಾನ್ಸ್‌ಫರ್ ಮಾಡಲಿಲ್ಲ. ಅವರು ಈಗ ಮನೆಯಲ್ಲಿಯೇ ಇದ್ದಾರೆ. ಸಂಬಳ ಕೂಡ ಇಲ್ಲ. ಇತ್ತೀಚೆಗೆ ಅವರನ್ನು ಬೆಂಗಳೂರಿಗೆ ವರ್ಗ ಮಾಡಲಾಯಿತು. ಆದರೆ ಇಲ್ಲಿಯ ಡೈರಕ್ಟರ್ ಅವರು ಅವರ ಜಾಯಿನಿಂಗ್ ರಿಪೋರ್ಟ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದಾರೆಂದು ಕೇಳಿದ್ದೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕಾರ್ಯಕ್ರಮ ಕೈಕೊಂಡು ಅವರನ್ನು ಎಲ್ಲಿಯಾದರೂ ಪೋಸ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಶುಸಂಗೋಪನೆ ವಿಚಾರದಲ್ಲಿ ಹೇಳುವುದಾದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್‌ಸೆಮಿನೇಷನ್ ಸೆಂಟರ್‌ಗಳಿಗೆ ದನಗಳನ್ನು ತೆಗೆದುಕೊಂಡು ಹೋಗುವುದು ಜಾಸ್ತಿಯಾಗಿದೆ. ಇದರಿಂದ ಪ್ರಯೋಜನ ಇದೆ ಎಂಬ ಅರಿವು ರೈತರಲ್ಲಿ ಉಂಟಾಗಿದೆ. ಆದರೆ ಕಳೆದ 2 ವರ್ಷಗಳಿಂದ ಈ ಸೆಂಟರ್‌ಗಳಿಂದ ಹೆಚ್ಚು ಪ್ರಯೋಜನವಾಗುತ್ತಿಲ್ಲ. ಸೆಮನ್ ಕಲೆಕ್ಟ್ ಮಾಡುವ ಕೇಂದ್ರ ಮಂಗಳೂರಿನಲ್ಲಿದೆ. ಅಲ್ಲಿಗೆ ಹೋಗಿ ಕೇಳಿದರೆ ನಮ್ಮಲ್ಲಿ ಬುಲ್ಸ್ ಹೆಚ್ಚು ಇಲ್ಲ ಎಂದು ಹೇಳುತ್ತಾರೆ. ಈ ದಿಶೆಯಲ್ಲಿ ಮಾನ್ಯ ಮಂತ್ರಿಗಳು ಸೂಕ್ತ ಗಮನ ಹರಿಸಬೇಕೆಂದು ಹೇಳುತ್ತೇನೆ.

ಮುಲ್ಕಿಯಲ್ಲಿ ಒಂದು ರೂರಲ್ ವೆಟರ್‌ನರಿ ಆಸ್ಪತ್ರೆ ಇದೆ. ಅದನ್ನು ಅಲ್ಲಿಯ ಪಂಚಾಯಿತಿಯವರು ಅಪ್‌ಗ್ರೇಡ್ ಮಾಡಬೇಕೆಂದು ಸರ್ಕಾರದವರನ್ನು ಕೇಳಿದ್ದಾರೆ. ಆದಕಾರಣ ಮಾನ್ಯ ಸಚಿವರು ಈ ದಿಶೆಯಲ್ಲಿ ಗಮನ ಹರಿಸಬೇಕೆಂದು ಹೇಳುತ್ತೇನೆ.

ಮೀನುಗಾರಿಕೆಯ ಬಗ್ಗೆ ಹೇಳಬೇಕೆಂದರೆ, ಇತ್ತೀಚೆಗೆ ಮೀನುಗಾರಿಕೆ ಕಾರ್ಪೊರೇಷನ್‌ಗೆ ಅಧ್ಯಕ್ಷರನ್ನಾಗಿ ಒಬ್ಬರನ್ನು ನೇಮಕ ಮಾಡಿದ್ದಾರೆ. ಈ ರೀತಿ ಅಧ್ಯಕ್ಷರನ್ನಾಗಿ ನೇಮಕ ಮಾಡುವಾಗ, ಯಾರು ಕೋಸ್ಟಲ್ ಪ್ರದೇಶದಲ್ಲಿಯೇ ಇದ್ದುಕೊಂಡು ಅದರ ಬಗ್ಗೆ ಹೆಚ್ಚಿನ ಅನುಭವ ಪಡೆದವರಾಗಿರುತ್ತಾರೋ ಅಂತಹವರನ್ನೇ ನೇಮಕ ಮಾಡುವುದಕ್ಕೆ ಸರ್ಕಾರದವರು ಮೊದಲು ಆದ್ಯತೆ ಕೊಡಬೇಕು. ಮಾನ್ಯ ಸಚಿವರು ನಮ್ಮ ಕ್ಷೇತ್ರಕ್ಕೆ ಬಂದು ಅಲ್ಲಿಗೆ ಏನೇನು ಅಗತ್ಯಗಳು ಬೇಕಾಗಿದೆ ಎಂಬುದನ್ನು ಕಂಡುಕೊಂಡಿದ್ದಾರೆ. ನಮ್ಮಲ್ಲಿ ಮಧ್ಯಮ ವರ್ಗದ ಐಸ್‌ಪ್ಲಾಂಟ್ ಇದೆ. ಅದನ್ನು ಫ್ರೀಸಿಂಗ್ ಪ್ಲಾಂಟ್ ಆಗಿ ಮಾಡಬೇಕು. ಮತ್ತು ಹೊಳೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಮಣ್ಣು ಬಂದು ಸೇರಿಕೊಂಡು ಮೆಕನೈಸ್ಡ್ ಬೋಟ್ಸ್ ಹೋಗುವುದಕ್ಕೆ ಅವಕಾಶವಾಗುತ್ತಿಲ್ಲ. ಇದನ್ನು ಸರಿಪಡಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ.

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಸನ್ಮಾನ್ಯ ಸಭಾಪತಿಯವರೇ, ಈ ದಿವಸ ನಮ್ಮ ವ್ಯವಸಾಯ ಮತ್ತು ಅರಣ್ಯ ಇಲಾಖೆಯ ಸಚಿವರಾದಂಥ ಶ್ರೀಮಾನ್ ಕೆ. ಎಚ್. ಪಾಟೀಲ್ ಅವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಂತ್ರಿಗಳು ರೈತರ ಮಕ್ಕಳಾಗಿ ಈ ಖಾತೆಯನ್ನು ವಹಿಸಿಕೊಂಡಿರುವುದರಿಂದ, ಆ ಶಾಖೆಯಲ್ಲಿರತಕ್ಕಂಥ ಕುಂದುಕೊರತೆಗಳನ್ನು ಸುಲಭವಾಗಿ ನಿವಾರಣೆ ಮಾಡುತ್ತಾರೆಂಬ ನಂಬಿಕೆ ನನಗಿದೆ. ಮಾನ್ಯ ಮಂತ್ರಿಗಳು ದಕ್ಷರು ಮತ್ತು ಧೈರ್ಯಶಾಲಿಗಳಾಗಿರುವುದರಿಂದ, ತಮಗೆ ಎಲ್ಲ ಅನುಕೂಲಗಳು ಸಿಗುತ್ತದೆಂದು ಜನರು ತಮ್ಮನ್ನು ನಂಬಿಕೊಂಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ವ್ಯವಸಾಯ ಇಲಾಖೆಯಲ್ಲಿ ಹೆಚ್ಚಿಗೆ ಪ್ರಗತಿಯಾಗಬೇಕು, ಬಡ ಜನತೆಯ ಉದ್ಧಾರವಾಗಬೇಕು, ಬಡವರು ಬಡವರಾಗಿಯೇ ಉಳಿಯಬಾರದು, ಅವರು ವ್ಯವಸಾಯ ಇಲಾಖೆಯಲ್ಲಿ ಸಿಗುವಂತಹ ಎಲ್ಲ ಸವಲತ್ತುಗಳನ್ನು ಪಡೆದುಕೊಂಡು ಮುಂದುವರೆಯಬೇಕು, ಒಳ್ಳೆಯ ಸತ್ಪ್ರಜೆಗಳಾಗಬೇಕು, ಆ ರೀತಿ ಒಳ್ಳೆಯ ರೈತರಾಗಲು ಎಲ್ಲ ಸಹಾಯ ಮಾಡುವುದಾಗಿ ನಾವು ಚುನಾವಣೆಯ ಸಂದರ್ಭದಲ್ಲಿ ಅವರಿಗೆ ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಈ ದಿಶೆಯಲ್ಲಿ ಈಗಾಗಲೇ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಲಾಗಿದೆ. ಇದರಿಂದ ಬಡವರಿಗೆ ಎಷ್ಟರಮಟ್ಟಿಗೆ ಅನುಕೂಲವಾಗುತ್ತಿದೆ ಎಂಬ ಬಗ್ಗೆ ನಾನು ಪ್ರಶ್ನೆ ಮಾಡಬೇಕಾಗಿದೆ. ಬ್ಯಾಂಕ್‌ಗಳ ರಾಷ್ಟ್ರೀಕರಣವಾದ ಮೇಲೆ ಎಲ್ಲ ರೈತರಿಗೂ ಸುಲಭವಾಗಿ ಹಾಗೂ ಸುಲಲಿತವಾಗಿ ಸಾಲ ಸೌಲಭ್ಯಗಳು ಸಿಗುತ್ತದೆಂಬ ಪ್ರತೀತಿ ಇತ್ತು. ಆದರೆ ಇಂದಿನ ಪರಿಸ್ಥಿತಿಯನ್ನು ನೋಡಿ ನನಗೆ ದಿಗ್ಭ್ರಾಂತಿಯಾಗಿದೆ. ತಾಲ್ಲೂಕ್ ಮಟ್ಟದಲ್ಲಿ ವಿಚಾರಣೆ ಮಾಡಿ ನೋಡಿದ್ದೇ ಆದರೆ ಈ ಬ್ಯಾಂಕ್‌ಗಳಿಂದ ಬಡವರಿಗೆ ಯಾವ ರೀತಿಯ ಸಾಲವೂ ಸಿಗುತ್ತಿಲ್ಲ. ಸಾಲ ಸೌಲಭ್ಯವನ್ನೆಲ್ಲಾ ಕೆಲವೇ ಶ್ರೀಮಂತರು ಉಪಯೋಗಿಸಿಕೊಂಡು ಬಡ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಎಂ. ಬಿ. ರಾಮಸ್ವಾಮಿ)

ನಮ್ಮ ತಾಲ್ಲೂಕ್‌ನಲ್ಲಿರುವ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಎರಡು ಮೂರು ಲಕ್ಷ ರೂಪಾಯಿಗಳವರೆಗೆ ಫ್ರೋಲಾಗಿದೆ. ಒಂದೇ ರಾಜಕೀಯ ಪಕ್ಷದವರು ಸೇರಿಕೊಂಡು ಈ ಬ್ಯಾಂಕ್‌ನಿಂದ ಸಿಗುವ ಎಲ್ಲ ಅನುಕೂಲಗಳನ್ನು ತಾವೇ ಉಪಯೋಗಿಸಿಕೊಂಡು ಸಾಮಾನ್ಯ ಜನತೆಗೆ ಯಾವ ವಿಧವಾದ ಅನುಕೂಲವನ್ನೂ ಮಾಡಿಕೊಡುತ್ತಿಲ್ಲ. ಇದರ ಬಗ್ಗೆ ಸೂಕ್ತ ಕಾರ್ಯ ಕ್ರಮ ಕೈಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರೈತರು ಸುಗಮವಾಗಿ ಜೀವನ ಮಾಡಬೇಕಾದರೆ, ಅವರು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕಾದರೆ, ಅವರಿಗೆ ಬೀಜ ಮತ್ತು ಗೊಬ್ಬರ ಅತ್ಯಾವಶ್ಯಕ. ಆದರೆ ಅಧಿಕಾರ ವರ್ಗದವರು ರೈತರಿಗೆ ಸಕಾಲದ ದಲ್ಲಿ ಬೀಜ ಮತ್ತು ಗೊಬ್ಬರವನ್ನು ಒದಗಿಸುತ್ತಿಲ್ಲವೆಂದು ಈ ಸಂದರ್ಭವಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಈ ಒಂದು ಇಲಾಖೆಯಲ್ಲಿ ಅಧಿಕಾರಿಗಳು ಏನು ಬಂದಿದ್ದಾರೆ ಅವರು ಹಿಂದಿನ ಸರ್ಕಾರದವರ ಪ್ರಭಾವವನ್ನು ಪಡೆದುಕೊಂಡು ಬಂದಂತಹವರಾಗಿದ್ದಾರೆ. ಆದ್ದರಿಂದ ಅಲ್ಲಿರತಕ್ಕ ಅಧಿಕಾರ ವರ್ಗ ದವರಿಗೆ ಹಿಂದಿನ ಸರ್ಕಾರದಲ್ಲಿದ್ದಂತಹ ಒಂದು ಮನೋಭಾವನೆಯೇ ಈಗಲೂ ಇದೆ. ಆದ್ದರಿಂದ ಇನ್ನು ಮುಂದೆ ಅಧಿಕಾರವರ್ಗದವರು ಹಿಂದಿನ ಮನೋಭಾವನೆಯನ್ನು ಬಿಟ್ಟು ಈಗಿನ ಸಮಾಜವಾದ ತತ್ವಕ್ಕನುಗುಣವಾಗಿ ನಡೆಯಬೇಕು ಎಂದು ಮಾನ್ಯ ಮಂತ್ರಿಮಹೋದಯರು ಅವರಿಗೆ ಆದೇಶವನ್ನು ನೀಡಬೇಕೆಂದು ನಾನು ಹೇಳುತ್ತೇನೆ. ಈಗ ವ್ಯವಸಾಯ ಇಲಾಖೆಯಲ್ಲಿ ಸರ್ಟಿಫೈಯ್ಡ್ ಸೀಡ್ಸ್ ಎಂದು ಏನು ಬೇರೆಕಡೆಯಿಂದ ತರಿಸುತ್ತಿದ್ದಾರೆ ಆ ಸೀಡ್ಸ್ ಫಲಕಾರಿಯಾಗಿಲ್ಲ. ಇದಕ್ಕೆ ಕಾರಣವೇ ನೆಂಬುದು ಗೊತ್ತಾಗಲಿಲ್ಲ.

3-30 P.M.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಎಲ್ಲಿ ಆ ರೀತಿಯಾಗಿದೆ ಎಂಬುದನ್ನು ಹೇಳಿದರೆ ಆ ಬಗ್ಗೆ ಕ್ರಮತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಬೆಂಗಳೂರು ಜಿಲ್ಲೆಯ ಆನೇಕಲ್ಲಿಗೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು 90 ಕೆ. ಜಿ. ಸರ್ಟಿಫೈಯ್ಡ್ ಸೀಡ್ಸ್ ಕೊಟ್ಟಿದ್ದಾರೆ. ಅದು ಫಲಕಾರಿ ಯಾಗಿಲ್ಲ. ಅದು ಫಲಕಾರಿಯಾಗದೇ ಇರುವುದಕ್ಕೆ ಕಾರಣವೇನು ? ಅಧಿಕಾರವರ್ಗದವರು ಎಕ್ಸ್ ಪರ್ಟ್ ಅಲ್ಲದಿದ್ದರೆ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿ ಅಲ್ಲಿಗೆ ಒಳ್ಳೆಯ ಎಕ್ಸ್‌ಪರ್ಟ್ ಆದವರನ್ನು ಹಾಕಬೇಕು. ಅವರ ಮೇಲೆ ಒಳ್ಳೆಯ ಸೂಪರ್‌ವಿಜನ್ ಇರಬೇಕು. ಆ ರೀತಿ ಮಾಡಿದರೆ ಮಾತ್ರ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಗ್ರೋ ಇಂಡ ಸ್ಟ್ರೀಸ್ ಕಾರ್ಪೊರೇಷನ್ನಿನಲ್ಲಿ ಹರಿಜನರಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲ. ಆದ್ದರಿಂದ ಅಲ್ಲಿ ಹರಿಜನ ಗಿರಿ ಜನರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ವಿಲೇಜ್‌ಲೆವೆಲ್ ವರ್ಕರ್‌ಗೆ ಸಂಬಂಧಪಟ್ಟ ಹಾಗೆ ನಾನು ಒಂದೆರಡು ವಿಷಯಗಳನ್ನು ಹೇಳಬಯ ಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಇಲಾಖೆಯವರು ಹೆಚ್ಚು ಫಲಕಾರಿಯಾ ದಂತಹ ಕೆಲಸಗಳನ್ನು ಮಾಡಿಲ್ಲ. ರಾಜಕೀಯ ಗೊಂದಲಕ್ಕೆ ಸಿಕ್ಕಿಹಾಕಿಕೊಂಡು ಗ್ರಾಮಾಂತರ ಪ್ರದೇ ಶಗಳಲ್ಲಿ ವ್ಯವಸಾಯ ಇಲಾಖೆಯಿಂದ ಎಷ್ಟರಮಟ್ಟಿನ ಒಂದು ಕೆಲಸ ಆಗಬೇಕಾಗಿತ್ತೋ ಅದು ಆಗಿಲ್ಲ. ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಒಬ್ಬೊಬ್ಬರು ವ್ಯವಸಾಯ ಅಧಿಕಾರಿಗಳನ್ನು ನೇಮಿಸಬೇಕು. ಈಗ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಅಧಿಕಾರವನ್ನು ಏನು ಬಿ.ಡಿ.ಓ.ಗಳಿಗೆ ಕೊಟ್ಟಿದ್ದಾರೆ ಅದನ್ನು ತಪ್ಪಿಸಬೇಕು. ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಸರಿಯಾಗಿ ಫಲಕಾರಿಯಾಗಿಲ್ಲ. ಯಾವ ಯಾವ ಗೊಬ್ಬರವನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಯಾವ ಯಾವ ಭೂಮಿಗೆ ಹಾಕಬೇಕೆಂಬುದನ್ನು ಅವರು ಕಂಡುಹಿಡಿದಿಲ್ಲ. ಇದನ್ನು ಸರಿಯಾದ ರೀತಿಯಲ್ಲಿ ನೋಡಿ ಕೊಳ್ಳಬೇಕು. ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಸಾಯಿಲ್ ಕನ್‌ಸರ್‌ವೇಷನ್ ಕೆಲಸವನ್ನು ಮಾಡಿಸುವುದರಲ್ಲಿ ಹೆಚ್ಚು ಶ್ರದ್ಧೆವಹಿಸಿ ಕೆಲಸ ಮಾಡಬೇಕು. ಮತ್ತು ಅದು ಸರಿಯಾದ ರೀತಿಯಲ್ಲಿ ನಡೆಯುವ ಹಾಗೆ ಮಾಡಬೇಕೆಂದು ನಾನು ಹೇಳುತ್ತೇನೆ.

ನಮ್ಮಲ್ಲಿ ರೀಹ್ಯಾಬಿಲಿಟೇಷನ್ ಆಫ್ ಲ್ಯಾಂಡ್ ಲೆಸ್ ಅಗ್ರಿಕಲ್‌ಚರಲ್ ಸ್ಕೀಮ್ ಎಂದು ಸುಮಾರು 18 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಲಾಗಿತ್ತು. ಆದರೆ ಅದನ್ನು ಕಾರ್ಯಗತ ಮಾಡದೆ ಅದನ್ನು ಹಿಂದೆ ಲ್ಯಾಪ್ಸ್ ಮಾಡಿದ್ದಾರೆ.

ಈಗ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಆದ್ದರಿಂದ ಈಗ ಆ ರೀಹ್ಯಾಬಿಲಿಟೇಷನ್ ಆಫ್ ಲ್ಯಾಂಡ್ ಲೆಸ್ ಅಗ್ರಿಕಲ್ಚರಲ್ ಸ್ಕೀಮನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮುಂದುವರಿಸಿಕೊಂಡು ಹೋಗಬೇಕು. ಅದರಿಂದ ಬಡವರಿಗೆ ಮತ್ತು ಹರಿಜನರಿಗೆ ಅನುಕೂಲ ವಾಗುತ್ತದೆ. ಆದ್ದರಿಂದ ಆ ಒಂದು ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಗ್ರಿಕಲ್ಚರಲ್ ಯೂನಿವರ್ಸಿಟಿ ಹುಟ್ಟಿದಾಗಿನಿಂದಲೂ ಒಬ್ಬರೇ ವೈಸ್‌ಛಾನ್ಸಲರ್ ಇದ್ದಾರೆ. ಅವರನ್ನು ಬದಲಾವಣೆ ಮಾಡುವುದು ಸೂಕ್ತ. ಮತ್ತು ಅಲ್ಲಿ ಹರಿಜನರಿಗೆ ಪ್ರಾತಿನಿಧ್ಯವಿಲ್ಲ. ಅಲ್ಲಿ ಒಬ್ಬ ಹರಿಜನ ಅಧಿಕಾರಿಯೂ ಇಲ್ಲ. ಆದ್ದರಿಂದ ಈಗಲಾದರೂ ತಮ್ಮ ಕಾಲದಲ್ಲಿ ದೊಡ್ಡ ಮನಸ್ಸು ಮಾಡಿ ರಾಜ್ಯಾಂಗದ ಪ್ರಕಾರ ಅಲ್ಲಿ ಹರಿಜನರಿಗೆ ಕೆಲಸವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಪಿ.ಡಬ್ಲ್ಯು.ಡಿ ಡಿಪಾರ್ಟ್‌ಮೆಂಟಿನಿಂದ ಕೆಲವು ಇಂಜಿನಿಯರನ್ನು ಲೆಂಟ್ ಸರ್ವೀಸ್ ಮೇಲೆ ತೆಗೆದುಕೊಂಡಿದ್ದಾರೆ. ಅವರಿಗೆ ವರ್ಗಾವರ್ಗಿ ಇಲ್ಲ. ಆದರೆ ಬೇರೆ ಅಧಿಕಾರಿಗಳನ್ನು ವರ್ಗ ಮಾಡುತ್ತಾರೆ. ಆದರೆ ಈ ಇಂಜಿನಿಯರುಗಳಿಗೆ ವರ್ಗವೇ ಇಲ್ಲ. ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಒಂದೇ ಕಡೆ ಅಧಿಕಾರಿಗಳನ್ನು ಇಡಬಾರದು. ಬೋರ್ಡ್ ಆಫ್ ರೀಜೆಂಟಿನಲ್ಲಿ ಹರಿಜನರಿಗೆ ಒಬ್ಬರಿಗೆ ಮಾತ್ರ ಪ್ರಾತಿನಿಧ್ಯ ಕೊಟ್ಟಿದ್ದಾರೆ. ಒಂದಕ್ಕಿಂತ ಹೆಚ್ಚು ಪ್ರಾತಿನಿಧ್ಯವನ್ನು ಬೋರ್ಡ್ ಆಫ್ ರೀಜೆಂಟಿನಲ್ಲಿ ಕೊಡಬೇಕು. ಈ ಯೂನಿವರ್ಸಿಟಿಯಲ್ಲಿ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ, ಆದ್ದರಿಂದ ಅಲ್ಲಿ ರೆಕ್ರೂಟ್‌ಮೆಂಟ್ ಸರಿಯಾಗಿ ನಡೆಯುವಂತೆ ಮಾಡಬೇಕು.

ಪಶುಸಂಗೋಪನೆಯ ವಿಚಾರದಲ್ಲಿ ಹೇಳುವುದಾದರೆ ಈ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳು ಪಶುಸಂಗೋಪನೆಯ ವಿಚಾರದಲ್ಲಿ ಬಹಳ ಆಸಕ್ತಿಯನ್ನು ಇಟ್ಟುಕೊಂಡಿದ್ದಾರೆ. ಅವರು ರೈತರ ಮಕ್ಕಳೂ ಆಗಿದ್ದಾರೆ. ಅವರ ಬಗ್ಗೆ ನನಗೆ ಅಪಾರ ಗೌರವ ಇದೆ. ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಬೆಂಗಳೂರು ಡೈರಿ ವಿಷಯವನ್ನು ತೆಗೆದುಕೊಂಡರೆ ಇದರಲ್ಲಿ ಪ್ರತಿದಿವಸವೂ ಗೊಂದಲ ಇದೆ. ಏತಕ್ಕೆಂದರೆ ಅಲ್ಲಿ ಒಬ್ಬರು ಎಕ್ಸ್‌ಪರ್ಟ್ ಆದ ಒಬ್ಬ ಟೆಕ್ನಾಲಜಿ ಅಧಿಕಾರಿಯನ್ನು ಹಾಕಬೇಕು. ಈಗ ಅಲ್ಲಿಗೆ ಒಬ್ಬರು ಐ.ಎ.ಎಸ್. ಅಧಿಕಾರಿಯನ್ನು ಹಾಕಿದ್ದಾರೆ. ಆದ್ದರಿಂದ ಅಲ್ಲಿನ ಆಡಳಿತ ಸರಿಯಾಗಿಲ್ಲ. ಆದಕಾರಣ ಅಲ್ಲಿಗೆ ಒಬ್ಬರು ಎಕ್ಸ್‌ಪರ್ಟ್ ಆದ ಅಧಿಕಾರಿಯನ್ನು ಹಾಕಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪಶುಸಂಗೋಪನಾ ಇಲಾಖೆಯಲ್ಲಿ ಯಾವ ಒಬ್ಬ ಅಧಿಕಾರಿ ಆ ಜಾಗದಲ್ಲಿರಲು ಸೂಕ್ತವಲ್ಲ ಯೋಗ್ಯವಲ್ಲ ಎಂದು ಹೈಕೋರ್ಟ್ ತೀರ್ಪು ಆಗಿದೆಯೋ ಅಂಥಾ ಅಧಿಕಾರಿಯನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಿದ್ದಾರೆ. ಅದು ಸರಿಯಲ್ಲ. ಯಾರು ಅಲ್ಲಿ ಯೋಗ್ಯರು, ತಜ್ಞರು, ಅನುಭವಪಡೆದಂತಹವರೂ ಇದ್ದಾರೆಯೋ ಅಂಥವರನ್ನು ಇಲಾಖೆಯ ಮುಖ್ಯಾಧಿಕಾರಿಗಳನ್ನಾಗಿ ಹಾಕಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಫಾರೆಸ್ಟ್ ಇಲಾಖೆಯ ವಿಚಾರವನ್ನು ಹೇಳುವುದಾದರೆ ನಮ್ಮಲ್ಲಿ ಫಾರೆಸ್ಟ್ ಇಲ್ಲದಂತಾಗಿದೆ. ನಮ್ಮ ರಾಜ್ಯದಲ್ಲಿ ಒಬ್ಬ ಹರಿಜನರಿಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ ಹುದ್ದೆಯನ್ನು ಕೊಟ್ಟಿಲ್ಲ. ಹರಿಜನರಿಗೆ ಬರೀ ಗುಮಾಸ್ತರ ಹುದ್ದೆಗಳನ್ನು ಮಾತ್ರ ಕೊಟ್ಟಿದ್ದಾರೆ. ಆದ್ದರಿಂದ ಹರಿಜನರಿಗೂ ಈ ಇಲಾಖೆಯಲ್ಲಿ ಗೆಜಿಟೆಡ್ ಹುದ್ದೆಗಳನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದಲ್ಲದೆ ಈ ಅರಣ್ಯ ಇಲಾಖೆಯಲ್ಲಿ ಎಲ್ಲಾ ರೆಗ್ಯುಲರ್ ಕ್ಷೇತ್ರದಲ್ಲಿಯೂ ಹರಿಜನರಿಗೆ ಹುದ್ದೆಗಳನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಮೀನುಗಾರಿಕೆ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಈ ಇಲಾಖೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಹರಿಜನರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಡಬೇಕು. ಇಷ್ಟು ಹೇಳಿ ಇವೊತ್ತು ಈ ಸಭೆಯ ಮುಂದಿಟ್ಟಿರುವ ಬೇಡಿಕೆಗಳನ್ನು ಪುಷ್ಟೀಕರಿಸಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೆ, ಈ ಡಿಮ್ಯಾಂಡ್ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ನನ್ನ ಮಿತ್ರರು ಕನ್ನಡದಲ್ಲಿಯೇ ಮಾತನಾಡು ಎಂದು ಹೇಳುವುದರಿಂದ ನಾನು ಕನ್ನಡದಲ್ಲಿಯೇ ಮಾತನಾಡಲು ಪ್ರಯತ್ನ ಮಾಡುತ್ತೇನೆ. ನಮ್ಮ ಕಡೆ ಈ ದನಗಳಿಗೆ ಎರಡು ರೋಗಗಳು ಬರುತ್ತವೆ. ಒಂದು ಬಾಯಿ ರೋಗ ಮತ್ತು ಇನ್ನೊಂದು ಕಾಲು ರೋಗ. ಅವಕ್ಕೆ ಡಾಕ್ಟರುಗಳು ಬಂದು ಒಂದು ಇಂಜೆಕ್ಷನ್ ಕೊಡುತ್ತಾರೆ. ಆದರೆ

(ಶ್ರೀ ಪಿ. ಎನ್. ಪಾಟೀಲ್)

ಅದನ್ನು ಸರಿಯಾದ ಸಮಯಕ್ಕೆ ಕೊಡದಿರುವುದರಿಂದ ಅದರಿಂದ ಏನೂ ಫಲ ಬರುವುದಿಲ್ಲ. ಪ್ರಾಣಿಯು ಸ್ಕೆಲಟನ್ ಮಾತ್ರ ಸಿಗುತ್ತದೆ. ಒಬ್ಬ ಮನುಷ್ಯ ಸತ್ತರೆ ಅವನಿಗೆ ಇಷ್ಟು ವರ್ತ್ ಇದೆಯೆಂದು ವ್ಯಾಲ್ಯು ಇಲ್ಲ. ಆದರೆ ಪ್ರಾಣಿಗಳು ಸತ್ತರೆ ಅದಕ್ಕೆ ಇಷ್ಟು ವ್ಯಾಲ್ಯು ಇದೆಯೆಂದು ಹೇಳಬಹುದು. ಇಂಥ ಹಸುಗಳ ಪ್ರಾಣ ಏನಿದೆ, ಇದು ರೈತನಿಗೆ ಮತ್ತು ಹಳ್ಳಿಗಳಲ್ಲಿರತಕ್ಕ ಕಾರ್ಮಿಕನಿಗೆ ಒಂದು ದೊಡ್ಡ ಭೂಮಿ ಇದ್ದ ಹಾಗೆ ಇರುತ್ತದೆ. ಹಿಂದಿನ ಸರ್ಕಾರದವರು ಈ ಬಗ್ಗೆ ಬರೇ ಲಿಪ್ ಸಿಂಪತಿಯನ್ನು ಹೇಳಿಕೊಂಡು ಬಂದಿರುತ್ತಾರೆ ಅಲ್ಲದೆ ಯಾವ ಖಚಿತವಾದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದಿಲ್ಲ. ಬರೇ ಭಾಷಣಗಳನ್ನು ಬಿಗಿಯುತ್ತಿದ್ದರಲ್ಲದೆ ಕೆಲಸ ಗಳನ್ನು ಹೆಚ್ಚು ಮಾಡಿಲ್ಲ. ಆದ್ದರಿಂದ ಈಗಿನ ಸರ್ಕಾರದವರು ಇದರ ಕಡೆ ಹೆಚ್ಚಿನ ಲಕ್ಷ ಕೊಡ ಬೇಕು. ನಮ್ಮ ಅರಣ್ಯ ಮಂತ್ರಿಯವರು ಹೆಚ್ಚಿನ ಲಕ್ಷ ಇದರ ಬಗ್ಗೆ ಕೊಡುತ್ತಾರೆಂದು ನಾನು ನಂಬಿದ್ದೇನೆ. ಕಾರಣ ಅವರು ರೈತಾಪಿ ಜನರ ವರ್ಗದಿಂದ ಬಂದಿದ್ದಾರೆ. ಅವರು ಈ ದೆಸೆಯಲ್ಲಿ ದಿಟ್ಟತನ ಹೆಜ್ಜೆ ಎಲ್ಲೆಲ್ಲಿ ಈ ರೋಗಗಳು ಬಂದಿವೆ, ಅಲ್ಲಿ ಮೂರು ದಿವಸದೊಳಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳದಿದ್ದರೆ, ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದು ಕೊಳ್ಳಬೇಕಾಗಿದೆ. ಬೇಕಾದರೆ ಅಂಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ, ಇಲ್ಲವೇ ಜನರಿಂದ ಛೀಮಾರಿ ಮಾಡಿಸಿ. ಏಕೆಂದರೆ ಇದರಿಂದ ನಮ್ಮ ರೈತರ ಜೀವನವೇ ಹಾಳಾಗಿ ಹೋಗುತ್ತದೆ. ಒಬ್ಬ ರೈತನು ಒಂದು ಹಸು ತರಬೇಕಾದರೆ ಅವನು ಎಷ್ಟೋ ಸಾಲ ಮಾಡಿರುತ್ತಾನೆ. ಆ ಸಾಲವನ್ನು ಆತನ ಮಗ ಕೂಡ ತೀರಿಸಬೇಕಾಗುತ್ತದೆ ಮತ್ತು ಆತನು ಅದಕ್ಕೆ ಬಡ್ಡಿ ಕೊಟ್ಟುಕೊಂಡು ಬರ ಬೇಕಾಗಿದೆ. ಇಷ್ಟರಲ್ಲೇ ರೈತನ ಮತ್ತು ಆತನ ಮಗನ ಆಯುಷ್ಯ ತೀರಿಹೋಗುತ್ತದೆ. ಆದ್ದರಿಂದ ಇಂತಹ ಅಮಾನುಷ ಕೃತ್ಯ ನಡೆಯಬಾರದು ಎಂದು ಹೇಳುತ್ತೇನೆ.

ಇವೊತ್ತಿನ ದಿವಸ ಡೈರಿ ಹಾಲಿನಲ್ಲಿ ಹುಳ ಬಿದ್ದಿದೆ ಎಂದು ಪ್ರಸ್ತಾಪ ಮಾಡಿದಾಗ ತಾವು ಸ್ವತಃ ಅದನ್ನು ನೋಡಿಕೊಂಡು ಬರುವುದಕ್ಕೆ ಹೋಗಿದ್ದೀರಿ. ಅಂಥ ನಡವಳಿಕೆಯನ್ನು ತಾವು ಇಟ್ಟು ಕೊಂಡಿದ್ದೀರಿ. ಅದೇ ರೀತಿ ಎಲ್ಲಾ ಮಂತ್ರಿಗಳು ಮಾಡುತ್ತಾರೆಂದು ನಾನು ಆಶಿಸುತ್ತೇನೆ. ಇವತ್ತು ಪ್ರಾಣಿಗಳಿಗೆ ಬರುವಂತಹ ರೋಗಗಳಿಗೆ ಪ್ರೈವೇಟ್ ಪ್ರಾಕ್ಟೀಶನರ್ ಹತ್ತಿರ ಹೋದರೆ ಇಂಜೆಕ್ಷನ್ ಸಿಗುತ್ತದೆ. ಆದರೆ ಸರ್ಕಾರಿ ಆಸ್ಪತ್ರೆಗೆ ಹೋದರೆ 'ನೋ ಸ್ಟಾಕ್' ಎಂದು ಹೇಳು ತ್ತಿದ್ದಾರೆ. ಆದರೆ ಒಂದು 10—15 ರೂಪಾಯಿ ನೋಟು ಬಿಚ್ಚಿದರೆ ಆ ಪ್ರಾಣಿ ಉಳಿಯುತ್ತದೆ. ಈ ರೀತಿ ಮಾಡುವವರನ್ನು ರಾಕ್ಷಸರೆಂದು ಕರೆಯಲೇ, ಅಥವಾ ಕಟುಕರೆಂದು ಕರೆಯಲೋ? ಇವತ್ತು ಎಂ.ಎಲ್.ಎ. ರೆಪ್ರಸೆಂಟೇಷನ್ ಮಾಡಿದರೆ, ಅದು ರೈಟಿಂಗ್‌ನಲ್ಲಿ ಬಂದಿಲ್ಲವೆಂದು ಹೇಳುತ್ತಿದ್ದಾರೆ. ನಿಮ್ಮ ಕಿವಿ ಕೇಳುವುದನ್ನು ಒಪ್ಪಿಕೊಳ್ಳುವುದಿಲ್ಲ; ಕಣ್ಣು ಕಾಣುವುದನ್ನು ನೋಡುತ್ತಾ ಇಲ್ಲ. ಆದ್ದರಿಂದ ನಿಮ್ಮ ಕಣ್ಣಿಂದಲಾದರೂ ಸ್ವಲ್ಪ ಕಣ್ಣೀರ ಹನಿ ಸುರಿಯುವಂತಾಗಿ ಈ ಪ್ರಾಣಿಗಳ ರಕ್ಷಣೆಯಾಗಲಿ.

ಇನ್ನು ಕೋಳಿಗಳಿಗೆ ಒಂದು ರೋಗ ಬರುತ್ತದೆ. ಅದು ಬಂದರೆ ಬಾಕಿ ಉಳಿದ ಗೂಡಿನಲ್ಲಿ ರತಕ್ಕ ಕೋಳಿಗಳು ಸಹ ಉಳಿಯುವುದಿಲ್ಲ. ಅದರ ಬಗ್ಗೆ ತಾವು ಏನು ಮಾಡಿದ್ದೀರಿ? ಅದರ ವೈರಸ್ ಏನೆಂಬುದರ ಬಗ್ಗೆ ವಿಚಾರಣೆ ಮಾಡಿದ್ದೀರಾ? ಇದಕ್ಕೆ ತಜ್ಞರನ್ನು ನೇಮಿಸಿ ಬಾಕಿ ಉಳಿದ ಕೋಳಿಗಳಾದರೂ ಬದುಕುವಂತೆ ಮಾಡುವ ಏನಾದರೂ ವ್ಯವಸ್ಥೆಯನ್ನು ಮಾಡಿದ್ದೀರಾ ಎಂದು ಕೇಳುತ್ತೇನೆ. ಇವತ್ತು ರಿಸರ್ಚ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ರಿಸರ್ಚ್ ಮಾಡುತ್ತಾರೆ; ಅದರ ರಿಸಲ್ಟ್ ಇಲ್ಲವೇ ಇಲ್ಲ. ಕುತೂಹಲದಿಂದ ಯಾವುದಾದರೂ ಒಂದು ರೋಗ ಬಂದರೆ ಅದರ ಸ್ಯಾಂಪಲುಗಳನ್ನು ರಿಸರ್ಚಿಗೆಂದು ತೆಗೆದುಕೊಂಡು ಹೋಗುತ್ತಾರೆ. ಆದರೆ ಅದರ ರಿಸಲ್ಟ್ ಎಲ್ಲಿ ಹೋಯಿತು ಏನಾಯಿತು ಎಂದು ಗೊತ್ತಿಲ್ಲ. ಇದರ ಬಗ್ಗೆ ಮಾನ್ಯ ಹಮೀದ್‌ಶಾರವರು ಒಂದು ಉದಾಹರಣೆಯನ್ನು ಕೊಟ್ಟು ಹೇಳಿದರು. ಹಸುವಿಗೆ ಯಾವುದೋ ಒಂದು ರೋಗ ಬಂತು. ಸ್ಯಾಂಪಲ್ ಸಲುವಾಗಿ ಅದರ ಎಂಜಲು ಇತ್ಯಾದಿಗಳನ್ನು ತೆಗೆದುಕೊಂಡು ಹೋದರು. ಆದರೆ ಹಸು ಮಾತ್ರ ಹೋಯಿತು; ಇದರ ರಿಸಲ್ಟ್ ಇಲ್ಲ, ಏನೂ ಇಲ್ಲ. ಇದಕ್ಕೆ ಕಾರಣವಾದರೂ ಏನು? ಅಧಿ ಕಾರಿಗಳಿಗೆ ನೀವು ಪ್ರೋತ್ಸಾಹ ಕೊಡುವುದಿಲ್ಲವೇ? ಅಥವಾ ಅಧಿಕಾರಿಗಳಿಗೆ ಪ್ರೊಮೋಷನ್ಸ್ ಸಿಗಬೇಕಾಗಿದ್ದು ಸಿಗಲಿಲ್ಲವೆಂದು ಇಂಟರೆಸ್ಟ್ ಇಲ್ಲವೇ? ಒಮ್ಮೆ ಬೆಂಗಳೂರು ಡೈರಿಯ ಕೆಲವು ಅಧಿಕಾರಿಗಳ ಹತ್ತಿರ "ಏನು ಸ್ವಾಮಿ ಹಾಲಿನಲ್ಲಿ ಹುಳು ಸಿಕ್ಕಿದೆಯಂತಲ್ಲ" ಎಂದು ಕೇಳಿದೆ. ಇದಕ್ಕೆ ಒಂದು ಕನ್ಸಲ್ಟೇಟೀವ್ ಕಮಿಟಿ ಮಾಡಿ, ಅದರಲ್ಲಿ ನಾನ್ ಅಫಿಷಿಯಲ್ಸ್ ಯಾರಾದರೂ ಇದರ ಬಗ್ಗೆ ಅನುಭವ ಇದ್ದರೆ, ಅಂಥವರ ಅಭಿಪ್ರಾಯಗಳನ್ನು ತೆಗೆದುಕೊಂಡು ಇಂತಹ ಕೆಲಸಗಳನ್ನು ಮಾಡಿದರೆ ಅದರಿಂದ ಬಹಳ ಸುಧಾರಣೆ ಮಾಡಬಹುದು ಎಂದು ಹೇಳುತ್ತಿದ್ದರು. ನ್ಯಾಯವಾದ

ಟೀಕೆಗಳನ್ನು ಮಾಡಿದರೆ ಮನಸ್ಸಿಗೆ ವ್ಯಥೆಯಾಗುವುದಿಲ್ಲ. ಆದರೆ ಇಲ್ಲದ ಸಲ್ಲದ ಟೀಕೆಗಳನ್ನು ಮಾಡಿದರೆ ಮನಸ್ಸಿಗೆ ಸ್ವಲ್ಪ ನೋವಾಗುತ್ತದೆ ಎಂದು ಸಹ ಆ ಅಧಿಕಾರಿಗಳು ಹೇಳಿದರು. ಆದ್ದರಿಂದ ನಾನಾದರೂ ಕೇಳುತ್ತೇನೆ ಈ ರೀತಿ ಹುಳುಗಳು ಬೀಳದಂತೆ ಏನಾದರೂ ಫುಲ್‌ಪ್ರೂಫ್ ಸಿಸ್ಟಂ ಇಟ್ಟುಕೊಂಡಿದ್ದೀರಾ ! ಅದಲ್ಲದೆ ಬೆಂಗಳೂರು ಡೈರಿಗೆ ಹುಳು ಬಿದ್ದದನ್ನು ಪ್ರಚಾರ ಮಾಡುವ ಶಕ್ತಿಗಳು ಬೇರೆ ಇಲ್ಲವೇ ! ಈ ಸಬೋಟೇಜ್ ಮಾಡುವ ಶಕ್ತಿಗಳು ಏನಿವೆ, ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ! ಅಂಥ ಶಕ್ತಿಗಳು ಇವತ್ತು ಬೆಂಗಳೂರಿನಲ್ಲಿ 6—6 ಹಂತದ ಹೋಟೇಲುಗಳನ್ನು ಕಟ್ಟಿಸುತ್ತಿದ್ದಾರೆ. ಅಂಥವರು ಮಿಲ್ಕ್ ವಾಟರ್ ಮಾರಿ ನಿಮ್ಮ ಡೈರಿಗೆ ಕೆಟ್ಟ ಹೆಸರು ಇವತ್ತು ತರುತ್ತಿದ್ದಾರೆ. ನಿಮ್ಮ ಬೆಂಗಳೂರು ಡೈರಿ ಹಾಲು ತಂದು ಕೌಂಟರ್‌ಫೀಟ್ ಮಾಡಿ ಸೀಲ್ ಹೊಡೆದು ಮಾಡುತ್ತಿದ್ದಾರೆ. ಇವತ್ತು ಬರೇ ಪ್ರೈವೇಟ್ ಡೈರಿ ಮಾಡಿಕೊಂಡವರು ಬಹಳ ಮುಂದುವರಿಯುತ್ತಿದ್ದಾರೆ. ಆದರೆ ನಿಮ್ಮ ಡೈರಿಯು ಮಾತ್ರ ಮುಂದುವರಿಯುವುದೇ ಇಲ್ಲ. ಇದಕ್ಕೆ ಕಾರಣವೇನು ! ಬರೇ ಲೆಕ್ಕ ಮಾತ್ರ ಜಾಸ್ತಿಯಾಗುತ್ತಿದೆಯೆಂದು ಕಾಣುತ್ತದೆ. ಇವತ್ತು ಹಾಲಿನಲ್ಲಿ ಬೇರೆ ಕಡೆಗಳಲ್ಲಿ 60ಕ್ಕಿಂತಲೂ ಹೆಚ್ಚು ಐಟಮುಗಳನ್ನು ತಯಾರಿಸುತ್ತಿದ್ದಾರೆ. ಆದರೆ ನಿಮ್ಮ ಡೈರಿಯಲ್ಲಿ ಸಿಗುವುದು ಒಂದು ಕರ್ಡ್ಸ್, ಇನ್ನೊಂದು ತುಪ್ಪ. ಆದರೆ ಆ ತುಪ್ಪಕ್ಕೆ ತುಪ್ಪದ ವಾಸನೆ ಕೂಡ ಇಲ್ಲ. ಇನ್ನು ಬೇರೆ ಯಾವುದೋ ಕೆಸಿನ್ ತಯಾರು ಮಾಡುತ್ತಿದ್ದೀರಿ ಎಂದು ಕಾಣುತ್ತದೆ. ಆ ಒಂದು ಕೇಸಿನ್ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಫ್ಲೇವರ್ಡ್ ಮಿಲ್ಕ್ ಕೊಡುತ್ತಿದ್ದಾರೆ. ಅದಕ್ಕೆ ಎಸೆನ್ಸ್ ಸೇರಿಸುತ್ತಿದ್ದಾರೆ. ಇದರಲ್ಲಿ ಸ್ವಲ್ಪಮಟ್ಟಿಗೆ ಸಂಶಯ ಬರುತ್ತಿದೆ. ಕೆಟ್ಟ ವಾಸನೆ ಇರತಕ್ಕ ಹಾಲನ್ನು ಕೊಡುವುದು ಸರಿಯಲ್ಲ.

ಇನ್ನು ಅರಣ್ಯ ವಿಚಾರ. ನಾನು ಬಂದಿರುವ ಭಾಗ ಹೈದರಾಬಾದ್ ಕರ್ಣಾಟಕದಲ್ಲಿ ಪಾರ್‌ಸಾ ಜಹಗೀರ್ ಎಂಬ ಒಂದು ಅರಣ್ಯ ಪ್ರದೇಶ ಇದೆ. ಅಲ್ಲಿ 21 ಅಡಿಗಳ ಒಬ್ಬ ನವಾಬ 101 ಹಳ್ಳಿಗಳಿಗೆ ಒಬ್ಬ ಜಹಗೀರ್‌ದಾರ. ಮಹಾರಾಷ್ಟ್ರ ಮುಖ್ಯಮಂತ್ರಿ ಮಾನ್ಯ ಶ್ರೀ ವಿ. ಪಿ. ನಾಯಕ್ ಅವರ ಕಾಲದಲ್ಲಿ ಅಂತಹ ಒಬ್ಬ ನವಾಬ ಈಗಲೂ ಹುಲಿ ಬೇಟೆಗೆ ಬಿಲ್ಲನ್ನು ತೆಗೆದುಕೊಂಡು ಹೋಗತಕ್ಕ ಒಬ್ಬ ನವಾಬನಾಗಿದ್ದಾನೆ. ಹಿಂದಿನ ನವಾಬರು ಇಂತಹ ಕೆಲಸಗಳನ್ನು ಮಾಡಿದ್ದಾರೆ. ಬಿದರ್ ಜಿಲ್ಲೆಯಲ್ಲಿ ಈಗ 9 ತರಹ ನವಾಬರು ಇದ್ದಾರೆ. ಹುಲಿಯ ಬೇಟೆ ಆಡುವ ಚಟ ಇವರಿಗೆ ಇದೆ. ಗೇಮ್ ಸ್ಯಾಂಕ್ಚುಯರಿ ಮಾಡಿದ್ದೀರಿ. ರೈತರು ಬೆಳೆಯುತಕ್ಕ ಭೂಮಿಗೂ ರಿಜರ್ವ್ ಫಾರೆಸ್ಟ್‌ಗೂ ಡಿಮಾರ್ಕೇಷನ್ ಈಗಲೂ ಕಾಣುತ್ತಿದ್ದೇವೆ. ಆದರೆ ಅದು ಅಲ್ಲಿನ ನವಾಬರ ಕಣ್ಣಿಗೆ ಬೀಳುವಂತಿಲ್ಲ. ಅವರು ಮಾಡತಕ್ಕ ಅನ್ಯಾಯ ಬಾಯ್ದೆರೆದರೆ ನೆಲಕ್ಕೆ ಹಾಕಿ ಅಪ್ಪಳಿಸುತ್ತಾರೆ. ಇವತ್ತು ನಮ್ಮಲ್ಲಿ ನಾಮಿನಲ್ ಫಾರೆಸ್ಟ್ ಲ್ಯಾಂಡ್ 25 ಸಾವಿರ ಎಕರೆಗಳಿಗಿಂತ ಹೆಚ್ಚಾಗಿದೆ. ನಮ್ಮಲ್ಲಿ ಎಷ್ಟೆಷ್ಟು ನಾಮಿನಲ್ ಫಾರೆಸ್ಟ್ ಲ್ಯಾಂಡ್ ಇದೆಯೋ ಅದನ್ನು ರೈತರು ಉಳುತ್ತಿದ್ದಾರೆ. 1948 ರಲ್ಲಿ ಈ ಲ್ಯಾಂಡಿನ ಸ್ವಲ್ಪ ಸ್ವಲ್ಪ ಭಾಗವನ್ನು ಪ್ರತಿಯೊಬ್ಬ ರೈತನೂ ಹೊಡೆದುಕೊಂಡಿದ್ದಾನೆ. ಎಲ್ಲಿ ರೈತ ಉಳುಮೆಮಾಡಿ ಕೊಂಡಿದ್ದಾನೋ ಎಲ್ಲಿ ಅವನು ಬೆಳೆಯುತ್ತಾನೋ ಅದು ಬರೀ ನಾಮಿನಲ್ ಫಾರೆಸ್ಟ್ ಲ್ಯಾಂಡ್‌ನಿಂದ ಎಂಬುದಾಗಿ ಹೇಳಬಹುದು. [illegible]ರಿಂದಲೇ ರೈತ ಸುಮಾರು ನಾಲ್ಕೈದು ವರ್ಷಗಳಿಂದ ಬೆಳೆ ಕಾಣುತ್ತಿದ್ದಾನೆ. ಶಿವಾ ಜಮಾಬಂ[illegible]ಡೆಗಳಲ್ಲಿ ರೈತ ಉಳುತ್ತಿದ್ದಾನೆ, ಅಂತಹ ಜಮೀನುಗಳಿಂದ ಅವರನ್ನು ಒಕ್ಕಲೆಬ್ಬಿಸ[illegible] ಯಾ[illegible]ಗ ಕ್ರಮ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಅದಕ್ಕೆ ಮೊದಲು ಸಾಗುವಳಿದಾರರೇ ಒಂ[illegible] ಕಟ್ಟಿದ್ದಾರೆ. ಆದ್ದರಿಂದ With a single stroke of pen undo the justice tha[illegible]s been done so far ಎಂದು ಹೇಳುತ್ತೇನೆ.

ಕೊನೆಯದಾಗಿ, [illegible]ರಡು ಮೂರು ವಿಷಯಗಳನ್ನು ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಉತ್ತರ ಕನ[illegible]ಟಕ ಜಿಲ್ಲೆಯಲ್ಲಿ ಫಾರೆಸ್ಟ್ ಪ್ರಿವಿಲೇಜ್ ಎಂದು ಇದೆ. ಇದರಲ್ಲಿ ಒಬ್ಬ ಕಾರ್ಮಿಕ ರೈತ ಕಾಡಿನ[illegible] ಸೌದೆ ತೆಗೆದುಕೊಂಡು ಬರುತ್ತಾನೆ. ಅಂತಹವನಿಗೆ ಮಿನಿಮಂ ಸಬ್‌ಸಿಸ್ಟೆನ್ಸ್ ಲೆವಲ್‌ಗೆ ಎ[illegible]ಬೇಕೋ ಅಷ್ಟು ಮಾತ್ರ ಬಿಟ್ಟುಬಿಡಿ. ನಾಗರಿಕರಾಗಿ ಹುಟ್ಟಿರುವಾಗ ಜೀವನ ಮಟ್ಟ ಸರಿಯಾಗು[illegible]ರೆಗೆ ಆತನಿಗೆ ಅನ್ನ ಕೊಡದಿದ್ದರೆ ಹೇಗೆ? ತನ್ನ ಅನ್ನ ಸಂಪಾದನೆ ಮಾಡಿಕೊಳ್ಳಲು ಆತನು ಕ[illegible]ಯು ಪಕ್ಷ ಬೆಟ್ಟದಿಂದ ಸೌದೆ ಕಡಿದು ತೆಗೆದುಕೊಂಡು ಬರುತ್ತಾನೆ. ಅದರಿಂದ ಜೀವನಮಾಡು[illegible]ನೆ. ಅಂತಹವನಿಗೆ ನೀವು ಇನ್ನು ಏನೂ ಮಾಡಬೇಡಿ ಸ್ವಲ್ಪ ಜಮೀನನ್ನು ಕೊಡಿ. ಈಗ ನ[illegible]ಲ್ಲಿ 6 ಲಕ್ಷ 12 ಸಾವಿರ ಎಕರೆಗಳಷ್ಟು ಫಾರೆಸ್ಟ್ ಜಮೀನು ಇದೆ. ಇದನ್ನು ಈ ವರ್ಷ 15ನೇ ಆ[illegible]ನಿಂದ ಮುಂದಿನ ವರ್ಷ 15ನೇ ಆಗಸ್ಟ್ ಒಳಗೆ ಭೂಹೀನ ರೈತರಿಗೆ ಹಂಚುವಲುವಾಗಿ [illegible]ದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅದು ವ್ಯವಸಾಯಕ್ಕೆ ಯೋಗ್ಯವಾದುದಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಫಾರೆಸ್ಟಿಗೆ ಅನ್‌ಫಿಟ್ ಎಂದು ಹೋಲ್ಡ್ ಮಾಡಿದರೆ, ಅದು ಅಗ್ರಿಕಲ್‌ಚರ್‌ಗೆ ಅನ್‌ಫಿಟ್ ಆಗುತ್ತದೆಯೋ ?

ಶ್ರೀ ವಿ. ಎನ್. ಪಾಟೀಲ್.—ಅಂಥದ್ದರ ಉದಾಹರಣೆಯನ್ನು ಬೇಕಾದರೆ ತಮಗೆ ಕೊಡುತ್ತೇನೆ. ಅಲ್ಲಿನ ಹೊಲಗಳಲ್ಲಿ ಸಜ್ಜೆ, ನವಣೆ, ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಅದೇ ಬದರೆ ಜಿಲ್ಲೆಯಲ್ಲಿ ಏನನ್ನೂ ಮಾಡುವುದಕ್ಕಾಗುವುದಿಲ್ಲ.

ಕೊನೆಯದಾಗಿ, 18 ಲಕ್ಷ ರೂಪಾಯಿಗಳನ್ನು ಮೂರನೆಯ ಪಂಚವಾರ್ಷಿಕ ಯೋಜನೆಯ ಕೆಳಗೆ ರಿಹ್ಯಾಬಿಲಿಟೇಷನ್ ಮಾಡುವುದಕ್ಕೋಸ್ಕರ ಏನು ಸರ್ಕಾರದಲ್ಲಿಟ್ಟಿದ್ದಾರೋ ಅದನ್ನು ಲ್ಯಾಂಡ್‌ಲೆಸ್ ಜನರಿಗೆ ಕೊಡದೇ ಇರುವುದರಿಂದ, ಅದು ಈಗ ಲ್ಯಾಪ್ಸ್ ಆಗಿದೆ. ಆದರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ರೀತಿಯಾಗಿ ಈ ಬಾಬಿನಲ್ಲಿ ಲ್ಯಾಪ್ಸ್ ಆಗುವುದಕ್ಕೆ ಅವಕಾಶವನ್ನು ಕೊಡಬಾರದೆಂದು ನಾನು ಕೇಳಿಕೊಂಡು, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಹೆಚ್ಚು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಅಂದಾನಪ್ಪ (ಹಡಗಲಿ).—ಸನ್ಮಾನ್ಯ ಸಭಾಪತಿಗಳೇ, ಈ ದಿನದ ವ್ಯವಸಾಯ ಖಾತೆಯ ಬೇಡಿಕೆಯನ್ನು ಬೆಂಬಲಿಸುತ್ತಾ, ಮುಖ್ಯವಾದ ಎರಡು ಮೂರು ವಿಚಾರಗಳಲ್ಲಿ ಮಾತ್ರ ನಾನು ಕೆಲವು ಸಲಹೆಗಳನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಈಗ ಈ ವ್ಯವಸಾಯಯೋದ್ಯಮ ಏನಿದೆಯೋ ಇದು ನಮ್ಮ ಹಿಂದೂಸ್ಥಾನದಲ್ಲಿ ಸುಮಾರು ಸೇಕಡ 75 ರಿಂದ ಸೇಕಡ 80 ರಷ್ಟು ಜನಸಂಖ್ಯೆಯ ಮೇಲೆ ಒಂದು ಆಧಾರ ಪಡೆದಿದೆ. ಆದರೆ ನಾವು ಇದಕ್ಕೆ ಕೊಡತಕ್ಕ ಪ್ರಾಮುಖ್ಯತೆ ಮಾತ್ರ ಅದಕ್ಕೆ ಹೊಂದಿಕೊಂಡಿಲ್ಲ. ಸೇಕಡ 80 ರಷ್ಟು ಈ ಜನಗಳ ಪೈಕಿ ಸೇಕಡ 20 ಭಾಗದಷ್ಟು ಜನರಿಗೆ ಮಾತ್ರ ಈಗ ನಾವು ಪ್ರಾಮುಖ್ಯತೆ ಕೊಡುತ್ತಿದ್ದೇವೋ ಏನೋ ಎಂಬುದನ್ನು ಅಂಕಿ ಸಂಖ್ಯೆಗಳಿಂದ ನೋಡಬೇಕಾಗಿದೆ. ಆದುದರಿಂದ ಈಗ ಮಂತ್ರಿಗಳೇನು ತಮ್ಮ ಒಂದು ಬೇಡಿಕೆಯನ್ನು ಇಲ್ಲಿ ಇಟ್ಟಿದ್ದಾರೆ ಮತ್ತು ಏನು ಅದಕ್ಕೆ ಈ ದಿವಸ ಒಂದು ಹಣವನ್ನು ಒದಗಿಸಿದ್ದಾರೆ ಅದು ಬಹಳ ಕಡಿಮೆ ಎಂಬುದಾಗಿ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ದಿವಸ ಯಾವ ಜನರು ಈ ಉದ್ದಿಮೆಯಲ್ಲಿ ತೊಡಗಿದ್ದಾರೆ ಅವರು ಶೇ 80 ರಷ್ಟು ಇದ್ದಾರೆ ಒಟ್ಟು ಮೊದಲನೆಯದಾಗಿ ಇವರಲ್ಲಿ ಒಂದು ಆರ್ಗನೈಜೇಷನ್ ಶಕ್ತಿ ಇಲ್ಲ. ರೈತರಿಗೆ ಅವರು ತಮ್ಮಲ್ಲಿ ಸರಿಯಾಗಿ ಒಂದು ಆರ್ಗನೈಜಿಂಗ್ ಶಕ್ತಿಯನ್ನು ಬೆಳೆಸಿಕೊಳ್ಳುವುದಕ್ಕೆ ಈ ಸರ್ಕಾರದವರು ಮಂಡಿಸಿರತಕ್ಕ ಬಜೆಟ್ಟಿನಲ್ಲಿ ಯಾವ ಒಂದು ಪ್ರಾವಿಜನ್ನನ್ನೂ ಮಾಡಿಲ್ಲ. ಆದರೆ ಇರುವುದರಲ್ಲೇ ಅವರು ಅಡ್‌ಜಸ್ಟ್ ಮಾಡಿಕೊಂಡು ಒಂದು ಯೋಜನೆಯನ್ನು ರೂಪಿಸಿಕೊಳ್ಳಬೇಕಾಗಿದೆ.

4-00 P.M.

ಇನ್ನು ನಮ್ಮಲ್ಲಿ ಈಗ ಇರತಕ್ಕ ನೀರಾವರಿ ಪ್ರದೇಶ ಶೇ. 12 ರಿಂದ 15 ಇರಬಹುದು. ನಮ್ಮಲ್ಲಿ ಸಾಧ್ಯವಿರತಕ್ಕ ಎಲ್ಲಾ ಸೋರ್ಸುಗಳನ್ನೂ ಟ್ಯಾಪ್‌ಮಾಡಿದಾಗ ಅದು ಶೇ. 25ಕ್ಕೆ ಇಲ್ಲವೇ 30 ಕ್ಕೆ ಹೋಗಬಹುದು. ಅಂದರೆ ಅಲ್ಲಿಗೆ ನಮ್ಮ ರಾಜ್ಯದಲ್ಲಿ ಇನ್ನು ನೀರಾವರಿ ಅನುಕೂಲಗಳಿಲ್ಲದಂಥ ಭೂಮಿ ಅಷ್ಟೂ ಆಕಾಶದಿಂದ ಬೀಳತಕ್ಕ ಮಳೆಯನ್ನೇ ಅವಲಂಬಿಸಿರುತ್ತದೆ. ಹೀಗೆ ನಮ್ಮಲ್ಲಿ ಅಗಾಧ ರೀತಿಯಲ್ಲಿ ವ್ಯವಸಾಯ ಮಾಡತಕ್ಕ ಭೂಮಿಯ ಬಗ್ಗೆ ಅಂದರೆ ಖುಷ್ಕಿ ಬೆಳೆಯ ವಿಚಾರದಲ್ಲಿ ಸಾಕಷ್ಟು ಗಮನವನ್ನು ಕೊಡುತ್ತಿಲ್ಲ. ಅದಕ್ಕೆ ಎಷ್ಟು ಪ್ರಾಮುಖ್ಯತೆ ಕೊಡಬೇಕೋ ಅಷ್ಟನ್ನು ಕೊಡುತ್ತಾ ಇಲ್ಲ. ದೇಶದಲ್ಲಿ ನಮ್ಮ ಆಹಾರದ ಪರಿಸ್ಥಿತಿ ಸುಧಾರಿಸಿ ಈ ಆಹಾರಾಭಾವ ಹೋಗಬೇಕಾಗಿದ್ದರೆ ನಾವು ಖುಷ್ಕಿ ಬೆಳೆಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡಬೇಕಾದ್ದು ಅವಶ್ಯಕ. ಈಗತಾನೆ ನಾನು ಕೇಳಿದ್ದರಲ್ಲಿ ಕೇಂದ್ರ ಸರ್ಕಾರದವರು ರಾಜ್ಯದ ಕೆಲವು ಭಾಗಗಳಲ್ಲಿ ಡ್ರೈ ಫಾರ್ಮಿಂಗುಗಳನ್ನು ಮಾಡುವುದಕ್ಕೆ ಒಂದು ಸ್ಕೀಮನ್ನು ತಯಾರಿಸಿದ್ದಾರೆಂದೂ ಆದರ ಅಂಗವಾಗಿ ನಮ್ಮ ರಾಜ್ಯದ 2-3 ಜಿಲ್ಲೆಗಳಲ್ಲಿ ಇದನ್ನು ಪ್ರಾಯೋಗಿಕವಾಗಿ ನಡೆಸಲಾಗುತ್ತಿದೆ ಎಂದು ಕೇಳುತ್ತಿದ್ದೇನೆ, ಈ ಯೋಜನೆಯನ್ನು ನಮ್ಮ ಸರ್ಕಾರದವರು ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸುವಂತೆ ಹಾಗೂ ರಾಜ್ಯದ ಎಲ್ಲಾ ಭಾಗಗಳಿಗೂ ಇದನ್ನು ಹರಡುವಂತೆ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕೆಂದು ನಾನು ನಮ್ಮ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಬರೀ ಈ ನೀರಾವರಿ ಬೆಳೆಯಿಂದಲೇ ದೇಶದ ಆಹಾರ ಪರಿಸ್ಥಿತಿಯನ್ನು ಸುಧಾರಣೆ ಮಾಡುತ್ತೇವೆಂದರೆ ಅದು ಅಸಾಧ್ಯವಾದ ಮಾತು.

ಇನ್ನೊಂದು ವಿಚಾರ. ಅರಣ್ಯ ಖಾತೆಯ ವಿಚಾರದಲ್ಲಿ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದರೆ ನಮ್ಮ ಅರಣ್ಯವನ್ನು ಬೆಳೆಸತಕ್ಕ ವಿಚಾರದಲ್ಲಿ ನಾನು ಒಂದು ಸಲಹೆ ಮಾಡಬಯಸುತ್ತೇನೆ. ಇಲ್ಲಿಯವರೆಗೂ ಈ ಅರಣ್ಯಗಳ ಪ್ರಾಮುಖ್ಯತೆಯನ್ನು ನಮ್ಮ ಜನರಾಗಲಿ ಸರ್ಕಾರದವರಾಗಲಿ ಸರಿಯಾಗಿ ಅರಿತುಕೊಂಡಿರುವಂತೆ ಕಾಣುತ್ತಿಲ್ಲ. ಆದರೆ ಎಲ್ಲರೂ ಸಾಕಷ್ಟು ಭಾಷಣಗಳನ್ನೇನೋ ಮಾಡುತ್ತಿದ್ದಾರೆ. ಆದರೆ ಯಾವ ಅರಣ್ಯವೂ ಉತ್ತಮಗೊಂಡಿಲ್ಲ. ಬರೀ ಮಾತಿನಲ್ಲೇ ಎಲ್ಲ ಮುಕ್ತಾಯವಾಗಿದೆ. ಅದು ಕಾರ್ಯರೂಪಕ್ಕೆ ಮಾತ್ರ ಇಳಿದಿಲ್ಲ ಅಂದರೆ ಸ್ವಲ್ಪಮಾತ್ರವೂ ಇಳಿದಿಲ್ಲ. ನಾನು ಕಳೆದ 25 ವರ್ಷಗಳಿಂದಲೂ ನೋಡುತ್ತಿದ್ದೇನೆ ನಾವೇನಿದ್ದರೂ ಬರಿ ಭಾಷಣಗಳನ್ನು ಮಾಡುವುದರಲ್ಲೇ ತೃಪ್ತರಾಗಿದ್ದೇವೆ. ಆದರೆ ಅದನ್ನು ಅಭಿವೃದ್ಧಿ ಮಾಡಲು ಯಾವ ಒಂದು ಯೋಜನೆಯನ್ನೂ ಕೂಡ ಹಾಕಿಕೊಂಡಿಲ್ಲ. ನಾವು ಅರಣ್ಯವನ್ನೂ ಕೂಡ ಬೆಳೆಸುತ್ತಿಲ್ಲ. ಇಧಕ್ಕೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ತಯಾರು ಮಾಡಬೇಕು. ನಾವು ಎಷ್ಟು ಎಕರೆಗಳಲ್ಲಿ ಅರಣ್ಯವನ್ನು ಬೇಳೆಸಬೇಕು—ಮತ್ತು ಅದನ್ನು ಎಷ್ಟು ವರ್ಷಗಳಲ್ಲಿ ಬೆಳೆಸಬೇಕು ಎಂಬುದನ್ನು ನಿರ್ಧಾರ ಮಾಡಿಕೊಂಡು ಅದಕ್ಕನುಸಾರವಾಗಿ ಕಾರ್ಯಗಳನ್ನು ಕೈಗೊಳ್ಳಬೇಕು. ಆದಕ್ಕೆ ಸಾಕಷ್ಟು ಹಣವನ್ನು ಒದಗಿಸಿಕೊಂಡು ಅದನ್ನು ಪೂರೈಸಬೇಕು. ಆದರೆ ದುರ್ದೈವದಿಂದ ಇಂಥ ಯಾವ ಒಂದು ಯೋಜನೆ ಕೂಡ ನಮ್ಮ ಮುಂದಿಲ್ಲ. ಈ ವಿಚಾರದಲ್ಲಿ ಏನು ಮಾಡಬೇಕೆಂಬ ಬಗ್ಗೆ ನಮ್ಮ ಮಂತ್ರಿಗಳು ಒಂದು ಸ್ಟೇಟ್‌ಮೆಂಟನ್ನು ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ನಾನು ಒಂದು ಯೋಜನೆಯನ್ನು ಸರ್ಕಾರಕ್ಕೆ ಕೊಡುತ್ತೇನೆಂದರೆ ಮಂತ್ರಿಗಳು ಸರ್ಕಾರದಲ್ಲಿ ಸಾಕಷ್ಟು ಹಣವಿಲ್ಲ ಎನ್ನಬಹುದು, ಅದಕ್ಕೆ ನನ್ನ ಇನ್ನೂ ಒಂದು ಸಲಹೆ ಏನೆಂದರೆ ಈ ದಿವಸ ರೈತರಿಗೆ ವ್ಯವಸಾಯಕ್ಕೆ ಜಮೀನನ್ನು ಬಿಟ್ಟು ಕೊಡಿ ಎಂದರೆ ಅದು ಫಾರೆಸ್ಟಿಗೆ ರಿಜರ್ವಾಗಿದೆ ಎಂದು ಹೇಳುತ್ತಾರೆ. ಆದರೆ ಅಲ್ಲಿ ಹೋಗಿ ನೋಡಿದರೆ ಒಂದು ಗಿಡ ಸಹಿತ ಅಲ್ಲಿರುವುದಿಲ್ಲ. ಆದಾಗ್ಯೂ ರಿಪೋರ್ಟುಗಳಲ್ಲಿ ಮಾತ್ರ ಅಲ್ಲಿ ಅಡವಿ ಇದೆಯೆಂದು ತಿಳಿಸುತ್ತದೆ. ಈ ಅರಣ್ಯಗಳನ್ನು ಬೆಳೆಸುವುದಕ್ಕೆ ಸರ್ಕಾರದವರಲ್ಲಿ ಹಣವಿಲ್ಲದೆ ಹೋದರೆ ಅಲ್ಲಿ ಅರಣ್ಯವನ್ನು ಬೆಳೆಸತಕ್ಕ ಭೂಮಿ ಎಷ್ಟಿರುತ್ತದೋ ಆದನ್ನು ಸಣ್ಣ ಸಣ್ಣ ಪ್ಲಾಟುಗಳನ್ನಾಗಿ ವಿಂಗಡಿಸಿ ಅರಣ್ಯವನ್ನು ಬೆಳೆಸಿಕೊಡುತ್ತೇವೆಂದು ಹೇಳತಕ್ಕ ಜನರಿಗೆ ಲೀಜ್ ಮೇಲೆ ಅಂದರೆ 20 ವರ್ಷದ ಒಂದು ಲೀಜ್ ಪೀರಿಯಡ್ಡನ್ನು ನಿಗದಿ ಮಾಡಿ ಕೊಡಿ ಆ 20 ವರ್ಷಗಳು ಕಳೆದನಂತರ ಅಲ್ಲಿ ಬೆಳೆಸಿರತಕ್ಕ ಅರಣ್ಯದಲ್ಲಿ ಸರ್ಕಾರಕ್ಕೆ ಅರ್ಧ ಅವರಿಗೆ ಅರ್ಧ ಎಂದು ಭಾಗ ಮಾಡಿಕೊಂಡು ಅವರು ಬೇಕಾಗಿದ್ದರೆ ಆವರ ಭಾಗವನ್ನು 20 ವರ್ಷಗಳ ನಂತರ ಕಡಿದು ತೆಗೆದುಕೊಳ್ಳಬಹುದು ಎಂದು ಒಂದು ಷರತ್ತನ್ನು ಹಾಕಿಕೊಟ್ಟರೆ ಇದು ಸುಲಭವಾಗಿ ನಡೆಯುತ್ತದೆಂದು ನನಗೆ ಅನಿಸುತ್ತದೆ. ಆದರೆ ಇಲ್ಲಿಯೂ ಕೂಡ ಸರ್ಕಾರದವರು ಬಂಡವಾಳಷಾಹಿಗಳನ್ನು ತರಬಾರದು. ಯಾರೊಬ್ಬರಿಗೇ ಆಗಲಿ 100 ಎಕರೆಗಳಿಗೆ ಜಾಸ್ತಿ ಕೊಡಬಾರದು. ಒಂದು ವಯಬಲ್ ಯೂನಿಟ್ ಎಷ್ಟಿರಬೇಕು ಎಂಬುದನ್ನು ನೋಡಿ ನಿಗದಿ ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬೇಕೆಂದರೆ ಹಿಂದೆ ಜಪಾನಿನಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಅವರಲ್ಲಿ ದುಡ್ಡೇ ಇಲ್ಲ ಎಂದು ಹೇಳತಕ್ಕ ಒಂದು ಕಾಲದಲ್ಲಿ ಆ ರಸ್ತೆಗಳನ್ನು ಮಾಡುವುದಕ್ಕೆ ಅಲ್ಲಿದ್ದ ದೊಡ್ಡ ದೊಡ್ಡ ಸಂಘ ಸಂಸ್ಥೆಗಳನ್ನು ಮತ್ತು ಬ್ಯಾಂಕುಗಳನ್ನು ಕರೆಸಿಕೊಂಡು ಅವರಿಗೆ 10—20 ವರ್ಷಗಳ ಒಂದು ಲೀಜಿನ ಮೇಲೆ ಅಲ್ಲಿನ ಸರ್ಕಾರದವರು ತಯಾರಿಸತಕ್ಕ ಒಂದು ಎಷ್ಟಿಮೇಟಿನ ಆಧಾರದ ಮೇಲೆ ಆ ಪ್ರಕಾರ ರಸ್ತೆಗಳನ್ನು ನಿರ್ಮಾಣಮಾಡಿ ಅವರು 20 ವರ್ಷಗಳ ಕಾಲ ಅಲ್ಲಿ ವಾಹನಗಳನ್ನು ಓಡಿಸತಕ್ಕವರಿಂದ ಬರತಕ್ಕ ಟ್ಯಾಕ್ಸನ್ನು ಅವರೇ ವಸೂಲ್ಮಾಡಿಕೊಳ್ಳಬಹುದು ಎಂದು ಹೇಳಿದ್ದರಿಂದ ಅಂಥ ಒಂದು ಕರಾರಿನ ಮೇರೆ ಅಲ್ಲಿ ರಸ್ತೆಗಳನ್ನು ಮಾಡಿಸಿದ್ದರಿಂದ ಈ ದಿವಸ ಪ್ರಪಂಚದಲ್ಲಿ ಎಲ್ಲೂ ಇಲ್ಲದಂಥ ಸುಂದರವಾದ ರಸ್ತೆಗಳು ಅಲ್ಲಿರುವುದಕ್ಕೆ ಕಾರಣ ಆಯಿತು ಎಂದು ಹೇಳುತ್ತಿದ್ದಾರೆ. ಹಾಗೇ ನಾವಿಲ್ಲಿ ನಮ್ಮ ಅರಣ್ಯಗಳ ಅಭಿವೃದ್ಧಿಗೆ ಒಂದು ಯೋಜನೆಯನ್ನು ತಯಾರು ಮಾಡಬೇಕೆಂದು ಹೇಳುತ್ತಿದ್ದೇನೆ. ಹೀಗೆ ಮಾಡಿದರೆ ಇನ್ನು 5 ವರ್ಷದಲ್ಲಿ ಇಲ್ಲಿ ಒಳ್ಳೇ ಅರಣ್ಯಗಳನ್ನು ಕಾಣಲು ಸಾಧ್ಯ.

ಇನ್ನು ಒಂದು ವಿಷಯ ಏನೆಂದರೆ, ಸುಧಾರಿಸಿದ ಬೀಜ ಮತ್ತು ಗೊಬ್ಬರ ಇವುಗಳಿಗೆ ಸಾಕಷ್ಟು ಪ್ರಾಮುಖ್ಯತೆ ಇದೆ. ಈ ದಿವಸ ಈ ಸುಧಾರಿಸಿದ ಬಿತ್ತನೆ ಬೀಜ ಏನಿವೆ ಅಂದರೆ ಆ ಹೈಬ್ರೀಡ್ ಜೋಳ ಬಂದ ನಂತರ ನಮ್ಮ ಆಹಾರ ಪರಿಸ್ಥಿತಿ ಬಹಳಮಟ್ಟಿಗೆ ಸುಧಾರಿಸುತ್ತದೆ ಎಂದು ತಿಳಿದಿದ್ದೆವು. ಆದರೆ ಈ ವಿಚಾರದಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಒಂದು ರ್‍ಯಾಕೆಟ್ಟೇ ನಡೆಯುತ್ತಿದೆ. ಈ ಹೈಬ್ರೀಡ್ ಬಿತ್ತನೆ ಬೀಜದ ಹೆಸರಿನಲ್ಲಿ ಕೆಲವರು ಲಕ್ಷಾಂತರ ರೂಪಾಯಿಗಳನ್ನು ಗಳಿಸಿದ್ದಾರೆ. ಇಂಥದನ್ನು ತಡೆಯಲಿಕ್ಕೆ ನಮ್ಮಲ್ಲಿ ಸರಿಯಾದ ಕಾಯಿದೆಯಿಲ್ಲ. ಅದಕ್ಕೆ ಸರ್ಕಾರದವರು ತೀವ್ರವಾಗಿ ಒಂದು ಕಾಯಿದೆಯನ್ನು ತಯಾರಿಸಿ ಅದನ್ನು ಜಾರಿಗೆ ತರಬೇಕು. ಈ ದಿವಸ ಬಿತ್ತನೆ ಬೀಜಗಳನ್ನು

(ಶ್ರೀ ಸಿ. ಅಂದಾನಪ್ಪ)

ಬೆಳೆಸುವುದು ಮತ್ತು ಮಾರಾಟ ಮಾಡುವುದೇ ಒಂದು ದೊಡ್ಡ ಹುದ್ದೆಯಾಗಿದೆ. ಈ ದಿವಸ ಬಿತ್ತನೆ ಬೀಜಗಳ ವಿತರಣೆಯನ್ನು ಆ ಆಗ್ರೋ ಇಂಡಸ್ಟ್ರಿಯಲ್ ಕಾರ್ಪೊರೇಷನ್ನಿಗೆ ಕೊಟ್ಟಿದ್ದಾರೆ. ಅಲ್ಲಿ ಸಾಕಷ್ಟು ಹಣವನ್ನು ಈಗಾಗಲೇ ಗೈರು ವಿಲೆ ಮಾಡಿದ್ದಾರೆ. ಆದರೆ ಅದರ ರಿಪೋರ್ಟ್ ಇನ್ನೂ ಬಂದಿಲ್ಲ. ಇಲ್ಲಿ ಚರ್ಚೆಯೂ ಆಗಿಲ್ಲ. ಜನರು ಅಲ್ಲಿ 30-40 ಸಾವಿರ ರೂಪಾಯಿ ಲುಕ್ಸಾನಾಗಿದೆ ಎನ್ನುತ್ತಿದ್ದಾರೆ. ಇದು ಒಂದು ಬಿಜಿನೆಸ್ ಕನ್‌ಸರ್ನ್ ಆಗಿದ್ದರೂ ಇದು ಒಂದು ಸರ್ಕಾರಿ ಇಲಾಖೆ ಯಂತೆ ವರ್ತಿಸುತ್ತದೆ. ಕಾರಣ ಅಲ್ಲಿ ಸರ್ಕಾರೀ ನೌಕರರೇ ಹೆಚ್ಚು ಮಂದಿ ಇದ್ದಾರೆ. ಈ ಸಂಸ್ಥೆಗೆ ಹೈಬ್ರೀಡ್ ಕಾಟನ್ ಸೀಡ್ಸ್‌ನ್ನು ಹಂಚತಕ್ಕ ಅಧಿಕಾರ ಅದಕ್ಕೆ ಕೊಟ್ಟಿದ್ದಾರೆ. ಅದನ್ನು ಒಂದು ಕೆ.ಜಿ.ಗೆ 80 ರೂಪಾಯಿಗಳಂತೆ ಮಾರಾಟ ಮಾಡಬೇಕೆಂದು ಕಂಡೀಷನ್ ಹಾಕಿದ್ದಾರೆ. ಹೀಗೆ ಇನ್ನೂ ಅನೇಕ ಕಂಡೀಷನ್‌ಗಳನ್ನು ಹಾಕಿದ್ದಾರೆ. ಎರಡು ಪಕ್ಷಗಳೂ ಕೂಡಿ ಅಗ್ರಿಮೆಂಟ್ ಮಾಡಿಕೊಳ್ಳ ಬೇಕೇ ಹೊರತು ಸರಕಾರಿ ಆರ್ಡರು ಮಾಡುವ ರೀತಿಯಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊ ರೇಷನ್ ಈ ದಿವಸ ಸೇಕಡ 68 ಜರ್ಮಿನೇಷನ್ ಇರಬೇಕು, ಸೇಕಡ 9 ಮಾಯಿಶ್ಚರ್ ಇರಬೇಕು ಎಂದು ಹೇಳುವುದು ವ್ಯವಹಾರ ಯೋಗ್ಯವಲ್ಲ. ಜೂನ್ 15 ರೊಳಗೆ ಪ್ರೊಕ್ಯೂರ್‌ಮೆಂಟ್ ಮಾಡ ಬೇಕಾಗಿತ್ತು. ಈ ದಿವಸದವರೆಗೂ ಅದನ್ನು ಮಾಡಿಲ್ಲ. ಜುಲೈ ಆಖೈರಿನೊಳಗೆ ಬಿತ್ತನೆ ಮಾಡ ಬೇಕು. ಪ್ರೊಕ್ಯೂರ್‌ಮೆಂಟೇ ಆಗದಿರುವಾಗ ಬಿತ್ತನೆ ಮಾಡುವುದು ಯಾವಾಗ? ಹೀಗಾದರೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ಗಮನಿಸಿ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳ ಬೇಕು. ಪ್ರೊಕ್ಯೂರ್ ಮಾಡಿದ ಕೂಡಲೆ ನಾಟಿ ಮಾಡಿದರೆ ಕೆಟ್ಟ ಹೆಸರು ಬರುವುದೆಂದು ಈ ರೀತಿ ಮಾಡುತ್ತಿದ್ದಾರೆ. ಅವರಿಗೆ 10 ರೂಪಾಯಿ ಮಾರ್ಜಿನ್‌ಗೆ ಅವಕಾಶ ಮಾಡಿದ್ದೀರಿ. ಆದರೆ ಅವರು 10 ಪೈಸೆ ಕೆಲಸವನ್ನು ಸಹ ಮಾಡುತ್ತಿಲ್ಲ. ಅಗ್ರಿಕಲ್ಚರಲ್ ಇಲಾಖೆಯಿಂದ ಎಲ್ಲಾ ಕೆಲಸವನ್ನೂ ಮಾಡಿಸುತ್ತಿದ್ದಾರೆ. ಹಾಗಿರುವಾಗ ಅವರಿಗೆ ಇಷ್ಟು ಹಣ ಕೊಡುವುದೇಕೆ? ಕೆಲಸ ಮಾಡದೆ ಅವರು ಲಾಭ ಪಡೆಯುವರು. ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆ ಕಾರಣದಿಂದ ತಕ್ಷಣ ಇದನ್ನು ಸರಿಪಡಿಸಬೇಕು.

ರಸಾಯನಿಕ ಗೊಬ್ಬರದ ಬಗ್ಗೆ ಕೆಲವರು ಮಾತನಾಡಿದ್ದಾರೆ. ಈ ಬಗೆಯಲ್ಲಿರುವ ಅವ್ಯವಸ್ಥೆ ಯನ್ನು ಮಂತ್ರಿಗಳು ಆದಷ್ಟು ಬೇಗ ಸರಿಪಡಿಸಬೇಕು. ಸರಕಾರ ಸರಿಯಾಗಿ ವಿತರಣೆ ಮಾಡು ವಂತೆ ಅಧಿಕಾರಿಗಳಿಗೆ ಸೂಚನೆ ಕೊಡಬೇಕು ಎಂದು ವಿನಂತಿ ಮಾಡಿ ನಮ್ಮ ಮುಂದಿರುವ ಬೇಡಿಕೆ ಗಳಿಗೆ ಹೃತ್ಪೂರ್ವಕವಾಗಿ ಬೆಂಬಲಕೊಟ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಉಪಾಧ್ಯಕ್ಷರೇ, ಕೃಷಿ, ಅರಣ್ಯ, ಪಶುಪಾಲನೆ ಈ ಇಲಾಖೆಗಳ ಬಗ್ಗೆ ಸಚಿವರು ಮಂಡಿಸಿರುವ ಬೇಡಿಕೆಯನ್ನು ಸ್ವಾಗತಿಸಿ ಒಂದೆರಡು ಸಲಹೆಗಳನ್ನು ನೀಡಲು ಬಯಸುತ್ತೇನೆ. ನಮ್ಮದು ಕೃಷಿ ಪ್ರಧಾನವಾದ ದೇಶ ಎಂಬುದು ಎಲ್ಲರಿಗೂ ತಿಳಿದ ವಿಷಯ. ವ್ಯವಸಾಭಿವೃದ್ಧಿಯಾಗದೆ ವ್ಯವಸಾಯಗಾರರ ಸ್ಥಿತಿಗತಿ ಉತ್ತಮವಾಗದೆ ರೈತರ ಆರ್ಥಿಕ ಮಟ್ಟ ಹೆಚ್ಚುವುದಿಲ್ಲ ಎಂಬುದು ಸರ್ವವಿದಿತವಾಗಿದೆ. ಈ ವಿಷಯವನ್ನು ಗಮನಿಸಿ ಕೆಲವು ಸಲಹೆಗಳನ್ನು ಕೊಡಲು ಬಯಸುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯವು ಒಂದಿದೆ. ಎರಡು ಕಾಲೇಜುಗಳ ಕೃಷಿಗೆ ಸಂಬಂಧಪಟ್ಟಂತೆ ಇವೆ, ಒಂದು ಬೆಂಗಳೂರಿನಲ್ಲಿದೆ, ಮತ್ತೊಂದು ಧಾರವಾಡದಲ್ಲಿದೆ. ಇವುಗಳಲ್ಲಿ ಕೃಷಿಕರ ಮಕ್ಕಳಿಗೆ ಹೆಚ್ಚು ಅವಕಾಶವಿರಬೇಕು. ಆದರೆ ಈಗ ನಡೆಯುತ್ತಿರುವುದನ್ನು ನೋಡಿದರೆ ಮೆರಿಟ್‌ಗೆ ಪ್ರಾಧಾನ್ಯತೆ ಕೊಡುತ್ತಿರುವುದರಿಂದ ವ್ಯವಸಾಯವನ್ನೇ ಮುಖ್ಯ ಕಸಬಾಗಿ ಇಟ್ಟುಕೊಂಡಿರುವವರ ಮಕ್ಕಳಿಗೆ ವ್ಯವಸಾಯ ಕಾಲೇಜು ಗಳಲ್ಲಿ ಓದಲು ಅವಕಾಶ ಸಿಕ್ಕುತ್ತಿಲ್ಲ. ಮಹಾರಾಷ್ಟ್ರದಲ್ಲಿ ನಾಲ್ಕು ಕೃಷಿ ವಿಶ್ವವಿದ್ಯಾಲಯ ಗಳಿರುವಂತೆ ನಮ್ಮ ರಾಜ್ಯದಲ್ಲೂ ಕೂಡ ಒಂದೆರಡು ಹೆಚ್ಚು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ ತನ್ಮೂಲಕ ಕೃಷಿಕರ ಮಕ್ಕಳಿಗೆ ಕೃಷಿಯ ಬಗ್ಗೆ ತರಬೇತಿ ಪಡೆಯಲು ಅವಕಾಶ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ಸಲಹೆ ಮಾಡುತ್ತೇನೆ. ಈ ವರ್ಷದಲ್ಲಿ ಕೂಡ ಮಾನ್ಯ ಮಂತ್ರಿಗಳು ಕೃಷಿ ಕರ ಮಕ್ಕಳಿಗೆ ಇಂತಿಷ್ಟು ಸೇಕಡಾವಾರು ಸೀಟುಗಳನ್ನು ಮೀಸಲಾಗಿಡಬೇಕು. ಹಾಗೆ ಮಾಡಿದರೆ ತನ್ಮೂಲಕ ಕೃಷಿಕರಿಗೆ ಹೆಚ್ಚಿನ ಬೆಂಬಲ ಮತ್ತು ಪ್ರೋತ್ಸಾಹ ನೀಡಿದಂತಾಗುವುದು. ಹಿಂದೆ ಎಷ್ಟೋ ಸಲ ನೋಡಿದರೆ ಅಂಕಗಳ ಆಧಾರದಮೇಲೆ ಪ್ರತಿಭೆಯ ಆಧಾರದಮೇಲೆ ಸೀಟುಗಳನ್ನು ಕೊಟ್ಟಿರುವುದರಿಂದ ಕೃಷಿಯಲ್ಲಿ ಅನುಭವವಿರುವ ಕೃಷಿಕರ ಮಕ್ಕಳಿಗೆ ಕೃಷಿ ವಿಶ್ವವಿದ್ಯಾಲಯದಲ್ಲಿ ಓದಲು ಅವಕಾಶ ಸಿಕ್ಕಿಲ್ಲ. ಇದರಿಂದ ತೊಂದರೆಯಾಗಿದೆ. ಬರೀ ಉದ್ಯೋಗ ದೊರಕಿಸುವ

ದೃಷ್ಟಿಯಿಂದ ಮೆರಿಟ್‌ಗೆ ಅವಕಾಶ ಮಾಡಿರುವುದರಿಂದ ಕೃಷಿಕರಿಗೆ ಅವಕಾಶವಿಲ್ಲದಂತಾಗಿದೆ. ಆದುದರಿಂದ ಇನ್ನೂ ಒಂದೆರಡು ಕೃಷಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಕೃಷಿಕರ ಮಕ್ಕಳಿಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡಬೇಕು ಎಂಬುದು ನನ್ನ ಮುಖ್ಯವಾದ ಸಲಹೆ.

ಸಾಯಿಲ್ ಕನ್‌ಸರ್ವೇಷನ್ ವಿಚಾರ ಹೇಳುವುದಾದರೆ ಇಡೀ 20 ಜಿಲ್ಲೆಗಳಲ್ಲಿ ಈ ಕೆಲಸ ಸಮರ್ಪಕವಾಗಿ ನಡೆದಿಲ್ಲ. ಕರಿ ಭೂಮಿಯಿರುವ ಎಷ್ಟೋ ಕಡೆ ಈ ಕೆಲಸ ಮಾಡಿಲ್ಲ. ಇದನ್ನು ಗಮನಿಸಿ ಸಚಿವರು ಕೆಂಪು ಭೂಮಿ, ಬಿಳಿಯ ಭೂಮಿ, ಕಪ್ಪು ಭೂಮಿ ಯಾವುದೇ ಇದ್ದರೂ ಎಲ್ಲಾ ಕಡೆಯೂ ಸಾಯಿಲ್ ಕನ್‌ಸರ್ವೇಷನ್ ಕೆಲಸ ಮಾಡುವಂತೆ ಕಾರ್ಯಕ್ರಮದಲ್ಲಿ ಅಳವಡಿಸಬೇಕು. ಇದರಿಂದ ಕೃಷಿ ಉತ್ಪತ್ತಿ ಹೆಚ್ಚಾಗುವುದು.

ಈಗ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ. ಇದರ ಮುಖ್ಯವಾದ ಉದ್ದೇಶ ರೈತರಿಗೆ ಬೀಜ, ಗೊಬ್ಬರ, ಕ್ರಿಮಿನಾಶಕ ಸಕಾಲದಲ್ಲಿ ಒದಗಿಸಬೇಕು ಎಂಬುದು. ಆದರೆ ಈ ಕೆಲಸ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಸಮರ್ಪಕವಾಗಿ ಆಗಿಲ್ಲ. ಅದು ಇಂದು ಸರ್ಟಿಫೈಡ್ ಸೀಡ್ಸ್ ಎಂದು ಅಂಗಡಿಗಳಿಗೆ ಎಷ್ಟೋ ಕಡೆ ಕೊಡುವ ಪದ್ಧತಿ ಇದೆ. ಆ ಬೀಜ ಬಿತ್ತಿದರೆ ಹುಟ್ಟಲಿಲ್ಲವೆಂದರೆ ಸರಕಾರಕ್ಕೆ ಕೆಟ್ಟ ಹೆಸರು ಬರುವುದು. ಇದಕ್ಕಾಗಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಬೀಜ, ಗೊಬ್ಬರ ಮತ್ತು ಕ್ರಿಮಿನಾಶಕ ಮುಂತಾದವುಗಳನ್ನು ಮಾರಾಟಮಾಡುವ ಕೇಂದ್ರ ಸ್ಥಾಪಿಸಿ ತನ್ಮೂಲಕ ರೈತರಿಗೆ ಸಹಾಯಮಾಡಬೇಕು ಎಂದು ಹೇಳುತ್ತೇನೆ.

ಗೊಬ್ಬರವನ್ನು ಮಾರಾಟಮಾಡುವ ಏಜೆನ್ಸಿ ನೋಡಿದರೆ ಈಗ ಮೈಸೂರು ಕೋ-ಆಪರೇಟೀವ್ ಫೆಡರೇಷನ್ ಸೊಸೈಟಿ ಉಂಟು. ಅದಕ್ಕೆ ಸಂಬಂಧಪಟ್ಟಹಾಗೆ ತಾಲ್ಲೂಕು ಸೊಸೈಟಿ ಇದೆ. ಗೊಬ್ಬರವನ್ನು ಈ ತಾಲ್ಲೂಕು ಸೊಸೈಟಿಗಳ ಮೂಲಕ ಹಂಚಬಹುದು. ಈಗ ಡ್ಯೂಯಲ್ ಏಜೆನ್ಸಿ ಇದೆ, ಅಗ್ರೋ ಇಂಡಿಸ್ಟ್ರೀಸ್ ಕಾರ್ಪೊರೇಷನ್ ಮತ್ತು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿ. ಇದರಿಂದ ಇಂದು ತೊಂದರೆಯಾಗಿದೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಷ್ಟೋ ಜನ ವರ್ತಕರನ್ನು ಕರೆಸಿ ಗೊಬ್ಬರ, ಬೀಜ ಮುಂತಾದುವುಗಳನ್ನು ಹಂಚಿಕೆ ಮಾಡುವುದು, ಅವರಿಗೆ ಏಜೆನ್ಸಿ ಕೊಡುವುದು. ಇದರಿಂದ ಕೋ-ಆಪರೇಟೀವ್ ಸೊಸೈಟಿ ವ್ಯಾಪಾರ ಹಾಳಾಗುವುದೂ ಅಲ್ಲದೆ ಕೋ-ಆಪರೇಷನ್ ವ್ಯಾಪಾರದಲ್ಲಿ ಲಂಚಗುಳಿತನಕ್ಕೆ ಅವಕಾಶವಾಗುವುದು, ಈ ರೀತಿ ವ್ಯವಹಾರ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕು. ಇಂದು ಸಣ್ಣ ವ್ಯವಸಾಯಗಾರರಿಗೆ ಟ್ರ್ಯಾಕ್ಟರ್ ಮತ್ತು ಬುಲ್‌ಡೋಜರ್ ಸೌಲಭ್ಯ ಹೆಚ್ಚಬೇಕು. ಯಾವ ತಾಲ್ಲೂಕಿನಲ್ಲೇ ಆಗಲಿ ರೈತರಿಗೆ ಅವಶ್ಯಕವಾದ ಟ್ರ್ಯಾಕ್ಟರು ಮತ್ತು ಬುಲ್‌ಡೋಜರ್ ಪಡೆಯಲು ಯಾವ ತೊಂದರೆಯೂ ಇರಬಾರದು.

ಈವೊತ್ತಿನ ದಿವಸ ಯಾರಾದರೂ ಬುಲ್‌ಡೋಜರ್ ಸೌಕರ್ಯ ಪಡೆಯಬೇಕಾದರೆ ತಿಂಗಳಾನುಗಟ್ಟಲೆಯಾದರೂ ಕಾಯಬೇಕಾಗುತ್ತದೆ, ವರ್ಷಾನುಗಟ್ಟಲೆಯಾದರೂ ಕಾಯಬೇಕಾಗುತ್ತದೆ. ಇದರಿಂದ ರೈತರಿಗೆ ಅದರಿಂದ ಸೌಕರ್ಯಗಳು ಸರಿಯಾದ ಕಾಲಕ್ಕೆ ದೊರೆಯುತ್ತಾ ಇಲ್ಲ. ಮತ್ತು ಸಣ್ಣಪುಟ್ಟ ಹಿಡುವಳಿದಾರರೂ ಟ್ರ್ಯಾಕ್ಟರುಗಳನ್ನು ಇಟ್ಟುಕೊಂಡು ತಮ್ಮ ಜಮೀನುಗಳನ್ನು ಅಭಿವೃದ್ಧಿ ಮಾಡಬೇಕು. ಇಂಥಾ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಡಬೇಕು. ಈ ಟ್ರ್ಯಾಕ್ಟರುಗಳನ್ನು ಕೆಟ್ಟು ಹೋದರೆ ಅವರು ರಿಪೇರಿ ಮಾಡಿಸಿ ಕೊಳ್ಳಬೇಕಾದರೆ ಈ ವೊತ್ತಿನ ದಿವಸ ನೂರಾರು ಮೈಲಿಯಿಂದ ಬೆಂಗಳೂರಿಗೆ ಬರಬೇಕು. ಇದರಿಂದ ಅವರಿಗೆ ಹೆಚ್ಚು ವೆಚ್ಚವಾಗುತ್ತದೆ. ಆದುದರಿಂದ ಇದರ ಬಗ್ಗೆ ನಾನು ಸಲಹೆ ಮಾಡುವುದು ಏನೆಂದರೆ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಸರ್ವಿಸ್ ಸ್ಟೇಷನ್ ತೆಗೆದರೆ ಖಾಸಗಿಯವರು ಇಟ್ಟುಕೊಂಡಿರುವ ಟ್ರ್ಯಾಕ್ಟರುಗಳ ರಿಪೇರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇದು ಅಗ್ರೋ ಇಂಡಸ್ಟ್ರೀಸ್ ಕರ್ತವ್ಯವಾಗಿರುವುದರಿಂದ ಅವರು ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಸೆಂಟರ್ ತೆಗೆದು ವ್ಯವಸಾಯಗಾರರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಉದ್ಯಾನ ಇಲಾಖೆ ವಿಷಯ ಹೇಳುವುದಾದರೆ ಈ ಇಲಾಖೆ ಬಹಳ ಚೆನ್ನಾಗಿ ಕೆಲಸ ನಡೆಸುತ್ತಾ ಇದೆ. ಪ್ರತಿಯೊಂದು ತಾಲ್ಲೂಕಾ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ. ರಾಜ್ಯಮಟ್ಟದಲ್ಲಿ ಈ ಇಲಾಖೆಯಲ್ಲಿ ದಕ್ಷತೆಯಿಂದ ಕೆಲಸ ನಡೆಯುತ್ತಾ ಇದೆ. ನಾನು ಅದನ್ನು ಬಹಳ ಸಮರ್ಥನೆಮಾಡಿ ಹೇಳುತ್ತೇನೆ. ಏತಕ್ಕೆಂದರೆ ತಾವು ಯಾರಾದರೂ ಹೋಗಿ ಕೆಮ್ಮಣ್ಣುಗುಂಡಿ ಗಿರಿಧಾಮವನ್ನು ಹೋಗಿ ನೋಡಬಹುದು. ಅದನ್ನು ಪೂರ್‌ಮ್ಯಾನ್‌ಸ್ ಊಟಿ ಎಂದು ಒಬ್ಬರು ಹೇಳಿದರು, ಸ್ವಿಜರ್‌ಲ್ಯಾಂಡ್ ಎಂದು ಹೇಳಿದರು. ಅಲ್ಲಿ ಒಂದು ಊಟಕ್ಕಾಗಲಿ, ವಸತಿಗಾಗಲಿ ಬಹಳ ಕಡಿಮೆ ದರದಲ್ಲಿ

(ಶ್ರೀ ಎಂ. ಮಲ್ಲಪ್ಪ)

ಹೆಚ್ಚು ಸೌಕರವನ್ನು ಒದಗಿಸಿರತಕ್ಕಂಥ ವ್ಯವಸ್ಥೆ ಮಾಡಿದ್ದಾರೆ, ಈವೊತ್ತಿನ ದಿವಸ ಆ ಗಿರಿಧಾಮವನ್ನು ಟೂರಿಸ್ಟ್ ಸೆಂಟರ್ ಮಾಡಬೇಕು, ಹೆಚ್ಚು ಸೌಕರ್ಯಗಳನ್ನು ಒದಗಿಸಿ ಕೊಡಬೇಕು ಎಂದು ಹೇಳುತ್ತೇನೆ. ಈಗಾಗಲೇ ಬೆಂಗಳೂರಿನಿಂದ ಗಿರಿಧಾಮಕ್ಕೆ ಒಂದು ಸರ್ಕಾರಿ ಬಸ್ಸನ್ನು ಹಾಕಬೇಕು ಎಂದು ಯೋಚನೆ ಮಾಡಿದ್ದಾರೆ. ಅದೇರೀತಿ ಮೈಸೂರು ಹಾಸನದಿಂದಲೂ ಬಸ್ಸುಗಳನ್ನು ಹಾಕಿ ಹೆಚ್ಚಿಗೆ ಅನುಕೂಲ ಮಾಡಿಕೊಟ್ಟರೆ ಬೇಕಾದಷ್ಟು ಜನ ಹೋಗಿ ಅಲ್ಲಿ ಉಳಿದು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಈ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ರೈಲ್ವೆಯಿಂದ ಬರತಕ್ಕ ಜನರು ಹುಬ್ಬಳ್ಳಿಯಿಂದ ಕೆಮ್ಮಣ್ಣಗುಂಡಿಗೆ ಬರಬೇಕಾದರೆ ತರೀಕೆರೆ ಅಥವಾ ಬೀರೂರು ಬಳಿ ಇಳಿಯುತ್ತಾರೆ. ಅಲ್ಲಿಂದ ಇಳಿದು ಕೆಮ್ಮಣ್ಣಗುಂಡಿಗೆ ಹೋಗಬೇಕಾದರೆ ಈವಾಗ ಹೆಚ್ಚು ಸೌಕರ್ಯಗಳು ಇಲ್ಲ. ಆದುದರಿಂದ ಕೆಮ್ಮಣ್ಣಗುಂಡಿಗೆ ಹೋಗತಕ್ಕಂಥ ಜನರಿಗೆ ಹೆಚ್ಚು ಸೌಕರ್ಯಗಳನ್ನು ಒದಗಿಸಿಕೊಡಲು ಆ ಸ್ಥಳಗಳಲ್ಲಿ 2-3 ಟೂರಿಸ್ಟ್ ಕಾರನ್ನು ಇಡಬೇಕು ಎಂದು ಹೇಳುತ್ತೇನೆ. ಹಾಗೇನಾದರೂ ಇಟ್ಟರೆ ಜಾಸ್ತಿ ಜನ ಬಂದು ಹೋಗುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಹೇಳುವುದಾದರೆ 3 ವರ್ಷದ ಹಿಂದೆ ಇದರಲ್ಲಿ ಒಂದು ಸಾವಿರ 2 ಸಾವಿರ ರೂಪಾಯಿ ಇತರಕ್ಕಂಥ ಉತ್ಪತ್ತಿ ಈವೊತ್ತಿನ ದಿವಸ 40 ಸಾವಿರ ರೂಪಾಯಿಯಿಂದ 50 ಸಾವಿರ ರೂಪಾಯಿಯವರೆಗೆ ಉತ್ಪತ್ತಿ ಇದೆ. ಆದುದರಿಂದ ಇದಕ್ಕೆ ಹೆಚ್ಚಿನ ವ್ಯವಸ್ಥೆ ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಫರ್ಟಿಲೈಸರ್ಸ್ ಫ್ಯಾಕ್ಟರಿ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಸ್ಥಾಪನೆ ಮಾಡುವ ಉದ್ದೇಶ ಏನು ಇದೆಯೋ ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಕೊಡಬೇಕು ಮತ್ತು ಆದಷ್ಟು ಜಾಗ್ರತೆ ಆ ಕೆಲಸವನ್ನು ಪೂರೈಸಿಕೊಡಬೇಕು ಎಂದು ಹೇಳುತ್ತೇನೆ. ಈವಾಗ ರೈತರಿಗೆ ಫರ್ಟಿಲೈಸರ್ಸ್ ಕೊಂಡುಕೊಳ್ಳುವುದಕ್ಕೆ ಒದಗಿಸಿರುವ ಹಣ ಸಾಕಾಗುವುದಿಲ್ಲ. ಅವರಿಂದ ರಿಪೋರ್ಟ್ ಬರುತ್ತಾ ಇದೆ. ನಮ್ಮ ಕಡೆ ಇರುವ ಅಡಿಕೆ ಬೆಳೆಗಾರರಿಗೆ ಆ ಸರಿಯಾದ ಧಾರಣೆ ಇಲ್ಲದೆ ತುಂಬಾ ಕಷ್ಟವಾಗಿದೆ. ಆದುದರಿಂದ ಸರ್ಕಾರದವರು ಅಡಿಕೆ ಬೆಳೆಗಾರರಿಗೆ ಒಂದು ಸಪೋರ್ಟಿಂಗ್ ಪ್ರೈಸ್ ಕೊಡುವ ಹಾಗೆ ಕೂಡಲೇ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಅರಣ್ಯ ಇಲಾಖೆ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಇನ್ನೂ ಅನೇಕ ಸುಧಾರಣೆಗಳು ಆಗಬೇಕು. ಅರಣ್ಯದಲ್ಲಿರುವ ಯೋಗ್ಯವಾದ ಜಮೀನನ್ನು ಕೊಡಬೇಕಾದರೆ ಯಾರಿಗೆ ಜಮೀನು ಇಲ್ಲವೋ, ಯಾರಿಗೆ ಹೆಚ್ಚು ವರಮಾನ ಇಲ್ಲವೋ ಇಂಥಾವರಿಗೆ ಕೊಡಬೇಕು. ಅಂಥಾವರಿಗೆ ಕೊಟ್ಟರೆ ಹೆಚ್ಚು ಉತ್ಪನ್ನವೂ ಬರುವುದಲ್ಲದೆ ಅರಣ್ಯವನ್ನೂ ಕೂಡ ಹದ್‌ಬಸ್ತಿನಲ್ಲಿ ಇಟ್ಟುಕೊಳ್ಳಬಹುದು. ಲಕ್ಷಾಂತರ ರೂಪಾಯಿ ಹಾಕಿ ಅರಣ್ಯವನ್ನು ಬೆಳೆಸುವುದಕ್ಕೆ ಈವಾಗ ಹಣ ಇಲ್ಲ. ಆದುದರಿಂದ ವ್ಯವಸಾಯಗಾರರಿಗೆ ಯೋಗ್ಯವಾದ ಜಮೀನು ಕೊಟ್ಟರೆ ವ್ಯವಸಾಯಗಾರರಿಗೂ ಅನುಕೂಲವಾಗುತ್ತದೆ ನಿಮಗೂ ಒಳ್ಳೆಯ ಹೆಸರು ಬರುತ್ತದೆ. ಅಲ್ಲದೇ ಅರಣ್ಯವನ್ನು ಹದ್‌ಬಸ್ತಿನಲ್ಲಿ ಇಟ್ಟುಕೊಳ್ಳುತ್ತಾರೆ ಎಂದು ಹೇಳ ಬಯಸುತ್ತೇನೆ.

ಇನ್ನು ನಮ್ಮ ಜಿಲ್ಲೆ ಮಲೆನಾಡು ಜಿಲ್ಲೆ. ಇದುವರೆಗೆ ನಮ್ಮ ಪ್ರದೇಶದಲ್ಲಿ ಇರತಕ್ಕಂಥ ಜನರಿಗೆ ಮಲನಾಡ್ ರಯಟ್ಸ್ ಪ್ರಿವಿಲೇಜಸ್ ಇತ್ತು. ಅಂದರೆ ಅವರಿಗೆ ಬೇಕಾದ ಸೌದೆ ಮಾರಾಟ ಮಾಡುವುದು, ಮತ್ತು ಅವರಿಗೆ ಬೇಕಾದ ಮರಮುಟ್ಟುಗಳನ್ನು ಪಡೆಯುವುದಕ್ಕೆ ಇದುವರೆಗೆ ಯಾರ ಹಂಗೂ ಇರಲಿಲ್ಲ. ನಮ್ಮ ಕಡೆ ದೇವರೇ ಬೆಳೆಸಿರತಕ್ಕಂಥ ನಮ್ಮ ಅರಣ್ಯ ಪ್ರದೇಶಕ್ಕೆ ಅಲ್ಲಿಯ ಜನರಿಗೆ ಅವಶ್ಯಕವಾದ ಪದಾರ್ಥಗಳನ್ನು ಪಡೆಯುವುದಕ್ಕೆ ಇದುವರೆಗೆ ಯಾರ ಹಂಗೂ ಇರಲಿಲ್ಲ. ಈಗ ಸರ್ಕಾರ ಇದಕ್ಕೆ ನಿಗದಿ ಮಾಡಿದ್ದಾರೆ. ಈಗ ಏನು ಮಾಡಿದ್ದಾರೆ ಎಂದರೆ ಈ ಪ್ರಿವಿಲೇಜಸ್ ಕೊಡಬೇಕಾದರೆ ಅವನಿಗೆ 1, .00ಗೆ ರೂಪಾಯಿ ಕಡಿಮೆ ವರಮಾನ ಇದ್ದರೆ ಅವನಿಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ಆದುದರಿಂದ ದಯವಿಟ್ಟು ಮಲೆನಾಡು ರಯಟ್ಸ್ ಪ್ರಿವಿಲೇಜಸ್ ಹಿಂದೆ ಏನು ಇತ್ತೋ ಅದನ್ನು ಪುನಃ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಅಮೃತಮಹಲ್ ಕಾವಲಿನ ಬಗ್ಗೆ ಹೇಳುವುದಾದರೆ ಇಲ್ಲಿ 19 ವರ್ಷದಿಂದಲೂ ವ್ಯವಸಾಯವನ್ನು ಮಾಡಿಕೊಂಡು ಹೋಗುತ್ತಾ ಇರುವ ರೈತರಿಗೆ ಮಾನ್ಯ ಮಂತ್ರಿಗಳು ಸಂಚಾರ ಮಾಡುವಾಗ ಈವಾಗ ಆ ಜಮೀನನ್ನು ನಾವೇ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. 10 ವರ್ಷದಿಂದಲೂ

ಅವರು ಆ ಜಮೀನನ್ನು ಸಾಗುವಳಿ ಮಾಡಿ ಹುರುಳಿ ಸಾಗು ಫಸಲನ್ನು ಬೆಳೆದು ಯೋಗ್ಯವಾದ ಜಮೀನಾಗಿ ಮಾಡಿದ್ದರು, ಮತ್ತು ಸರ್ಕಾರಕ್ಕೂ ಕೂಡ ಸಂಪಾದನೆ ಆಗುತ್ತಿತ್ತು. ಆದುದರಿಂದ ನಾನು ಹೇಳುವುದು ಏನೆಂದರೆ ಬೋನಾಫೈಡ್ ಅಗ್ರಿಕಲ್‌ಚರಿಸ್ಟ್ ವಶದಲ್ಲಿ ಆ ಜಮೀನು ಇದ್ದರೆ ಅದನ್ನು ಅವನಿಗೇ ಬಿಟ್ಟುಕೊಡಬೇಕು. ವ್ಯವಸಾಯಕ್ಕೆ ಯೋಗ್ಯವಾದಂಥ ಲ್ಯಾಂಡ್ಸ್‌ನ್ನು ಅವನಿಗೆ ಬಿಟ್ಟುಕೊಡಬೇಕು. ಅವನು ಅದರಿಂದ ಹುರುಳಿ ಸಾಗುವಳಿ ಮಾಡಿ ಹುರುಳಿ ಪಡೆದುಕೊಂಡು ಜಮೀನನ್ನು ಅಭಿವೃದ್ಧಿ ಮಾಡಿಕೊಳ್ಳುತ್ತಾನೆ. ಮತ್ತು ಸರ್ಕಾರಕ್ಕೂ ಇದರಿಂದ ಲಾಭವೂ ಇರುವುದರಿಂದ ರೈತರ ಹಿತವನ್ನು ಕಾಪಾಡಬೇಕು ಎಂದು ಹೇಳುತ್ತೇನೆ. ಇನ್ನು ಹೆಚ್ಚು ಮಾತನಾಡಲು ಕಾಲವಕಾಶ ಇಲ್ಲದೇ ಇರುವುದರಿಂದ ಇಷ್ಟು ಹೇಳಿ ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವ್ಯವಸಾಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅರ್ಥ ಸಚಿವರು ತಮ್ಮ ಬಡ್ಜೆಟ್ ಭಾಷಣದಲ್ಲಿ ಒಂದು ಮಾತನ್ನು ಹೇಳಿದರು. ಗ್ರಾಮಾಂತರ ಪ್ರದೇಶದ ಹಳ್ಳಿಗಳು ಮುಖ್ಯವಾಗಿ ನವೀನಕರಣ ಆಗಬೇಕು ಮತ್ತು ನಗರೀಕರಣ ಆಗಬೇಕು ಎಂದು ಹೇಳಿದ್ದಾರೆ. ಇದು ಬಹಳ ಸೂಕ್ತವಾದುದು. ಇದನ್ನು ಆಲೋಚನೆ ಮಾಡಿದರೆ ಅಂತಾ ಸನ್ನಿವೇಶಗಳು ಕಾಣುತ್ತಾ ಇಲ್ಲ. ಗ್ರಾಮಾಂತರ ಪ್ರದೇಶದ ಜನತೆಯ ಆರ್ಥಿಕ ಸ್ಥಿತಿ ಉತ್ತಮವಾಗಬೇಕು. ಟೌನ್‌ನಲ್ಲಿರತಕ್ಕಂಥ ಜನಗಳ ಹಾಗೆ ಅವರೂ ಕೂಡ ನೆಮ್ಮದಿಯಿಂದ ಸುಖವಾಗಿರಬೇಕು ಮತ್ತು ಉತ್ತಮವಾದ ಮಟ್ಟದಲ್ಲಿ ಜೀವನವನ್ನು ಸಾಗಿಸುವುದಕ್ಕೆ ಅನುಕೂಲವಾಗಿರತಕ್ಕಂಥ ಒಂದು ವಾತಾವರಣವನ್ನು ಕಲ್ಪಿಸಿಕೊಡಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿತ್ತು ಎಂದು ಕಾಣುತ್ತದೆ. ಇದನ್ನು ಚೆನ್ನಾಗಿ ಆಲೋಚನೆ ಮಾಡಿದರೆ ಇವರು ಮೂರು ತಿಂಗಳಿನಿಂದಲೂ ಆಡಳಿತವನ್ನು ನಡೆಸಿಕೊಂಡು ಬಂದುದನ್ನು ಆಲೋಚಿಸಿ ನೋಡಿದರೆ ಅಂಥಾ ದೊಡ್ಡ ಹೆಚ್ಚಿನ ಸಾಧನೆ ಸರ್ಕಾರ ಮಾಡಿದಹಾಗೆ ಕಾಣುತ್ತಾ ಇಲ್ಲ. ವ್ಯವಸಾಯದ ಬಗ್ಗೆ ಹೇಳುವುದಾದರೆ 100ಕ್ಕೆ 80 ಭಾಗ ಇರತಕ್ಕಂಥ ವ್ಯವಸಾಯಗಾರರೇ ಜಾಸ್ತಿ. ಅವರಿಗೆ ವ್ಯವಸಾಯಕ್ಕೆ ಕೊಡತಕ್ಕಂಥ ಸಾಲವಾಗಲಿ, ವ್ಯವಸಾಯದ ಬೀಜವಾಗಲಿ, ರಾಸಾಯನಿಕ ಗೊಬ್ಬರವಾಗಲಿ ಸಕಾಲಕ್ಕೆ ಒದಗಿಸಿ ಕೊಡಬೇಕು. ಇದಕ್ಕೆ ಬೇಕಾದಷ್ಟು ಅಡ್ಡಿ ಅಡಚಣೆಗಳು ಬಂದರೂ ಕೂಡ ಅವರ ಬಗ್ಗೆ ಮಧ್ಯವರ್ತಿಗಾರರ ದುರುಪಯೋಗವಾಗದಂತೆ ಗಮನ ತೆಗೆದುಕೊಂಡು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ರೈತನು ಈ ವ್ಯವಸಾಯದಲ್ಲ ಉತ್ತಮವಾದ ಜೀವನವನ್ನು ನಡೆಸುವುದಕ್ಕಾಗುವುದಿಲ್ಲ. ಮತ್ತು ಇದರ ಜೊತೆಗೆ ವ್ಯವಸಾಯಗಾರರ ಜೀವನವನ್ನು ಉತ್ತಮಪಡಿಸುವುದಕ್ಕೆ ಪಶುಪಾಲನಾ ಇಲಾಖೆಯಲ್ಲಿ ಕೋಳಿ ಸಾಕಾಣಿಕೆ, ಮೀನುಗಾರಿಕೆ ಇವುಗಳನ್ನು ಉಪಕಸಬನ್ನಾಗಿ ಇಡುವ ಒಂದು ಕಾರ್ಯಕ್ರಮವನ್ನು ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ಅನುಕೂಲವಾಗುವ ಹಾಗೆ ಮಾಡಿಕೊಡಬೇಕು. ಅವರು ಯಾವುದಾದರೂ ಒಂದು ರೀತಿಯಲ್ಲಿ ಸಂಪಾದನೆ ಮಾಡಿಕೊಂಡು ಉತ್ತಮವಾದ ಜೀವನವನ್ನು ನಡೆಸಬೇಕು. ವ್ಯವಸಾಯ ಸಚಿವರು ಈಗ ಮಂಡಿಸಿರತಕ್ಕಂಥ ಡಿಮ್ಯಾಂಡ್‌ನಲ್ಲಿ ಈರೀತಿಯಾದ ಒಂದು ಲಕ್ಷಣವೂ ಕಾಣುತ್ತಾ ಇಲ್ಲ. ಆದುದರಿಂದ ಇದನ್ನು ವಿರೋಧಿಸಬೇಕಾಗುತ್ತದೆ. ಅಲ್ಲದೆ ವ್ಯವಸಾಯ ಇಲಾಖೆಯಲ್ಲಿರುವ ಅಧಿಕಾರಿಗಳು ಮಾಡತಕ್ಕಂಥ ಕೆಲಸಕಾರ್ಯಗಳನ್ನು ಕೂಲಂಕಷವಾಗಿ ನೋಡಿದರೆ ಬಹುಶಃ ಅವರಿಂದ ಹೆಚ್ಚಿನ ಪ್ರಯೋಜನ ರೈತರಿಗೆ ಆಗುತ್ತಾ ಇಲ್ಲ ಎಂದು ಧೈರ್ಯವಾಗಿ ಈ ಸಭೆಯ ಮುಂದೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಚಿವರಮೇಲೆ ನನಗೆ ಬಹಳ ಗೌರವ ಇದೆ, ದಕ್ಷರು ಅನುಭವಿಗಳು ಆಗಿರುವುದರಿಂದ ತಮ್ಮ ಒಂದು ಕಾರ್ಯವ್ಯಾಪ್ತಿಯಲ್ಲಿ ಉತ್ತಮವಾದ ಒಂದು ಸೇವೆಯನ್ನು ದೇಶಕ್ಕೆ ಮಾಡಬೇಕು. ಇಂಥಾ ದಕ್ಷರಾದ ಒಳ್ಳೆಯ ಭಾವನೆ ಇಟ್ಟುಕೊಂಡಿರುವಂಥಾವರ ಕೈಗೆ ಈ ವ್ಯವಸಾಯ ಆಡಳಿತ ಒಳಪಟ್ಟಿರುವುದರಿಂದ ಇದನ್ನು ಮೊದಲು ಇದ್ದಹಾಗೆ ನಿಶ್ಚೇತನವಾದ ರೂಪದಲ್ಲಿ ಇರುವುದು ಅಷ್ಟೊಂದು ಶೋಭಾಯಮಾನವಾಗಿ ತೋರುವುದಿಲ್ಲ ಎಂದು ಹೇಳುತ್ತೇನೆ.

ಒಂದು ಉದಾಹರಣೆ ಹೇಳುವುದಾದರೆ ಕಳೆದ 6–7 ತಿಂಗಳಿನಲ್ಲಿ ರಾಜ್ಯದಲ್ಲಿ ರಾಸಾಯನಿಕ ಗೊಬ್ಬರದ ಕೊರತೆ ಬಹಳವಾಗಿತ್ತು. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಆ ಸಮಯದಲ್ಲಿ ರೈತರ ಅವಶ್ಯಕತೆಗನುಗುಣವಾಗಿ ಈ ರಾಜ್ಯಕ್ಕೆ ಎಷ್ಟು ಗೊಬ್ಬರ ಬೇಕು ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸದೇ ಇದ್ದ ಕಾರಣ ಈ ರಾಜ್ಯದಲ್ಲಿ ಈ ರೀತಿ ಗೊಬ್ಬರದ ಕೊರತೆ ಉಂಟಾಯಿತು ಎಂದು ಹೇಳಿದರು. ನಿಜ ಇದ್ದರೂ ಇರಬಹುದು. ನಿರ್ಲಕ್ಷ್ಯತೆಯಿಂದ ಈ ದಿವಸ ಸಾವಿರಾರು ಜನ ರೈತರನ್ನು ತೊಂದರೆಗೆ ಒಳಗು ಮಾಡಿರತಕ್ಕ

(ಶ್ರೀ ಕೆ. ಎಚ್. ಹನುಮೇಗೌಡ)

ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ? ತೆಗೆದುಕೊಳ್ಳುವುದಾದರೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬೇಕೆಂದು ಒತ್ತಾಯಮಾಡಿ ಕೇಳುತ್ತೇನೆ.

4-30 P.M.

ರಾಸಾಯನಿಕ ಗೊಬ್ಬರ ನಮ್ಮ ದೇಶದಲ್ಲಿ ಕೋಟ್ಯಂತರ ರೂಪಾಯಿ ಬೆಲೆ ಬಾಳುವಷ್ಟು ಉತ್ಪಾದನೆಯಾಗಿ ವಿತರಣೆಯಾಗುತ್ತಿದೆ. ಹೆಚ್ಚು ದುಡ್ಡನ್ನು ಯಾವ ರೈತ ಬೇಕಾದರೂ ಕೊಟ್ಟು ಎಷ್ಟು ಗೊಬ್ಬರ ಬೇಕಾದರೂ ಕೊಂಡುಕೊಳ್ಳಬಹುದು. ಗೊಬ್ಬರದ ಅಭಾವವುಂಟಾಗಿರುವುದು ಸರ್ಕಾರಿ ಮಟ್ಟದಲ್ಲಿ ಮತ್ತು ಸೊಸೈಟಿಗಳಲ್ಲಿ. ದೇಶದಲ್ಲಿ ಗೊಬ್ಬರದ ಅಭಾವವಿಲ್ಲ. ಈ ಅಭಾವವನ್ನು ಅಧಿಕಾರಿಗಳು ಸೇರಿಕೊಂಡು ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ಈ ಕೃತಕ ಅಭಾವವನ್ನು ಸೃಷ್ಟಿ ಮಾಡುವುದಲ್ಲದೆ, ಅದರಲ್ಲಿ ಪಾಲುದಾರರಾಗಿದ್ದಾರೆಂದು ಹೇಳುತ್ತೇನೆ. ಹಾಸನ ಜಿಲ್ಲೆಯಲ್ಲಿ 25 ಸಾವಿರ ಎಕರೆಯಲ್ಲಿ ಆಲೂಗೆಡ್ಡೆ ಹಾಕಿದ್ದಾರೆ. ಕಳೆದ ಒಂದು ತಿಂಗಳಿಂದ ಸೋನ ಮಳೆ ಸುರಿದು ಬೆಳೆ ಹಾಳಾಗುತ್ತಿದೆ, ನಾನು ಮಾನ್ಯ ಸಚಿವರನ್ನು ಭೇಟಿ ಮಾಡಿ ಕೇಳಿದಾಗ 300 ಟನ್ ಗೊಬ್ಬರವನ್ನು ಹಾಸನಕ್ಕೆ ಅಲಾಟ್ ಮಾಡಿದ್ದೇವೆಂದು ಹೇಳಿದರು. ಮೂರು ದಿವಸದ ಹಿಂದೆ ನಾನು ಹಾಸನಕ್ಕೆ ಹೋಗಿ ನೋಡಿದರೆ ನನಗೆ ಬಹಳ ವ್ಯಥೆಯಾಯಿತು. ಸಾವಿರಾರು ಜನ ಗೊಬ್ಬರಕ್ಕೋಸ್ಕರ ಅಲೆದಾಡುತ್ತಿದ್ದರು. ಮನೆಯಲ್ಲಿದ್ದ ಒಡವೆಗಳನ್ನು ಮಾರಿ ಸೊಸೈಟಿಗಳ ಮುಂದೆ ಮತ್ತು ಅಂಗಡಿಗಳ ಮುಂದೆ ಕ್ಯೂ ನಿಂತುಕೊಂಡು ಗೊಬ್ಬರ ತೆಗೆದುಕೊಳ್ಳುತ್ತಿದ್ದರು. ಉಪ್ಪು ಅಮೋನಿಯಂ ಸಲ್ಫೇಟ್ 555 ರೂಪಾಯಿ ಬೆಲೆ ಇದ್ದರೆ ಅದನ್ನು 1,100 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಇಂಥ ಅನ್ಯಾಯ ನಡೆಯುತ್ತಿದೆ. ಸರ್ಕಾರದವರು ಏಕೆ ಕಣ್ಣು ಮುಚ್ಚಿ ಕುಳಿತಿದ್ದಾರೆಂದು ಕೇಳುತ್ತೇನೆ. ಬ್ಲಾಕ್ ಮಾರ್ಕೆಟ್ ಹೇಗೆ ನಡೆಯುತ್ತಿದೆ ಎಂದು ನೋಡಿ ಬ್ಲಾಕ್ ಮಾರ್ಕೆಟ್ ಮಾಡುವವರ ಮೇಲೆ ಅಧಿಕಾರಿಗಳು ಏನೂ ಕ್ರಮ ತೆಗೆದುಕೊಂಡಿಲ್ಲ. ಅಧಿಕಾರಿಗಳು ಸುಮ್ಮನೆ ನೋಡಿಕೊಂಡು ಇದ್ದಾರೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಏನು ಮಾಡುತ್ತಿದ್ದಾರೆಂದು ಕೇಳುತ್ತೇನೆ.

ಡೆಪ್ಯುಟಿ ಡೈರೆಕ್ಟರ ಹತ್ತಿರ ಹೋಗಿ 'ಗೊಬ್ಬರದ ಬಗ್ಗೆ ಕೇಳಿದಾಗ, ನಾನು ಬರೆದಿದ್ದೆ, 60 ಟನ್ ಮಾತ್ರ ಬಂದಿದೆ ಎಂದು ಹೇಳಿದರು. ಅಲ್ಲಿ ಸಾವಿರಾರು ಟನ್ ಗೊಬ್ಬರದ ಅವಶ್ಯಕತೆ ಇದೆ. ನಾನು ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ, ಹೋಗಿ ವಿಚಾರಿಸಿದಾಗ ಯೂರಿಯಾ ಬರುವುದಿದೆ, ಮೂರು ನಾಲ್ಕು ದಿವಸಗಳಲ್ಲಿ ಕಳುಹಿಸುತ್ತೇವೆಂದು ಹೇಳಿದರು. ರೈತ ಅಭಿವೃದ್ಧಿಗೆ ಬರಬೇಕು, ಅವನು ಚೆನ್ನಾಗಿ ಬಾಳಿ ಬದುಕಬೇಕು. ಅವನನ್ನು ನೋಡಿ ಸಂತೋಷಪಡಬೇಕು, ನಿಮ್ಮ ಮುಕ್ತಿಯೇ ನಮ್ಮ ಮುಕ್ತಿ ಎಂದು ಹೇಳುವ ಜನ ಅವನು ತೊಂದರೆಪಡುತ್ತಿದ್ದರೂ ಕೂಡ ನೋಡದೆ ಅವನ ಬಗ್ಗೆ ಸುಮ್ಮನೆ ಮೊಸಳೆ ಕಣ್ಣೀರು ಸುರಿಸಿ ವೋಟು ತೆಗೆದುಕೊಂಡು ಬಂದು ಪಡಬಾರದ ಕಷ್ಟವನ್ನು ಪಡುತ್ತಿದ್ದರೂ ಸುಮ್ಮನೆ ಇರುವುದನ್ನು ನೋಡಿ ಅವನು ಶಾಪವನ್ನು ಹಾಕಿದರೆ ನೀವು ಅದಕ್ಕೆ ಒಳಗಾಗುತ್ತೀರಿ ಎಂದು ಹೇಳುತ್ತೇನೆ. ನಾಳೆಯೇ ಮಂತ್ರಿಗಳಾಗಲೀ ಅಥವಾ ಯಾರಾದರೂ ಉನ್ನತಾಧಿಕಾರಿಗಳು ಪ್ರೋಗ್ರಾಂ ಕೊಡದೆ ಹೋಗಿ ನೋಡಿಕೊಂಡು ಬಂದರೆ ಏನು ಅನ್ಯಾಯವಾಗುತ್ತಿದೆ, ಅದಕ್ಕೆ ಕಾರಣರು ಯಾರು ಎನ್ನುವುದು ಗೊತ್ತಾಗುತ್ತದೆ. ಈ ರೀತಿ ಆಗುವುದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಎರಡು ಮೂರು ವರ್ಷದಿಂದ ಇಲಾಖೆಯಲ್ಲಿ ಬೇಕಾದಷ್ಟು ಹುದ್ದೆಗಳನ್ನು ನಿರ್ಮಾಣ ಮಾಡಿದ್ದಾರೆ. ನಿನ್ನೆ ನಮಗೆ ಇಲಾಖೆಯಿಂದ ಕೊಟ್ಟ ಪುಸ್ತಕವನ್ನು ಓದಿದರೆ ಯಾರಿಗಾದರೂ ತಲೆ ತಿರುಗಬೇಕು. ಮಾಡಬಾರದ ಕೆಲಸ ಮಾಡಿದರೆ ದೇಶದ ಗತಿ ಏನು? ಅವರು ಹೇಳಿರುವುದನ್ನು ನೋಡಿದರೆ ರೈತನನ್ನು ಹಿಡಿಯುವವರೇ ಇಲ್ಲವೆನ್ನುವ ರೀತಿ ಇದೆ. ಮೋಸ, ವಂಚನೆ, ಸುಳ್ಳು ಡೈರಿ ಕೊಟ್ಟು ಜೀವನ ಸಾಗಿಸತಕ್ಕ ಬೇಕಾದಷ್ಟು ಅಧಿಕಾರಿಗಳಿಗೆ ರಕ್ಷಣೆ ಕೊಟ್ಟು ಪ್ರೋತ್ಸಾಹ ಮಾಡಿಕೊಂಡು ಹೋಗುತ್ತಿದ್ದಾರೆ. ಯೋಗ್ಯರಿಗೆ ಪುರಸ್ಕಾರವಿಲ್ಲ, ಅಯೋಗ್ಯರಿಗೆ ರಕ್ಷಣೆ ಕೊಡುವ ಮತ್ತು ರೈತರ ಕಣ್ಣೀರನ್ನು ನೋಡಿ ಕಲ್ಲು ಹೃದಯವಿರುವ ಸರ್ಕಾರ ರೈತನು ಕೊಡುವ ಶಾಪಕ್ಕೆ ಖಂಡಿತ ಒಳಗಾಗುತ್ತೀರಿ ಎಂದು ಹೇಳುತ್ತೇನೆ.

ಮೂರು ನಾಲ್ಕು ವರ್ಷಗಳಿಗೆ ಮೊದಲು ಒಂದು ಜಿಲ್ಲೆಯಲ್ಲಿ ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಇದ್ದು ಬೀಜದ ಉತ್ಪಾದನೆ, ಗೊಬ್ಬರ, ಸಾಯಿಲ್ ಕನ್‌ಸರ್ವೇಷನ್ ಮುಂತಾದ ಎಲ್ಲ ಕೆಲಸ ಕಾರ್ಯಗಳನ್ನೂ ನೋಡಿಕೊಳ್ಳುತ್ತಿದ್ದರು. ಅವರ ಜಾಗಕ್ಕೆ ಇಂದು ಒಬ್ಬ ಡೆಪ್ಯುಟಿ ಡೈರೆಕ್ಟರನ್ನು ಹಾಕಿದ್ದೀರಿ. ಯಾರಾದರೂ ರೈತ ಆಫೀಸಿಗೆ ಹೋಗಿ ಗೊಬ್ಬರ ಬೇಕು ಎಂದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಡಿಪೋಗೆ ಹೋಗಿ ತಗೆದುಕೋ ಎನ್ನುತ್ತಾರೆ, ಬಿತ್ತನೆ ಬೀಜ ಬೇಕು ಎಂದರೆ ತಾಲ್ಲೂಕು ಬೋರ್ಡ್ ಆಫೀಸಿಗೆ ಹೋಗು ಎನ್ನುತ್ತಾರೆ. ಹೀಗೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಹೇಳುತ್ತ, ಸುಳ್ಳು ಡೈರಿ ಬರೆದುಕೊಂಡು ಕಾಲಹರಣ ಮಾಡುತ್ತಾರೆ. ಇಂಥವರಿಂದ ರೈತರಿಗೆ ಆಗುತ್ತಿರುವ ಪ್ರಯೋಜನವೇನು ಎನ್ನುವುದನ್ನು ತಿಳಿಸಬೇಕು. ಸಾವಿರಾರು ರೂಪಾಯಿ ಸಂಬಳ ಕೊಟ್ಟು ಇಟ್ಟಿರುವ ಅಧಿಕಾರಿಯ ಕೆಲಸ ಗುಮಾಸ್ತರನ್ನು ಕರೆದು ಇಲ್ಲದ ಸಲ್ಲದ ಮಾತುಗಳನ್ನು ಹೇಳುವುದು, ಜವಾನರನ್ನು ವರ್ಗ ಮಾಡುವುದು, ಇಲ್ಲವೆ ಹೋದರೆ ಗ್ರಾಮಸೇವಕರನ್ನು ಕರೆದು ವರ್ಗ ಮಾಡಿದ್ದೇನೆ ಎಂದು ಹೇಳುವುದು. ಸಾವಿರಾರು ರೂಪಾಯಿ ಸಂಬಳ ಪಡೆಯುವ ಸ್ಥಾನಗಳಿಗೆ ಪ್ರಮೋಷನ್ ಕೊಟ್ಟು ಅವರ ಕೃಪಾಕಟಾಕ್ಷದಲ್ಲಿ ಬಾಳಿ ಬದುಕಬೇಕು ಎಂದು ಸರ್ಕಾರ ಅವರ ಹೊಗಳಿಕೆಗೆ ಪಾತ್ರವಾಗಿ, ರೈತರು ಕಣ್ಣೀರು ಇಡುವುದನ್ನು ನೋಡದೆ ಇರುವಂಥ ಸರ್ಕಾರಕ್ಕೆ ಕರುಣೆ ಇದೆಯೇ ಎಂದು ಕೇಳುತ್ತೇನೆ.

ವ್ಯವಸಾಯ ಇಲಾಖೆಯಲ್ಲಿ ಏನು ಕೇಳಿದರೂ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಕಡೆ, ಇಲ್ಲ ಸೊಸೈಟಿ ಕಡೆ, ಇಲ್ಲ ನ್ಯಾಷನಲ್ ಸೀಡ್ ಕಾರ್ಪೋರೇಷನ್ ಕಡೆ ಇಲ್ಲವೇ ತಾಲ್ಲೂಕು ಬೋರ್ಡ್ ಕಡೆ ತೋರಿಸುತ್ತಿದ್ದರೆ ಅವರು ಮಾಡುವ ಕೆಲಸವಾದರೂ ಏನು ? ನಮ್ಮ ಕಡೆ 'ಸುಬ್ರಹ್ಮಣ್ಯ ಪಾರುಪತ್ಯ' ಎಂದು ಹೇಳುತ್ತಾರೆ. ಸುಬ್ರಹ್ಮಣ್ಯದಲ್ಲಿ ಎಷ್ಟೋ ಜನ ಯಾತ್ರಿಕರು ಹೋಗಿರುತ್ತಾರೆ. ದೇವರ ದರ್ಶನವಾದ ಮೇಲೆ ಯಾರೋ ಅಡಿಗೆ ಮಾಡಿರುತ್ತಾರೆ, ಯಾರೋ ಬಡಿಸುತ್ತಾರೆ, ಯಾರೋ ಊಟ ಮಾಡಿ ಎದ್ದು ಹೋಗುತ್ತಾರೆ. ಇನ್ನು ಕೆಲವರು ನಿಂತಿರುತ್ತಾರೆ, ಅವರು ಅನ್ನ ತರುವವನನ್ನು ನಿಲ್ಲಿಸಿ ಏನಯ್ಯ ತಂದಿರುವುದು ಎಂದು ಕೇಳಿ ಅನ್ನ ತೆಗೆದುಕೊಂಡು ಬಂದಿದ್ದೀಯಾ, ಅತ್ತ ಕಡೆ ಹೋಗು ಎನ್ನುತ್ತಾರೆ, ಸಾರು ತರುವವನನ್ನು ನಿಲ್ಲಿಸಿ ಕೇಳಿ ಸಾರನ್ನು ಆ ಕಡೆ ತೆಗೆದುಕೊಂಡು ಹೋಗು ಎಂದು ಹೇಳುತ್ತಿರುತ್ತಾರೆ. ಇಂಥ ಕೆಲಸ ವ್ಯವಸಾಯದ ಇಲಾಖೆಯಲ್ಲಿ ನಡೆಯುತ್ತಿದೆ. ಮಾನ್ಯ ಮಂತ್ರಿಗಳ ಬಗ್ಗೆ "ಸುಬ್ರಹ್ಮಣ್ಯ ಪಾರುಪತ್ಯ" ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಐದಾರು ತಿಂಗಳು ಟೈಂ ಕೊಟ್ಟು ಅವರು ಯಾವರೀತಿ ಕೆಲಸ ಮಾಡುತ್ತಾರೆಂದು ನೋಡಿಕೊಂಡು ನಂತರ ಹೇಳುತ್ತೇನೆ. ಕಷ್ಟಪಟ್ಟು ಬೆಳೆಯುವ ರೈತನಿಗೆ ಬೇಕಾದ ಗೊಬ್ಬರ, ಬೀಜ ಮುಂತಾದುವನ್ನು ಒದಗಿಸದೆ, ಸುಬ್ರಹ್ಮಣ್ಯ ಪಾರುಪತ್ಯ ಮಾಡಿ ಸಾವಿರಾರು ರೂಪಾಯಿ ಸಂಬಳ ತೆಗೆದುಕೊಂಡು ಸುಖಲೋಲುಪ್ತರಾಗಿ ಜೀವನ ಸಾಗಿಸುತ್ತಿರುವಂಥ ಅನ್ಯಾಯ ನಮ್ಮ ಸರ್ಕಾರದಲ್ಲಿ ನಡೆಯುತ್ತಿದೆ. ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಲ್ಯಾಂಡ್ ರೆಕ್ಲಮೇಷನ್ನಿಗೆ ಐದು ಲಕ್ಷ ರೂಪಾಯಿ ಇಟ್ಟಿದ್ದಾರೆ. ಇದರಲ್ಲಿ ಮೋಸ ವಂಚನೆ ನಡೆಯುತ್ತಿದೆ. ಯಾರಾದರೂ ಒಬ್ಬ ರೈತ ಭೂಮಿಯನ್ನು ಉತ್ತಮಪಡಿಸಿದ್ದರೆ, ಅಲ್ಲಿ ಹಕ್ಕಿ ಎರಗಿದಹಾಗೆ ಎರಗಿ ಚಲೋ ಮಾಡಿದ್ದೀಯಾ ಎಂದು ಅವನ ರುಜು ಹಾಕಿಸಿಕೊಂಡು ಅವನಿಗೆ ಅಷ್ಟು ದುಡ್ಡು ಕೊಟ್ಟು ತಾವು ಅಷ್ಟು ತೆಗೆದುಕೊಳ್ಳುತ್ತಾರೆ. ಇದರಿಂದ ಯಾರಿಗೂ ಪ್ರಯೋಜನವಾಗಿಲ್ಲ. ಯಾರೋ ಮಾಡಿದ ಕೆಲಸವನ್ನು ಅವರು ಮಾಡಿರುವುದಾಗಿ ಹೇಳಿಕೊಂಡು ಮೋಸ ಮಾಡುತ್ತಿದ್ದಾರೆ. ಇದನ್ನು ಬೇಕಾದರೆ ನಾನು ರುಜುವಾತು ಮಾಡಿಕೊಡುತ್ತೇನೆ.

ಪ್ರತಿಯೊಂದು ಜಿಲ್ಲೆಯಲ್ಲಿಯೂ ಸೀಡ್ ಡೆವಲಪ್‌ಮೆಂಟ್ ಆಫೀಸರಿದ್ದಾರೆ. ಬೀಜ ಬೆಳೆಯುವವರು ರೈತ, ಅದನ್ನು ಕೊಂಡುಕೊಳ್ಳುವವರು ಎನ್.ಇ.ಎಸ್. ಆಫೀಸರ್. ಹಂಚುವವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನವರು ಅಥವಾ ಅವರ ಏಜೆಂಟರು. ಹೀಗಿರುವಾಗ ಸೀಡ್ ಡೆವಲಪ್‌ಮೆಂಟ್ ಆಫೀಸರ್ ಇರುವುದರ ಆವಶ್ಯಕತೆ ಆದರೂ ಏನು ? ಅವರ ಮೇಲ್ವಿಚಾರಣೆಯಲ್ಲಿ ಯಾವ ಕೆಲಸವೂ ನಡೆಯುವುದಿಲ್ಲ. ಆದರೂ ಕೂಡ ಒಬ್ಬ ಆಫೀಸರ್ ಮತ್ತು ಅವರಿಗೆ ಬೇಕಾದ ಸಿಬ್ಬಂದಿ ಇರುತ್ತದೆ. ಇದೇ ರೀತಿ ಮೆನ್ಯೂರ್ ಡೆವಲಪ್‌ಮೆಂಟ್ ಆಫೀಸರ್ ಹೀಗೆ ಬೇಕಾದಷ್ಟು ಜನರಿದ್ದಾರೆ. ಅವರನ್ನೆಲ್ಲ ತೆಗೆಯಬೇಕೆಂದು ಮಾನ್ಯ ಸಚಿವರನ್ನು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಪಶುಪಾಲನೆಯ ಇಲಾಖೆಯಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹಾಸನ ಟೌನಿನಲ್ಲಿ ರೂರಲ್ ಡೈರಿ ಫಾರಂ ಸ್ಯಾಂಕ್ಷನ್ ಆಗಿದೆ. ಕೆಲಸ ಶುರು ಆಗುತ್ತಾ ಇದೆ. ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಜಲ್ದಿ ಡೈರಿ ಫಾರಂ ಮಾಡಬೇಕು. ಡೈರಿ ಫಾರಂನಿಂದ ಲಕ್ಷಾಂತರ ಜನಕ್ಕೆ ಅನುಕೂಲವಾಗಬೇಕಾದರೆ ಇಂಟೆನ್‌ಸೀವ್ ಕ್ಯಾಟಲ್ ಸ್ಕೀಂನಲ್ಲಿ ಒಂದನ್ನಾದರೂ ತಾವು ದೊಡ್ಡ ಮನಸ್ಸು ಮಾಡಿ ನಮ್ಮ ಹಾಸನಕ್ಕೆ ಕೊಡಬೇಕು.

(ಶ್ರೀ ಕೆ. ಎಚ್. ಹನುಮೇಗೌಡ)

ಇನ್ನು ಮೀನುಗಾರಿಕೆ ಬಗ್ಗೆ ಹೇಳುವುದಾದರೆ, ಉತ್ತಮವಾದ ಕೆಲಸಗಳು ಆಗುತ್ತಾ ಇಲ್ಲ. ಇದರಲ್ಲಿ ಏನು ತೊಂದರೆ ಇದೆಯೆಂದರೆ, ಕೆರೆ ತುಂಬಿದಾಗ ಮೀನು ಇರುವುದಿಲ್ಲ; ಮೀನು ಇದ್ದಾಗ ನೀರು ಇರುವುದಿಲ್ಲ. ಮೀನಿನ ಮರಿಗಳು ಉತ್ಪಾದನೆ ಮಾಡುವ ಯೋಜನೆ ಯಾವುದೂ ಮಂಜೂರು ಆಗಿಲ್ಲ. ನಮ್ಮ ಜಿಲ್ಲೆಗೆ ಮೀನು ನರ್ಸರಿ ಒಂದನ್ನು ಮಂಜೂರು ಮಾಡಬೇಕು. ನಮ್ಮ ಜಿಲ್ಲೆಗೆ ಎರಡು ಮೂರು ವರ್ಷಗಳಲ್ಲಿ ಹೇಮಾವತಿ ನೀರನ್ನು ಕೊಡುತ್ತೇವೆಂದು ಹೇಳಿದ್ದೀರಿ. ಈ ಯೋಜನೆ ಯನ್ನು ಬೇಗನೇ ಕಾರ್ಯಗತ ಮಾಡಬೇಕು ಎಂದು ಹೇಳುತ್ತೇನೆ.

ಕಾಡಿನ ಬಗ್ಗೆ ಹೇಳುವುದಾದರೆ, ಕಾಡನ್ನು ಯಥೇಚ್ಚವಾಗಿ ಕಡಿದು ಬಿಟ್ಟು ನಮ್ಮ ಕಡೆ ಮಳೆ ಬರುವುದು ನಿಂತುಹೋಗಿದೆ. ಲಕ್ಷಾಂತರ ರೂಪಾಯಿ ಮರ ಮಾರಾಟವಾಗುತ್ತಿದೆ. ಆದುದರಿಂದ ಚೆಕ್‌ಪೋಸ್ಟ್‌ಗಳನ್ನು ಹಾಕಿ ಕಾಡು ಕಡಿಯುವುದನ್ನು ತಪ್ಪಿಸಬೇಕು.

ಇನ್ನು ಹಾರ್ಟಿಕಲ್ಚರ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿ ನಲ್ಲಿ ಕೆಲಸಕಾರ್ಯಗಳು ಆಗುತ್ತಿದೆ. ಬಹುಶಃ ದೋಷ ರಹಿತವಾದ ಪೊಟ್ಯಾಟೋ ಸೀಡ್ಸ್ ಸಪ್ಲೈ ಆಗುವುದಿಲ್ಲ. ರೈತರು ಚಿಕ್ಕಬಳ್ಳಾಪುರದಿಂದ ತೆಗೆದುಕೊಂಡು ಹೋಗುತ್ತಾರೆ. ಈ ಆಕ್ಟನ್ನು ಸ್ಟ್ರಿಕ್ಟ್ ಆಗಿ ಎನ್‌ಫೋರ್ಸ್ ಮಾಡಿ ಒಳ್ಳೆಯ ಸೀಡ್ಸ್‌ಗಳನ್ನು ಹಾಸನ ಜಿಲ್ಲೆಯಲ್ಲಿ ಉತ್ಪತ್ತಿ ಮಾಡಿ ಜನಗಳಿಗೆ ಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ರೈತರ ಮಕ್ಕಳಿಗೆ ಕಾಲೇಜಿನಲ್ಲಿ ಸೀಟ್ ರಿಸರ್ವ್ ಮಾಡುವ ಒಂದು ಅವಕಾಶ ವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಮಾನ್ಯ ಅಧ್ಯಕ್ಷರೇ, ಈ ಮನೆಯ ಮುಂದಿರುವ ವ್ಯವಸಾಯ ಇಲಾಖೆ ಅನಿಮಲ್ ಹಸ್‌ಬೆಂಡರಿ, ಫಾರೆಸ್ಟ್ ಮತ್ತು ಫಿಷರೀಸ್ ಇಲಾಖೆಗಳ ಬೇಡಿಕೆ ಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸಿ ಒಂದೆರಡು ಸಲಹೆಗಳನ್ನು ಹೇಳಬಯಸುತ್ತೇನೆ. ನಮ್ಮ ಮೈಸೂರು ರಾಜ್ಯ ಕೃಷಿ ಪ್ರಧಾನವಾದ ರಾಜ್ಯ. ನಮ್ಮ ಮೈಸೂರು ರಾಜ್ಯದಲ್ಲಿ ವ್ಯವಸಾಯವೇ ದೊಡ್ಡ ಕೈಗಾರಿಕೆ. ಸಾಧಾರಣವಾಗಿ ವರ್ಷಕ್ಕೆ 500 ಕೋಟಿ ರೂಪಾಯಿ ಉತ್ಪಾದನಾ ಶಕ್ತಿ ಇರುವ ದೊಡ್ಡ ಕೈಗಾರಿಕೆ ವ್ಯವಸಾಯ. ಕೃಷಿ ಉತ್ಪನ್ನ, ಕೃಷಿಗೆ ಬೇಕಾದ ಪ್ರಗತಿ ಎಷ್ಟು ಹೆಚ್ಚು ಹೆಚ್ಚಾಗಿ ಆಗುತ್ತದೋ ಅಷ್ಟು ನಮ್ಮ ದೇಶದ ಪ್ರಗತಿಯಾಗುತ್ತದೆ ಎಂದು ನಾನು ಈ ಸಂದರ್ಭ ದಲ್ಲಿ ಒತ್ತಿ ಹೇಳುತ್ತೇನೆ. ಈ ಕೃಷಿ ಇಲಾಖೆಗೆ ಕೃಷಿಕರಾದ ಮಾನ್ಯ ಶ್ರೀ ಕೆ. ಎಚ್. ಪಾಟೀಲರು ಮಂತ್ರಿಗಳಾಗಿ ಅಧಿಕಾರವಹಿಸಿಕೊಂಡಿದ್ದಾರೆ. ಅವರು ಕೃಷಿ ವಿಚಾರದಲ್ಲಿ ಹೆಚ್ಚಿನ ಗಮನ ಕೊಡುತ್ತಾರೆ ಎಂದು ನಾನು ನಂಬಿದ್ದೇನೆ. ನಮ್ಮ ದೇಶದಲ್ಲಿ ಕೃಷಿಯಲ್ಲಿ ವಿಭಿನ್ನವಾದ ರೀತಿ ಇದೆ. ಮಾನ್ಯ ದೇವೇಗೌಡರು ಹೇಳಿದ ಹಾಗೆ ನಮ್ಮಲ್ಲಿ ನೀರಾವರಿ ಪ್ರದೇಶ ಬಹಳ ಕಡಿಮೆ ಅಂದರೆ, ಶೇಕಡ 14 ಪರ್ಸೆಂಟ್ ಇದೆ ಉಳಿದ ಆರು ಪಾಲು ವರುಣದ ಕೃಪಾ ದೃಷ್ಟಿಯನ್ನು ಅವಲಂಬಿಸಿ ಕೊಂಡು ವ್ಯವಸಾಯ ಆಗುವ ಸ್ಥಳ. ಉಳಿದ 80ಪಾಲು ಸ್ಥಳ ವರುಣನ ವಕ್ರದೃಷ್ಟಿಗೆ ಬಿದ್ದಿರುವ ಖುಷ್ಕಿ ಜಮೀನು. ಈ ಖುಷ್ಕಿ ಜಮೀನಿನ ವಿಚಾರದಲ್ಲಿ ಕೃಷಿ ತಜ್ಞರು, ಕೃಷಿ ಪ್ರಯೋಗ ಮಾಡುವವರು ಇದರ ಕಡೆಗೆ ಹೆಚ್ಚಿನ ದೃಷ್ಟಿ ಹರಿಸಬೇಕು ಎಂದು ಹೇಳುತ್ತೇನೆ. ಖುಷ್ಕಿ ಜಮೀನಿನಲ್ಲಿ ಶೀಘ್ರವಾಗಿ ಬೆಳೆ ಬರುವ ಬೀಜಗಳ ಉತ್ಪನ್ನವನ್ನು ಹೆಚ್ಚು ಹೆಚ್ಚಾಗಿ ಕಂಡುಕೊಂಡು ಅದರ ಉತ್ಪಾದನೆಯನ್ನು ಎಷ್ಟು ಹೆಚ್ಚು ಮಾಡುತ್ತಾರೋ ಅಷ್ಟು ನಮ್ಮ ದೇಶದ ಕೃಷಿ ಉತ್ಪನ್ನ ಜಾಸ್ತಿ ಆಗಬಹುದು ಎಂದು ನಾನಾದರೂ ಬಲವಾಗಿ ನಂಬಿಕೊಂಡಿದ್ದೇನೆ. ಕೃಷಿ ವಿಶ್ವವಿದ್ಯಾನಿಲಯ ಮತ್ತು ಕೃಷಿ ತಜ್ಞರು, ಕೃಷಿ ವಿಚಾರದಲ್ಲಿ ಅವರು ದೃಷ್ಟಿಯನ್ನು ಹರಿಸಬೇಕು. ಮೈಸೂರು ರಾಜ್ಯದ 104 ಲಕ್ಷ ಎಕರೆ ಪ್ರದೇಶಗಳಲ್ಲಿ ಶೇಕಡ 80ಪಾಲು ಕೃಷಿ ಪ್ರದೇಶ, ಖುಷ್ಕಿ ಜಮೀನನ್ನು ಹೊಂದಿಕೊಂಡಿದೆ. ಇದು ನೀರು ಇಲ್ಲದೆ ವ್ಯವಸಾಯ ಆಗುವ ಜಾಗ. ಇದರ ಮೇಲೆ ವರುಣನ ವಕ್ರದೃಷ್ಟಿ ಪದೇ ಪದೇ ಬೀಳುವುದರಿಂದ, ಅನಾವೃಷ್ಟಿ ಹೆಚ್ಚಾಗಿ ಇರುವುದರಿಂದ ಖುಷ್ಕಿ ಜಮೀನು ವ್ಯವಸಾಯಕ್ಕೆ ಎಷ್ಟು ಅಭಿವೃದ್ಧಿ ಹೊಂದುತ್ತದೋ ಅಷ್ಟು ನಮ್ಮ ಕೃಷಿಯಲ್ಲಿ ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಿದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಈ ಖುಷ್ಕಿ ಜಮೀನಿನ ವಿಚಾರದಲ್ಲಿ ತಾವು ಆಲೋಚನೆ ಮಾಡಿ ಆದಷ್ಟು ಜಾಗ್ರತೆ ಬೆಳೆ ಬರುವ ಬೀಜಗಳನ್ನು ಉತ್ಪತ್ತಿ ಮಾಡುವಂತೆ ವ್ಯವಸಾಯ ತಜ್ಞರಿಗೆ ಆದೇಶ ಕೊಡಬೇಕು ಎಂದು ಈ ಸಭೆಯಲ್ಲಿ ಒತ್ತಿ ಹೇಳುತ್ತೇನೆ. ಆಮೇಲೆ ಮೈಸೂರು ರಾಜ್ಯದ 104ಲಕ್ಷ ಎಕರೆ ಭೂಮಿಯಲ್ಲಿ, 11 ಲಕ್ಷ ಎಕರೆ ಭೂಮಿಯಲ್ಲಿ ಭತ್ತದ ಬೆಳೆ ಬೆಳೆಯುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೋಡಿದರೆ, 2,15,000 ಹೆಕ್ಟಾರುಗಳ ಪ್ರದೇಶ

ದಲ್ಲಿ ನಾವು ಭತ್ತವನ್ನು ಬೆಳೆಯುತ್ತಿದ್ದೇವೆ. ಒಟ್ಟು ಮೈಸೂರು ರಾಜ್ಯದ ಐದನ ಒಂದು ಭಾಗದ
ಭತ್ತದ ಬೆಳೆಯನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುತ್ತಿದ್ದೇವೆ. ನಮ್ಮ ರಾಜ್ಯದ ಬೇರೆ
ಭಾಗಗಳಲ್ಲಿ ಅನಾವೃಷ್ಟಿಯಿಂದ ಬೆಳೆಯಾಗುತ್ತಿದ್ದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿ
ಯಿಂದ ಬೆಳೆಯಾಗುತ್ತಿದೆ. ಇದನ್ನು ಅಧ್ಯಯನ ಮಾಡಬೇಕು. ವಿಪರೀತ ಮಳೆ ಬಂದು ಮಣ್ಣಿನ
ಸಾರ ಕಿತ್ತುಕೊಂಡು ಹೋಗಿದೆ, ಮಣ್ಣಿನ ಸಾರ ಇಲ್ಲದೆ ಇರುವುದರಿಂದ ಮಣ್ಣನ್ನು ಸಾರ ತುಂಬು
ವಂತೆ ಏನು ಮಾಡಬೇಕು ಎಂದು ಆಲೋಚನೆ ಮಾಡಿದರೆ ನಮ್ಮ ಪ್ರದೇಶದಲ್ಲಿ ಇನ್ನೂ ಹೆಚ್ಚಿನ
ಉತ್ಪಾದನೆಯಾಗುತ್ತದೆ. ಮಂಡ್ಯ, ಶಿವಮೊಗ್ಗ ಜಿಲ್ಲೆಯಲ್ಲಿ ನೋಡಿದರೆ, ನಮ್ಮ ಜಿಲ್ಲೆಯಲ್ಲಿ
ಒಂದು ಎಕರೆಯ ಉತ್ಪನ್ನ ಬಹಳ ಕಡಿಮೆ. ನಮ್ಮ ಜಿಲ್ಲೆಯಲ್ಲಿ ಮಣ್ಣಿನ ಸಾರ ಇಲ್ಲ. ಪ್ರತಿ ವರ್ಷ
ಹೆಚ್ಚಾಗಿ ಮಳೆಬಂದು ಮಣ್ಣಿನ ಸಾರವನ್ನು ನೀರು ಕೊಚ್ಚಿಕೊಂಡು ಹೋಗುವುದರಿಂದ ಸಾರ
ತುಂಬಲು ಕಾರ್ಯಕ್ರಮ ಕೈಗೊಳ್ಳಬೇಕಾಗಿದೆ. ಈ ವಿಚಾರದಲ್ಲಿ ತಜ್ಞರು ಆಳವಾಗಿ ಅಭ್ಯಾಸ
ಮಾಡಿ ಏನಾದರೂ ಒಂದು ಪರಿಹಾರ ಕಂಡುಕೊಂಡರೆ ನಮ್ಮ ಜಿಲ್ಲೆಯಲ್ಲಿ, ಮಂಡ್ಯ, ಶಿವಮೊಗ್ಗ
ಜಿಲ್ಲೆಗಳಿಗಿಂತ ಹೆಚ್ಚಾಗಿ ಭತ್ತದ ಉತ್ಪನ್ನ ತೆಗೆಯಬಹುದು. ಏಕೆಂದರೆ ಮೈಸೂರು ರಾಜ್ಯದಲ್ಲಿ ಅತಿ
ಪ್ರಾಮುಖ್ಯವಾಗಿ ಅಕ್ಕಿ ಬೆಳೆಯುವ ಜಾಗ, ನಮ್ಮ ಜಿಲ್ಲೆಯಲ್ಲಿ ಇರುವುದರಿಂದ ಹೆಚ್ಚಿನ ಉತ್ಪತ್ತಿ
ಆಗುವ ಹಾಗೆ ಕೃಷಿ ತಜ್ಞರು, ಕೃಷಿ ಇಲಾಖೆಯವರು ಪರಿಶೀಲನೆ ನಡೆಸಬೇಕು ಎಂದು ಈ ಸಂದರ್ಭ
ದಲ್ಲಿ ಒತ್ತಾಯ ಮಾಡುತ್ತೇನೆ. ಮೊನ್ನೆ ನನ್ನ ಕ್ಷೇತ್ರದಲ್ಲಿ 10—20 ದಿವಸಗಳಿಂದ ಉಳ್ಳಾಲ
ಗ್ರಾಮದಲ್ಲಿ ನೆರೆ ಬಂದು ಸುಮಾರು ಎರಡು ಸಾವಿರ ಎಕರೆಯಲ್ಲಿ ಒಂದಾಣೆ ಬೆಳೆಯನ್ನು ಬೆಳೆ
ಯುವ ಹಾಗಿಲ್ಲ. ಎರಡು ಸಾವಿರ ಎಕರೆ ಪ್ರದೇಶದಲ್ಲಿ ಉಳಿಯಾಲ ಕೋಡಿ, ಮತ್ತೂರು ಗ್ರಾಮ
ಗಳಲ್ಲಿ ನೀರು ತುಂಬಿ ಹೋಗಿದೆ ಎಂದು ಟೆಲಿಗ್ರಾಂ ಬಂದಿದೆ. ಇಂತಹ ಅತಿ ವೃಷ್ಟಿಯಿಂದ ಅಲ್ಲಿರುವ
ಬೆಳೆ ನಷ್ಟವಾಗಿದೆ. ಆದುದರಿಂದ ರೈತರಿಗೆ ಕೃಷಿ ಇಲಾಖೆಯವರು ಆವಷ್ಟು ಪರಿಹಾರ ಒದಗಿಸ
ಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಗೊಬ್ಬರವನ್ನು ವಿತರಣೆ ಮಾಡುವಲ್ಲಿ ಅನೇಕ
ತೊಂದರೆಗಳನ್ನು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಇದನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊ
ರೇಷನ್‌ಗೆ ವಹಿಸಿಕೊಟ್ಟಿದ್ದಾರೆ. ಸಂತೋಷ, ಆದರೆ ನಮ್ಮ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ
ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬ್ರಾಂಚಸ್ ಇರುವುದಿಲ್ಲ. ಆದ್ದರಿಂದ ಗೊಬ್ಬರದ ವಿತರಣೆ
ಸರಿಯಾಗಿ ಸಕಾಲಕ್ಕೆ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಏಜನ್ಸಿಯು
ಏನಿದೆ, ಅದರ ಒಂದು ಬ್ರಾಂಚನ್ನು ಅಲ್ಲಿ ತೆಗೆಯುವುದಿದ್ದರೆ, ಅದರ ಮೂಲಕ ರೈತರಿಗೆ ಅನುಕೂಲ
ವಾಗುವಂತೆ ಒಂದು ಯೋಜನೆಯನ್ನು ಪ್ರತಿ ತಾಲ್ಲೂಕ್ ಕೇಂದ್ರಗಳಲ್ಲಿ ಅಥವಾ ಒಂದೊಂದು ಅಸೆಂಬ್ಲಿ
ಕ್ಷೇತ್ರದಲ್ಲಿ ಮಾಡಬೇಕು. ರೈತರು ಗೊಬ್ಬರ ಮತ್ತು ಬೀಜಗಳಿಗಾಗಿ ಸಕಾಲದಲ್ಲಿ ಎಲ್ಲಿಗೆ ಹೋಗ
ಬೇಕು ? ಏನು ಮಾಡಬೇಕು ಎಂದು ಕಂಗೆಟ್ಟಿದ್ದಾರೆ. ಅದಕ್ಕಾಗಿ ತೀವ್ರ ಗಮನಕೊಡಬೇಕೆಂದು
ಈ ಸಂದರ್ಭದಲ್ಲಿ ಹೇಳುತ್ತೇನೆ. ಕೃಷಿ ಉತ್ಪಾದನೆಗೆ ಪ್ರೋತ್ಸಾಹದಾಯಕವಾದ ಬೆಲೆ ಬರಬೇಕು
ಎಂದು ಮಾನ್ಯ ಮಿತ್ರರನೇಕರು ಹೇಳಿದ್ದಾರೆ. ಉತ್ಪತ್ತಿ ಮಾಡುವ ರೈತನಿಗೆ ಪ್ರೋತ್ಸಾಹದಾಯಕ
ವಾದ ಬೆಲೆ ಸಿಗದಿದ್ದರೆ ಕೃಷಿಯಲ್ಲಿ ಅವನಿಗೆ ಏನು ಇಂಟರೆಸ್ಟ್ ಇದೆ, ಅದು ಕಳೆದುಹೋಗುತ್ತದೆ.
ಕೃಷಿಕನಿಗೆ ಉತ್ಪತ್ತಿಗೆ ಯೋಗ್ಯ ಪ್ರತಿಫಲ ಸಿಗುತ್ತದೆ ಎಂದು ಆಗಬೇಕು. ಪ್ರೋತ್ಸಾಹದಾಯಕವಾದ
ಬೆಲೆ ಏನು ಇದೆ ಅದು ರೈತರ ಉತ್ಪನ್ನಕ್ಕೆ ಸಿಗುವಂತಾಗಬೇಕು. ಅದನ್ನು ತೀವ್ರ ರೀತಿಯಲ್ಲಿ
ಯೋಚನೆ ಮಾಡಬೇಕು. ಮುಖ್ಯವಾಗಿ ಮೀನುಗಾರಿಕೆ ಇಲಾಖೆ ವಿಚಾರದಲ್ಲಿ ನಮ್ಮ ಸರ್ಕಾರದವರು
ಏತಕ್ಕೋ ಧೃತರಾಷ್ಟ್ರ ದೃಷ್ಟಿಯನ್ನು ಹಾಕಿದ್ದಾರೆ. ನಮಗೆ ಕೊಟ್ಟ ಕಾರ್ಯಕ್ರಮ ಪಟ್ಟಿಯಲ್ಲಿ
ಕೂಡ ಮೀನುಗಾರಿಕೆ ಇಲಾಖೆಯನ್ನು ನಿಕೃಷ್ಟವಾಗಿ ತಾತ್ಸಾರ ಭಾವನೆಯಿಂದ ನೋಡುತ್ತಿರುವು
ದನ್ನು ನೋಡಿದರೆ ಮೀನಿನ ಮೇಲಿನ ವೈಷಮ್ಯದಿಂದಲೋ ಏನೋ ಎಂದು ಗೊತ್ತಾಗುವುದಿಲ್ಲ.
ಮೀನು ಅತಿ ಪೌಷ್ಟಿಕ ಆಹಾರ ಒದಗಿಸುವ ವಸ್ತು. ಅಷ್ಟೇ ಅಲ್ಲದೆ ಮೈಸೂರು ಪ್ರದೇಶದಲ್ಲಿ ನಮ್ಮ
ದೇಶದ ನಾಲ್ಕನೇ ಒಂದು ಪಾಲು ಮೀನು ಉತ್ಪಾದನೆ ಮಾಡುತ್ತಾರೆ. 70–71 ಸಾಲಿನಲ್ಲಿ
1 ಲಕ್ಷ 27 ಸಾವಿರ ಟನ್ ಸಮುದ್ರ ಮೀನಿನ ಉತ್ಪಾದನೆ ಮತ್ತು 63 ಸಾವಿರ ಟನ್ ಒಳನಾಡು
ಮೀನಿನ ಉತ್ಪಾದನೆಯನ್ನು ನಮ್ಮ ರಾಜ್ಯದಲ್ಲಿ ಮಾಡಿ 2 ಕೋಟಿ ರೂಪಾಯಿ ವಿದೇಶಿ ವಿನಿಮಯ
ವನ್ನು ಮೈಸೂರು ರಾಜ್ಯ ಗಳಿಸಿಕೊಟ್ಟಿದೆ. 1970-71ನೇ ಇಸವಿಯಲ್ಲಿ ಅಷ್ಟು ಉತ್ಪಾದನೆ ಆದರೆ,
ಕಳೆದ ವರ್ಷ ಅಂದರೆ 71-72ಕ್ಕೆ ಮೀನಿನ ಉತ್ಪಾದನೆಯಲ್ಲಿ ಸ್ವಲ್ಪ ಕೊರತೆ ಉಂಟಾಗಿದೆ. 71-72ರಲ್ಲಿ
ಮೀನಿನ ಉತ್ಪಾದನೆಯು ಸಾವಿರ ಟನ್ನಿಗೆ ಬಂದು ನಿಂತಿದೆ. ಇದು ಮಾತ್ರವಲ್ಲದೆ ಅತಿ ಪ್ರಾಮುಖ್ಯ
ವಾದ ವಿದೇಶಿ ವಿನಿಮಯ ಗಳಿಸಿಕೊಡುವ ಸಿಗಡಿಮೀನು ಏನು ಇದೆ ಇದು ಸಮುದ್ರದಲ್ಲಿ ಬಹಳ
ಕಡಿಮೆಯಾಗಿರುವುದು ಶೋಚನೀಯವಾದ ವಿಚಾರ.

ಶ್ರೀ ಕೋಣಂದೂರು ಲಿಂಗಪ್ಪ.—ಮಂಗಳೂರು ಶೆಟ್ಟರು ಮೀನು ಮೀನು ...
ಬೆಂಗಳೂರು ಸೆಟ್ಟರಿಗೆ ಮೀನು ಎಂದರೆ ...

ಶ್ರೀ ಬಿ. ಭಾಸ್ಕರ ಶೆಟ್ಟಿ.—ಬೆಂಗಳೂರು ಶೆಟ್ಟರೇ ಬೇರೆ, ಮಂಗಳೂರು ಶೆಟ್ಟರೇ ಬೇರೆ. ಸಿಗದಿ ಮೀನು ಹೆಚ್ಚಿಗೆ ವಿದೇಶಿ ವಿನಿಮಯ ಕೊಡುವುದು. ಈ ಮೀನಿನ ಕೊರತೆಗೆ ಕಾರಣ ಏನು ಎಂದು ತಜ್ಞರು ನೋಡಬೇಕು. 1092 ಯಾಂತ್ರಿಕ ದೋಣಿಗಳಲ್ಲಿ ಎರಡು ಯಾಂತ್ರಿಕ ದೋಣಿಗಳು ಸಮುದ್ರ ಕರಾವಳಿಯಲ್ಲಿ ಕೆಲಸಮಾಡುತ್ತಿವೆ ಎಂದು ಹೇಳಿದ್ದೀರಿ. ಯಾಂತ್ರಿಕ ದೋಣಿಗಳಲ್ಲಿ ಹೆಚ್ಚಿನವು ಅಳವಾದ ನೀರಿಗೆ ಹೋಗಲು ಶಕ್ತಿಯುತವಾಗಿಲ್ಲ. 34-40 ಅಶ್ವ ಶಕ್ತಿಯ ದೋಣಿಗಳು ಹೆಚ್ಚಿಗೆ ಇರುವುದರಿಂದ ಅವು 10-15 ಮೈಲಿ ಒಳಗೆ ಪ್ರದೇಶಕ್ಕೆ ಹೋಗಿ ಮೀನುಗಳನ್ನು ಹಿಡಿಯ ಬಹುದು. 100-150 ಮೈಲಿ ದೂರಕ್ಕೆ ಹೋಗಿ ಆಳವಾದ ಸಮುದ್ರದಲ್ಲಿ ಮೀನು ಹಿಡಿಯುವುದಕ್ಕೆ ಆಗುವುದಿಲ್ಲ. ಆಳವಾದ ಸಮುದ್ರಕ್ಕೆ ಹೋಗಲು ದೊಡ್ಡ ಯಾಂತ್ರಿಕ ದೋಣಿಗಳನ್ನು ತಯಾರಿಸಿ ಮೀನುಗಾರರಿಗೆ ಕೊಟ್ಟು ಮೀನಿನ ಉತ್ಪಾದನೆಯಲ್ಲಿ ಹೆಚ್ಚಿನ ಪ್ರಗತಿ ತೋರಿಸಬೇಕು. ಮತ್ತು ಇದರಬಗ್ಗೆ ಆಸಕ್ತಿ ವಹಿಸಿ ಹೆಚ್ಚು ಹೆಚ್ಚಾಗಿ ಕೆಲಸಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ ಮೀನಿನ ಇಲಾಖೆ ಬಗ್ಗೆ ತಾತ್ಸಾರ ತೋರಿಸಿದ್ದಾರೆ. ಕಳೆದ ವರ್ಷ 73 ಲಕ್ಷ ರೂಪಾಯಿ ಯೋಜನೆ ವಿಚಾರದಲ್ಲಿ ನಮಗೆ ಹಣವನ್ನು ಒದಗಿಸಿದರೆ ಈಗ ಕೇವಲ 66 ಲಕ್ಷ ರೂಪಾಯಿ ಒದಗಿಸಿದ್ದಾರೆ. ಇದು ಕಡಿಮೆ. ಬೇರೆ ಬೇರೆ ಇಲಾಖೆಗಳಿಗೆ ಒದಗಿಸಿ ರುವ ಹಣವನ್ನು ನೋಡಿದರೆ ಇದರಲ್ಲಿ ಕೆಲಸಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳು ತ್ತೇನೆ. ಆದುದರಿಂದ ಸರ್ಕಾರದವರು ದೊಡ್ಡ ಮನಸ್ಸುಮಾಡಿ ವಿದೇಶಿ ವಿನಿಮಯಗಳಿಸುವ ಈ ವಿಚಾರದಲ್ಲಿ ಹೆಚ್ಚು ಹೆಚ್ಚಾಗಿ ಹಣ ಒದಗಿಸಿ ಕರಾವಳಿಯ ಮೀನಿನ ಉತ್ಪಾದನೆ ಹೆಚ್ಚುಮಾಡ ಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಮೀನು ಹಿಡಿಯುವ ಯಾಂತ್ರಿಕ ದೋಣಿಗಳಿಗೆ ಕೆಲವು ಸಹಾಯ ಧನವನ್ನು ಕೊಡುವ ಕಾರ್ಯಕ್ರಮವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಕೆಲವರು ಸಹಾಯಧನ ಎಂದರೆ ಮೀನುಗಾರರಿಗೆ ಮಾತ್ರ ಏತಕ್ಕೆ ಕೊಡು ತ್ತಾರೆ, ನಮಗೆ ಏತಕ್ಕೆ ಕೊಡುವುದಿಲ್ಲ ಎಂದು ವಿಭಿನ್ನ ಯೋಚನೆಮಾಡಿ ಸಹಾಯಧನವನ್ನು ಕೊಡ ಬಾರದು ಎನ್ನುವ ವಿಚಾರಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ ಮತ್ತು ಆರೀತಿ ಮಾತನಾಡುತ್ತಿ ದ್ದಾರೆ. ಮೀನುಗಾರರು ನಿಜವಾಗಿಯೂ ಬಡವರು ಅವರಿಗೆ ಮೀನಿನ ಉತ್ಪಾದನೆಯಲ್ಲಿಯೇ ದಿವಸ ಹೋಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಭಾವಿ ಜನರಿಗೆ ಕೊಡಬಾರದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪ್ರಭಾವಿ ಜನರಿಗೆ ಕೊಡಬಾರದು ಎಂದು ಹೇಳುವವರಲ್ಲಿ ನಾನೂ ಒಬ್ಬ. ಬಡ ಮೀನುಗಾರರು ಹಿಂದೆ ದೋಣಿಗಳಿಗೆ ಬೇಕಾದ ಇಂಜಿನನ್ನು ಪರದೇಶಗಳಿಂದ ಕಡಿಮೆ ಕ್ರಯದಲ್ಲಿ ತರಿಸುತ್ತಿದ್ದರು. 34 ಹಾರ್ಸ್ ಪವರ್ ಇಂಜಿನ್ನಿಗೆ 15 ಸಾವಿರ ರೂಪಾಯಿ ಆಗುವುದು ಇದ್ದರೆ ನಮ್ಮ ದೇಶದಲ್ಲಿ ತಯಾರು ಆಗುತ್ತಿರುವ ಅದೇ ಅಶ್ವಶಕ್ತಿ ಇಂಜನಿಗೆ 30 ಸಾವಿರ 34 ಸಾವಿರ ರೂಪಾಯಿಗಳಾಗುತ್ತದೆ. 100ಕ್ಕೆ 100 ಪಾಲು ಹೆಚ್ಚು ಇದೆ. ಹೆಚ್ಚುಬಡವರಿಗೆ ಇದನ್ನು ಕೊಂಡುಕೊಳ್ಳುವ ಶಕ್ತಿ ಇರುವುದಿಲ್ಲ. ಹಿಂದೆ ಸೇಕಡ 50 ಸಹಾಯಧನವನ್ನು ಕೊಡುತ್ತಿದ್ದರು ಈಗ ಸೇಕಡ 25ರಷ್ಟು ಸಹಾಯಧನವನ್ನು ಕೊಡುತ್ತಿದ್ದಾರೆ. ಇದನ್ನು ಸೇಕಡ 50 ಮಾಡಿ ಇನ್ನು ಹೆಚ್ಚಿನ ಸಹಾಯದನವನ್ನು ಒದಗಿಸಿ ಹೆಚ್ಚಿನ ಅಶ್ವಶಕ್ತಿ ಇರುವ ಯಾಂತ್ರಿಕ ದೋಣಿಗಳನ್ನು ತಯಾರು ಮಾಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೀನುಗಾರಿಕೆ ಇಲಾಖೆಯನ್ನು ಮೇಜರ್ ಡಿಪಾರ್ಟ್‌ಮೆಂಟ್ ಮಾಡಬೇಕು. ಮೈನ್ಸ್ ಮತ್ತು ಜಿಯಾಲಾಜಿ, ಪ್ರಿಂಟಿಂಗ್ ಮತ್ತು ಸ್ಟೇಷನರಿ ಇಂತಹ ಕಮ್ಮಿ ಖರ್ಚು ಆಗುವ ಡಿಪಾರ್ಟ್ ಮೆಂಟ್‌ನ್ನೂ ಮೇಜರ್ ಡಿಪಾರ್ಟ್‌ಮೆಂಟ್ ಮಾಡಿದ್ದೀರಿ. ಹಾಗಿರುವಾಗ ಮೀನುಗಾರಿಕೆ ಇಲಾಖೆ ಮೇಲೆ ಏತಕ್ಕೆ ತಾತ್ಸಾರ ಮಾಡುತ್ತಾ ಇದ್ದೀರಿ ಎಂದು ಪ್ರಶ್ನೆ ಕೇಳಬೇಕಾಗಿದೆ. ಸರ್ಕಾರದವರು ಈ ಮೀನುಗಾರಿಕೆ ಇಲಾಖೆಯನ್ನು ತಾತ್ಸಾರ ಭಾವದಿಂದ ನೋಡದೆ ಮೇಜರ್ ಡಿಪಾರ್ಟ್‌ಮೆಂಟ್ ಎಂದು ಮಾಡಬೇಕು. ಈ ಮೀನುಗಾರಿಕೆ ಇಲಾಖೆ ಹೊಸ ಮಂತ್ರಿಗಳು ಉತ್ಸುಕತೆಯಿಂದ ಕೆಲಸ ಮಾಡುತ್ತಾ ಇದ್ದಾರೆ. ಅವರ ಕಾಲದಲ್ಲಿ ಇದು ಮೇಜರ್ ಡಿಪಾರ್ಟ್‌ಮೆಂಟ್ ಆಗಿ ಇನ್ನು ಹೆಚ್ಚಿನ ಕೆಲಸ ಮಾಡುವಂತಾಗಲಿ ಎಂದು ಅವರನ್ನು ವಿನಂತಿ ಮಾಡಿಕೊಂಡು ನನಗೆ ಇಷ್ಟು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

† ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ನದಿವಸ ಒಕ್ಕಲುತನ ಖಾತೆಯ ಮಂತ್ರಿಗಳು ಹಾಗೂ ಪಶುಸಂಗೋಪನ ಶಾಖೆಯ ಮಂತ್ರಿಗಳು ಮಂಡಿಸಿ

ದಂಥ ಕೇಳಿಕೆಗಳನ್ನು ತುಂಬಾ ಸ್ವಾಗತಿಸುತ್ತಾ, ಅದಕ್ಕೆ ಬೆಂಬಲ ಕೊಡುತ್ತಾ, ನನ್ನ ಕೆಲವು ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುತ್ತೇನೆ. ನಮ್ಮ ದೇಶ ಹಾಗೂ ರಾಜ್ಯ ಕೃಷಿಕರಿಂದ ತುಂಬಿದ ರಾಜ್ಯವಾಗಿದೆ. ಇಂದು ನಮ್ಮ ದೇಶದಲ್ಲಿ ಶೇಕಡ 80–90 ಜನರು ವ್ಯವಸಾಯದಿಂದ ಜೀವನ ಮಾಡುತ್ತಿದ್ದಾರೆ. ಒಕ್ಕಲುತನ ಶಾಖೆ ನಮ್ಮ ರಾಜ್ಯದ ಜನತೆಯ ಬೆನ್ನೆಲುಬಾಗಿದೆ. ಮತ್ತು ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಈ ಇಲಾಖೆ ಬೆನ್ನೆಲುಬಾಗಿದೆ ಎಂದು ಹೇಳಬಹುದು. ಒಕ್ಕಲುತನ ಸರಿಯಾಗಿ ಊರ್ಜಿತವಾಗಿ ಸಾಗಿ ಅದರಿಂದ ಸರಿಯಾದಂಥ ಉತ್ಪನ್ನ ಬಂದಿದ್ದೇ ಆದರೆ, ಆ ಉತ್ಪನ್ನದಿಂದ ದೇಶದ ಎಲ್ಲ ಜನತೆಗೂ ವಸತಿ, ವಸ್ತ್ರ ಮತ್ತು ಆಹಾರವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಒಕ್ಕಲುತನದಿಂದ ಸರಿಯಾಗಿ ಉತ್ಪನ್ನ ಬರದಿದ್ದರೆ, ಅಥವಾ ಒಕ್ಕಲುತನ ಏನಾದರು ಮುಗ್ಗರಿಸಿದರೆ, ಅವರಿಂದ ಎಲ್ಲ ಜನತೆ ಹಾಗೂ ಸರ್ಕಾರ ಮುಗ್ಗರಿಸುತ್ತದೆಂದು ಹೇಳುತ್ತೇನೆ. ಸರ್ಕಾರದವರು ಒಕ್ಕಲುತನದ ಬಗ್ಗೆ ಏನಾದರು ಸುಧಾರಣೆ ಮಾಡಿದ್ದಾರೆಯೇ ಎಂದು ನೋಡುವುದಾದರೆ, ಅದಕ್ಕೆ ಉತ್ತರ ನಕಾರ ಬರುತ್ತದೆ. ಒಕ್ಕಲುತನ ಶಾಖೆ ನಿರ್ಲಕ್ಷಿಸಿರುವಷ್ಟು ಬೇರೆ ಯಾವ ಖಾತೆಯೂ ನಿರ್ಲಕ್ಷಿಸಲ್ಪಟ್ಟಿಲ್ಲ ಎಂದು ಹೇಳಬಹುದು. ಇದಕ್ಕೆ ಉದಾಹರಣೆಯಾಗಿ ಕೃಷಿ ಶಿಕ್ಷಣವನ್ನು ತೆಗೆದುಕೊಳ್ಳೋಣ. ಇದು ನಿಜವಾಗಿಯೂ ಕನಿಕರ ಪಡುವಂತಹ ಸನ್ನಿವೇಶವಾಗಿದೆ. ಕೃಷಿ ಶಿಕ್ಷಣವನ್ನು ಸರ್ಕಾರದವರು ಬಹಳ ರೀತಿಯಿಂದ ತಾತ್ಸಾರ ಮಾಡಿದ್ದಾರೆಂದು ಹೇಳಬಹುದು. ನಮ್ಮ ರಾಜ್ಯದಲ್ಲಿ ಸುಮಾರು ಹದಿಮೂರು ನೂರಕ್ಕಿಂತ ಹೆಚ್ಚು ಪ್ರೌಢಶಾಲೆಗಳಿವೆ. 200ಕ್ಕೆ ಮೇಲ್ಪಟ್ಟು ಕಾಲೇಜುಗಳಿವೆ. ಮೂರು ವಿಶ್ವವಿದ್ಯಾನಿಲಯಗಳು ನಮ್ಮ ರಾಜ್ಯದಲ್ಲಿ ಇವೆ. ಇವೆಲ್ಲವನ್ನೂ ಕೃಷಿ ಶಿಕ್ಷಣಕ್ಕೆ ಹೋಲಿಕೆ ಮಾಡಿ ನೋಡಿದರೆ, ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಕೇಡೆನಿಸುತ್ತದೆ. ಈಗ ನಮ್ಮ ರಾಜ್ಯದಲ್ಲಿ ಕೃಷಿ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಒಂದು ವಿಶ್ವವಿದ್ಯಾನಿಲಯ ಮತ್ತು ಎರಡು ಕಾಲೇಜ್‌ಗಳು ಮಾತ್ರ ಇವೆ. ಸರ್ಕಾರದವರು ಕೃಷಿಯನ್ನು ಉದ್ಧಾರ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ ಕೃಷಿ ಕಾಲೇಜುಗಳನ್ನು ಮತ್ತು ಕೃಷಿ ವಿಶ್ವವಿದ್ಯಾನಿಲಯಗಳನ್ನು ಹೆಚ್ಚಿಗೆ ಮಾಡುವುದನ್ನು ಬಿಟ್ಟು, ನೌಕರಿ ಸಲುವಾಗಿ, ವೃತ್ತಿ ಸಲುವಾಗಿ ಕ್ಯೂ ನಿಲ್ಲುವುದಕ್ಕೆ ರಹದಾರಿ ಕೊಡುವ ಮತ್ತು ಡಿಗ್ರಿ ಮಾರಾಟ ಮಾಡತಕ್ಕಂಥ ಕಾಲೇಜ್‌ಗಳನ್ನು ಹೆಚ್ಚು ಮಾಡುತ್ತಿದ್ದಾರೆ. ಈ ರೀತಿ ಡಿಗ್ರಿ ಮಾರಾಟ ಮಾಡತಕ್ಕಂಥ ಮತ್ತು ಡಿಗ್ರಿ ತೆಗೆದುಕೊಂಡಮೇಲೆ ನೌಕರಿ ಬೇಕು ಎಂದು ಕೇಳುವ ಪದವೀಧರರನ್ನು ತಯಾರು ಮಾಡುವ ಮೂರು ವಿಶ್ವವಿದ್ಯಾನಿಲಯಗಳು ನಮ್ಮ ರಾಜ್ಯದಲ್ಲಿವೆ. ಆದರೆ ಕೃಷಿ ಕಾಲೇಜ್‌ನಲ್ಲಿ ಪದವಿ ಪಡೆದವರು ಕೆಲಸ ಬೇಕು ಎಂದು ಕೇಳುವವರು ವಿರಳ. ಇಂದು ರೈತರ ಮಕ್ಕಳು ಕೃಷಿಯಲ್ಲಿ ತರಬೇತಿ ಹೊಂದಿ, ನಮ್ಮ ಕೃಷಿ ಅಭಿವೃದ್ಧಿಗೆ ಒಂದು ತಾರಕವಾಗುವ ವಿದ್ಯೆಯನ್ನು ಕಲಿಯಬೇಕೆಂದು ವಿದ್ಯಾರ್ಥಿ ದೆಶೆಯಲ್ಲಿ ಇಚ್ಛೆಪಟ್ಟರೆ ಅವರಿಗೆ ಪ್ರವೇಶ ಸಿಕ್ಕುವ ಹಾಗಿಲ್ಲ. ಇನ್ನು ಮುಂದೆಯಾದರೂ ಕೂಡ ನಮ್ಮ ರಾಜ್ಯದಲ್ಲಿ ಕೃಷಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಾಗಲು ಕ್ರಾಂತಿಕಾರಕವಾದ ಬದಲಾವಣೆ ಮಾಡಬೇಕು ಮತ್ತು ವೈಚಾರಿಕ ಕೃಷಿ ಕ್ರಾಂತಿ ಮಾಡಬೇಕು. ಈ ದಿಶೆಯಲ್ಲಿ ನಮ್ಮ ರಾಜ್ಯ ಸರ್ಕಾರದವರು ನಮ್ಮ ರಾಜ್ಯದ ನಾಲ್ಕು ಭಾಗಗಳಲ್ಲಿ ಅಂದರೆ ಗುಲ್ಬರ್ಗ, ಮುಂಬೈ ಕರ್ನಾಟಕ, ಮೈಸೂರು ಹಾಗೂ ಬೆಂಗಳೂರಿನಲ್ಲಿ ನಾಲ್ಕು ಕೃಷಿ ವಿಶ್ವವಿದ್ಯಾನಿಲಯಗಳನ್ನು ಮುಂದಿನ ನಾಲ್ಕು ವರ್ಷಗಳಲ್ಲಿಯಾದರೂ ಸ್ಥಾಪನೆ ಮಾಡುವ ಧೋರಣೆಯನ್ನು ಇಟ್ಟುಕೊಳ್ಳಬೇಕು. ಈಗ ಧಾರವಾಡದಲ್ಲಿ ಕೃಷಿ ಕಾಲೇಜ್ ಏನಿದೆ, ಅದನ್ನು ಬೆಂಗಳೂರಿನಲ್ಲಿರುವಂತೆ ಕೃಷಿ ವಿಶ್ವವಿದ್ಯಾನಿಲಯವನ್ನಾಗಿ ಮಾರ್ಪಡಿಸಬಹುದಾಗಿದೆ. ಈ ಕೆಲಸ ಈ ವರ್ಷದಲ್ಲಿಯೇ ಆಗಬೇಕೆಂದು ಹೇಳುತ್ತೇನೆ. ಅದೇ ಪ್ರಕಾರ ಮುಂದಿನ 5 ವರ್ಷಗಳಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಕೃಷಿ ಕಾಲೇಜನ್ನು ಸ್ಥಾಪಿಸುವುದಕ್ಕೆ ಸರ್ಕಾರದವರು ಮುಂದೆ ಬರಬೇಕೆಂದು ಹೇಳುತ್ತೇನೆ. ಅದೇ ಪ್ರಕಾರ ತಾಲ್ಲೂಕ್ ಕೇಂದ್ರಗಳಲ್ಲಿರುವ ಮಾಧ್ಯಮಿಕ ಶಾಲೆಗಳಲ್ಲಿ ಕಡ್ಡಾಯವಾಗಿ ಕೃಷಿ ವಿದ್ಯೆಯನ್ನು ಹೇಳಿಕೊಡುವಂತಾಗಲು ಆ ಶಾಲೆಗಳನ್ನು ಕೃಷಿ ಶಾಲೆಗಳನ್ನಾಗಿ ಮಾರ್ಪಾಡು ಮಾಡಬೇಕು. ಸರ್ಕಾರದವರು ನಿಷ್ಠೆಯಿಂದ ಈ ಕೆಲಸ ಮಾಡಲು ಕಾರ್ಯೋನ್ಮುಖರಾಗಬೇಕೆಂದು ಹೇಳುತ್ತೇನೆ. ಇಂದು ಪ್ರತಿಯೊಂದು ಹಳ್ಳಿಗಳಲ್ಲಿಯೂ ಕೃಷಿಕರಿದ್ದಾರೆ. ಈ ಕೃಷಿಕರಿಗೆ ಕೃಷಿಯ ವಿಚಾರದಲ್ಲಿ ಮಾರ್ಗದರ್ಶನ ಇದೆಯೇ ಎಂದರೆ ಇಲ್ಲ. ಯಾವ ರೀತಿ ಗೊಬ್ಬರ ಹಾಕಬೇಕು, ಯಾವ ರೀತಿ ಬೆಳೆಯಬೇಕು, ಯಾವ ರೀತಿ ಕ್ರಿಮಿನಾಶಕವನ್ನು ಉಪಯೋಗಿಸಬೇಕು ಎಂಬ ಬಗ್ಗೆ ಇಂದು ರೈತರು ತಿಳಿದುಕೊಂಡಿದ್ದಾರೆ ಮತ್ತು ಬುದ್ಧಿವಂತರಾಗಿದ್ದಾರೆ. ಆದರೆ ಮಾರ್ಗದರ್ಶನ ಮಾಡುವಂತಹ ಅಧಿಕಾರಿಗಳು ಬೇಕು. ಸರ್ಕಾರದವರು ಇದಕ್ಕಾಗಿ ಪ್ರತಿಯೊಂದು ತಾಲ್ಲೂಕ್‌ನಲ್ಲ ಅಲ್ಲಲ್ಲಿ ಗ್ರಾಮಸೇವಕರೆಂದು ಇಟ್ಟಿದ್ದಾರೆ. ಆದರೆ ಇವರು ರೈತರಿಗೆ ಅನುಕೂಲ ಮಾಡುವ ಬದಲು ಶೋಷಕರಾಗಿದ್ದಾರೆ. ಹಳ್ಳಿಯ ರೈತರು ಯಾವ ಯಾವ ಗೊಬ್ಬರವನ್ನು ಯಾವಾಗ ಉಪಯೋಗ ಮಾಡಬೇಕು ಎಂಬ ಬಗ್ಗೆ ಇವರು ಮಾರ್ಗದರ್ಶನ ಮಾಡುತ್ತಿಲ್ಲ, ಬೆಳೆಗೆ ಏನಾದರೂ ರೋಗ ಬಂದರೆ ಅದನ್ನು ಕೂಡಲೆ ಸರ್ಕಾರಕ್ಕೆ ತಿಳಿಸಿ, ಸರಿಯಾ

(ಶ್ರೀ ಬಿ. ಜಿ. ಬಣಕಾರ್)

ದಂಥ ಔಷಧವನ್ನು ತರಿಸಿ ರೈತರಿಗೆ ಪೂರೈಕೆ ಮಾಡುತ್ತಿಲ್ಲವೆಂದು ಹೇಳುತ್ತೇನೆ. ಈಗ ಡೆಮಾನ್ಸ್ಟ್ರೇಷನ್ ಪ್ಲಾಟ್ಸ್ ಎಂದು ರೈತರಿಗೆ ಮಾದರಿಯಾಗಿ ತೋರಿಸಲು ಈ ಗ್ರಾಮ ಸೇವಕರು ಮಾಡುತ್ತಾರೆ. ಲೋಕಲ್ ಲೀಡರ್ ಆದಂಥ ಪಂಚಾಯಿತಿ ಅಥವಾ ತಾಲ್ಲೂಕು ಬೋರ್ಡಿನ ಸದಸ್ಯರು ಯಾರು ಇರುತ್ತಾರೋ, ಯಾವುದಾದರು ಒಂದು ರಾಜಕೀಯ ಪಕ್ಷದ ಮುಖಂಡರಾದಂತಹವರು ಯಾರು ಇರುತ್ತಾರೋ ಅಂತಹವರ ಜಮೀನಿನಲ್ಲಿ ಸರ್ಕಾರದಿಂದ ಪುಕ್ಕಟೆಯಾಗಿ ಬರುವ ಬೀಜ, ಗೊಬ್ಬರವನ್ನು ಮತ್ತು ಕ್ರಿಮಿನಾಶಕ ವಸ್ತುಗಳನ್ನು ಉಪಯೋಗಿಸಿ ಬೆಳೆಯನ್ನು ಬೆಳೆಯುತ್ತಾರೆ. ಒಂದು ಪಕ್ಷ ಸರಿಯಾದಂಥ ಪೀಕ್ ಏನಾದರು ಬೆಳೆದಿದ್ದರೆ, ಅಲ್ಲಿಯ ಸುತ್ತಮುತ್ತಲಲ್ಲಿ ಯಾರಾದರೂ ಚೆನ್ನಾಗಿ ಅದೇ ತರಹದ ಬೆಳೆಯನ್ನು ಏನಾದರು ಬೆಳೆದಿದ್ದರೆ, ಆ ಗ್ರಾಮ ಸೇವಕರು ತಮ್ಮ ಮೇಲಿನ ಅಧಿಕಾರಿಗಳನ್ನು ಅಲ್ಲಿಗೇ ಕರೆದುಕೊಂಡು ಹೋಗಿ ತೋರಿಸಿ ಅವರಿಂದ ಶಹಭಾಸ್‌ಗಿರಿಯನ್ನು ಪಡೆಯುತ್ತಿದ್ದಾರೆ. ಗ್ರಾಮಸೇವಕರೆಲ್ಲರೂ ಕೆಟ್ಟವರಿದ್ದಾರೆಂದು ನಾನು ಹೇಳುವುದಿಲ್ಲ. ಇದ್ದರೆ ಶೇಕಡ 10 ರಷ್ಟು ಮಾತ್ರ ಒಳ್ಳೆಯವರಿರಬಹುದು. ಉಳಿದ ಶೇಕಡ 90 ರಷ್ಟು ಜನ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಗ್ರಾಮ ಸೇವಕರ ಮೇಲೆ ಅಸಿಸ್ಟೆಂಟ್ ಡೈರೆಕ್ಟರ್, ಡೆಪ್ಯೂಟಿ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್, ಡೈರೆಕ್ಟರ್, ಕಾರ್ಯದರ್ಶಿ ಮತ್ತು ಮಂತ್ರಿಗಳಿದ್ದಾರೆ. ಈಗಿನ ಮಂತ್ರಿಗಳು ಒಕ್ಕಲುತನದಿಂದ ಬಂದವರೇ ಆಗಿದ್ದಾರೆ. ಆದ್ದರಿಂದ ಈ ಗ್ರಾಮಸೇವಕರಿಂದ ಒಳ್ಳೆಯ ಕೆಲಸವಾಗುವಂತೆ ನೋಡಿಕೊಳ್ಳಬೇಕಲ್ಲದೆ, ಅವರು ರೈತರ ಶೋಷಕರಾಗುವುದಕ್ಕೆ ಬಿಡಬಾರದೆಂದು ಹೇಳುತ್ತೇನೆ. ಮುಖ್ಯವಾಗಿ ಒಕ್ಕಲುತನದ ಸುಧಾರಣೆಯಾಗಬೇಕು. ಈ ದೇಶದಲ್ಲಿ ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಲೇಸು ಎಂದು ಹಿರಿಯರು ಹೇಳಿದ್ದಾರೆ. ಆದ್ದರಿಂದ ನಮ್ಮ ದೇಶದ ಎಲ್ಲ ಯುವಕರಿಗೂ ನೌಕರಿ ಕೇಳುವಂತಹ ವಿದ್ಯೆಯನ್ನು ಕೊಡುವುದರ ಬದಲು ಒಕ್ಕಲುತನದಲ್ಲಿ ಶಿಕ್ಷಣ ಕೊಟ್ಟು ಅವರೆಲ್ಲರೂ ಒಕ್ಕಲುತನ ಮಾಡುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಕೃಷಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಈಗ ಇದಕ್ಕಾಗಿ ಕೇವಲ 23 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಕೃಷಿ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕೆಂದು, ಇದರ ಕಡೆಗೆ ಸರ್ಕಾರ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ವಿಚಾರ ಹೇಳಬೇಕೆಂದರೆ, ಈಗ ಸರ್ಕಾರದ್ದು ಈ ವಿಷಯದಲ್ಲಿ ಡ್ಯೂಯಲ್ ಪಾಲಿಸಿಯಾಗಿದೆ. ಮೊದಲು ರಾಜ್ಯ ಸಹಕಾರಿ ಸಂಘಗಳು ಬೀಜ, ಗೊಬ್ಬರ ಮತ್ತು ಟ್ರಾಕ್ಟರ್‌ಗಳನ್ನು ಹಂಚುವ ಕೆಲಸವನ್ನು ಮಾಡುತ್ತಿತ್ತು. ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನನ್ನು ರಚನೆ ಮಾಡಲಾಯಿತು. ಆದರೆ ಇದೂ ಕೂಡ ಈಗ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಕಾರ್ಪೊರೇಷನ್ ಸರಿಯಾಗಿ ಕೆಲಸ ಮಾಡುವುದು ಇದ್ದರೆ ಇರಲಿ, ಇಲ್ಲದಿದ್ದರೆ ರದ್ದುಮಾಡಿ ಎಂದು ಸರ್ಕಾರಕ್ಕೆ ಹೇಳುತ್ತೇನೆ.

ಇಪ್ಪತ್ತನೆದಿವಸ ತಾಲ್ಲೂಕು ಮಾರ್ಕೆಟಿಂಗ್ ಸಹಕಾರ ಸಂಘಗಳು, ಮತ್ತು ಇತರೇ ಯಾವುದೇ ಕ್ರೆಡಿಟ್ ಕೋ-ಆಪರೇಟಿವ್ ಸಹಕಾರ ಸಂಘಗಳು ಏನಿವೆ ಇವುಗಳಲ್ಲಿ ಯಾವ ಸಂಘಗಳು ಸರಿಯಾಗಿ ಕೆಲಸ ಮಾಡುವುದಿಲ್ಲ ಅಂಥವುಗಳನ್ನು ಕ್ಲೋಜ್ ಮಾಡಿ ಯಾವ ಯಾವ ಸಂಘಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತವೆ. ಅಂಥವುಗಳಿಗೆ ಸರ್ಕಾರದವರು ಪ್ರೋತ್ಸಾಹ ಕೊಡುವುದು ಒಳ್ಳೆಯದು. ಸುದೈವದಿಂದ ಈ ಸಹಕಾರ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳು ಒಳ್ಳೆಯ ದಕ್ಷರು ಮತ್ತು ಒಳ್ಳೆಯ ರೀತಿಯಿಂದ ಕೆಲಸ ಮಾಡತಕ್ಕವರು ಆಗಿದ್ದಾರೆ. ಹಿಂದೆ ಈ ಸಹಕಾರಿ ಸಂಘಗಳು ರೈತರಿಗೆ ಬೇಕಾದ ಬೀಜ ಗೊಬ್ಬರ, ಇತ್ಯಾದಿ ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ಸಾಧ್ಯವಾದಮಟ್ಟಿಗೂ ಒದಗಿಸುತ್ತಿದ್ದವು, ಆದರೆ ಇತ್ತೀಚೆಗೆ ಅವುಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಇದನ್ನೆಲ್ಲಾ ಮಾನ್ಯ ಮಂತ್ರಿಗಳು ಸರಿಪಡಿಸುತ್ತಾರೆ ಎಂದು ನಂಬಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ಈ ಸಭೆಯ ಮುಂದೆ ಮಂಡಿಸಿರತಕ್ಕ ವ್ಯವಸಾಯ, ಅರಣ್ಯ ಮತ್ತು ಪಶುಸಂಗೋಪನೆ ಇಲಾಖೆಗಳ ಬೇಡಿಕೆಗಳು ಏನಿವೆ ಅವುಗಳನ್ನು ನಾನು ಸ್ಪಷ್ಟವಾಗಿ ವಿರೋಧಿಸುತ್ತಾ, ನನ್ನ ವಿರೋಧಕ್ಕೆ ಸಮರ್ಥನೆ ಕೊಡಬೇಕಾದ್ದು ಅವಶ್ಯಕ ಮತ್ತು ಉಚಿತ. ನೂರಕ್ಕೆ 80 ರಷ್ಟು ವ್ಯವಸಾಯಗಾರರ, ರೈತರು ಇರತಕ್ಕ ಈ ರಾಜ್ಯದಲ್ಲಿ ಆ ರೈತರ ಬಗ್ಗೆ ಸರ್ಕಾರದವರು ಸಾಕಷ್ಟು ಅನುಕಂಪವನ್ನು ತೋರಿಸಿ

ಅವರಿಗೆ ಬೇಕಾದಂತಹ ಸೌಲಭ್ಯಗಳನ್ನು ಒದಗಿಸುವಂತಹ ಪ್ರಯತ್ನವನ್ನು ಮಾಡಿಲ್ಲ. ರೈತರ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಪಬೇಕಾದರೆ ಈ ಖಾತೆಯನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳ ಹೃದಯ ಪರಿವರ್ತನೆ ಆಗಬೇಕು. ಆ ರೀತಿ ಹೃದಯ ಪರಿವರ್ತನೆಯಾಗುವುದರ ಜೊತೆಗೆ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಆಡಳಿತಗಾರರ ಹೃದಯವೂ ಪರಿವರ್ತನೆಯಾಗಬೇಕು. ಈ ದೇಶದಲ್ಲಿ ಉಳುವವನ ಹೃದಯವೂ ಪರಿವರ್ತನೆಯಾಗಬೇಕು. ಆ ರೀತಿ ಇವರೆಲ್ಲರ ಹೃದಯ ಪರಿವರ್ತನೆಯಾದಾಗ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ. ಈ ರಾಜ್ಯದ ಸಕಲ ಚರಾಚರ ಪ್ರಾಣಿಗಳೂ ಸಂತೃಪ್ತಿಯಿಂದ ಬೆಳೆದು ಬಾಳಬೇಕಾದರೆ ನೀತಿಯುತವಾಗಿ ಬಾಳಬೇಕಾದರೆ ವ್ಯವಸಾಯ ಕ್ಷೇತ್ರದಲ್ಲಿ ಸಮಸ್ಯೆಗಳು ಬಗೆಹರಿದರೆ ಮಾತ್ರ ಅದು ಸಾಧ್ಯ. ಈ ಸಮಸ್ಯೆಗಳು ಬಗೆಹರಿಯದಿದ್ದರೆ ಅಧಿಕಾರಿಗಳು ಮತ್ತು ದುರಾಡಳಿತವನ್ನು ನಡೆಸತಕ್ಕ ಮಂತ್ರಿಗಳು ಬದುಕುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ವ್ಯವಸಾಯ ಖಾತೆಯನ್ನು ವಹಿಸಿಕೊಂಡಿರತಕ್ಕ ಶ್ರೀಮಾನ್ ಕೆ. ಎಚ್. ಪಾಟೀಲರ ಪರಿಚಯ ನನಗೆ ಅಷ್ಟಾಗಿ ಇಲ್ಲದಿದ್ದರೂ ಕೂಡ ಅವರ ಹಿನ್ನಲೆಯನ್ನು ನಾನು ತಿಳಿದಿದ್ದೇನೆ. ಅವರು ಬಹಳ ವೇಗದಲ್ಲಿ ಹೋಗತಕ್ಕಂಥ ವ್ಯಕ್ತಿಗಳು. ಅವರು ವಹಿಸಿಕೊಂಡಿರತಕ್ಕ ಖಾತೆ ಭೂಮಿಯಲ್ಲಿ ಉತ್ಪತ್ತಿಯನ್ನು ತೆಗೆಯುವಂತಹ ಹೊಣೆಯನ್ನು ಹೊತ್ತಿರುವ ಖಾತೆ. ಅವರು ಅವತಾರ ಪುರುಷರಾಗಬೇಕು. ಅವರು ಬಹಳ ಗುರುತರವಾದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಬಹುಶಃ ಅವರಿಗೆ ಪಂಚಗುಂಡಿಗೆಯೂ ಇರಬೇಕು. ಆದ್ದರಿಂದ ಶ್ರೀಮಾನ್ ಪಾಟೀಲರು ಸ್ವಲ್ಪ ಹೆಚ್ಚಿನ ಶ್ರಮವನ್ನು ವಹಿಸಿದರೆ ಸಾಧ್ಯವಾದಮಟ್ಟಿಗೆ ರೈತರ, ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಬಹುದು ಎಂದು ನಾನು ತಿಳಿದು ಕೊಂಡಿದ್ದೇನೆ. ಹಾಗೆಯೇ ಶ್ರೀಮಾನ್ ಚಿಕ್ಕೇಗೌಡರು ಪಶುಸಂಗೋಪನಾ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಅವರೂ ಸಹ ಪಶುಸಂಗೋಪನೆಯ ವಿಚಾರದಲ್ಲಿ ಅನುಭವ ಉಳ್ಳವರಾಗಿದ್ದಾರೆ. ಆದ್ದರಿಂದ ಇಬ್ಬರ ಅನುಭವಿಗಳ ಸಮ್ಮೇಳನದಿಂದ ಈ ರಾಜ್ಯಕ್ಕೆ ಶುಭ ಆಗಬಹುದು ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರು ಅಧಿಕಾರವನ್ನು ವಹಿಸಿಕೊಂಡಮೇಲೆ ಇವರು ಏನು ಮಾಡಿದ್ದಾರೆ ಎಂಬುದನ್ನು ನಾನು ನೊಂದ ಮನಸ್ಸಿನಿಂದ ಹೇಳುತ್ತೇನೆ. ಈ ಇಲಾಖೆಯ ಅಧಿಕಾರಿಗಳ ಮೇಲೆ ದಕ್ಷರಾದವರು ಇದ್ದರೂ ಕೂಡ ಅಧಿಕಾರಿಗಳ ಹೃದಯ ಪರಿವರ್ತನೆ ಮಾಡುವುದಕ್ಕೆ ಇವರು ಹೋಗಿಲ್ಲ. ಅಧಿಕಾರಿಗಳ ವರ್ಗಾವರ್ಗಿ ವಿಚಾರದಲ್ಲಿಯೂ ಮುಖ್ಯ ಮಂತ್ರಿಗಳು ಪ್ರವೇಶ ಮಾಡಿದ್ದಾರೆ. ಒಬ್ಬ ಬಿ. ಡಿ. ಒ. ಡೆಪ್ಯುಟಿ ಡೈರೆಕ್ಟರು, ಜಾಯಿಂಟ್ ಡೈರೆಕ್ಟರು ಇಂಥಾ ಅಧಿಕಾರಿಗಳ ವರ್ಗಾವರ್ಗಿ ವಿಷಯದಲ್ಲಿ ಮಂತ್ರಿಗಳು ಪ್ರವೇಶ ಮಾಡಿದ್ದಾರೆ. ಇದು ಸರಿಯಲ್ಲ. ಈ ಇಲಾಖೆಯಲ್ಲ ಕೆಲಸಕಾರ್ಯಗಳು ಚೆನ್ನಾಗಿ ನಡೆಯಬೇಕಾದರೆ ನಿಷ್ಠಾವಂತರಾಗಿರತಕ್ಕ ಅಧಿಕಾರಿಗಳಿಗೆ ಮತ್ತು ಪ್ರಾಮಾಣಿಕರಾಗಿರತಕ್ಕ ಅಧಿಕಾರಿಗಳಿಗೆ ಸರ್ಕಾರದವರು ಪ್ರೋತ್ಸಾಹವನ್ನು ಕೊಡಬೇಕು. ನಾನು ಬಹಳ ನಮ್ರತೆಯಿಂದ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಪಾಟೀಲರಿಗೆ ಹೇಳುತ್ತೇನೆ ಈ ಇಲಾಖೆಯನ್ನು ತಾವು ಶುದ್ಧೀಕರಣಮಾಡಬೇಕು. ನಿಮಗೆ ಆ ಒಂದು ಧೈರ್ಯ ಇದೆ. ತಾವು ರೈತರ ಬಗ್ಗೆ ಅನುಕಂಪವನ್ನು ತೋರಿಸಬೇಕು. ಯಾರೇ ಆಗಲೀ ಒಳ್ಳೆಯಕೆಲಸವನ್ನು ಮಾಡಿದವರಿಗೆ ಶಹಭಾಶ್‌ಗಿರಿಯನ್ನು ಕೊಡಬೇಕು. ಉತ್ತಮವಾದ ಕೆಲಸವನ್ನು ಮಾಡಿದವರಿಗೆ ನಾವು ವಿರೋಧಪಕ್ಷದಲ್ಲಿದ್ದರೂ ಅವರನ್ನು ಆತ್ಮಸಾಕ್ಷಿಯಾಗಿ ಒಪ್ಪುತ್ತೇವೆ. ನಾವು ಮನಸ್ಸಿನಲ್ಲಿ ಒಂದು ಹೊರಗಡೆ ಒಂದು ತೋರಿಸುವುದಿಲ್ಲ: ಈಗ ಶ್ರೀಮಾನ್ ಸಿದ್ದವೀರಪ್ಪನವರ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾವು ವಿರೋಧ ಮಾಡಲಿಲ್ಲ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಈ ಇಲಾಖೆಯಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿ ಕೆಲಸ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಆಗ್ರೋಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಅಲ್ಲ ನಡೆಯುತಕ್ಕ ಪ್ರತಿಯೊಂದು ವಿಚಾರವನ್ನೂ, ಮತ್ತು ಅಲ್ಲಿ ನಡೆಯುತಕ್ಕ ಅಕ್ರಮಗಳನ್ನೂ ನಮ್ಮ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಈ ಇಲಾಖೆಯಲ್ಲಿ ಅಕ್ರಮ ನಡೆದಿರುವ ಸಂಬಂಧದಲ್ಲ ಒಂದು ನಿದರ್ಶನವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ನಾನು ತರಬಯಸುತ್ತೇನೆ. ಆದಕಾರಣ ಅದಕ್ಕೆ ಸಂಬಂಧಪಟ್ಟ ಒಂದು ಕಾಗದವನ್ನು ಶ್ರೀಮಾನ್ ಪಾಟೀಲರಿಗೆ ಕಳುಹಿಸುತ್ತೇನೆ, ಅವರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರಣೆ ನಡೆಸಿ ಅದರ ಮಾಹಿತಿಯನ್ನು ನನಗೆ ಕಳುಹಿಸಿಕೊಡಬೇಕೆಂದು ನಾನು ಹೇಳುತ್ತೇನೆ. ಈಗ ಹರಿಜನರಿಗೆ ಮನೆಕಟ್ಟಿಕೊಳ್ಳಲು 200 ರೂಪಾಯಿಗಳ ಬೆಲೆ ಬಾಳುವ ಮರಮುಟ್ಟುಗಳನ್ನು ಸರ್ಕಾರದವರು ಫ್ರೀಯಾಗಿ ಕೊಡುತ್ತಿದ್ದಾರೆ. ಆ ಪ್ರಕಾರವಾಗಿ ಹುಣಸೂರು ಟಿಂಬರ್ ಡಿಪೋದಲ್ಲ ಈ ಹಿಂದೆ ಹರಿಜನರಿಗಾಗಿ ಕೊಟ್ಟಂತಹ ಮರಮುಟ್ಟುಗಳನ್ನೆಲ್ಲಾ ಒಬ್ಬ ವ್ಯಕ್ತಿ ನೇರವಾಗಿ ತೆಗೆದುಕೊಂಡುಹೋಗಿ ಲಕ್ಷಾಂತರ ರೂಪಾಯಿಗಳನ್ನು ಹೊಡದಿದ್ದಾರೆ. ಇದನ್ನು ಮಾನ್ಯ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಮಂತ್ರಿಗಳು ವಿಚಾರಣೆ ಮಾಡಬೇಕು. ಅವರು ಕಾಂಗ್ರೆಸ್ (ಆರ್) ಪಕ್ಷಕ್ಕೆ ಸೇರಿದ್ದಾರೆ. ಈ ರೀತಿ ಅವರು ದುಡ್ಡು ತಿಂದು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರಾಗಿದ್ದಾರೆ. ಅವರು ಮಾನ್ಯ

[MADAM SPEAKER in the Chair]

ಮುಖ್ಯಮಂತ್ರಿಗಳಿಗೆ ಬಹಳ ಕುಮ್ಮಕ್ಕು ಕೊಟ್ಟಿದ್ದಾರೆ. ಏಕೆಂದರೆ ನೀವು ಇವತ್ತು ವೇಗವಾಗಿ ಹೋಗತಕ್ಕಂತಹ ಮಂತ್ರಿಯವರು ಆಗಿದ್ದೀರಿ. ಆದ್ದರಿಂದ ಇಂತಹ ವಿಷಯಗಳಲ್ಲಿ ನಿಮಗೆ ಕರುಣೆ ಬರಬಾರದು ಮತ್ತು ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಲೇಬೇಕೆಂದು ಹೇಳುತ್ತೇನೆ.

ಇನ್ನು ಶ್ರೀಮಾನ್ ಚಿಕ್ಕೇಗೌಡರ ಇಲಾಖೆಯ ಬಗ್ಗೆ ಸ್ವಲ್ಪ ಹೇಳುತ್ತೇನೆ. ಇವತ್ತು ವ್ಯವಸಾಯ ಉತ್ಪನ್ನ ಆಗಬೇಕಾದರೆ ನ್ಯಾಚುರಲ್ ಫರ್ಟಿಲೈಸರ್ಸ್ ಕೊಡಬೇಕೆಂದು ತಜ್ಞರು ಸಹ ಹೇಳಿದ್ದಾರೆ. ಆದ್ದರಿಂದ ಈ ಗೋಸಂಪತ್ತನ್ನು ಅಧಿಕವಾಗಿ ಬೆಳೆಸಬೇಕೆಂದು ಹೇಳುತ್ತೇನೆ. ಮಾನ್ಯ ಎಂ. ವಿ. ಕೃಷ್ಣಪ್ಪನವರು ಇದ್ದಾಗ ಯರೋಪ್ಲೇನಿನಲ್ಲಿ ಬೇರೆ ಕಡೆಯಿಂದ ತಳಿಗಳನ್ನು ತರಿಸುತ್ತಿದ್ದರು. ನಮ್ಮಲ್ಲಿ ಸೀಮೆ ಹಸುಗಳು ಬೇಕಾದಷ್ಟು ಇವೆ. ಇನ್ನು ಬಿತ್ತನೆ ಹೋರಿಗಳು ಕಣ್ಮರೆಯಾಗುತ್ತಿವೆ. ನಮಗೆ ಇವತ್ತು ಉತ್ತಮವಾದ ತಳಿಗಳ ಬಹಳ ಅವಶ್ಯವಿದೆ. ಆದ್ದರಿಂದ ಉತ್ತಮವಾದ ತಳಿಗಳನ್ನು ಹಳ್ಳಿಗಳಲ್ಲಿ ಹೆಚ್ಚಿಸಲು ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ತಗೆದುಕೊಳ್ಳವಂತೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಫಾರೆಸ್ಟ್ ಏರಿಯಾದಲ್ಲಿ ಉತ್ತಮವಾದ ಕಾಡು ಇರಬೇಕು. ಇವತ್ತು ಮಾನ್ಯ ಪಾಟೀಲರ ಆಡಳಿತದಲ್ಲಿ ಅನೇಕ ಕಾಡುಗಳು ಬರಿದಾಗುತ್ತಾ ಇವೆ. ಕಾಡಿನಲ್ಲಿ ಒಂದು ಇಂಚು ಸಹ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಇವತ್ತು ಅನೇಕ ರೈತಾಪಿ ಜನರು ನೀವು ಜಮೀನು ಕೊಡುತ್ತೀರಿ, ಬಡವರನ್ನು ಉದ್ಧಾರ ಮಾಡುತ್ತೀರೆಂದು ನಂಬಿಕೊಂಡು ಕೂತಿದ್ದಾರೆ. ಎಷ್ಟೋ ಕಡೆಗಳಲ್ಲಿ ಇಂದಿರಾ ಗಾಂಧಿ ಮಕ್ಕಳು ಬರುತ್ತಾರೆ ನಮಗೆ ಜಮೀನು ಕೊಡುತ್ತಾರೆ ಎಂದು ಜಮೀನನ್ನು ಉತ್ತುಬಿಟ್ಟಿದ್ದಾರೆ. ಆದ್ದರಿಂದ ದಟ್ಟವಾದ ಕಾಡನ್ನು ಬೆಳೆಸುವುದಕ್ಕೆ ಅಯೋಗ್ಯವಾದ ಜಮೀನನ್ನು ಇಂಥ ಬಡ ರೈತಾಪಿ ಜನರಿಗೆ ಮತ್ತು ಇತರ ಹಿಂದುಳಿದ ಜನರಿಗೆ ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ ರೈತರು ಹೊಲಗಳ ಬದಿಗಳಲ್ಲಿ ಮತ್ತು ದಿಬ್ಬಗಳಲ್ಲಿ ಫಲವೃಕ್ಷಗಳನ್ನು ಬೆಳೆಸುವುದಕ್ಕೆ ಉತ್ತೇಜನವನ್ನು ಕೊಡಬೇಕು. ಏಕೆಂದರೆ ಈಗ ಹಲಸಿನ ಮರಗಳು ಮತ್ತಿತರ ಫಲವೃಕ್ಷಗಳು ಮಾಯವಾಗುತ್ತಾ ಇವೆ. ಫಲ ವೃಕ್ಷಗಳನ್ನು ಹೆಚ್ಚು ಬೆಳೆಸಿದರೆ ಅದು ಕೂಡ ಕಾಡೆ. ಅಲ್ಲಿರತಕ್ಕಂತಹ ವಿಸ್ತರಣೆ ಹೆಚ್ಚಾಗಿ, ಹೆಚ್ಚು ಫಲವೃಕ್ಷಗಳನ್ನು ಸಹ ಬೆಳೆಸುವುದಕ್ಕೆ ಏರ್ಪಾಡು ಮಾಡಬೇಕು.

ಇನ್ನು ಅನೇಕ ಕಡೆಗಳಲ್ಲಿ ಈ ಕಳ್ಳ ಸಾಗಾಣಿಕೆ ಬಹಳ ಹೆಚ್ಚಾಗಿದೆಯೆಂದು ಮಾನ್ಯ ಗುಂಡೂರಾಯರು ಹೇಳಿದರು. ಇವತ್ತು ಅನೇಕ ಅಧಿಕಾರಿಗಳನ್ನು ಮೂರು ಮೂರು ತಿಂಗಳಿಗೊಮ್ಮೆ ವರ್ಗ ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಕಳ್ಳ ಸಾಗಾಣಿಕೆಯನ್ನು ತಡೆಯುವುದಕ್ಕೂ ಮನಸ್ಸು ಬರುವುದಿಲ್ಲ. ಮತ್ತು ಅವರ ಮಕ್ಕಳು ಮರಿಗಳು ನೊಂದುಕೊಳ್ಳುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಅನೇಕ ಅಧಿಕಾರಿಗಳು ಹೊತ್ತಂಥ ಅಪಾದನೆಯನ್ನು ನೀವು ಹೊರಬೇಡಿ. ಅದೇ ರೀತಿ ನಮ್ಮ ಮುಖ್ಯಮಂತ್ರಿಯವರು ಅಧಿಕಾರಿಗಳನ್ನು ರಕ್ಷಣೆ ಮಾಡಿದ ಹಾಗೆ ಮಾಡಬೇಡಿ. ನಿಮಗೆ ಇಬ್ಬರಿಗೆ ಇದನ್ನು ಮಾಡಬೇಡಿ ಎಂದು ಹೇಳುತ್ತಿದ್ದೇನೆ. ಆದ್ದರಿಂದ ದಯವಿಟ್ಟು ನಮ್ಮ ರಾಜ್ಯದಲ್ಲಿ ಒಳ್ಳೆಯ ಆಡಳಿತಗಾರರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಿ; ದುಷ್ಟ ಆಡಳಿತಗಾರರನ್ನು ದಂಡಿಸಿ. ಇಷ್ಟು ಹೇಳಿ ಕೃಷ್ಣನಂತಿರುವ ಅಧ್ಯಕ್ಷಣಿಯವರಿಗೆ ಪಾಂಡವರ ಪರವಾಗಿ ಹೃತ್ಪೂರ್ವಕವಾಗಿ ವಂದನೆಗಳನ್ನು ನಾನು ಸಲ್ಲಿಸಿ, ಮುಂದಾದರೂ ಕೌರವ ಪುತ್ರರಿಗೆ ಒಳ್ಳೆಯ ಬುದ್ಧಿ ಬರಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri MANIK RAO R. PHULEKAR (Bidar).—[In Hindi].

5-30 P.M.

† ಶ್ರೀ ಜಿ. ಮಾದೇಗೌಡ (ಕಿರುಗಾವಲು).—ಸಭಾಧ್ಯಕ್ಷಣಿಯವರೇ, ಇವತ್ತಿನ ಬೇಡಿಕೆಗಳ ಮೇಲೆ ಚರ್ಚೆಯನ್ನು ಆರಂಭಿಸುತ್ತಾ, ವ್ಯವಸಾಯ ಇಲಾಖೆಯಲ್ಲಿ ಮೂಲಭೂತವಾಗಿ ಹೊಟ್ಟ ಮೊದಲನೆಯದಾಗಿ ಅದ್ಯಂತ ಏನು ಸರ್ಕಾರ ಗಮನಕೊಡಬೇಕೋ ಅದನ್ನು ಇವತ್ತಿನ ದಿವಸ

ಕೊಡುತ್ತಾ ಇಲ್ಲ. ಅದರಲ್ಲಿ ಲೋಪದೋಷಗಳು ಏನಿದ್ದರೂ ಕೂಡ ಅದನ್ನು ಸರ್ಕಾರ ಅಗತ್ಯವಾಗಿ ಗಮನಕೊಟ್ಟು ಸರಿಪಡಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನಮ್ಮ ದೇಶದಲ್ಲಿರತಕ್ಕ ವ್ಯವಸಾಯ ಇಲಾಖೆಯಾದರೂ ಕೂಡ ಮುಖ್ಯವಾಗಿ ಹೆಚ್ಚಿನ ಉತ್ಪಾದನೆಯ ದೃಷ್ಟಿಯಿಂದ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಇನ್ನಾವ ಕೆಲಸಕಾರ್ಯಗಳೂ ಸಹ ಈ ಒಂದು ಇಲಾಖೆಗೆ ಇಲ್ಲ. ಆದರೆ ಉತ್ಪಾದನೆ ರೈತರಿಂದ ಹೆಚ್ಚಿಗೆ ಆಗಬೇಕಾದರೆ ಮೂಲಭೂತವಾಗಿ ನಾವು ಈ ಇಲಾಖೆಯ ಸಂಬಂಧವಾಗಿ ಏನು ಮಾಡ ಬೇಕೆಂಬುದನ್ನು ಸರ್ಕಾರ ಗಮನಿಸಿದೆಯೋ ಅಥವಾ ಇಲ್ಲವೇ ಎಂಬುವನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ರೈತನ ಮೊದಲ ಕರ್ತವ್ಯ ನಾಟಿ ಮತ್ತು ಟ್ರಾನ್ಸ್‌ಪ್ಲಾಂಟೇಷನ್. ಹಗೆ ಹಾಕುವ ಕಾಲದಲ್ಲಿ ಮುಖ್ಯವಾಗಿ ರೈತನಿಗೆ ಏನೇನು ಸೌಲಭ್ಯಗಳು ಬೇಕೋ ಅವನ್ನೆಲ್ಲಾ ಒದಗಿಸುವ ಜವಾಬ್ದಾರಿ ಈ ಇಲಾಖೆಗೇ ಸೇರಿದೆ, ಅದರಲ್ಲಿಯೂ ಯಾವ ರೈತ ನೀರಾವರಿಯನ್ನು ಅವಲಂಬಿಸಿ ನಾಟಿಯನ್ನು ಮಾಡಬೇಕೆಂದು ಇಚ್ಛೆಪಟ್ಟಿರುತ್ತಾನೋ ಆ ಒಂದು ಸಂದರ್ಭದಲ್ಲಿ ನಿಮ್ಮ ಇಲಾಖೆಯವರು ಸಾಧಾರಣವಾಗಿ ಮಾಡಬೇಕಾದಂಥ ಕೆಲಸವನ್ನು ಇವತ್ತಿನ ದಿವಸ ಸರಿಯಾದಂಥ ರೀತಿಯಲ್ಲಿ ಮಾಡುತ್ತಾ ಇಲ್ಲ. ಈ ಒಂದು ಅಪಾದನೆಯನ್ನು ಇವತ್ತು ಈ ಇಲಾಖೆಯ ಮೇಲೆ ಹೊರಿಸಬೇಕಾಗಿದೆ. ನಿಮ್ಮ ಆಬ್ಲಿಗೇಟರಿ ಡ್ಯೂಟೀಸ್ ಏನಿವೆಯೋ ಅವನ್ನು ಮಾಡಬೇಕು ಮತ್ತು ಇರತಕ್ಕ ನ್ಯೂನತೆ ಗಳನ್ನು ಸರಿಪಡಿಸಿಕೊಳ್ಳಬೇಕು. ಇದರ ಬಗ್ಗೆ ತಮ್ಮ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಯಾವ ಯಾವ ನದಿಯಲ್ಲಿ ಯಾವ ದಿವಸ ನೀರನ್ನು ಇಲಾಖೆಯವರು ಒದಗಿಸುತ್ತಾರೆಂಬುದನ್ನು ಸರ್ಕಾರ ರೈತರಿಗೆ ತಿಳಿಸಬೇಕು. ಮತ್ತೆ ಈ ನೀರು ಹಗೆ ಹಾಕುವ ಕಾಲದಲ್ಲಿ ಬಂದು, ನಾಟಿ ಹಾಕುವ ಕಾಲದಲ್ಲಿ ನಿಂತುಹೋಗುತ್ತದೆ. ಇದರಿಂದ ಮೂಲಭೂತವಾಗಿ ನಮ್ಮ ಉತ್ಪಾದನಾ ಶಕ್ತಿ ನಿಜವಾಗಿ ಕಡಿಮೆಯಾಗುತ್ತದೆ. ಆ ಶಕ್ತಿ ಕೊಡುವ ಕಾಲದಲ್ಲಿ ಸರಿಯಾದಂಥ ಕ್ರಮವನ್ನು ಇಲಾಖೆಯವರು ತೆಗೆದುಕೊಳ್ಳದೇ ಹೋದರೆ ಅನಂತರ ಎಷ್ಟೇ ಕ್ರಮ ತೆಗೆದುಕೊಂಡರೂ ಉತ್ಪಾದನೆ ಜಾಸ್ತಿಯಾಗುವುದಿಲ್ಲ. ಈ ಇಲಾಖೆ ಇರುವುದು ವ್ಯವಸಾಯ ಮಾಡುವ ಸಾವಿರಾರು ರೈತ ಜನಾಂಗದವರ ಅಭಿವೃದ್ಧಿ ಮಾಡಲಿಕ್ಕಾಗಿ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಹಗೆ ಹಾಕುವ ಕಾಲಕ್ಕೆ ಅಮೋನಿಯಂ ಸಲ್ಫೇಟ್ ಬಹಳ ಅವಶ್ಯಕ. ಅದನ್ನು ಸರಿಯಾದಂಥ ಟೈಂನಲ್ಲಿ ಇಲಾಖೆಯವರು ಒದಗಿಸಿಕೊಡುವುದಿಲ್ಲ. ಅದೂ ಕೂಡ ಮೂಲಭೂತವಾಗಿ ತಪ್ಪು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ರೈತರಿಗೆ ಹಗೆ ಹಾಕುವ ಕಾಲದಲ್ಲಿ ಅಮೋನಿಯಂ ಸಲ್ಫೇಟ್ ಒದಗಿಸಿ ಕೊಡುವ ಕೆಲಸ ನಿಮ್ಮ ಇಲಾಖೆಯ ಕೆಲಸ. ಅದೂ ಕೂಡ ಈಗ ಸರಿಯಾಗಿ ನಡೆಯುತ್ತಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಇನ್ನೊಂದು ವಿಷಯ. ದೇಶಾದ್ಯಂತ ಈ ವರ್ಷ ಅಂದರೆ 72—73ನೇ ಸಾಲಿಗೆ ಗೊಬ್ಬರದ ಅಭಾವ ಬಹಳವಾಗಿ ಹೆಚ್ಚಾಗಿದೆ. ಅದಕ್ಕೆ ಇರತಕ್ಕ ನಾನಾ ಕಾರಣಗಳನ್ನು ಕೂಡ ಈ ಸಭೆಯಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳೂ ಮತ್ತು ಸಂಬಂಧಪಟ್ಟ ಮಂತ್ರಿಗಳೂ ಘೋಷಿಸಿದ್ದಾರೆ. ಅಧಿಕಾರಿಗಳಾದವರು ಸರಿಯಾದ ಕಾಲದಲ್ಲಿ ಇದರ ಬಗ್ಗೆ ಇಂಡೆಂಟ್ ಹಾಕದೇ ಇರುವುದರಿಂದ ಈ ಅಭಾವಕ್ಕೆ ಕಾರಣವಾಗಿದೆ. ಆದರೆ ಇವತ್ತಿನದಿವಸ ಈ ಒಂದು ಸಂದರ್ಭದಲ್ಲಿ ಎಲ್ಲರೂ ಒಪ್ಪಿರುವ ವಿಚಾರವೇನೆಂದರೆ ಶೇಕಡ 80ಭಾಗದಷ್ಟು ಜನ ವ್ಯವಸಾಯದಲ್ಲಿಯೇ ಅವಲಂಬಿಸಿರುವಾಗ ಈ ಒಂದು ದೊಡ್ಡ ತಪ್ಪನ್ನು ಯಾರು ಮಾಡಿದ್ದಾರೋ ಅವರ ಬಗ್ಗೆ ಯಾವ ಒಂದು ಕ್ರಮವನ್ನು ಕೂಡ ತೆಗೆದುಕೊಂಡಿಲ್ಲ. ಬಹುಶಃ ನಾನು ಈ ಸಂದರ್ಭದಲ್ಲಿ ನಿಮ್ಮ ದಕ್ಷತೆಯ ಅಥವಾ ಪ್ರಾಮಾಣಿ ಕತೆಯನ್ನು ಪ್ರಶ್ನೆ ಮಾಡಬೇಕಾಗಿದೆ. ಗೊಬ್ಬರದ ಅಭಾವಕ್ಕೆ ಮುಖ್ಯ ಕಾರಣ ಸಕಾಲಕ್ಕೆ ಸರಿಯಾಗಿ ಇಲ್ಲಿ ಸರ್ಕಾರದ ಆಡಳಿತ ನಡೆಸತಕ್ಕವರು ಇಂಡೆಂಟ್ ಮಾಡದೆ ಇದ್ದುದರಿಂದ. ಇದನ್ನು ತಿಳಿಸಿದ ಮೇಲೂ ಕೂಡ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳದೆ ಅವರ ಬಗ್ಗೆ ಅನುಕಂಪವನ್ನು ತೋರಿಸುತ್ತಿರುವುದು ಅಥವಾ ಇದನ್ನು ಇಷ್ಟು ಲೈಟಾಗಿ ನೋಡ ತಕ್ಕದ್ದು ದಕ್ಷ ಆಡಳಿತೆಯ ಲಕ್ಷಣವಲ್ಲ. ಹೀಗೆ ಏನಾದರೂ ವಿಚಾರದಲ್ಲಿ ವಿರೋಧ ಪಕ್ಷದವರು ಒಂದು ಆಪಾದನೆ ಮಾಡಿದರೆ ಅದರ ಬಗ್ಗೆ ಪರಿಶೀಲನೆ ಮಾಡಿ ಕೂಲಂಕಷವಾಗಿ ವಿಚಾರ ವಿಮರ್ಶೆಮಾಡಿ ಮಾಡದೆ ಇಲ್ಲಿ ನಿಜಾಂಶವೇನೆಂಬುದನ್ನು ತಿಳಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಆದರೆ ಹಾಗೆ ವಿರೋಧಪಕ್ಷದವರು ಏನಾದರು ಒಂದು ಆಪಾದನೆ ಮಾಡಿದರೆ ಕೂಡಲೇ ಮಂತ್ರಿಗಳು ತಮ್ಮ ಸ್ಥಾನದಿಂದ ಎದ್ದು ಆ ಆಪಾದನೆಯನ್ನು ನಿರಾಕರಿಸತಕ್ಕ ರೀತಿಯಲ್ಲಿ ಉತ್ತರವನ್ನು ಕೊಡುತ್ತಿರುವುದು ಈ ಸರ್ಕಾರದ ಅಪ್ರಾಮಾಣಿಕ ವರ್ತನೆ ಯಾವ ಮಟ್ಟಕ್ಕೇರಿದೆ ಎಂಬುದನ್ನು ಸೂಚಿಸುತ್ತಿದೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮಾದೇಗೌಡರಿಗೆ ನಾನು ಯಾವತ್ತೂ ಹಾಗೆ ಡಿಫೆಂಡ್ ಮಾಡಿಲ್ಲ ತಪ್ಪಿದ್ದರೆ ತಪ್ಪು ಎಂದು ಒಪ್ಪಿಕೊಳ್ಳುವುದು ನನ್ನ ಸ್ವಾಭಾವ. ನಾನು ಉತ್ತರಕೊಡತಕ್ಕ ಕಾಲದಲ್ಲಿ ಈ ವಿಚಾರದಲ್ಲಿ ಯಾರು ತಪ್ಪು ಮಾಡಿದ್ದಾರೆಂಬುದನ್ನು ಹೇಳುತ್ತೇನೆ.

ಶ್ರೀ ಜಿ. ಮಾದೇಗೌಡ.—ನಾನು ಈ ವ್ಯವಸಾಯದ ಇಲಾಖೆಯ ಬಗ್ಗೆ ಮೊದಲೇ ಹೇಳಿದ ಹಾಗೆ ಸರಿಯಾದ ಕಾಲಕ್ಕೆ ಗೊಬ್ಬರವನ್ನು ಸರಿಯಾದ ಕಾಲಕ್ಕೆ ಅಗ್ರಿಕಲ್ಚರ್ ಮಾರ್ಕೆಂಟಿಂಗ್ ಕೋ-ಅಪರೇಟಿವ್ ಸೊಸೈಟಿಗಳಿಗೂ, ಅಲ್ಲಿಂದ ಮಾರ್ಕೆಟಿಂಗ್ ಕೋಅಪರೇಟಿವ್ ಸೊಸೈಟಿಗಳಿಗೂ ಅನಂತರ ಅಲ್ಲಿಂದ ಸರ್ವೀಸ್ ಕೋ-ಅಪರೇಟಿವ್ ಸೊಸೈಟಿಗಳಿಗೂ ಅಲ್ಲಿಂದ ರೈತರಿಗೂ ಸಕಾಲಕ್ಕೆ ಸಿಕ್ಕುವಂತೆ ಒಂದು ವ್ಯವಸ್ಥೆಯನ್ನು ಮಾಡಬೇಕು, ಆದರೆ ಇಂಥ ವಿಚಾರಗಳಲ್ಲಿ ನಮ್ಮ ಅಧಿಕಾರಿಗಳು ಬಹಳ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಇವರು ಈ ಗೊಬ್ಬರ ಸರಿಯಾದ ರೀತಿಯಲ್ಲಿ ಸಕಾಲಕ್ಕೆ ಅಗ್ರಿಕಲ್ಚರಲ್ ಮಾರ್ಕೆಂಟಿಗ್ ಕೋ-ಅಪರೇಟಿವ್ ಸೊಸೈಟಿಯಿಂದ ಸೆಂಟ್ರಲ್ ಮಾರ್ಕೆಟಿಂಗ್ ಕೋ-ಅಪರೇಟಿವ್ ಸೊಸೈಟಿಗೂ ಅಲ್ಲಿಂದ ಸರ್ವಿಸ್ ಕೋ-ಅಪರೇಟಿವ್ ಸೊಸೈಟಿಗಳಿಗೂ ಬರುತ್ತಿದೆಯೇ ಎಂಬುದನ್ನು ಅಲ್ಲಲ್ಲೆ ಚೆಕ್ ಮಾಡಿ ನೋಡಬೇಕು. ಹೀಗೆ ಪ್ರತಿಯೊಂದು ಹಂತದಲ್ಲೂ ಅದು ಸರಿಯಾಗಿ ಹಂಚಲ್ಪಡುತ್ತಿದೆಯೇ ಎಂಬುದನ್ನು ಇವರು ಚೆಕ್ ಮಾಡುತ್ತಿದ್ದರೆ ಇದು ರೈತರಿಗೆ ಕಾಲಕ್ಕೆ ಸರಿಯಾಗಿ ಸಿಕ್ಕುತ್ತದೆ. ಆದ್ದರಿಂದ ಇದನ್ನು ಚೆಕ್ ಮಾಡತಕ್ಕ ಅಧಿಕಾರವನ್ನು ಇಲಾಖೆಯ ಅಧಿಕಾರಿಗಳಿಗೆ ಕೊಡಬೇಕು. ಒಂದು ವೇಳೆ ಯಾವುದಾದರೂ ಸೊಸೈಟಿ ತಪ್ಪು ಮಾಡಿದರೆ ಅಂಥ ಸೊಸೈಟಿಗೆ ಈ ಹಂಚಿಕೆ ಬದುಕನ್ನು ಕೂಡಲೆ ನಿಲ್ಲಿಸಿ ಅದನ್ನು ಬೇರೆಯಾವುದಾದರೂ ಒಂದು ಎಜನ್ಸಿಗೆ ವಹಿಸಿಬಹುದು. ಆದ್ದರಿಂದ ಇಂಥ ಒಂದು ಅಧಿಕಾರ ತಮ್ಮ ಇಲಾಖೆಯ ಅಧಿಕಾರಿಗಳಿಗೆ ಇರಬೇಕು.

ಇನ್ನು ಅನಿಮಲ್ ಹಸ್‌ಬೆಂಡ್ರಿ ವಿಷಯಕ್ಕೆ ಬಂದರೆ ಇದರ ಬಗ್ಗೆ ಸರ್ಕಾರದವರು ಏನು ಒಂದು ತಮ್ಮ ಪಾಲಸಿಯನ್ನು ನಿರ್ಧರ ಮಾಡುತ್ತಾರೋ ಅದರಂತೆ ಎಲ್ಲವೂ ಒಂದು ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಇನ್ನು ನಮ್ಮ ಸಮಾಜದಲ್ಲಿ ಇರತಕ್ಕ ಜನರಿಗೆಲ್ಲಾ ಕುಡಿಯುವುದಕ್ಕೆ ಹಾಲನ್ನು ಒದಗಿಸತಕ್ಕ ಒಂದು ವ್ಯವಸ್ಥೆಯನ್ನು ಕೈಗೊಂಡಿದ್ದಾರೆ. ಇದರಲ್ಲಿ ಎಲ್ಲರಿಗೂ ಒಂದೇ ರೀತಿ ಸರಿಸಮಾನವಾದ ಅವಕಾಶಗಳನ್ನು ಕೊಡಬೇಕಾದ್ದು ಅವಶ್ಯಕ. ಈ ದಿವಸ ಸರ್ಕಾರದವರು ಅವರಿಗೆ ಹಾಲನ್ನು ಕೊಳ್ಳತಕ್ಕ ಬಗ್ಗೆ ಬಡವರಿಗೆ ಹಸು ಎಮ್ಮೆಗಳನ್ನು ಸಾಲವಾಗಿ ಅವರಿಗೆ ಕೊಟ್ಟು ಅವರಿಂದ ಹಾಲನ್ನು ಪಡೆಯುತ್ತಿದ್ದಾರೆ. ಹೀಗೆ ಸಹಾಯ ಮಾಡುವುದರಿಂದ ಅವನ ಆರ್ಥಿಕ ಪರಿಸ್ಥಿತಿ ಸ್ವಲ್ಪಮಟ್ಟಿಗಾದರೂ ಉತ್ತಮವಾಗುತ್ತದೆಂದು ಸರ್ಕಾರದವರು ಭಾವಿಸಿದ್ದಾರೆ. ಆದರೆ ಇಲ್ಲಿ ಸರ್ಕಾರದವರು ನಡೆಸತಕ್ಕ ಡೈರಿಗೆ ಹಾಲನ್ನು ಕೊಡತಕ್ಕ ವಿಚಾರದಲ್ಲಿ ಕೆಲವರಿಗೇ ಆದ್ಯತೆಯನ್ನು ಕೊಡಲಾಗಿದೆ ಎಂದು ಕೇಳುತ್ತೇನೆ. ಹೀಗಾಗಿ ಅಯ್ಯನವರು ಒಂದು ಕಡೆ ಅಮ್ಮನವರು ಒಂದು ಕಡೆ ಡೈರಿಯನ್ನು ನಡೆಸುವುದಕ್ಕೆ ಅವಕಾಶವಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಅಲ್ಲಿ ಅಮ್ಮನವರು ಮಾರಾಟ ಮಾಡತಕ್ಕ ಹಾಲು ಮಾತ್ರ ಚೆನ್ನಾಗಿರುತ್ತದೆಂದು ಹೇಳುತ್ತಿದ್ದಾರೆ. ಅಲ್ಲಿ ಹೀಗೇ ಇನ್ನೂ ಏನೇನು ಅಕ್ರಮಗಳು ನಡೆಯುತ್ತಿರುತ್ತವೆಂದು ಕೇಳುತ್ತಿದ್ದೇವೆ. ಮಾನ್ಯ ಮಂತ್ರಿಗಳು ಇದನ್ನೆಲ್ಲಾ ಸರಿಪಡಿಸಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು ಎಸ್. ಸಿ.).—ಸನ್ಮಾನ್ಯ ಅಧ್ಯಕ್ಷಣಿಯರೇ, ಈ ದಿವಸ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಈ ದಿವಸ ನಮ್ಮ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳಾದರೋ ಬಹಳ ಇವೆ. ಆದರೆ ನಾನು ಈ ಸಂದರ್ಭದಲ್ಲಿ ಈ ಅರಣ್ಯ ಇಲಾಖೆ ಒಂದರ ಬಗ್ಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಮಾತನಾಡಿದ ನನ್ನ ಅನೇಕ ಸ್ನೇಹಿತರು ಅರಣ್ಯದ ಬಗ್ಗೆ ಅನೇಕ ಸಲಹೆಗಳನ್ನು ಮಂಡಿಸಿದ್ದಾರೆ. ಆದರೆ ನಾನು ನೋಡಿರುವಂತೆ ನಮ್ಮ ಮಂತ್ರಿಗಳು ಭೂರಹಿತವರ್ಗಕ್ಕೆ ಭೂಮಿಯನ್ನು ಹಂಚಲು ಒಂದು ದಿಟ್ಟತನದ ನಿಲುವನ್ನು ತೆಗೆದುಕೊಂಡಿದ್ದಾರೆ. ನಮ್ಮಲ್ಲಿ ಇರತಕ್ಕ ಅರಣ್ಯವಾದರೋ ಬಹಳ ಕಡಮೆ ಇದೆ. ನಾವು ಈ ದಿವಸ ಒಂದು ಕಡೆ ಅರಣ್ಯವನ್ನು ಬೆಳೆಸಿದರೆ ಇನ್ನೊಂದು ಕಡೆ ಅದನ್ನು ಕಡಿದು ಹಾಳು ಮಾಡುತ್ತಿದ್ದೇವೆ. ಈ ದಿವಸ ನಾವು ಆ ರೆಂಕೋ ಫ್ಯಾಕ್ಟರಿಗೆ ಬೆಂಕಿ ಕಡ್ಡಿಯನ್ನು ತಯಾರಿಸುವುದಕ್ಕಾಗಿ ಮಲೆನಾಡು ಮಂಗಳೂರು ಹಾಸನ ಮತ್ತು ದಾಂಡೇಲಿ ಇಲ್ಲೆಲ್ಲಾ ಇರತಕ್ಕ ಸಾಫ್ಟ್ ಉಡ್ಡನ್ನು ಕಡಿದು ಮದ್ರಾಸಿಗೆ ಸಾಗಿಸುತ್ತಿದ್ದಾರೆ ಆದರೆ ಅವರು ಹಾಗೆ ಸಾಫ್ಟ್ ಉಡ್ಡನ್ನು ಕಡಿದು ಸಾಗಿಸುವುದರ ಜೊತೆಗೆ ಎಷ್ಟು

ಹಾರ್ಡ್ ಉಡ್ಡನ್ನು ಕಡಿದು ಸಾಗಿಸುತ್ತಿದ್ದಾರೆಂಬುದನ್ನು ಯಾರೂ ನೋಡುತ್ತಿಲ್ಲ. ಹೀಗಾಗಿ ಈ
ದಿವಸ ನಮ್ಮ ಮಲೆನಾಡಿನಲ್ಲಿ ಬೆಲೆಬಾಳತಕ್ಕ ಕಡ್ಡಿ ಒಂದೂ ಇಲ್ಲ. ಅಲ್ಲದ್ದೆ ಕಾಡೆಲ್ಲಾ ಸಂಪೂರ್ಣ
ವಾಗಿ ನಾಶವಾಗಿ. ಇನ್ನು ಅಲ್ಲಲ್ಲೆ ಇದ್ದ ಕುರುಚಲು ಗಿಡಗಳನ್ನು ಸರ್ಕಾರದವರು ಇದ್ದಿಲನ್ನು
ಸುಡುವುದಕ್ಕೆ ಕೊಟ್ಟಿದ್ದಾರೆ. ಹೀಗಾಗಿ ಅಲ್ಲಿ ಸಂಪೂರ್ಣವಾಗಿ ಯಾವ ಸಸ್ಯಗಳೂ ಬೆಳೆಯುವುದಕ್ಕೆ
ಅವಕಾಶವಿಲ್ಲದಂತಾಗಿದೆ. ಆದ್ದರಿಂದ ನಾನು ಈ ದಿವಸ ಸರ್ಕಾರಕ್ಕೆ ಶಿಫಾರ್ಸುಮಾಡುವುದೇ
ನೆಂದರೆ ಆ ಮ್ಯಾಚ್‌ಫ್ಯಾಕ್ಟರಿಗೆ ಕೊಡತಕ್ಕ ಸಾಫ್ಟ್ ಉಡ್ ಏನಿದೆ ಅದನ್ನು ಸಂಪೂರ್ಣವಾಗಿ ನಿಲ್ಲಿಸಿ
ನಮ್ಮ ಕಾಡಿನ ಸಂಪದಭಿವೃದ್ಧಿಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತೇನೆ. ಇನ್ನು ಕಾಡು
ಇರತಕ್ಕ ಕಡೆಗಳಲ್ಲಿ ಕಾಫಿ ಕಾರ್ಡ್‌ಮಂ ಇತ್ಯಾದಿ ವಿದೇಶಿ ವಿನಿಮಯ ಗಳಿಸತಕ್ಕ ಬೆಳೆಗಳನ್ನು ಬೆಳೆಸು
ವುವಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಪದೇ ಪದೇ ಇಲ್ಲಿ ಕೇಳುತ್ತಲೇ ಬಂದಿದ್ದೇನೆ. ಆದರೆ
ಏನೂ ಆಗಲಿಲ್ಲ. ನಾನು ಒಂದಾವರ್ತಿ ಮಾನ್ಯ ಸಚಿವರನ್ನು ನಮ್ಮ ಭಾಗಕ್ಕೆ ಕರೆದುಕೊಂಡು ಹೋಗಿ
ಅಲ್ಲಿರತಕ್ಕ ವಾಸ್ತವಾಂಶವನ್ನು ತೋರಿಸಬೇಕೆಂದಿದ್ದೇನೆ. ಇನ್ನು ಅಲ್ಲಿ ಕೆಲವು ಭಾಗದಲ್ಲಿ ಯೂಕ
ಲಿಪ್ಟಸ್ ಮರಗಳನ್ನು ಬೆಳೆಸುತ್ತಿದ್ದಾರೆ. ಅಲ್ಲಿ ಅವು ಬೆಳೆಯತಕ್ಕ ಕಡೆ ಭೂಮಿಯಲ್ಲಿರತಕ್ಕ ಸಬ್
ಸಾಯಿಲ್ ನೀರನ್ನೆಲ್ಲಾ ಹೀರುತ್ತದೆ. ಆದರೆ ಅಲ್ಲಿ ಕಾಫಿ ಬೆಳೆಯುವುದಕ್ಕೆ ಜಮೀನಿಲ್ಲ ಎನ್ನುತ್ತಾರೆ.
ಕಾಫಿ ಬೆಳೆಗೆ ಮಲೆನಾಡಿನಲ್ಲಿರುವ ರೈತರಿಗೆ ಅರಣ್ಯ ಭೂಮಿಯನ್ನು ಬಿಟ್ಟರೆ ಬೇರೆ ಭೂಮಿ ಇಲ್ಲ.
ಆದುದರಿಂದ ಬಹಳ ವಿಚಕ್ಷಣೆಯಿಂದ ವರದಿ ತರಿಸಿಕೊಂಡು ಪರಿಶೀಲಿಸಬೇಕೆಂದು ಹೇಳುತ್ತೇನೆ.
ಗಂಧದ ಮರಗಳ ಕಳ್ಳ ಸಾಗಾಣಿಕೆ ಜಾಸ್ತಿಯಾಗಿದೆ ಎಂದು ಅನೇಕರು ಹೇಳಿದ್ದಾರೆ. ನಮ್ಮ
ಭಾಗದಲ್ಲಿ ಸ್ಟೇಟ್‌ಫಾರೆಸ್ಟ್‌ನ ಸರ್ವೆ ನಂಬರುಗಳಾದ 187, 192 ಮತ್ತು 193 ಇವುಗಳಲ್ಲಿರುವ
ಗಂಧದ ಮರಗಳನ್ನು ಕಳ್ಳ ಸಾಗಣಿಕೆಯಲ್ಲಿ ಸಂಪೂರ್ಣವಾಗಿ ನಾಶಮಾಡಿದ್ದಾರೆ. ಇದರ
ಜೊತೆಗೆ ಈ ಕಾಡಲ್ಲಿ ಮುತ್ತಯ್ಯಚೆಟ್ಟಿಯಾರ್‌ರವರು ಒಂದು ಕಂಪೆನಿ ಎಸ್ಟೇಟ್ ಮಾಡಿ ಸರ್ವೆ
ನಂಬರಿನಲ್ಲಿ 50-60 ಎಕರೆಯಲ್ಲಿ ಕಾಫಿ ಗಿಡ ಬೆಳೆಸಿದ್ದಾರೆ. ಅವರು ಮರ ಕಡಿದು ಸಾಗಿಸಿದ್ದೂ ಅಲ್ಲದೆ
ಕಾಫಿ ಬೆಳೆಸಿದ್ದಾರೆ. ಹಿಂದೆ ಪ್ರಶ್ನೆ ಹಾಕಿ ಈ ವಿಚಾರ ತಿಳಿಸಿದಾಗ ಅವರಿಗೆ ಕೊಡುವ
ಗ್ರ್ಯಾಂಟನ್ನು ಕ್ಯಾನ್ಸಲ್ ಮಾಡುವುದಾಗಿ ಹೇಳಿದ್ದರು. ಏನೂ ಮಾಡಿದಂತೆ ಕಾಣಲಿಲ್ಲ. ಜಮೀ
ನನ್ನು ಕೂಡ ಅವರು ಮಾರಿದ್ದಾರೆ. ಇದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.
ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ. ಅರಣ್ಯ ಇಲಾಖೆ ಆ ಪ್ರವೇಶವನ್ನು ಹರಾಜು ಮಾಡಿ
ದರೆ ಉತ್ಪತ್ತಿ ಬರುವುದು. ಕಾಡಿನಲ್ಲಿ ಅಕ್ರಮವಾಗಿ ಸಾಗುವಳಿ ಮಾಡಲು ಯಾರಿಗೂ ಅವಕಾಶ
ಕೊಡಬಾರದೆಂದು ಒತ್ತಾಯಮಾಡುತ್ತೇನೆ. ಅರಣ್ಯ ಇಲಾಖೆಯಲ್ಲಿ ಅಧಿಕಾರಿಗಳಲ್ಲಿ ಅನೇಕವಾಗಿ
ಜಿಜ್ಞಾಸೆಯಿದೆ. ಬಹುಶಃ ಇದು ಸರಕಾರದ ಗಮನಕ್ಕೆ ಒಂದು ಅನೇಕ ವಿಭಾಗ ಮಾಡಿದ್ದಾರೆ.
ಯಾರು ಕೆಲಸ ಮಾಡುವರೋ ಅವರನ್ನು ಎರಡು ವರ್ಷಗಳಿಗೊಂದು ಸಲ ಒಂದು ಡಿವಿಜನ್ನಿನಿಂದ
ಇನ್ನೊಂದು ಡಿವಿಜನ್ನಿಗೆ ಬದಲಾಯಿಸಬಾರದು. ಈ ನೀತಿ ಅನುಸರಿಸಬೇಕು.

ಇನ್ನು ವ್ಯವಸಾಯದ ಇಲಾಖೆಯ ಬಗ್ಗೆ ಒಂದು ವಿಚಾರ ಗಮನಕ್ಕೆ ತರುತ್ತೇನೆ. ಈ ಇಲಾಖೆ
ಯಲ್ಲಿ ಗೊಬ್ಬರ ಮತ್ತು ಪೆಸ್ಟಿಸೈಡ್ಸ್ ಕೊಳ್ಳುವುದರಲ್ಲಿ ಅನ್ಯಾಯ ನಡೆಯುತ್ತಿದೆ. ಕಮಿಷನ್
ಬೇಸಿಸ್‌ಮೇಲೆ ಗೊಬ್ಬರ ಕೊಳ್ಳುವ ನೀತಿಯಿದೆ. ಗೊಬ್ಬರದಲ್ಲಿ ಬಹಳ ಮುಖ್ಯವಾದುದು ಯಾವ
ಪ್ರಮಾಣದಲ್ಲಿ ಮಿಶ್ರಣ ಮಾಡಬೇಕು ಎಂಬುದು. ಅದು ಸರಿಯಾಗಿ ಇರಬೇಕು ಎಂಬ ಒಂದು ನೀತಿ
ಇದೆ. ಮೈಸೂರು ಫರ್ಟಿಲೈಜರ್ಸ್‌ನಿಂದ ಎಷ್ಟು ಗೊಬ್ಬರ ಪ್ರತಿವರ್ಷ ಕೊಳ್ಳುವುದು? ಗೊಬ್ಬರ
ಮತ್ತು ಪೆಸ್ಟಿಸೈಡ್ಸ್ ಸರಿಯಾದ ರೀತಿಯಲ್ಲಿವೆಯೇ, ಎಫೆಕ್ಟಿವ್ ಆಗಿವೆಯೇ ಎಂಬುದನ್ನು ಪರಿಶೀಲಿಸ
ಬೇಕು.

ಹಾರ್ಟಿಕಲ್ಚರ್ ಇಲಾಖೆ ಇದೆ, ಇದು ವ್ಯವಸಾಯಕ್ಕೆ ಸಂಬಂಧಪಟ್ಟಿರುವುದು. ಈ ಇಲಾಖೆ
ಒಂದೇ ಒಂದು ಜಾತಿಗೆ ಸೀಮಿತವಾಗಿದೆ ಎಂದು ಸಂಕಟದಿಂದ ಹೇಳುತ್ತೇನೆ. 20 ವರ್ಷವಾದರೂ
ಬೇರೆ ಜನಾಂಗದವರಿಗೆ ಅವಕಾಶ ಸಿಕ್ಕಿಲ್ಲ. ಈ ಇಲಾಖೆಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸ
ಬೇಕು. ಇಂದು 30—40 ವರ್ಷ ಇಲಾಖೆಯಲ್ಲಿ ಸೇವೆ ಮಾಡಿರುವವರನ್ನು ಬಿಟ್ಟು ಬೇರೆ ಇಲಾಖೆಯ
ರೆಂಟ್ ಆಫೀಸರುಗಳಿಗೆ ಪ್ರಮೋಷನ್ ಕೊಡುತ್ತಿದ್ದಾರೆ, ಇಂಥಹ ಅಕ್ರಮಗಳಿವೆ ಕೇಡರ್
ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಸರಿಯಾಗಿಲ್ಲ, ಅದರ ಪ್ರಕಾರ ನಡೆಯುತ್ತಿಲ್ಲ, ಪರಿಶೀಲಿಸಬೇಕು.

† ಶ್ರೀ ಎಂ. ನಂಜೇಗೌಡ (ಗಂಡಸಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಬೇಡಿಕೆ
ಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ಸರಕಾರಕ್ಕೆ ಕೊಡುತ್ತೇನೆ.
ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ಹಾಗೆ ನಮ್ಮ ಜಿಲ್ಲೆಯಲ್ಲಿ ಈ ಇಲಾಖೆಯ ಕಾರ್ಯ ವೈಖರಿ
ಯನ್ನು ಸ್ವಲ್ಪಮಟ್ಟಿಗೆ ಗಮನಕ್ಕೆ ತರುತ್ತೇನೆ. ಈ ಇಲಾಖೆಯಲ್ಲಿ ಅಧಿಕಾರಿಗಳ ಕೇಂದ್ರೀಕೃತ
ಯನ್ನು ಪ್ರತಿಯೊಬ್ಬರೂ ಕಾಣಬಹುದು. ಪ್ರತಿಯೊಬ್ಬರೂ ಕೂಡ ರೈತರ ಬಗ್ಗೆ ...

(ಶ್ರೀ ಎಂ. ನಂಜೇಗೌಡ)

ಅಸಮಾಧಾನ ವ್ಯಕ್ತಪಡಿಸುವ ಪರಿಸ್ಥಿತಿ ಈ ದಿವಸ ನಮ್ಮ ಜಿಲ್ಲೆಯಲ್ಲಿದೆ. ಉದಾಹರಣೆಗೆ ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಕೆಲವು ದಿನಗಳಹಿಂದೆ ನಡೆದ ಆಲೂಗಡ್ಡೆ ಬೆಳೆಗಾರರ ಸಮ್ಮೇಳನದಲ್ಲಿ ಈ ಇಲಾಖೆಯ ಮುಖ್ಯಾಧಿಕಾರಿಗಳು ಬಂದ ಟೀಕೆಗಳಿಗೆ ಉತ್ತರ ಕೊಡುತ್ತಾ ಸಂಯುಕ್ತ ಕರ್ನಾಟಕದಲ್ಲಿ 15 ದಿವಸಗಳಿಗೆ ಒಂದು ಸಲ ರೈತರ ಕೆಲಸಕಾರ್ಯದ ಬಗ್ಗೆ ವಿವರಣೆ ಬರುತ್ತಾ ಇದೆ, ಅವನ್ನು ಓದಬಹುದು ಎಂದು ಹೇಳಿದರು. ರೈತರ ಕಷ್ಟನಷ್ಟಗಳ ಬಗ್ಗೆ ಈ ಇಲಾಖೆ ಮುಖ್ಯಾಧಿಕಾರಿ ಎಷ್ಟರಮಟ್ಟಿಗೆ ವಿಚಾರಮಾಡುವರು, ಅವರ ಕಾರ್ಯದಕ್ಷತೆ ಎಷ್ಟುಮಟ್ಟಿಗಿದೆ ಎಂಬುದನ್ನು ಇದರಿಂದ ತಿಳಿಯಬಹುದು, ಈ ಕಡೆ ಸರಕಾರ ಗಮನ ಹರಿಸಬೇಕು.

ಇನ್ನೊಂದು ವಿಷಯ. ಫರ್ಟಿಲೈಜರ್ ಬಗ್ಗೆ ಕಂಟ್ರೋಲ್ ತೆಗೆದಮೇಲೆ ಮಿಶ್ರಣ ಗೊಬ್ಬರದ ಧಾರಣೆ ಜಾಸ್ತಿಯಾಗಿ ಅನ್ಯಾಯವಾಗಿದೆ. ಕಂಟ್ರೋಲ್ ತೆಗೆಯುವವರೆಗೆ ಸಣ್ಣ ಸಣ್ಣ ಮಿಶ್ರಣ ಮಾಡುವ ಕಂಪನಿಯವರು ಬಹಳ ಕಡಮೆ ಬೆಲೆಯಲ್ಲಿ ರೈತರಿಗೆ ಗೊಬ್ಬರ ಕೊಡುತ್ತಿದ್ದ ಒಂದು ಸಂದರ್ಭವಿತ್ತು. ಈಗ ಧಾರಣೆಗೆ ರಕ್ಷಣೆಕೊಟ್ಟು ಹೆಚ್ಚಿನ ರೀತಿಯಲ್ಲಿ ಲಾಭ ಸಂಪಾದನೆ ಮಾಡಲು ಅವಕಾಶವಿರುವುದರಿಂದ ಫರ್ಟಿಲೈಜರ್ ಅಥವ ಕಾಂಪ್ಲೆಕ್ಸ್ ಗೊಬ್ಬರ ಕೊಳ್ಳುವಾಗ ಕಂಪನಿಯ ಮಿಕ್ಸ್‌ಚರ್ ಗೊಬ್ಬರ ಕೊಂಡರೆ ಅದನ್ನು ಸರಬರಾಯಿ ಮಾಡುತ್ತೇವೆ ಎಂದು ಹೇಳುವರು. ಇದಕ್ಕೆ ಗಮನಕೊಟ್ಟು ಸರಿಪಡಿಸಬೇಕು.

ಪಶುಪಾಲನೆ ಇಲಾಖೆ ಬಗ್ಗೆ ಕೆಲವು ವಿಚಾರ ಹೇಳುತ್ತೇನೆ. ಈ ಇಲಾಖೆಯವರು ಕಳೆದ 25 ವರ್ಷಗಳಿಂದ ಪ್ರಾಮುಖ್ಯತೆ ಪಡೆದ ತಳಿಗಳಾದ ಹಳ್ಳಿಕಾರ್ ಮತ್ತು ಅಮೃತಮಹರ್ ರಾಸುಗಳ ಅಭಿವೃದ್ಧಿಗೆ ಸಾಕಷ್ಟು ಗಮನ ಕೊಟ್ಟಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ. ಹಳ್ಳಿಕಾರ ದನಗಳು ಪ್ರಪಂಚದಲ್ಲೇ ವಿಖ್ಯಾತವಾಗಿದ್ದರೂ ಇದುವರೆಗೆ ಸರಿಯಾದ ಒಂದು ಬೀಜದ ಹೋರಿ ಕೊಡುವುದಕ್ಕೆ ಪ್ರಯತ್ನಮಾಡಿಲ್ಲ. ಫಾರಂಗಳಿಗೆ ಅದನ್ನು ಒದಗಿಸಿಲ್ಲ. ಬೇರೆ ಅಭಿವೃದ್ಧಿ ಮಾರ್ಗವನ್ನು ಸಹ ಅನುಸರಿಸಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ. ಹಾಗೆಯೇ ಅಮೃತಮಹರ್ ತಳಿಗಳ ಬಗ್ಗೆ ಸಹ ಮಾಡಿದ್ದಾರೆ. ಹಿಂದೆ 14 ಸಾವಿರ ತಳಿ ಇತ್ತು, ಈ ದಿವಸ ಅವು ನಶಿಸಿ ಹೋಗಿ ಕೇವಲ 3 ಸಾವಿರ ದನಗಳಿರುವ ಇಲಾಖೆಯಾಗಿದೆ.

6-00 P.M.

ಲಕ್ಷಾಂತರ ಎಕರೆ ಜಮೀನನ್ನು ಸರ್ಕಾರದ ಧೋರಣೆಗಳಿಗನುಗುಣವಾಗಿ, ಜಮೀನುಗಳ ಬೇಡಿಕೆಗಳಿಗನುಗುಣವಾಗಿ ಬಿಡುಗಡೆ ಮಾಡದೇ ಕೇವಲ ಕೆಲವೇ ಜನರು ಉಳಿಸಿಕೊಂಡಿರತಕ್ಕಂಥ ಸಂದರ್ಭ ಇದೆ. ಆದುದರಿಂದ ಇದನ್ನು ಬಿಡುಗಡೆ ಮಾಡಿ ಉತ್ತಮಪಡಿಸಬೇಕು ಎಂದು ಹೇಳುತ್ತೇನೆ. ಈಗ ಇರತಕ್ಕಂಥ ಕಾವಲುಗಳನ್ನು ಬಿಡುಗಡೆ ಮಾಡುವುದಿಲ್ಲ ಎಂದು ಹೇಳಿದರೆ ಈಗ ಇರತಕ್ಕಂಥ ಅಮೃತ್‌ಮಹರ್ ತಳಿಯನ್ನು ಅಭಿವೃದ್ಧಿಪಡಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ರೈತರ ಬೇಡಿಕೆಗಳಿಗನುಣವಾಗಿ ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕು, ಅಂತಹ ಒಂದು ವಾತಾವರಣವನ್ನು ಉಂಟುಮಾಡಬೇಕು ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ನನಗೆ ತಿಳಿದಮಟ್ಟಿಗೆ ಉತ್ತರ ಕರ್ನಾಟಕದ ಫಾರೆಸ್ಟ್ ಏರಿಯಾದಲ್ಲಿರತಕ್ಕಂಥ ಕಾವಲುಗಳನ್ನೂ, ಉಪಯೋಗಿಸಿಕೊಂಡು ಅಮೃತಮಹರ್ ತಳಿಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಸುವುದಕ್ಕೆ ಅವಕಾಶ ಇದೆ. ಇದನ್ನು ತಜ್ಞರಿಂದ ಪರಿಶೀಲಿಸಿ ಸಾಧ್ಯವಾದಷ್ಟು ಜಾಗ್ರತೆ ಅಮೃತ್‌ಮಹರ್ ತಳಿಯನ್ನು ಬೆಳೆಸುವುದಕ್ಕೆ ಉತ್ತಮವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಈ ಇಲಾಖೆಯಲ್ಲಿ ಅಮೃತ್‌ಮಹರ್ ಕಾವಲಿನ ದನಗಳ ಬಗ್ಗೆ ಆಸಕ್ತಿ ಇರುವ ಸದಸ್ಯರಾಗಲಿ, ಮಂತ್ರಿಗಳಾಗಲಿ ಇನ್ನೂ ಹೆಚ್ಚು ತಿಳಿದುಕೊಳ್ಳಬೇಕಾದರೆ ಒಂದು ವಿಷಯ ಹೇಳುತ್ತೇನೆ. ನಮ್ಮ ಕಡೆ ಪ್ರತಿ ಡಿಸೆಂಬರ್‌ನಲ್ಲಿ ನಡೆಯತಕ್ಕ ಹರಾಜಿನಲ್ಲಿನ ಕಾಲದಲ್ಲಿ ಒಂದು ದಿನದ ಮಟ್ಟಿಗೆ ಬರುವುದಾದರೆ ಅಲ್ಲಿ ಒಬ್ಬ ಸಾಮಾನ್ಯ ರೈತರಾಗಿರತಕ್ಕವನು ಇದರಲ್ಲಿ ಎಷ್ಟು ಮಟ್ಟಿಗೆ ಆಸಕ್ತಿ ಹೊಂದಿದ್ದಾನೆ ಎನ್ನುವುದನ್ನು ತೋರಿಸಿಕೊಡುತ್ತೇನೆ. ಅಲ್ಲಿ ಕೆಲವರು ಬ್ರೀಡಿಂಗ್ ಬುಲ್ಸ್ ಕರುಗಳನ್ನು ಮಾರತಕ್ಕಂಥಾದ್ದನ್ನು ನೋಡಿದರೆ ಅದು 1,500 ನಿಂದ 2,000 ರೂಪಾಯಿ ನವರೆಗೆ ಬೆಲೆ ಆಗುತ್ತದೆ. ರೈತರು ಆ ತಳಿಗಳನ್ನು ಎಷ್ಟರಮಟ್ಟಿಗೆ ಬೆಳೆಸುತ್ತಾರೆ ಎನ್ನುವುದು ತಮಗೇ ತಿಳಿಯುತ್ತದೆ. ಆದುದರಿಂದ ನಾನು ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ಈ ಕಾವಲುಗಳಲ್ಲಿ ವಂಶಪಾರಂಪರ್ಯವಾಗಿ ಕಾವಲುಗಾರರಾಗಿರತಕ್ಕವರ ಬಗ್ಗೆ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಸ್ವಾಮಿ ಅಲ್ಲಿನ ಕಾವಲುಗಾರರು ಯಾವುದನ್ನೂ ಅಪೇಕ್ಷೆ ಮಾಡದೇ ತಮಗೆ ವಂಶಪಾರಂಪರ್ಯವಾಗಿ ಕೊಟ್ಟಿರತಕ್ಕಂಥ ಕೇವಲ 30 ಎಕರೆ ಜಮೀನಿನಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅವರ ಬಗ್ಗೆ ಕರುಣೆ ತೋರಿ ಅವರಿಗೆ ವಂಶಪಾರಂಪರ್ಯವಾಗಿ ಬಂದಿರತಕ್ಕಂಥಾದ್ದು ಏನು ಇದೆಯೋ ಅದರಲ್ಲಿ ಕೆಲವು ಅಂಶವನ್ನಾದರೂ ಕೊಟ್ಟು ಅವರು ಗೌರವವಾಗಿ ಜೀವನ ಮಾಡುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಆಸ್ಪತ್ರೆ ವಿಷಯವಾಗಿ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ಪ್ರತಿ ಹೋಬಳಿಯಲ್ಲೂ ಒಂದೊಂದು ಆಸ್ಪತ್ರೆಯನ್ನು ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ಜೀಪನ್ನು ಕೊಟ್ಟು ಜರೂರಾಗಿ ಆವಶ್ಯಕತೆ ಇದ್ದಾಗ ಅದನ್ನು ಉಪಯೋಗಿಸಬೇಕು ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ಮುಖ್ಯವಾಗಿ ರೈತರ ಸಂಬಂಧವಾದ ದನಗಳ ಬಗ್ಗೆ ಸರ್ಕಾರ ಉದಾಸೀನದಿಂದ ನೋಡುತ್ತಾ ಇದೆ. ಈ ವಿಷಯದಲ್ಲಿ ಹೇಳುವುದಾದರೆ ಮುಖ್ಯವಾಗಿ ದನಗಳಿಗೆ ಚಪ್ಪೆ ರೋಗ ಬಂದಂಥ ಸಂದರ್ಭದಲ್ಲಿ ತಕ್ಷಣವಾಗಿ ಅದಕ್ಕೆ ಔಷಧೋಪಚಾರಗಳನ್ನು ಮಾಡದೇ ಹೋದರೆ ರೈತ ಭಾರಿ ನಷ್ಟವನ್ನು ಹೊಂದಬೇಕಾಗುತ್ತದೆ. ದುರ್ದೈವದಿಂದ ತಾವು ಆ ರೈತರ ಪಶುಪಾಲನಾ ವಿಚಾರದಲ್ಲಿ ಒಂದು ಹೆಚ್ಚಿನ ಗಮನ ಕೊಟ್ಟಿಲ್ಲ. ಆದುದರಿಂದ ಈಗಲಾದರೂ ಕೂಡ ರೈತರ ಕಷ್ಟಸುಖಗಳನ್ನು ನೋಡಿಕೊಳ್ಳುವುದಕ್ಕೆ ಪಶುಪಾಲನಾ ಇಲಾಖೆಗೆ ಜಿಲ್ಲಾ ಕೇಂದ್ರದ ಆಸ್ಪತ್ರೆಗೆ ಒಂದೊಂದು ಜೀಪನ್ನು ಕೊಟ್ಟು ತುರ್ತಾಗಿ ಆವಶ್ಯಕತೆ ಬಿದ್ದಾಗ ಈ ಜೀಪನ್ನು ಉಪಯೋಗಿಸಬೇಕೆಂದು ಕಾನೂನು ಮಾಡಬೇಕು ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಆಸ್ಪತ್ರೆಗಳಲ್ಲಿ ಮುಖ್ಯವಾಗಿರತಕ್ಕಂಥ ಔಷಧಿಗಳು ಬಡ ರೈತರಿಗೆ ಸಿಕ್ಕುತ್ತಾ ಇಲ್ಲ. ಪ್ರಭಾವಶಾಲಿಯಾದವರಿಗೆ ಔಷಧಿಗಳು ಸಿಕ್ಕುತ್ತಾ ಇವೆ. ಆದುದರಿಂದ ತಾವು ಇದರ ಬಗ್ಗೆ ಗಮನ ಕೊಟ್ಟು ಮುಖ್ಯವಾಗಿರತಕ್ಕಂಥ ಈ ಔಷಧಿಗಳ ಪ್ರಯೋಜನವನ್ನು ಬಡವರಿಗೆ ದೊರಕತಕ್ಕಂಥ ಒಂದು ಏರ್ಪಾಡು ಮಾಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ಪ್ರಮುಖ್ಯವಾದ ವಿಷಯ ಅಮೃತ್‌ಮಹಲ್ ಹೋರಿಗಳನ್ನು 750 ರೂಪಾಯಿಗಳಿಗೆ ಒದಗಿಸುತ್ತಾ ಇದ್ದೀರಿ ಎಂದು ತಿಳಿದು ಬಂದಿದೆ. ಅದು ದುಬಾರಿ ಬೆಲೆಯಾಗಿರುವುದರಿಂದ ಹಿಂದೆ ಇದ್ದ ರಿಯಾಯಿತಿ ದರದಲ್ಲಿ ಅಂದರೆ 250 ರೂಪಾಯಿಗಳಿಗೆ ಕೊಡಬೇಕು ಎಂದು ತಮ್ಮ ಗಮನಕ್ಕೆ ತರುತ್ತೇನೆ. ಮತ್ತು ಅಮೃತ್‌ಮಹಲ್ ಕಾವಲ್‌ನಲ್ಲಿರತಕ್ಕಂಥ ಜಮೀನುಗಳನ್ನು ಬಿಡುಗಡೆ ಮಾಡಬೇಕೆಂದು ಏನು ಒತ್ತಡ ಇದೆಯೋ ಅದರಲ್ಲಿ ಕೆಲವು ಎಕರೆ ಜಮೀನುಗಳನ್ನಾದರೂ ಸಾಗುವಳಿಗೆ ಬಿಡುಗಡೆ ಮಾಡಬೇಕು. ಇದು ಯೋಗ್ಯವಾದ ಸಲಹೆ. ಈಗಾಗಲೇ ಕೊಟ್ಟಿರತಕ್ಕಂಥ ಜಮೀನುಗಳು ಪ್ರಾಪರ್ ಆಗಿದ್ದರೆ ಹಿಂದೆ ಇದ್ದಂತೆ ಹುರುಳಿ ಸಾಗುವಳಿ ಮಾಡಿ ಆ ಜಮೀನುಗಳನ್ನೂ ಕೂಡ ಅಭಿವೃದ್ಧಿಪಡಿಸಿಕೊಂಡು ರೈತನೂ ಕೂಡ ಸಂಪಾದನೆ ಮಾಡಿಕೊಳ್ಳುತ್ತಾನೆ. ಇದರಿಂದ ಸರ್ಕಾರಕ್ಕೂ ಕೂಡ ಉತ್ಪತ್ತಿ ಆಗುತ್ತದೆ ಎಂದು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಬ್ರೀಡಿಂಗ್ ಬುಲ್ಸ್ ವಿಷಯ. ಇದನ್ನು ಬೆಳೆಸುವುದಕ್ಕೆ ಸರ್ಕಾರದವರು ಹೆಚ್ಚು ಪ್ರೋತ್ಸಾಹ ಕೊಡಬೇಕು. ಈ ದನವನ್ನು ಬೆಳೆಸುವುದಕ್ಕೆ ಬಾಂಬೆ ಕರ್ನಾಟಕ ಏರಿಯಾದಲ್ಲಿ ಮತ್ತು ಇನ್ನು ಎಲ್ಲೆಲ್ಲಿ ಅವಕಾಶ ಇದೆಯೋ ಅಲ್ಲೆಲ್ಲಾ ಬೆಳೆಸುವುದಕ್ಕೆ ಗಮನಕೊಡಬೇಕು. ಫಾರೆಸ್ಟ್ ಇಲಾಖೆಯವರು ಮತ್ತು ಫಾರೆಸ್ಟ್ ಇಲಾಖೆಯಲ್ಲಿರತಕ್ಕಂಥ ಹಿಡುವಳಿ ಜಮೀನ್ದಾರರು ಹುಲ್ಲನ್ನು ಮೇಯಿಸುವುದಕ್ಕೆ ವ್ಯವಸ್ಥೆ ಮಾಡಿಕೊಂಡು ಪ್ರಪಂಚದ ವಿಖ್ಯಾತಿ ಪಡೆದಿರುವ ಈ ಅಮೃತ್‌ಮಹಲ್ ದನಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸುವುದಕ್ಕೆ ಸರ್ಕಾರದವರು ಗಮನಕೊಡಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ಈ ವ್ಯವಸಾಯ ಮತ್ತು ಪಶುಪಾಲನೆ ಇಲಾಖೆಯ ಬೇಡಿಕೆಯನ್ನು ಮಂಡಿಸಿರತಕ್ಕಂಥ ವಿಷಯದಮೇಲೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ನಾನು ಇಚ್ಛಿಸುತ್ತೇನೆ. ಈಗ ನಮ್ಮ ಇಂಡಿಯಾ ದೇಶದಲ್ಲಿ 100ಕ್ಕೆ 85 ಜನ ವ್ಯವಸಾಯದಿಂದ ಜೀವನ ಮಾಡತಕ್ಕಂಥಾ ಜನ ಇದ್ದಾರೆ. ಈಗ ನಾವು ರೈತರ ಕಡೆಗೆ ಹೆಚ್ಚಿನ ಒಂದು ಗಮನವನ್ನು ಹರಿಸಬೇಕಾದ್ದು ನಮ್ಮ ಒಂದು ಕರ್ತವ್ಯ ಮತ್ತು ದೇಶದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಇದುವರೆಗೆ ಏನಾದರೂ ಸಾಧಿಸಿ

(ಶ್ರೀ ಎಚ್. ಜಿ. ಚನ್ನಪ್ಪ)

ದ್ದಾರೇನೋ ಎಂದು ನೋಡುವುದಾದರೆ ಯಾವ ರೀತಿಯಾಗಿಯೂ ಸಾಧನೆಯಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ರೈತರು 20 ವರ್ಷದಿಂದ ಯಾವ ಮಟ್ಟದಲ್ಲಿ ಇದ್ದರೋ ಈಗಲೂ ಕೂಡ ಅದೇ ಮಟ್ಟದಲ್ಲಿ ತಮ್ಮ ವ್ಯವಸಾಯವನ್ನು ಕುಂಠಿತ ರೂಪದಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ. ಆತನಿಗೆ ಯಾವ ವ್ಯವಸಾಯದ ಸೌಲಭ್ಯವೂ ದೊರೆಯುತ್ತಾ ಇಲ್ಲ. ಆದರೆ ಈ ವ್ಯವಸಾಯದ ಇಲಾಖೆ ಯಾವ ರೀತಿಯಲ್ಲಿ ಸುಧಾರಣೆಯಾಗಿದೆ ಎಂದರೆ ಅಧಿಕಾರಿಗಳನ್ನು ಹೆಚ್ಚಿಸಿ ಡಿಪಾರ್ಟ್‌ಮೆಂಟನ್ನು ದೊಡ್ಡದು ಮಾಡಿದ್ದಾರೆಯೇ ವಿನಃ ನಿಜವಾಗಿಯೂ ರೈತರ ಸುಧಾರಣೆ ಆಗಿಲ್ಲ ಎಂದು ಹೇಳಬಹುದು. ಮೊದಲು ಒಬ್ಬ ಡೈರೆಕ್ಟರ್, ಒಬ್ಬ ಡೆಪ್ಯೂಟಿ ಡೈರೆಕ್ಟರ್ ಮತ್ತು ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರುಗಳಿದ್ದರು. ಈ ಹೊತ್ತು ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರಿದ್ದಾರೆ, ಅವರ ಮೇಲೆ ಅಸಿಸ್ಟೆಂಟ್ ಡೈರೆಕ್ಟರಿದ್ದಾರೆ, ಅವರ ಮೇಲೆ ಡೆಪ್ಯೂಟಿ ಡೈರೆಕ್ಟರಿದ್ದಾರೆ, ಅವರ ಮೇಲೆ ಜಾಯಿಂಟ್ ಡೈರೆಕ್ಟರಿದ್ದಾರೆ, ಅವರ ಮೇಲೆ ಡೈರೆಕ್ಟರಿದ್ದಾರೆ. ಇಷ್ಟು ಹುದ್ದೆಗಳು ಜಾಸ್ತಿಯಾದರೂ ವ್ಯವಸಾಯದಲ್ಲಿ ಏನಾದರೂ ಸುಧಾರಿಸಿದೆಯೇ ಎಂದರೆ ನಿಜವಾಗಿ ಯಾವ ಸುಧಾರಣೆಯೂ ಆಗಿಲ್ಲವೆಂದರೆ ತಪ್ಪಾಗಲಾರದು. ಈಗಾಗಲೇ ನನ್ನ ಮಿತ್ರರು ಹೇಳಿದಂತೆ ಯಾವುದಾದರೂ ಒಂದು ವಿಷಯವನ್ನು ಸಂಬಂಧಪಟ್ಟ ಅಧಿಕಾರಗಳಲ್ಲಿ ಕೇಳಿದರೆ ಯಾರೋ ಒಬ್ಬರನ್ನು ತೋರಿಸಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವ ಕೆಲಸ ಜಾಸ್ತಿಯಾಗುತ್ತಿದೆ.

ರಿಸರ್ಚ್ ಸ್ಟೇಷನ್ ಎಂದು ಕರೆಯುತ್ತಾರೆ. ಹೊರಗಡೆ ದೇಶಗಳಲ್ಲಿ ರಿಸರ್ಚ್ ಮಾಡಿರುವ ಬುಲೆಟಿನ್‌ಗಳನ್ನು ಓದಿ ಉತ್ತರ ಕೊಡುತ್ತಾರೆ. ಅವರು ನಿಜವಾಗಿ ಕಷ್ಟಪಟ್ಟು, ದೇಹ ದಂಡಿಸಿ ಏನು ಪ್ರಯೋಗ ಮಾಡುತ್ತಾರೆ, ಏನು ಪ್ರಯೋಗ ಮಾಡಿದ್ದಾರೆ ಎನ್ನುವ ಭಾವನೆ ಅವರಿಗೆ ನಿಜವಾಗಿ ಬರುವುದಿಲ್ಲ. ಹೊರಗಡೆಯಿಂದ ಬಂದಿರತಕ್ಕ ಬುಲೆಟಿನ್‌ಗಳನ್ನು ಓದಿ ಉತ್ತರ ಕೊಡುವಂಥ ನಿದರ್ಶನಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಿವೆ. ನನ್ನ ಅನುಭವವನ್ನು ಹೇಳುವುದಾದರೆ ನನ್ನ ತೋಟದಲ್ಲಿ ತೆಂಗಿನ ಗಿಡಗಳಿಗೆ ಒಂದು ರೋಗ ಬಂತು. ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದಾಗ, ರಿಸರ್ಚ್ ಸ್ಟೇಷನ್‌ನಿಂದ ಅವರು ಬಂದು ನೋಡಿ, ನಮಗೆ ಗೊತ್ತಿಲ್ಲ, ಎರ್ನಾಕುಲಂಗೆ ಬರೆಯಿರಿ ಎಂದು ಹೇಳಿದರು. ಕೇರಳದಲ್ಲಿರುವ ಎರ್ನಾಕುಲಂ ರಿಸರ್ಚ್ ಸೆಂಟರ್‌ಗೆ ಬರೆಯಬೇಕಾದರೆ, ಆ ಕೇಂದ್ರವೇ ಸಾಕು. ನಮ್ಮ ರಾಜ್ಯದಲ್ಲಿ ಒಂದು ಸಂಶೋಧನಾ ಕೇಂದ್ರ ಏಕೆ ಬೇಕು, ಅವರಿಗೆ ಸಂಬಳವನ್ನು ಏಕೆ ಕೊಡಬೇಕು, ಅವರ ಹೊರೆ ಏಕೆ ಬೇಕಾಗಿತ್ತು? ಈ ರೀತಿ ನಮ್ಮ ವ್ಯವಸಾಯದ ಸುಧಾರಣೆಯಾಗುತ್ತಿದೆ. ಇನ್ನೊಂದು ಕಡೆ ಹೊಸ ಹೊಸದಾಗಿ ತಳಿಗಳನು ಕಂಡು ಹಿಡಿಯುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆ ತಳಿಗಳನ್ನು ಯಾರೋ ಒಬ್ಬ ಪ್ರೈವೇಟ್ ಏಜೆನ್ಸಿಗೆ ಕೊಟ್ಟಿರುತ್ತಾರೆ. ಅದರಲ್ಲಿಯೂ ಲೋಪ ದೋಷಗಳಿರುತ್ತವೆ. ಮೇಲುಗಡೆ ಲೇಬಲ್ ಯಾವುದೋ ಇರುತ್ತದೆ, ಒಳಗಡೆ ಕಾಳು ಯಾವುದೋ ಇರುತ್ತದೆ. ಅದನ್ನು ತೆಗೆದುಕೊಂಡು ಹೋಗಿ ರೈತ ಬಿತ್ತಿದರೆ 25 ಪರ್ಸೆಂಟ್ ಕೂಡ ಜರ್ಮಿನೇಷನ್ ಆಗುವುದಿಲ್ಲ. ನನ್ನ ಸ್ವಂತ ಜಮೀನಿನಲ್ಲಿ ನಾನು ಜೋಳ ಹಾಕಿದಾಗ 25 ಪರ್ಸೆಂಟ್ ಕೂಡ ಜರ್ಮಿನೇಷನ್ ಆಗಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಅವರನ್ನು ಕರೆದುಕೊಂಡು ಬಂದು ತೋರಿಸಿದೆ ಮತ್ತು ಡಿಸ್ಟ್ರಿಕ್ಟ್ ಸೆಮಿನಾರ್‌ನಲ್ಲಿ ಕೂಡ ಹೇಳಿದೆ. ಆ ಬಗ್ಗೆ ವಿಚಾರಣೆ ಮಾಡುವುದಾಗಿ ಹೇಳಿದರು. ಏನು ವಿಚಾರಣೆ ಮಾಡಿದರೋ ಗೊತ್ತಿಲ್ಲ. ರೈತ ಕಷ್ಟಪಟ್ಟು ಜಮೀನನ್ನು ಉತ್ತು, ಗೊಬ್ಬರ ಹಾಕಿ ಬೇಸಾಯ ಮಾಡಿ ಬೀಜವನ್ನು ತೆಗೆದುಕೊಂಡು ಹೋಗಿ ಹಾಕಿದಾಗ ಮೊಳಕೆ ಬಾರದೆ ಇದ್ದರೆ ಅವನ ಗತಿ ಏನು? ಅವನು ಮಾಡಿರುವ ಸಾಲಕ್ಕೆ ಯಾರು ಜವಾಬ್ದಾರರು? ಇಂಥ ಸಂದರ್ಭಗಳಲ್ಲಿ ರೈತನಿಗೆ ಏನು ನುಕ್ಸಾನಾಗಿದೆ, ಅವನಿಗೆ ಏನು ಪರಿಹಾರ ಕೊಡಬೇಕು ಎನ್ನುವುದನ್ನು ಸರ್ಕಾರ ನೋಡಬೇಕು.

ಲ್ಯಾಂಡ್ ರೆಕ್ಲಮೇಷನ್ ಅತಿ ಮುಖ್ಯವಾದುದು. ಜಮೀನನ್ನು ಒತ್ತುವರಿ ಮಾಡುತ್ತ ಇದ್ದಂಥ ಬದುಗಳು ಮಾಯವಾಗಿವೆ. ಇದರಿಂದ ಮಳೆ ನೀರು ಜಮೀನಿನಲ್ಲಿ ನಿಲ್ಲದೆ ಕೆರೆ ಕುಂಟೆಗಳಿಗೆ ಹರಿದು ಹೋಗುವ ಪರಿಸ್ಥಿತಿ ಇದೆ. ಮಾನ್ಯ ಸ್ನೇಹಿತರೊಬ್ಬರು ಲ್ಯಾಂಡ್ ರೆಕ್ಲಮೇಷನ್ ಡಿಪಾರ್ಟ್‌ಮೆಂಟ್ ತೆಗೆಯಿರಿ ಎಂದು ಹೇಳಿದರು. ಇದರಿಂದ ಏನೂ ಪ್ರಯೋಜನವಿಲ್ಲ ಎಂದು ಅವರಿಗೆ ಆ ಇಲಾಖೆಯ ಕಾರ್ಯಗಳ ಬಗ್ಗೆ ಬೇಸರ ಬಂದು ಹಾಗೆ ಹೇಳಿದರು ಎಂದು ನಾನು ಭಾವಿಸುತ್ತೇನೆ. ಕಾಂಟೂರ್ ಬಂಡಿಂಗ್ ಎಂದು ದೇಶದ ಎಲ್ಲ ಭಾಗದಲ್ಲಿಯೂ ಮಾಡಿದರೆ ಮಳೆ ಬಂದಾಗ ಹೆಚ್ಚಿನ ನೀರು ಜಮೀನಿನಲ್ಲಿ ಇಂಗಿ ಮಳೆ ಕಡಮೆ ಬಿದ್ದರೂ ಕೂಡ ಪೈರು ಒಣಗದಂತೆ ತಡೆಯುವ ಶಕ್ತಿ ಬರುತ್ತದೆ. ಅದರಿಂದ ಬೆಳೆ ಖಂಡಿತವಾಗಿ ಬರುತ್ತದೆ ಎನ್ನುವ ಗ್ಯಾರಂಟಿ ಇರುತ್ತದೆ.

ಆರ್ಟಿಫಿಷಿಯಲ್ ಮೆನ್ಯೂರ್ ಉಪಯೋಗಿಸುವುದು ಜಾಸ್ತಿಯಾಗುತ್ತಿದೆ. ಯಾವ ಭೂಮಿಗೆ ಯಾವ ಗೊಬ್ಬರ ಹಾಕಬೇಕು ಎನ್ನುವುದರ ಬಗ್ಗೆ ನಮಗೆ ಇನ್ನೂ ಜ್ಞಾನೋದಯವಾಗಿಲ್ಲ. ಅಮೋನಿಯಂ ಸಲ್ಫೇಟ್ ಯಾವುದಕ್ಕೆ ಹಾಕಬೇಕು, ಉಪ್ಪು ಯಾವ ಜಮೀನಿಗೆ ಹಾಕಬೇಕು, ಪೊಟಾಷ್ ಯಾವುದಕ್ಕೆ ಹಾಕಬೇಕು ಎನ್ನುವುದು ಗೊತ್ತಿಲ್ಲ. ಬೆಳೆ ಚನ್ನಾಗಿ ಬರುತ್ತದೆ ಎಂದು ನಾವು ಉಪ್ಪು ಹಾಕುತ್ತಿರುತ್ತೇವೆ. ಇದರಿಂದ ಆಗತಕ್ಕ ಅನಾನುಕೂಲಗಳು ನಮಗೆ ಗೊತ್ತಿಲ್ಲ. ಆದುದರಿಂದ ವ್ಯವಸಾಯ ಇಲಾಖೆಯವರು ಹಳ್ಳಿಗಳಿಗೆ ಹೋಗಿ ಮಣ್ಣಿನ ಪರೀಕ್ಷೆ ಮಾಡತಕ್ಕ ಮೊಬೈಲ್ ವ್ಯಾನಗಳನ್ನು ಹೆಚ್ಚು ಮಾಡಿ ಎಲ್ಲ ಹಳ್ಳಿಗಳಿಗೂ ಹೋಗಿ, ಅಲ್ಲಿ ಎಲ್ಲ ಭೂಮಿಯನ್ನೂ ಪರೀಕ್ಷೆ ಮಾಡಿ, ಯಾವ ವಿಧವಾದ ಗೊಬ್ಬರ ಹಾಕಬೇಕು ಎನ್ನುವ ತಿಳುವಳಿಕೆಯನ್ನು ರೈತರಿಗೆ ಕೊಟ್ಟರೆ ಭೂಮಿಯ ಸಾರ ಇನ್ನೂ ಕೆಲವು ಕಾಲ ಉಳಿಯುತ್ತದೆ. ಇಲ್ಲದೆ ಹೋದರೆ ಕ್ಷಾರ ಜಾಸ್ತಿಯಾಗಿ ಚೌಳು ಭೂಮಿಯಾಗಿ ಯಾವ ಬೆಳೆಗೂ ಯೋಗ್ಯವಿಲ್ಲದಂತಾಗುತ್ತದೆ. ಇದರ ಕಡೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ.

ಪಶುಸಂಗೋಪನೆಯ ವಿಷಯ ಹೇಳಬೇಕೆಂದರೆ, ನಮ್ಮಲ್ಲಿ ಜನಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇವೆ. ಆದರೆ ಜಾನುವಾರುಗಳನ್ನು ಕಾಯಿಲೆ ಬಂದಾಗ ತೆಗೆದುಕೊಂಡು ಹೋಗಬೇಕಾದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಪ್ರತಿ ಐದು ಮೈಲಿಗೊಂದು ರೂರಲ್ ವೆಟೆರಿನರಿ ಡಿಸ್ಪೆನ್ಸರಿ ಮಂಜೂರು ಮಾಡಿಕೊಟ್ಟು ಜಾನುವಾರುಗಳ ಕಾಯಿಲೆಯನ್ನು ಸುಧಾರಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಮತ್ತು ಕಾಯಿಲೆ ಬಂದ ಮೇಲೆ ಔಷಧಿಗಳನ್ನು ತರಲು ಆಸ್ಪತ್ರೆಗಳಲ್ಲಿ ಚೀಟಿಗಳನ್ನು ಬರೆದುಕೊಡುತ್ತಾರೆ. ಇದು ತಪ್ಪಬೇಕು. ಆಸ್ಪತ್ರೆಗಳಲ್ಲಿ ಸಾಕಷ್ಟು ಸ್ಟಾಕ್ ಇದ್ದು ಯಾವ ಕಾಯಿಲೆ ಬರುತ್ತದೆ ಅದಕ್ಕೆ ತಕ್ಷಣ ಔಷಧಿ ಕೊಡುವ ವ್ಯವಸ್ಥೆಯಾಗಬೇಕು.

ಹೊರ ದೇಶಗಳಿಂದ ಸಾವಿರಾರು ರೂಪಾಯಿ ಕೊಟ್ಟು ಉತ್ತಮವಾದ ತಳಿಗಳನ್ನು ಎಲ್ಲರೂ ತರುವುದಕ್ಕೆ ಸಾಧ್ಯವಾಗುವುದಿಲ್ಲ. ರೂರಲ್ ವೆಟೆರಿನರಿ ಡಿಸ್ಪೆನ್ಸರಿಗಳಲ್ಲಿ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಪ್ರಯೋಗದಿಂದ ಉತ್ತಮ ತಳಿಗಳನ್ನು ಪಡೆದು ನಮ್ಮ ರೈತರು ಹೆಚ್ಚಿನ ಲಾಭ ಪಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಸಭಾಪತಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಅರಣ್ಯ ಶಾಖೆಯ ಮಂತ್ರಿಗಳು ಭಾರತದ ಯುದ್ಧದಲ್ಲಿ ಭೀಮನಿದ್ದಂತೆ ಶರೀರದಲ್ಲಿಯೂ ಕೂಡ, ಗಟ್ಟಿತನದಲ್ಲಿಯೂ ಕೂಡ ಇದ್ದಾರೆ. ಪಾಂಚಾಲಿಯ ವಸ್ತ್ರಾಪಹರಣ ಮಾಡಿದಾಗ ಹೇಗೆ ಭೀಮ ಗದಾಧರನಾಗಿ ತಾನು ಎಲ್ಲಿಯವರೆಗೆ ಈ ಸೇಡನ್ನು ತೀರಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಗದೆಯನ್ನು ಇಳಿಸುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡಿದನೋ ಅದೇ ರೀತಿಯಲ್ಲಿ ದೇಶದ್ರೋಹಿ, ಸಮಾಜದ್ರೋಹಿ ಕಂಟ್ರಾಕ್ಟರುಗಳು ಮತ್ತು ಅಧಿಕಾರಿಗಳೇನಿದ್ದಾರೆ ಅವರಿಗೆ ಸರಿಯಾದ ರೀತಿಯಲ್ಲಿ ಶಾಸ್ತಿಯನ್ನು ಮಾಡತಕ್ಕ ಪ್ರತಿಜ್ಞೆಯನ್ನು ತೆಗೆದುಕೊಂಡಿರುವ ಅರಣ್ಯ ಮಂತ್ರಿಗಳು ಧೀರೋದಾತ್ತ ಅರಣ್ಯ ಶಾಖೆಯ ಮಂತ್ರಿಗಳು ಎಂದು ನಾನು ಕರೆಯುವುದಕ್ಕೆ ಇಚ್ಛೆಪಡುತ್ತೇನೆ. ಈ ಪ್ರತಿಜ್ಞೆಯನ್ನು ಕೊನೆಯ ಹಂತದವರೆಗೂ ಉಳಿಸಿಕೊಂಡು ಬರಬೇಕು. ಆರಂಭಶೂರತ್ವ ಇದ್ದರೆ ಸಾಲದು ಎನ್ನುವ ಮಾತನ್ನು ನಾನು ಅವರಿಗೆ ಅರಿಕೆ ಮಾಡಿಕೊಳ್ಳಲು ಇಚ್ಛಿಸುತ್ತೇನೆ. ನಮ್ಮ ರೋದನವೇನಿದೆ ಅದು ಅರಣ್ಯರೋದನವಾಗಬಾರದು ಎಂದು ಹೇಳುತ್ತೇನೆ.

ಸಾಗರ ಡಿವಿಜನ್‌ನಲ್ಲಿ ಆಂಡಗನೂರು ಬಳಿ ಸುಮಾರು 20 ಎಕರೆ ಜಾಗ ಕೊಟ್ಟದ್ದನ್ನು ನೂರಾರು ಎಕರೆ ಅರಣ್ಯ ಪ್ರದೇಶ ಕಡಿದು ಹಾಕಿರುವುದನ್ನು ತಾವು ತಲಾಷೆ ಮಾಡಿದ್ದೀರಿ. ಜಿರಳೆಗೆ ಮೀಸೆ ಹೋಗುವುದಕ್ಕೆ ಜಾಗ ಸಿಕ್ಕಿದರೆ ಇಡೀ ದೇಹವೇ ಪ್ರವೇಶ ಮಾಡುವಂತೆ, ಅವರು ತೆಗೆದುಕೊಳ್ಳತಕ್ಕದ್ದು ಒಂದಂಗುಲ ಜಾಗ, ಪ್ರಸರಿಸುವುದು ಮೈಲಿಗಟ್ಟಲೆ ವಿಸ್ತೀರ್ಣದ ಜಾಗ. ನಾನು ಒಂದು ಪ್ರಶ್ನೆ ಕಳುಹಿಸಿದ್ದೆ; ಹುಲಿಕಲ್ ಘಾಟಿಯಲ್ಲಿ ಗೇಟ್ ಕೀಪರ್ ಕೆಲಸ ಕೊಡಿ ಎಂದು. ನಾನು ಏಕೆ ಕೇಳುತ್ತಿದ್ದೇನೆಂದರೆ ಇಡೀ ಅರಣ್ಯ ಸಂಪತ್ತು ಈ ಹೊತ್ತು ಹೊಸನಗರ ತಾಲ್ಲೂಕಿನ ಹುಲಿಕಲ್ ಘಾಟ್ ಮೂಲಕ ಸಾಗಿ ಹೋಗುತ್ತಿದೆ. ಹುಲಿ ಚರ್ಮ ಹೊದ್ದ ಕತ್ತೆಯಂತೆ ಎಷ್ಟೊಂದು ಗಂಧದ ಮರ ಹೋಗುತ್ತಿದೆ ಎಂದರೆ ಅದಕ್ಕೆ ಮಿತಿಯೇ ಇಲ್ಲ. ಬಾಡಿಗೆ ಕಾರನ್ನು ಇಟ್ಟುಕೊಂಡಿರುವಂಥ ಮಹನೀಯರು, ಅಂಬಾಸಿಡರ್ ಕಾರ್‌ಗಳಲ್ಲಿ ಹಾಕಿಕೊಂಡು ಹೋಗುತ್ತಾರೆ. ಇದನ್ನು ತಲಾಷೆ ಮಾಡತಕ್ಕ ಮಂತ್ರಿಗಳು ನಮಗೆ ಬೇಕಾಗಿತ್ತು. ಈ ಹೊತ್ತು ಅಂಥ ಮಂತ್ರಿಗಳು ಬಂದಿದ್ದಾರೆ. ಅವರ ಆ ಕೆಲಸವನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ದೇಶದ್ರೋಹಿಗಳು ಎಂದರೆ ಎಲ್ಲರೂ ದೇಶದ್ರೋಹಿಗಳು ಎಂದು ಕರೆಯುವುದಕ್ಕೆ ನಾನು ಸಿದ್ಧನಾಗಿಲ್ಲ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ)

ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ದೇಶದ್ರೋಹಿಗಳು ಎಂದು ಯಾರನ್ನು ಕರೆದಿದ್ದೇನೆ ಅವರು ಸಮಾಜದಲ್ಲಿ ನಾಲ್ಕು ರೂಪಾಯಿ, ಹತ್ತು ರೂಪಾಯಿ ಲಂಚ ತಿನ್ನುವವರು, ಸಮಾಜ ದ್ರೋಹಿಗಳಾಗುತ್ತಾರೆ.

ಆಫೀಸರ್ಸ್ ಏನು ಶಾಮೀಲ್ ಆಗಿ ಕಂಟ್ರಾಕ್ಟರುಗಳ ಜೊತೆಗೆ ಕೆಲಸ ಮಾಡುತ್ತಿದ್ದಾರೆ, ಅವರನ್ನು ತಲೆ ಬೋಳಿಸಿ ಕತ್ತೆಯಮೇಲೆ ಸವಾರಿ ಮಾಡಿಸಿದರೂ ಕೂಡ ಸಾಲದು. ಈ ದೃಷ್ಟಿಯಿಂದ ತಾವು ಈ ವ್ಯವಹಾರವನ್ನು ಮಟ್ಟಹಾಕಬೇಕೆಂದು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಪಶ್ಚಿಮಘಟ್ಟದಲ್ಲಿ ಬಹಳ ವಿಸ್ತೀರ್ಣ ಪ್ರದೇಶದ ಕಾಡನ್ನು ಬೋಳಿಸಿ ದುರುಪಯೋಗ ಮಾಡಿದ್ದಾರೆ. ಇದನ್ನು ತಾವು ನೋಡಬೇಕು. ಈಪೊತ್ತು ಪಶ್ಚಿಮ ಘಟ್ಟವನ್ನು ನಿಂತುಕೊಂಡು ನೋಡಿದರೆ, ಒಳ್ಳೆಯ ಬೋಳು ತಲೆ ಕಂಡ ಹಾಗೆ ಕಾಣುತ್ತದೆ. ಮೈಲುಗಟ್ಟಲೆ ಮರಗಳನ್ನು ಕಡಿದಂಥ ನೀಚರನ್ನು ಶಿಕ್ಷೆ ಮಾಡುವಂಥ ಫಾರೆಸ್ಟ್ ಸಿಬ್ಬಂದಿಯು ಸರ್ಕಾರ ಬೇಕಿತ್ತು. ದಾಂಡೇಲಿ, ಭದ್ರಾವತಿ ಈ ಮುಖ್ಯ ಕಾರ್ಖಾನೆಗಳಿಗೆ ಮರವನ್ನು ಕೊಡುತ್ತಿದ್ದೇವೆ. ಕಡಿದಂಥ ಜಾಗವನ್ನು ಸರಿಯಾದ ರೀತಿಯಲ್ಲಿ ಹೊಸ ಮರಗಳನ್ನು ಇವತ್ತಿನವರೆಗೂ ಬೆಳೆಸತಕ್ಕ ಸರ್ಕಾರ ಬಂದಿರಲಿಲ್ಲ. ಈಪೊತ್ತು ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ತಾವು ಏನು ಪ್ರಯತ್ನ ತೆಗೆದುಕೊಂಡಿದ್ದೀರಿ? ಏನು ತೀರ್ಮಾನ ತೆಗೆದುಕೊಂಡಿದ್ದೀರಿ? ಕೆಲವಾರು ಜನ ರೈತರು ಸಾಗುವಳಿ ಮಾಡಿಕೊಂಡು ಬಂದ ಜಮೀನು ಅರಣ್ಯ ಜಾಗಕ್ಕೆ ಸೇರಿದ್ದು ಎಂದು ಅಲ್ಲಿಯ ಬಡ ಬಗ್ಗರಿಗೆ ಕಟ್ಟು ಪ್ರಹಾರ ಬಂದು ನಿಂತಿದೆ. ಸಾವಿರಾರು ಕುಟುಂಬಗಳವರು ಮಲೆನಾಡಿನಲ್ಲಿ ಬಳಲುತ್ತಿದ್ದಾರೆ. ಈ ಬಗ್ಗೆ ಅವರು ಸರ್ಕಾರಕ್ಕೆ ಅರ್ಜಿ ಕೊಟ್ಟರೂ, ಅವರ ಗೋಳನ್ನು ಕೇಳುವ ಹಾಗಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಸಾಗುವಳಿ ಮಾಡಿಕೊಂಡು ಬಂದಿರತಕ್ಕ ಜಮೀನು ಏನು ಇದೆ, ಸಾಗುವಳಿಗೆ ಯೋಗ್ಯವಾದ ಜಮೀನು ಏನು ಇದೆ, ಅದು 100ಕ್ಕೆ 99 ಭಾಗ ಅರಣ್ಯ. ಈ ಅರಣ್ಯವನ್ನೇ ಕೊಡುವುದಿಲ್ಲ ಎಂದರೆ, ಮಲೆನಾಡಿನಲ್ಲಿನ ರೈತರು ನಾಲ್ಕು ಹೊತ್ತು ಊಟ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಇವತ್ತು ಹೊಸನಗರ, ತೀರ್ಥಹಳ್ಳಿ, ಸಾಗರ ತಾಲ್ಲೂಕುಗಳಲ್ಲಿ ಪ್ರಪೋಸ್ಡ್ ಫಾರೆಸ್ಟ್ ಎಂದು ಹೇಳಿ ಅಲ್ಲಿಯ ನೂರಾರು ಎಕರೆ ಗೋಮಾಳ ಜಮೀನನ್ನು ಶಿಫಾರಸು ಮಾಡಿ ತಮಗೆ ಕಳುಹಿಸಿಬಿಟ್ಟಿದ್ದಾರೆ. ಸರ್ವೆ ನಂಬರ್ ಹಾಕಿ ಸಾವಿರಾರು ಅರ್ಜಿಗಳು, ದರಖಾಸ್ತು ಅರ್ಜಿಗಳಿಗೆ ಪ್ರಪೋಸ್ಡ್ ಫಾರೆಸ್ಟ್ ಎಂದು ಇರುವುದರಿಂದ ಕೊಡುವುದಕ್ಕಾಗುವುದಿಲ್ಲ ಎಂದು ರಾಶಿ ಗಟ್ಟಲೆ ಫೈಲ್ಸ್ ಬಿದ್ದಿವೆ. ದರಖಾಸ್ತು ವಿಲೇವಾರಿ ಆಗಬೇಕು, ಸಮಾಜವಾದ ಹೇಳುವ ಸರ್ಕಾರ ನಾಲ್ಕು ಹೊತ್ತು ಊಟ ಕೊಡದಿದ್ದರೆ ಹೇಗೆ ಸಮಾಜವಾದವಾಗುತ್ತದೆ ಎಂದು ಕೇಳುತ್ತೇನೆ. ತಾಲ್ಲೂಕು ಬೋರ್ಡ್‌ಗೆ ಫಾರೆಸ್ಟಿನಿಂದ ಬಂದಿರತಕ್ಕ ಇನ್‌ಕಂ ಏನು ಇದೆ, ಅದರ ಒಂದಂಶವನ್ನು ತಾವು ಮಲೆನಾಡಿಗೆ ಕೊಡಬೇಕೆಂದು ಹೇಳುತ್ತೇನೆ. ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಸ್. ವೀರಭದ್ರಪ್ಪ (ಕೂಡ್ಲಿಗಿ).—ಮಾನ್ಯ ಮಂತ್ರಿಗಳು ತಮ್ಮ ರೆವಿನ್ಯೂ ಬೇಡಿಕೆಯಲ್ಲಿ ಇಟ್ಟಿರುವ ಹಣ, ಈ ವ್ಯವಸಾಯ ಇಲಾಖೆಯನ್ನು ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ತಿಳಿಸಲಿಕ್ಕೆ ವಿಷಾದವಾಗುತ್ತದೆ. ಮಾನ್ಯ ವ್ಯವಸಾಯ ಮಂತ್ರಿಗಳು ರೈತರಿಗೆ ಬೇಕಾಗುವಂಥ ಗೊಬ್ಬರ, ಔಷಧಿಗಳನ್ನು ಸಾಕಷ್ಟು ಹೆಚ್ಚಿನ ರೀತಿಯಲ್ಲಿ ಒದಗಿಸಿಕೊಡಲಿಕ್ಕೆ ಪ್ರಯತ್ನ ಪಡಬೇಕು. ಬೆಳೆಯ ಸಂರಕ್ಷಣೆಯ ಔಷಧಿಗಳನ್ನು ಮುಂಚೆಯೇ ಸರ್ಕಾರದವರು ರಿಯಾಯಿತಿ ದರದಲ್ಲಿ ಕೊಟ್ಟಂತೆ ಮುಂದುವರಿಸಿಕೊಂಡು ಹೋಗಬೇಕು ಎಂದು ನಾನು ಅವರನ್ನು ವಿನಂತಿಸುತ್ತೇನೆ. ರೈತ ತನಗೆ ಬೇಕಾದಷ್ಟು ಕಬ್ಬಿಣವನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿಯಿಲ್ಲ, ಒಂದು ವರ್ಷದ ಹಿಂದೆ ಸಾವಿರ ರೂಪಾಯಿಗೆ ಒಂದು ಟನ್ ಇದ್ದಂಥ ಕಬ್ಬಿಣ ಇವತ್ತು ಮಾರ್ಕೆಟ್ಟಿನಲ್ಲಿ 2,200 ರೂಪಾಯಿಯವರೆಗೆ ಆಗಿದೆ. ರೈತ ತನಗೆ ಬೇಕಾದ ಕಬ್ಬಿಣದ ಅಳಿ, ಅಚ್ಚು, ಕುಳಕ್ಕೆ ಸೊಸೈಟಿ ಅಥವಾ ಯಾವುದಾದರೂ ಏಜನ್ಸಿಯ ಮೂಲಕ ರಿಯಾಯಿತಿ ದರದಲ್ಲಿ ಕೊಡುವಂತೆ ಮಾಡಿ ಕೊಡಬೇಕು ಎಂದು ವಿನಂತಿಸುತ್ತೇನೆ.

ಇನ್ನು ರೈತರ ಮಕ್ಕಳಿಗೆ ವ್ಯವಸಾಯ ಕಾಲೇಜಿನಲ್ಲಿ ಸೀಟುಗಳನ್ನು ಕನಿಷ್ಟ 25 ಪರ್ಸೆಂಟ್ ರಿಸರ್ವ್ ಮಾಡಬೇಕು. ಏಕೆಂದರೆ, ನಮ್ಮಲ್ಲಿ ಮೂರು ವ್ಯವಸಾಯದ ಕಾಲೇಜುಗಳು ಇವೆ. ಇದರಲ್ಲಿ ಕೇವಲ ಕೆಲವೇ ವರ್ಗದ ಜನರಿಗೆ ಸೀಟು ಸಿಗುತ್ತಿದೆ. ನಗರದಲ್ಲಿ ದೊಡ್ಡ ಪಟ್ಟಣಗಳಲ್ಲಿ ವಿದ್ಯಾಭ್ಯಾಸ ಮಾಡಿ ಹೆಚ್ಚಿನ ಅಂಕಗಳನ್ನು ಪಡೆಯಲಿಕ್ಕೆ ಒಳ್ಳೆಯ ವಾತಾವರಣ ಇರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಒಳ್ಳೆಯ ವಾತಾವರಣ ಇಲ್ಲದ ಕಾರಣ ಹೆಚ್ಚಿನ ಅಂಕಗಳನ್ನು ಅವರು

ಪಡೆಯಲಿಕ್ಕೆ ಆಗುವುದಿಲ್ಲ. ಆದ್ದರಿಂದ ಅವರಿಗೆ ಈ ಮೂರು ಕಾಲೇಜುಗಳಲ್ಲಿ ಸೀಟು ಸಿಗುವುದಿಲ್ಲ. ಅಧಕ್ಕಾಗಿ ಗ್ರಾಮಾಂತರ ಪ್ರದೇಶದಿಂದ ಬರುವ ಮಕ್ಕಳಿಗೆ ಶೇಕಡ 25 ಸೀಟನ್ನು ಕೊಡಬೇಕು ಎಂದು ಕಂಡೀಷನ್ ಹಾಕಬೇಕು. 10—15 ಎಕರೆ ಜಮೀನು ಇರುವವರಿಗೆ ಸೀಟು ಕೊಟ್ಟರೆ ಅವರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಮಾರ್ಗದರ್ಶಕರಾಗುವುದಕ್ಕೆ ಅನುಕೂಲವಾಗುತ್ತದೆ. ಆದಕಾರಣ ಮಾನ್ಯ ಮಂತ್ರಿಗಳು ವಿಚಾರ ಮಾಡಿ ರೈತರ ಮಕ್ಕಳಿಗೆ ವ್ಯವಸಾಯದ ಕಾಲೇಜಿನಲ್ಲಿ ಸೀಟುಗಳನ್ನು ರಿಸರ್ವ್ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಅರಣ್ಯ ಸಂಪತ್ತಿನಲ್ಲಿ ಸಿಗುವಂಥ ಊಟದ ಎಲೆಯನ್ನು ಹಚ್ಚುವ ಕೆಲಸವನ್ನು ಕೂಡ್ಲಿಗಿ ಮತ್ತು ಬಳ್ಳಾರಿಯಲ್ಲಿ ಮಾಡುತ್ತಿದ್ದರು ಈ ಊಟದ ಎಲೆಯನ್ನು ಹಿಂದೆ ಅರಣ್ಯ ಸಂಪತ್ತಿನಲ್ಲಿ ಸೇರಿಸಿರಲಿಲ್ಲ. ಎರಡ ವರ್ಷಗಳಿಂದ ಸೇರಿಸಿರುವುದರಿಂದ ಬಡ ಕೂಲಿಗಾರರಿಗೆ ತೊಂದರೆಯಾಗಿದೆ. ಅದನ್ನು ಈ ದೃಷ್ಟಿಯಿಂದ ಅರಣ್ಯ ಸಂಪತ್ತಿನಿಂದ ತೆಗೆದು ಹಾಕಬೇಕು. ಇದು ಬಡವರಿಗೆ ಎಲೆಗಳನ್ನು ಹಚ್ಚಿ ಜೀವನ ಮಾಡುವ ಸಣ್ಣ ಕೈಗಾರಿಕೆಯಾಗಿದೆ. ಅವಕ್ಕೆ ಪ್ರೋತ್ಸಾಹ ಕೊಡುವುದಕ್ಕೋಸ್ಕರ ಅರಣ್ಯದಿಂದ ಫ್ರೀ ಆಗಿ ಎಲೆಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ. ನಮ್ಮ ರಾಜ್ಯದಲ್ಲಿ ಹಿಂದುಳಿದ ಜನಾಂಗಗಳ ಪೈಕಿ ಒಡ್ಡರ ಜನಾಂಗ ಇದೆ. ಅವರ ಕಸುಬು ಕಲ್ಲು ಹೊಡೆಯುವುದು. ಬಂಡೆಗಳನ್ನು ಒಡೆದು ಜೀವನ ಮಾಡುತ್ತಾರೆ, ಅವರಿಗೆ ಅರಣ್ಯದಲ್ಲಿರುವ ಬಂಡೆಗಳನ್ನು ಹೊಡೆದು ಕಲ್ಲು ತರುವುದಕ್ಕೆ ಪರ್ಮಿಟ್ ತೆಗೆದುಕೊಂಡು ತರಬೇಕು ಎಂದು ಮಾಡಿದ್ದಾರೆ. ಇದರಿಂದ ಅವರ ಕಸುಬಿಗೆ ತೊಂದರೆಯಾಗಿದೆ, ಆದ್ದರಿಂದ ಅವರಿಗೆ ಉಚಿತವಾಗಿ ಕಲ್ಲುಗಳನ್ನು ಅರಣ್ಯದಿಂದ ತರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಫಾರೆಸ್ಟ್ ಏರಿಯಾ ಅನ್ನು ತಾವು ಹೊಸದಾಗಿ ಸರ್ವೆ ಮಾಡಿ ಸರ್ವೆ ಕಲ್ಲುಗಳನ್ನು ಫಿಕ್ಸ್ ಮಾಡಬೇಕು. ಅನೇಕ ವರ್ಷಗಳಿಂದ ಫಾರೆಸ್ಟ್ ಲ್ಯಾಂಡ್‌ನಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಅಧಿಕಾರಿಗಳು ಆ ಜನಗಳಿಗೆ ಕಿರುಕುಳ ಕೊಡುತ್ತಿದ್ದಾರೆ. ಫಾರೆಸ್ಟ್ ಲ್ಯಾಂಡ್ ಅನ್ನು ಕೊಡುವುದಿಲ್ಲ ಆದ್ದರಿಂದ ತಾವು ಫಾರೆಸ್ಟ ಅನ್ನು, ಅದರ ಹದ್ದನ್ನು ಅಳತೆ ಮಾಡಿದರೆ ಮುಂದೆ ರೈತರಿಗೆ ಜಮೀನುಗಳನ್ನು ಸಾಗುವಳಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಸಾಗುವಳಿ ಮಾಡಿದ ಜಮೀನುಗಳಿಗೆ ಅರಣ್ಯ ಇಲಾಖೆಯವರು ತೊಂದರೆ ಕೊಡಬಾರದು ಎಂದು ತಾವು ಆದೇಶ ಕೊಡಬೇಕು, ಎಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನ 54 ಹಳ್ಳಿಗಳಲ್ಲಿ ತುಂಗಭದ್ರ ಅಣೆಕಟ್ಟಿನಿಂದ ಮಣ್ಣು ಬಂದು ಊಳು ಮುಚ್ಚಿಕೊಳ್ಳುತ್ತದೆ. ಸರ್ಕಾರ ಅಂಥ ಜಮೀನುಗಳಿಗೆ ಪಟ್ಟ ಕೊಡಬಾರದು ಎಂದು ಗವರ್ನರ್ ಆಡಳಿತದಲ್ಲಿ ಒಂದು ಆಜ್ಞೆ ಹೊರಡಿಸಿದ್ದಾರೆ. 10—12 ವರ್ಷಗಳಿಂದ ಸಾಗುವಳಿ ಮಾಡಿದಂಥ ಜಮೀನುಗಳಿಗೆ ಪಟ್ಟ ಕೊಡಬಾರದು ಎಂದು ಡೆಪ್ಯೂಟಿ ಕಮಿಷನರ್ ಮತ್ತು ತಹಸೀಲ್ದಾರ್ ಅವರು ಆದೇಶ ಕೊಟ್ಟಿದ್ದಾರೆ. ಇದು ಅನ್ಯಾಯ, ಆದ್ದರಿಂದ ಆದಷ್ಟು ಬೇಗ ಈ ಹಳ್ಳಿಗಳವರಿಗೆ ಪಟ್ಟ ಕೊಡ ಬೇಕೆಂದು ಸೂಚಿಸುತ್ತೇನೆ. ಮತ್ತು ಮುಖ್ಯವಾಗಿ ರೈತರಿಗೆ ಕ್ರಾಪ್ ಇನ್‌ಷ್ಯೂರೆನ್ಸ್ ಜಾರಿಗೆ ತರಬೇಕು. ನೀರಾವರಿ ಪ್ರದೇಶ ಇರುವ ಮಳೆ ಬಂದರೆ ಬೆಳೆಗಳಿಗೆ ತೊಂದರೆಯಾಗಿ ರೈತನಿಗೆ ತೊಂದರೆಯಾಗುತ್ತದೆ. ಆದ್ದರಿಂದ ಕ್ರಾಪ್ ಇನ್‌ಷ್ಯೂರೆನ್ಸ್ ಸ್ಕೀಂ ಅನ್ನು ತಂದರೆ ರೈತನಿಗೆ ತಾನು ಬೆಳೆಯುವ ಪೈರಿಗೆ ಒಂದು ಗ್ಯಾರಂಟಿ ಸಿಗುತ್ತದೆ ಎಂದು ಈ ಸಂದರ್ಭದಲ್ಲಿ ಸೂಚಿಸಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

6-30 P.M.

† ಶ್ರೀ ಧರ್ಮಸಿಂಗ್ ನಾರಾಯಣ್‌ಸಿಂಗ್ (ಜೇವರ್ಗಿ).—ಮಾನ್ಯ ಅಧ್ಯಕ್ಷಣಿಯವರೇ, ಇವೊತ್ತಿನ ದಿವಸ ಅರಣ್ಯ ಇಲಾಖೆ ಮಂತ್ರಿಗಳು ಮತ್ತು ಪಶುಪಾಲನೆ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳಿಗೆ ಬೆಂಬಲವನ್ನು ವ್ಯಕ್ತಪಡಿಸುತ್ತಾ ಕೆಲವು ಸಲಹೆ ಸೂಚನೆಗಳನ್ನು ಅವರ ಗಮನಕ್ಕೆ ತರಲುಬಯಸುತ್ತೇನೆ. ಈ ಹೈದರಾಬಾದ್ ಕರ್ನಾಟಕ ಏರಿಯಾ ಬಹಳ ನೆಗ್ಲೆಕ್ಟೆಡ್ ಏರಿಯಾ ಇದೆ. ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಸಾಕಷ್ಟು ಕೆಲಸ ಆಗಬೇಕಾಗಿದೆ. ಅಲ್ಲಿ ಒಂದು ಸೀಡ್ ಫಾರಮ್ ಫಾರ್ ವೆಜಿಟೆಬಲ್ಸ್ ಆಗಬೇಕು. ಸೆಂಟ್ರಲ್ ಪ್ಲೇಸ್ ಗುಲ್ಬರ್ಗದಲ್ಲಿ ಕೊಡಬೇಕು ಎಂದು ಮಂತ್ರಿಮಂಡಲದವರನ್ನು ಕೇಳಿಕೊಳ್ಳುತ್ತೇನೆ. ಈಗ ಜಾಯಿಂಟ್ ಡೈರೆಕ್ಟರ್ ಆಫೀಸ್ ರಾಯಚೂರ್ ... ಇದೆ. ಗುಲ್ಬರ್ಗಾ ಡಿವಿಜನಲ್ ಹೆಡ್‌ಕ್ವಾರ್ಟರ್ಸ್ ಮತ್ತು ಅಲ್ಲಿ ಎಲ್ಲಾ ಆಫೀಸುಗಳು ಇವೆ. ...ದರಿಂದ ಜಾಯಿಂಟ್ ಡೈರೆಕ್ಟರ್ ಆಫೀಸ್ ಗುಲ್ಬರ್ಗಕ್ಕೆ ಬರಬೇಕು. ಎಂದು ಕೇಳಿಕೊಳ್ಳು... ಇಂಟೆನ್ಸೀವ್ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮ್ ಇದೆ. ಅದು ಬಳ್ಳಾರಿ ಬಿಜಾಪುರದಲ್ಲಿ ಮಾಡಿದ್ದಾರೆ. ಗುಲ್ಬರ್ಗಾದಲ್ಲಿ ಜವಾರ್ ಬೆಳೆಯುತ್ತಾರೆ. ಆದುದರಿಂದ ಗು...ದಲ್ಲಿಯೂ ಆ ರೀತಿ ಸ್ಕೀಮ್ ಆಗಬೇಕು ಎಂದು ಕೇಳಿಕೊಳ್ಳುತ್ತೇನೆ. ಒಂದು ಫಾರ್ಮರ್ಸ್

(ಶ್ರೀ ಧರ್ಮಸಿಂಗ್ ನಾರಾಯಣ್‌ಸಿಂಗ್)

ಟ್ರೈನಿಂಗ್ ಸೆಂಟರು ಗುಲ್ಬರ್ಗಾದಲ್ಲಿ ಆಗಬೇಕು. ಗಂಗಾವತಿಯಲ್ಲಿ ರೂರಲ್ ಡೆವಲಪ್‌ಮೆಂಟ್ ಟ್ರೈನಿಂಗ್ ಸೆಂಟರ್ ಇದೆ. ಇದು ಗುಲ್ಬರ್ಗದಲ್ಲಿ ಆಗಬೇಕು. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಗುವುದು ಇದೆ. ಅಲ್ಲಿ ಮಾಡುವ ಸಲುವಾಗಿ ನನ್ನ ಕ್ಷೇತ್ರವಾದ ಜೆವರ್ಗಿಯಲ್ಲಿ ಭೂಮಿ ಥಂಡಿಯಾಗಿ ಇದೆ ವಾಟರ್ ಉಪಯೋಗವನ್ನು ಮಾಡುವ ಸಲುವಾಗಿ ಒಂದು ಸೆಂಟರ್ ಕಾಯಂ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ವಕ್ಕಲಿಗರಿಗೆ ಡಿ. ಡಿ. ಟಿ. ಸರಿಯಾಗಿ ಸಪ್ಲೈ ಆಗುವುದಿಲ್ಲ. ಈಗ ಏನು ಡಿ. ಡಿ. ಟಿ. ಸಪ್ಲೈ ಮಾಡುತ್ತಿದ್ದಾರೆ, ಅದು ಜನರಿಗೆ ಬೇಕಿಲ್ಲ. ಟಾಟಾ ಅವರ ಡಿ.ಡಿ.ಟಿ. ಬೇಕು. ಕೆಲವು ಇನ್‌ಫ್ಲುಯೆನ್ಸ್ ಪರ್‌ಸನ್ಸ್‌ಗೆ ಆ ಡಿ.ಡಿ.ಟಿ. ಸಿಕ್ಕುತ್ತಿದೆ. ಸಾಧಾರಣ ಜನರಿಗೆ ಸಿಕ್ಕುವುದಿಲ್ಲ. ನಮ್ಮಲ್ಲಿ ತೊಗರಿಬೇಳೆ ಹೆಚ್ಚು ಇದೆ. ಅದಕ್ಕೆ 50 ಪರ್ಸೆಂಟ್ ಡಿ.ಡಿ.ಟಿ. ಬೇಕು. ಟಾಟಾ ಡಿ.ಡಿ.ಟಿ. ಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ರಿಸರ್ಚ್ ಪರ್ಸ್ ಸ್ಟೇಷನ್ ಚಿತ್ತಾಪುರದಲ್ಲಿ ಆಗಬೇಕೆಂದು ಆಗಿತ್ತು, ಇಲ್ಲಿಯವರೆಗೆ ಆಗಿಲ್ಲ ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಚಿಂಚೋಳಿ ತಾಲ್ಲೂಕಿನಲ್ಲಿ ಬೃಂದಾವನ್ ಗಾರ್ಡನ್ಸ್ ಮಾಡಬೇಕು ಎಂದು ಹೇಳಿದ್ದಾರೆ. ಇನ್ನು ಫಂಡ್ಸ್ ಅಲಾಟ್ ಆಗಿಲ್ಲ. ಆದಕಾರಣ ತ್ವರಿತವಾಗಿ ಅಲ್ಲಿ ಕೆಲಸ ಪ್ರಾರಂಭ ಆಗಬೇಕು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ಕೇಳುವುದು ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟಿನಲ್ಲಿರುವ ಕೆಲವು ಜನರು ಲಾಲ್‌ಬಾಗ್‌ನಲ್ಲಿ ಹುಟ್ಟಿದ್ದಾರೆ, ಲಾಲ್‌ಬಾಗ್‌ನಲ್ಲಿ ಬೆಳೆಯುತ್ತಾರೆ ಮತ್ತು ಲಾಲ್‌ಬಾಗ್‌ನಲ್ಲಿ ರಿಟೇರ್ ಆಗುತ್ತಾರೆ. ಈ ತರಹ ಅನ್ಯಾಯ ಇದೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಇದಕ್ಕೆ ಸರಿಯಾಗಿ ಗಮನಕೊಡಬೇಕು 1969ರಲ್ಲಿ ಸೀನಿಯಾರಿಟಿ ಲಿಸ್ಟ್ ತಯಾರಾಗಿತ್ತು. ಆ ಸೀನಿಯಾರಿಟಿ ಲಿಸ್ಟನ್ನು ಓವರ್‌ಲುಕ್ ಮಾಡಿ ಮನಸ್ಸಿಗೆ ಬಂದಾಹಾಗೆ ಪ್ರೊಮೋಷನ್ ಕೊಡುತ್ತಿದ್ದಾರೆ. ಎಷ್ಟೋಮಂದಿ ಎಲ್.ಎಸ್.ಜಿ., ಬಿ.ಎಸ್.ಸಿ. ಪಾಸ್ ಮಾಡಿದ ಗ್ರಾಜುಯೇಟ್ ಇದ್ದಾರೆ. ಅವರಿಗೆ ನೌಕರಿ ಸಿಕ್ಕುವುದಿಲ್ಲ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಅಟೆಂಡರ್ ಚಪ್ರಾಸಿಯಾಗಿ ಸೇರಿದವರು ಈಗ ಹಾರ್ಟಿಕಲ್‌ಚರ್ ಅಸಿಸ್ಟೆಂಟ್ ಡೈರೆಕ್ಟರಾಗಿದ್ದಾರೆ. ಉದಾಹರಣೆಗೆ ಶ್ರೀ ವಿಷಕಂಠ ಅನ್ನುವವರು ಮತ್ತು ಕೃಷ್ಣ ಮೂರ್ತಿ ಅನ್ನುವವರು ಕ್ಲಾಸ್‌ಫೋರ್ ಆಗಿದ್ದವರು ಈಗ ಅವರು ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದಾರೆ. ಬಿ.ಎಸ್.ಸಿ. ಮತ್ತು ಎಂ.ಎಸ್.ಸಿ. ಪಾಸ್ ಇದ್ದವರಿಗೆ ಗಮನ ಕೊಡುವುದಿಲ್ಲ. ಗುಲ್ಬರ್ಗದಲ್ಲಿ ಅನಿಮಲ್ ಹಸ್ಬೆಂಡರಿ ಇಲಾಖೆಯಲ್ಲಿ ಇದ್ದಾರೆ. ನಮ್ಮ ತಾಲ್ಲೋಕಿನಲ್ಲಿ ಒಂದು ಸಾರಿ ದನಗಳಿಗೆ ಚಪ್ಪೆಬೇನೆ ಬಂತು. ಎಲ್ಲಾ ಜನರು ಹೋಗಿ ಹೇಳಿದರು. ಅದಕ್ಕೆ ಡಾಕ್ಟರು ಪಂಚಾಯತಿ ರೆಸಲ್ಯೂಷನ್ ಬೇಕು ಇಲ್ಲದಿದ್ದರೆ ತಾನು ಬರುವುದಿಲ್ಲ ಎಂದು ಹೇಳಿದರು. ಅಲ್ಲಿ 15—20 ದನಗಳು ಸತ್ತುಹೋಗಿವೆ. ಈ ರೀತಿ ಡಿಪಾರ್ಟ್‌ಮೆಂಟಿನಲ್ಲಿ ಇರೆಗ್ಯುಲಾರಿಟೀಸ್ ಇವೆ. ಡಾಕ್ಟರ್ಸ್ ಹಳ್ಳಿಗಳಿಗೆ ಹೋಗಿ ನೋಡುವುದಿಲ್ಲ ಎಂದು ವರದಿ ಬಂದಿದೆ. ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಿ ಕೊಡಬೇಕು.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಮಾನ್ಯ ಮಂತ್ರಿಗಳು ಮುಂಡಿಸಿರತಕ್ಕ ಬೇಡಿಕೆಗಳ ವಿಷಯವಾಗಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಈಗಾಗಲೇ ನನ್ನ ಸ್ನೇಹಿತರು ಏನು ಹೇಳಬೇಕೋ ಅವೆಲ್ಲವನ್ನು ಹೇಳಿಬಿಟ್ಟಿದ್ದಾರೆ. ಯಾವ ವಿಷಯ ಮಾತನಾಡಬೇಕು ಎಂದು ಗೊತ್ತಾಗುತ್ತಿಲ್ಲ. ವ್ಯವಸಾಯ ಇಲಾಖೆಯಿಂದ ಜನಸಾಮಾನ್ಯರಿಗೆ ಎಷ್ಟು ಪ್ರಯೋಜನ ಆಗಬೇಕೋ ಅಷ್ಟು ಆಗುತ್ತಾ ಇಲ್ಲ ಎಂದು ನನ್ನ ಭಾವನೆ. ಉದಾಹರಣೆಗೆ ಹೇಳುವುದಾದರೆ ಹುಲ್ಲಹಳ್ಳಿ ಡ್ಯಾಮಿನ ಕೆಳಗೆ 14 ಸಾವಿರ ಎಕರೆ ತರಿ ಜಮೀನು ಇದೆ. ಅಲ್ಲಿ ಮುಂಗಾರು ಜೋಳ, ಹೆಸರು ಕಾಳು, ಅಲಸಂಧೆ ಬಿತ್ತಿದ್ದರೆ ಬೆಳೆಯಾಗುವುದಿಲ್ಲ. ನೊರಜು ಆಗುತ್ತದೆ. ಹಿಂದೆ 10 ಪಲ್ಲ 50 ಪಲ್ಲ 100 ಪಲ್ಲ ಆಗುತ್ತಿತ್ತು. ಈಗ 5 ಸೇರು ಆಗುತ್ತದೆ ಎಂದು ಹೇಳುತ್ತಾರೆ. ಅಲ್ಲಿ ಬೇಕಾದಷ್ಟು ಅಧಿಕಾರಿಗಳು ಇರುತ್ತಾರೆ. ಏತಕ್ಕೆ ಬೆಳೆ ಹೋಯಿತು, ಅದಕ್ಕೆ ಏನು ಕಾರಣ ಎಂದು ಹೇಳುವುದರಲ್ಲಿ ವಿಫಲರಾಗಿದ್ದಾರೆ. ಮುಂಗಾರು ಜೋಳ ಬಿತ್ತುತ್ತಾರೆ ಗಾಳಿ ಬೀಸಿದರೆ ಮರೋಡ ಯಾಗುತ್ತದೆ. ಮರೋಡೆಗೆ ಕಾರಣ ಏನು ಗೊತ್ತಾಗುತ್ತಿಲ್ಲ. ಸಾವಿರಾರು ಎಕರೆ ಜಮೀನು ಹಾಳುಗುತ್ತಿದೆ. ಇದಕ್ಕೆ ಕಾರಣ ಏನು ಎಂದು ಪತ್ತೆ ಹಚ್ಚದೆ ವಿಫಲರಾಗಿದ್ದಾರೆ. ಬಡ ರೈತರಿಗೆ ಈ ರೀತಿ ತೊಂದರೆಯಾಗಿ ಅವರು ಬೇಸತ್ತು ಹೋಗಿದ್ದಾರೆ. ಸಾಯಿಲ್ ಕನ್ಸರ್‌ವೇಷನ್ ಡಿಪಾರ್ಟ್‌ಮೆಂಟ್‌ನವರು ಹಳ್ಳಿಗಳಿಗೆ ಬಂದು ಬಂಡ್ಸ್ ಹಾಕುತ್ತಾರೆ. ಅದೇ ರೀತಿ ಡ್ರೈನೇಜ್ ಸಿಸ್ಟಮ್ ಮಾಡಿದರೆ ಒಳ್ಳೆಯದು. ಎಲ್ಲಿ ಜಮೀನಿನಲ್ಲಿ ಜಾಸ್ತಿ ನೀರು ನಿಂತು ಬೆಳೆ ಹಾಳಾಗುತ್ತಿದೆಯೋ ಅಂಥ ಕಡೆ ಡ್ರೈನೇಜ್ ಸಿಸ್ಟಮ್ ಮಾಡಲು ಸರ್ಕಾರದವರು ಹಣದ ಸಹಾಯ ಮಾಡಿ

ದರೆ ಮಳೆ ಆದಾಗ ಕೂಡ ಜಾಸ್ತಿ ಬೆಳೆ ಆಗುವುದಕ್ಕೆ ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ. ಈಗ ಟ್ರಾಕ್ಟರ್‌ಗೆ 35 ಸಾವಿರ ರೂಪಾಯಿ ಸಾಲ ಕೊಡುತ್ತಿದ್ದೀರಿ. ಆ ಟ್ರಾಕ್ಟರನ್ನು ಮೇನ್‌ಟೇನ್ ಮಾಡುವುದು ಕಷ್ಟ. ಅದರ ಬದಲು ಎತ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಒಂದು ಜೊತೆ ಎತ್ತುಗಳನ್ನು ಕೊಳ್ಳಲು ಒಂದು ಸಾವಿರ, ಒಂದೂವರೆ ಸಾವಿರ ರೂಪಾಯಿ ಕೊಟ್ಟರೆ, ಹತ್ತಾರು ಬಡ ಸಂಸಾರಗಳಿಗೆ ಅನುಕೂಲವಾಗುತ್ತದೆ, ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಬ್ಯಾಂಕ್ ರಾಷ್ಟ್ರೀಕರಣ ಮಾಡಿದ್ದೇವೆ. ಜನಸಾಮಾನ್ಯರು ಬ್ಯಾಂಕಿಗೆ ಹೋದರೆ 25 ರಿಕಾರ್ಡುಗಳನ್ನು ಕೇಳುತ್ತಾರೆ. ಅವರಿಗೆ ಕಾಲಕ್ಕೆ ಸರಿಯಾಗಿ ಹಣ ಸಿಕ್ಕುವುದಿಲ್ಲ. ಸರ್ಕಾರದವರು ಇದಕ್ಕೆ ನಿಗಾ ಕೊಟ್ಟು ಸಕಾಲದಲ್ಲಿ ಅವರಿಗೆ ಸಾಲ ಸಿಕ್ಕುವ ಹಾಗೆ ಮಾಡಬೇಕು. ಬೆಳೆಗಳು ಲಾಸ್ ಆದರೆ ರೈತರಿಗೆ ಯಾವ ತರಹ ಪ್ರೋತ್ಸಾಹ ಸಿಕ್ಕುವುದಿಲ್ಲ. ಕ್ರಾಪ್ ಇನ್‌ಷ್ಯೂರೆನ್ಸ್ ಮಾಡಿ ಜನಗಳ ದುಡ್ಡು ವಾಪಸ್ ಬರುವಂತೆ ಮಾಡಬೇಕು ಪ್ರತಿಯೊಂದು ತಾಲ್ಲೋಕಿನಲ್ಲಿ ಪ್ರತಿ ಹಳ್ಳಿಗಳಲ್ಲಿ ಕ್ಯಾಟಲ್ ಷೆಡ್ ಮತ್ತು ಪೌಲ್ಟ್ರಿ ಫಾರಮ್ಸ್ ಏರ್ಪಾಡು ಮಾಡಿ ರೈತರ ಮಕ್ಕಳಿಗೆ ಶಾಶ್ವತವಾದ ಜೀವನ ನಡೆಸುವ ಹಾಗೆ ಮಾಡಬೇಕು. ಈ ನಿರುದ್ಯೋಗ ದೊಡ್ಡ ಸಮಸ್ಯೆ. ಈ ಸಮಸ್ಯೆ ಮುಂದುವರಿದರೆ ಕ್ರಾಂತಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಇಂದು ನಮ್ಮ ರಾಜ್ಯದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂಬುದು ಇದೆ. ಅದರಿಂದ ರೈತರಿಗೆ ಯಾವ ಉಪಯೋಗವೂ ಆಗುತ್ತಿಲ್ಲ. ಟ್ರಾಕ್ಟರ್ ಕೇಳಲಿ, ಬುಲ್ಡೋಜರ್ ಕೇಳಲಿ ಕೇಳಿದಾಗಲೆಲ್ಲಾ ರಿಪೇರಿಯಾಗುತ್ತಿದೆ ಎಂದು ಹೇಳುತ್ತಾರೆ. ಯಾವಾಗ ರೈತರು ತಮ್ಮ ಉಪಯೋಗಕ್ಕೆ ಬೇಕು ಎಂದು ಕೇಳುತ್ತಾರೋ ಆಗಲೇ ಅವು ಇಲ್ಲವೆಂದು ಹೇಳುತ್ತಾರೆ. ಕೆಟ್ಟಿರುವುದನ್ನು ಕೂಡಲೇ ರಿಪೇರಿ ಮಾಡಿಸಿ ಏತಕ್ಕೆ ಕೊಡಬಾರದು ಎಂದು ಕೇಳುತ್ತೇನೆ. ರಿಪೇರಿ ಮಾಡಲು ಸಾಕಷ್ಟು ಜನ ಮೆಕ್ಯಾನಿಕ್‌ಗಳು ಸಹ ಇಲ್ಲ. ಕಿರ್ಲೋಸ್ಕರ್ ಮತ್ತು ಸಿಂಪಸನ್ ಕಂಪನಿಯ ಟ್ರಾಕ್ಟರ್‌ಗಳು ಏನಾದರೂ ಕೆಟ್ಟು ಹೋದರೆ ಅವುಗಳನ್ನು ರಿಪೇರಿ ಮಾಡಲು ಜಿಲ್ಲಾ ಮಟ್ಟದಲ್ಲಿ ಮೆಕ್ಯಾನಿಕ್‌ಗಳು ಇಲ್ಲದಿರುವುದರಿಂದ ಅವುಗಳನ್ನು ಕಂಪನಿಗೇ ಕಳಿಸಿಕೊಡಬೇಕಾಗಿದೆ. ಈ ರೀತಿ ಕಳಿಸಿ ರಿಪೇರಿ ಮಾಡಿಸಲು ಒಂದು ಸಲಕ್ಕೆ 3 –4 ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಇದನ್ನು ತಪ್ಪಿಸಲು ಪ್ರತಿ ಜಿಲ್ಲೆಯಲ್ಲಿಯೂ ಸಹ ಟ್ರಾಕ್ಟರ್ ರಿಪೇರಿ ಮಾಡುವ ಮೆಕ್ಯಾನಿಕ್‌ಗಳನ್ನು ಇಟ್ಟರೆ ರೈತರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಈಗ ಪ್ರತಿ ತಾಲ್ಲೂಕ್‌ನಲ್ಲಿ ಒಂದೆರಡು ಪಶುವೈದ್ಯಶಾಲೆಗಳಿವೆ. ಇವು ಸಾಕಾಗುವುದಿಲ್ಲವಾದ್ದರಿಂದ ಪ್ರತಿಯೊಂದು ಹಳ್ಳಿಗೂ ಒಂದೊಂದು ಪಶುವೈದ್ಯಶಾಲೆಗಳನ್ನು ಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).—ಸನ್ಮಾನ್ಯ ಅಧ್ಯಕ್ಷಣಿಯವರೇ, ಇಂದು ವ್ಯವಸಾಯ ಮಂತ್ರಿಗಳು, ಅರಣ್ಯ ಮಂತ್ರಿಗಳು ಹಾಗೂ ಪಶುಸಂಗೋಪನಾ ಮಂತ್ರಿಗಳು ಕೇಳಿರತಕ್ಕಂಥ ಈ ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ಹಾಗೂ ಕೆಲವು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ. ಈ ಬೇಡಿಕೆಗಳ ಬಗ್ಗೆ ಈಗ ಎಲ್ಲ ಮಾನ್ಯ ಸದಸ್ಯರು ಸಹ ಮಾತನಾಡುವಾಗ, ಅಧಿಕಾರಿಗಳ ದುರಾಡಳಿತ, ಹಾಗೂ ದೇಶದ ಹಿತದೃಷ್ಟಿಯಿಂದ ಎಲ್ಲ ಅಧಿಕಾರಿಗಳು ಕೆಲಸ ಮಾಡುವುದಿಲ್ಲ ಎನ್ನುವ ವಿಷಯವನ್ನು ಹೇಳಿದರು. ಮುಖ್ಯವಾಗಿ ಅಧಿಕಾರಿಗಳಲ್ಲಿರುವ ಒಂದು ಮನೋಭಾವ ಬದಲಾಣೆಯಾಗಬೇಕಾದುದು ಬಹಳ ಅವಶ್ಯಕ ಇದೆ. ಪಾರ್ಲಿಮೆಂಟಿನಲ್ಲಿ ರಾಜ್ಯಾಂಗದ 24, 25, 26ನೇ ಸೆಕ್ಷನ್‌ಗಳನ್ನು ತಿದ್ದುಪಡಿ ಮಾಡಿದಮೇಲೆ ಪಾರ್ಲಿಮೆಂಟೇ ಸುಪ್ರೀಂ ಎಂದು ತೀರ್ಮಾನವಾದಂತಾಯಿತು. ಈ ಸೆಕ್ಷನ್‌ಗಳನ್ನು ತಿದ್ದುಪಡಿ ಮಾಡಲು ಜನರು ಚುನಾವಣೆಯ ಸಂದರ್ಭದಲ್ಲಿ ಬೆಂಬಲ ಕೊಟ್ಟಿರುವುದರಿಂದ, ಈಗ ಜನರಿಗೆ ಅನುಕೂಲವಾಗುವ ಹಾಗೆ ಅಧಿಕಾರಿಗಳು ನಡೆದುಕೊಳ್ಳಬೇಕು. ಈಗ ಶೇಕಡ 90 ಜನ ಅಧಿಕಾರಿಗಳ ಮನಸ್ಸಿನಲ್ಲಿ ಹೇಗೂ ಸರ್ಕಾರದವರು ಸಂಬಳ ಕೊಡುತ್ತಾರೆ ಎನ್ನುವ ಒಂದು ಮನೋಭಾವ ಬಂದುಬಿಟ್ಟಿದೆ. ಕೆಲಸ ಮಾಡಬೇಕು ಎನ್ನುವ ಮನೋಭಾವವೇ ಇಲ್ಲವಾಗಿದೆ. ಏನಾದರೂ ರೆಮ್ಯೂನರೇಷನ್ ಬಂದರೆ ಕೆಲಸ ಮಾಡೋಣ ಎನ್ನುವ ಮನೋಭಾವ ಏನು ಅಧಿಕಾರಿಗಳಲ್ಲಿ ಇದೆ, ಅದು ಬದಲಾವಣೆಯಾಗಬೇಕು. ಈ ರೀತಿ ಬದಲಾವಣೆಯಾಗದಿದ್ದರೆ ಯಾವ ಅಭಿವೃದ್ಧಿ ಕಾರ್ಯಗಳು ಕಾರ್ಯಗತವಾಗುವುದಿಲ್ಲವೆಂಬ ವಿಷಯವನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಶೇಕಡ 75 ಜನರು ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಈ ಕಾರಣದಿಂದ ಜನಸಾಮಾನ್ಯರ ಹಿತದೃಷ್ಟಿಯನ್ನು ಕಾಯಬೇಕಾದರೆ, ವ್ಯವಸಾಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳಿಗೆ ಹೆಚ್ಚಿನ ಅದರಲ್ಲೂ ಮೊದಲು ಆದ್ಯತೆ

(ಶ್ರೀ ಎಚ್. ಬಿ. ಕೆಂಚೇಗೌಡ)

ಕೊಡಬೇಕೆಂದು ಹೇಳುತ್ತೇನೆ. ಮತ್ತು ಈ ಇಲಾಖೆಗಳ ಬಗ್ಗೆ ಸರ್ಕಾರದ ಈಗಿನ ಧ್ಯೇಯ ಮತ್ತು ಧೋರಣೆಗಳೇನಿವೆ ಅವುಗಳನ್ನು ಇನ್ನೂ ಉತ್ತಮಪಡಿಸಬೇಕೆಂದು ಹೇಳುತ್ತೇನೆ. ಕಳೆದ 25 ವರ್ಷಗಳಿಂದ ವ್ಯವಸಾಯದಲ್ಲಿ ಎಷ್ಟು ಪ್ರಗತಿಯಾಗಬೇಕಾಗಿತ್ತೋ ಅಷ್ಟು ಪ್ರಗತಿಯಾಗಿಲ್ಲವೆಂದು ಹೇಳುತ್ತೇನೆ. ವ್ಯವಸಾಯ ಇಲಾಖೆಯವರು ಹಸಿರು ಕ್ರಾಂತಿಯಾಗಿದೆ, ಹೆಚ್ಚು ಹೆಚ್ಚು ಬೆಳೆಗಳನ್ನು ಬೆಳೆಯಲಾಗಿದೆ ಎಂದು ಏನು ಅಂಕಿಅಂಶಗಳನ್ನು ಕೊಡುತ್ತಿದ್ದಾರೆ, ಅದನ್ನು ನಂಬುವುದಕ್ಕಾಗುವುದಿಲ್ಲ. ಅಧಿಕಾರಿಗಳು ಕೇವಲ ಕಛೇರಿಗಳಲ್ಲಿ ಕುಳಿತು ರಿಪೋರ್ಟ್ ತಯಾರಿಸುತ್ತಿದ್ದಾರೆಯೇ ಹೊರತು ನಿಜವಾದ ಪ್ರಗತಿ ಏನಾಗಿದೆ ಎಂಬುದನ್ನು ಅವರು ತಿಳಿಸುತ್ತಿಲ್ಲ. ಈ ಇಲಾಖೆಯಲ್ಲಿ ಅಧಿಕಾರಿಗಳಿಗೆ ಸಂಬಳ ಕೊಡುವುದನ್ನು ಒಂದು ಬಿಟ್ಟರೆ ಮತ್ಯಾವ ಪ್ರಗತಿಯೂ ಆಗಿಲ್ಲ ಎಂದು ಹೇಳುವುದರಲ್ಲಿ ಅನುಮಾನವಿಲ್ಲ. ನಿಜವಾಗಿಯೂ ವ್ಯವಸಾಯದಲ್ಲಿ ಪ್ರಗತಿಯಾಗಬೇಕಾದರೆ, ರೈತರಿಗೆ ತಾಂತ್ರಿಕ ಜ್ಞಾನ ದೊರೆಯಬೇಕಾದರೆ, ಅಧಿಕಾರಿಗಳು ಹಳ್ಳಿಗಳಲ್ಲಿರುವ ಜಮೀನುಗಳಲ್ಲಿ ಪ್ರಯೋಗ ಶಾಲೆಗಳನ್ನು ನಡೆಸಬೇಕೇ ವಿನಃ ಕೇವಲ ಪಟ್ಟಣಗಳಲ್ಲಿ ಪ್ರಯೋಗ ಶಾಲೆಗಳನ್ನು ನಡೆಸಿದರೆ, ಅಥವಾ ಬೆಂಗಳೂರು, ಮೈಸೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕಾನ್ಫರೆನ್ಸ್ ನಡೆಸುವುದರಿಂದ ನಾವು ನಿರೀಕ್ಷಿಸಿದಷ್ಟು ವ್ಯವಸಾಯದ ಪ್ರಗತಿಯಾಗುವುದಿಲ್ಲವೆಂದು ಹೇಳುತ್ತೇನೆ. ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ, ತಾಲ್ಲೂಕ್ ಮಟ್ಟದಲ್ಲಿರುವ ಅಸಿಸ್ಟೆಂಟ್ ಡೈರೆಕ್ಟರ್ ಅವರು ಏನಿದ್ದಾರೆ, ಅವರಿಗೆ 25—50 ಎಕರೆಗಳಷ್ಟು ಜಮೀನನ್ನು ಕೊಟ್ಟು ಆ ಜಮೀನಿನಲ್ಲಿ ಪ್ರಯೋಗ ನಡೆಸುವುದಕ್ಕೆ ಏರ್ಪಾಡು ಮಾಡಬೇಕು. ಈ ರೀತಿ ಮಾಡಿದರೆ ಆಯಾ ಕ್ಷೇತ್ರದ ಜಮೀನುಗಳಲ್ಲಿ ಏನು ಗುಣವಿದೆ, ಏನು ಬೆಳೆದರೆ ಹೆಚ್ಚಿನ ಫಲ ದೊರಕುತ್ತದೆ ಎಂಬುದನ್ನು ರೈತರಿಗೆ ತಿಳಿಸಲು ಅನುಕೂಲವಾಗುತ್ತದೆ. ಈ ರೀತಿಯಿಂದ ರೈತರಿಗೆ ಜ್ಞಾನ ದೊರೆಯಬೇಕಾಗಿದೆ. ಆದರೆ ಈ ರೀತಿಯ ಜ್ಞಾನ ವ್ಯವಸಾಯವನ್ನು ಮಾಡತಕ್ಕಂಥ ರೈತರಿಗೆ ದೊರೆಯುತ್ತಿಲ್ಲ. ಈಗ ನಮ್ಮ ರಾಜ್ಯದಲ್ಲಿ ಒಟ್ಟು ನಾಲ್ಕು ಡಿವಿಜನ್‌ಗಳಿವೆ, ಈ ಡಿವಿಜನ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ತಾಲ್ಲೂಕ್ ಮಟ್ಟದಲ್ಲಿ ಅನೇಕ ಜನ ಅಸಿಸ್ಟೆಂಟ್ ಡೈರೆಕ್ಟರ್‌ಗಳು, ಡೆಪ್ಯೂಟಿ ಡೈರೆಕ್ಟರ್‌ಗಳು, ಜಾಯಿಂಟ್ ಡೈರೆಕ್ಟರ್‌ಗಳು ಇದ್ದಾರೆ. ಇದರ ಜೊತೆಗೆ ರಾಜ್ಯಮಟ್ಟದಲ್ಲಿ ಡೈರೆಕ್ಟರ್ ಮತ್ತು ಅವರ ಸಿಬ್ಬಂದಿ ವರ್ಗದವರು ಇದ್ದಾರೆ. ಇಷ್ಟೊಂದು ಅಧಿಕಾರ ವರ್ಗದವರು ಈ ಇಲಾಖೆಯಲ್ಲಿ ಇದ್ದರೂ ಸಹ ವ್ಯವಸಾಯದಲ್ಲಿ ಯಾವ ಒಂದು ಪ್ರಗತಿಯೂ ಸಾಧನೆಯಾಗಿಲ್ಲವೆಂದು ಹೇಳುತ್ತೇನೆ. ಈ ಒಂದು ಅನುಭವವನ್ನು ನಾನು ತಾಲ್ಲೂಕ್ ಬೋರ್ಡಿನ ಅಧ್ಯಕ್ಷನಾಗಿ 5 ವರ್ಷ ಕೆಲಸ ಮಾಡಿ ತಿಳಿದುಕೊಂಡು ಹೇಳುತ್ತಿದ್ದೇನೆ. ಇದಕ್ಕೆ ಉದಾಹರಣೆಯಾಗಿ ನನ್ನ ಕ್ಷೇತ್ರವನ್ನೇ ತೆಗೆದುಕೊಂಡರೆ, ನನ್ನ ತಾಲ್ಲೂಕ್‌ನಲ್ಲಿ ಹೆಚ್ಚಾಗಿ ಭತ್ತವನ್ನು ಬೆಳೆಯಲಾಗುತ್ತಿದೆ. ಈ ಭಾಗದಲ್ಲಿ ಹೈಬ್ರಿಡ್ ವೆರೈಟೀಸ್ ಜವಾರನ್ನು ಬೆಳೆಯಲಾಯಿತು. ಆದರೆ ಅದು ಸರಿಯಾಗಿ ಬೆಳೆಯುತ್ತಿಲ್ಲ. ರೈತರು ಹೈಬ್ರಿಡ್ ವೆರೈಟೀಸ್ ಜವಾರನ್ನು ಬೆಳೆಯುವುದಕ್ಕೆ ಏನು ಖರ್ಚು ಮಾಡುತ್ತಾರೋ ಆ ಖರ್ಚನ್ನು ಕಳೆದು ಬರತಕ್ಕಂಥ ಆದಾಯವನ್ನು ಹೋಲಿಸಿ ನೋಡಿದರೆ, ಹಿಂದಿನ ಹಳೆಯ ಪದ್ಧತಿಯೇ ವಾಸಿ ಎನ್ನುವ ಅಭಿಪ್ರಾಯಕ್ಕೆ ರೈತರು ಬಂದಿದ್ದಾರೆ. ಈಗಿನ ಆಧುನಿಕ ಪದ್ಧತಿಯಿಂದ ರೈತರಿಗೆ ಲಾಭವಾಗುತ್ತಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಲಾಭದಾಯಕವಾಗುವಂತೆ ಮಾಡಲು ವ್ಯವಸಾಯ ಇಲಾಖೆಯ ಅಧಿಕಾರಿಗಳು ಯಾವ ವಿಧಾನವನ್ನೂ ಸಹ ಕಂಡುಹಿಡಿದಿಲ್ಲವೆಂದು ಹೇಳಬಯಸುತ್ತೇನೆ. ಒಬ್ಬ ರೈತ ಒಂದು ಎಕರೆಯಲ್ಲಿ ಬೆಳೆ ತೆಗೆಯುವುದಕ್ಕೆ ಎಷ್ಟು ಖರ್ಚು ಮಾಡುತ್ತಾನೆ. ಅದರಿಂದ ಎಷ್ಟು ಆದಾಯ ಖರ್ಚು ಕಳೆದು ಬರುತ್ತದೆ ಎಂದು ಯಾರಾದರೂ ಅಧಿಕಾರಿಗಳು ಹೇಳುವುದಕ್ಕೆ ಶಕ್ತಿ ಇದೆಯೇ ಎಂದು ಕೇಳುತ್ತೇನೆ. ಆದ್ದರಿಂದ ರೈತನ ಹಿಂದಿನ ಆರ್ಥಿಕ ಪರಿಸ್ಥಿತಿ ಏನಿತ್ತು, ಈಗ ಯಾವ ರೀತಿ ಇದೆ ಎಂಬುದನ್ನು ಕಂಡುಹಿಡಿಯಲು ಒಂದು ಕಮೀಷನನ್ನು ಅಪಾಯಿಂಟ್ ಮಾಡಬೇಕೆಂದು, ಇದರ ಕಡೆಗೆ ಮಾನ್ಯ ಮಂತ್ರಿಗಳು ಹೆಚ್ಚಿನ ನಿಗಾ ಕೊಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಸಾಧಾರಣವಾಗಿ ತಮ್ಮ ಮೂಲಕ ಎಲ್ಲ ಮಾನ್ಯ ಸದಸ್ಯರಿಗೂ ಒಂದು ಅಂಶವನ್ನು ನಮ್ರತೆಯಿಂದ ಸೂಚಿಸಬಯಸುತ್ತೇನೆ. ಏನೆಂದರೆ ಸರ್ಕಾರದ ಎಲ್ಲ ವ್ಯವಸ್ಥೆಗಳನ್ನು ಕೇವಲ ಸರ್ಕಾರೀ ಅಧಿಕಾರಿಗಳು ಮಾಡುತ್ತಾರೆಂದು ಮಾನ್ಯ ಸದಸ್ಯರು ತಿಳಿದುಕೊಳ್ಳುತ್ತಾರೆ. ಅದು ತಪ್ಪು ಭಾವನೆ. ಪ್ರತಿಯೊಬ್ಬ ಸದಸ್ಯರೂ ಸಹಾಯ ಮಾಡಿದರೆ ಮಾತ್ರ ಈ ಇಲಾಖೆ ಮುಂದುವರೆಯುತ್ತದೆ. ಸುದೈವದಿಂದ ವಕ್ಕಲುತನ

ಶಾಖೆಗೆ ವಕ್ಕಲುತನದಲ್ಲಿ ಅನುಭವವಿರುವವರು ಮಂತ್ರಿಗಳಾಗಿ ಬಂದಿದ್ದಾರೆ. ಅನ್ನದ ಸಮಸ್ಯೆಯನ್ನು ಮುಖ್ಯವಾಗಿ ನಾವು ಬಿಡಿಸಬೇಕಾಗಿದೆ. ಏಕೆಂದರೆ ಮನುಷ್ಯರು ಅರಿವೆ ಇಲ್ಲದಿದ್ದರೆ ಬದುಕಬಹುದು, ವಿದ್ಯೆ ಇಲ್ಲದಿದ್ದರೆ ಮುಂದೆ ಹೋಗದೆ ಹಿಂದೆ ಉಳಿಯಬಹುದು. ಆದರೆ ಮನುಷ್ಯನಿಗೆ ಅನ್ನ ಇಲ್ಲದಿದ್ದರೆ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ. ಈ ದೃಷ್ಟಿಯಿಂದ ವ್ಯವಸಾಯಕ್ಕೆ ಗೊಬ್ಬರದ ಅವಶ್ಯಕತೆ ಬಹಳ ಮುಖ್ಯವಾದುದೆಂದು ನನ್ನ ಅಭಿಪ್ರಾಯ. ಇನ್ನು ಮುಂದೆಯೂ ಸಹ ಜಮೀನುಗಳಿಗೆ ಸಗಣಿ ಮತ್ತು ಗೊಬ್ಬರವನ್ನು ಹಾಕುತ್ತಾ ಹೋದರೆ ನಮ್ಮ ಜಮೀನುಗಳು ಇನ್ನು 7–8 ವರ್ಷಗಳಲ್ಲಿ ಸೀಮೆಂಟ್ ತರಹ ಬಂಡೆಗಳಾಗಿಬಿಟ್ಟು ಯಾವುದನ್ನೂ ಬೆಳೆಯುವುದಕ್ಕೆ ಸಾಧ್ಯವಾಗದೇ ಹೋಗಬಹುದು. ವ್ಯವಸಾಯ ಇಲಾಖೆಗಾಗಿ ಬಡ್ಜೆಟ್‌ನಲ್ಲಿ ಎಷ್ಟೇ ರೊಕ್ಕ ಇಟ್ಟಿರಲ್ಲಿ ಅದು ಮುಖ್ಯವಾದ ವಿಷಯವಲ್ಲ, ಯಾವ ಯಾವ ಜಮೀನಿನಲ್ಲಿ ಯಾವ ಯಾವ ತರಹದ ಗೊಬ್ಬರ ಉಪಯೋಗಿಸಬೇಕು ಎಂಬ ಬಗ್ಗೆ ರೈತರಿಗೆ ಟೆಕ್ನಿಕಲ್ ಅಡ್ವೈಸ್ ಕೊಟ್ಟರೆ ರೈತರಿಗೆ ಉಪಕಾರ ಮಾಡಿದಂತಾಗುತ್ತದೆ. ಆದ್ದರಿಂದ ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ಯಾವ ಯಾವ ಗೊಬ್ಬರ ಹಾಕಬೇಕು ಎಂಬ ಬಗ್ಗೆ ಮೊದಲು ಸರ್ವೆ ನಡೆಸಬೇಕು. ಈಗ ಹಳ್ಳಿಯ ಪದ್ಧತಿಯಲ್ಲಿ ಒಮ್ಮೆ ಪೀಕ್ ಬಂದಮೇಲೆ ಯಾವ ರೀತಿ ಗೊಬ್ಬರ ಹಾಕಬೇಕು ಎಂಬುದು ರೈತರಿಗೆ ಗೊತ್ತಿರುವುದಿಲ್ಲ. ಇದರಿಂದ ಬೇರಿನ ಸಮೇತ ಬೆಳೆ ನಷ್ಟವಾಗುವ ಸಂದರ್ಭಗಳಿವೆ. ಅನೇಕ ಸಲ ರೈತರು ಸರಿಯಾಗಿ ಗೊಬ್ಬರವನ್ನು ಉಪಯೋಗ ಮಾಡದೆ ಸಮುದ್ರದಷ್ಟು ಬೆಳೆ ನಾಶವಾಗಿದೆ.

ಮಾನ್ಯ ಸಭಾಧ್ಯಕ್ಷಿಣಿಯವರೇ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ನೂರಕ್ಕೆ ಎಂಭತ್ತರಷ್ಟು ಜನರು ಒಕ್ಕಲುತನವನ್ನೇ ಅವಲಂಬಿಸಿರುತ್ತಾರೆ. ಆದ್ದರಿಂದ ರಾಜ್ಯದ ಎಲ್ಲಾ ಖಾತೆಗಳಲ್ಲಿಯೂ ಒಕ್ಕಲತನ ಖಾತೆಯೇ ಮುಖ್ಯವಾದುದು. ಈ ಖಾತೆಗೆ ರೈತರಾದ ಶ್ರೀ ಕೆ. ಎಚ್. ಪಾಟೀಲರು ಮಂತ್ರಿಗಳಾಗಿರುವುದು ಆನಂದದ ಸಂಗತಿ.

ಮಾನವನು ಅರಿವೆ ಇಲ್ಲದಿದ್ದರೆ ಬದುಕಬಹುದು. ವಿದ್ಯೆ ಸಿಗದಿದ್ದರೂ ಹಿಂದೆ ಬೀಳಬಹುದು. ಆದರೆ ಆಹಾರವಿಲ್ಲದಿದ್ದರೆ ಮನುಷ್ಯನು ಬದುಕಲಿಕ್ಕೇ ಸಾಧ್ಯವಿಲ್ಲ. ಆಹಾರ ನಿರ್ಮಾಣಕ್ಕೆ ಆಧಾರ ಭೂಮಿಯು. ಆದ್ದರಿಂದ ಭೂಸುಧಾರಣೆಯೇ ದೇಶದ ಸುಧಾರಣೆಯು.

ಭೂಸುಧಾರಣೆಯಲ್ಲಿ ಮೊದಲನೆಯ ಕೆಲಸವೆಂದರೆ ಕರಕಿಯನ್ನು ತೆಗೆದು ಭೂಮಿಯನ್ನು ಸ್ವಚ್ಛ ಮಾಡುವುದು. ಕರಕೆಯುಳ್ಳ ಭೂಮಿಗೆ ಒಡ್ಡು ಹಾಕಿದರೆ ಮತ್ತಷ್ಟು ಅಪಾಯ. ಆದ್ದರಿಂದ ಸರ್ಕಾರದವರು ರೈತರಿಂದ ಅರ್ಜಿಗಳನ್ನು ಅಪೇಕ್ಷಿಸದೆ ತಾವಾಗಿಯೇ ಮುಂದೆ ಬಂದು ಸರ್ಕಾರಿ ಟ್ರಾಕ್ಟರುಗಳಿಂದ ರೈತರ ಭೂಮಿಯನ್ನು ಸ್ವಚ್ಛಮಾಡಿಸಿಕೊಡಬೇಕು. ಟ್ರಾಕ್ಟರು ಬಗ್ಗೆ ಕೊಡಬೇಕಾದ ಬಾಡಿಗೆ ಹಣವನ್ನು ಸಾಲರೂಪದಿಂದ ಮಂಜೂರು ಮಾಡಿ ಕೊಡಬೇಕು.

ಅನಂತರ ಬಂಡಿಂಗ್. ಹರಿದುಹೋಗುವ ಮಣ್ಣನ್ನು ತಡೆಹಿಡಿಯದಿದ್ದರೆ ಭೂಮಿಯ ಮೇಲ್ ಭಾಗದ ಫಲವತ್ತಾದ ಮಣ್ಣು ಹರಿದುಹೋಗಿ ಭೂಮಿಯು ನಿಸ್ಸತ್ವವಾಗಿ ಬೆಳೆ ಬೆಳೆಯಲಾರದ ಬಿಜಾಪುರ ಜಿಲ್ಲೆಗೆ ಬಂಡಿಂಗ್ ಖಾತೆಯ ಉಪಯೋಗ ಬಹಳವಾಗಿದೆ. ಮತ್ತು ಬಂಡಿಂಗ್ ಖಾತೆಯವರು ರೈತರಿಗಾಗಿ ಬಹಳ ಕಾಳಜಿ ತೆಗೆದುಕೊಳ್ಳುತ್ತಾರೆ.

ತದನಂತರ ಸಮಪಾತಳಿ—ಹೆಚ್ಚು ಬೆಳೆ ಬೆಳೆಯಬೇಕಾದರೆ ಸ್ವಲ್ಪ ಮಳೆ ಬಂದರೂ ನೀರು ಉಂಡು ಹಸಿಯಾಗಲು ಭೂಮಿ ಸಮಪಾತಳಿ ಇರುವುದು ಅತಿ ಅವಶ್ಯ. ಆದ್ದರಿಂದ ಕರಿಕೆ ತೆಗೆಯುವುದು ಒಡ್ಡು ಹಾಕುವುದು ಮತ್ತು ಸಮಪಾತಳಿ ಮಾಡುವುದು ಭೂಸುಧಾರಣೆಯ ಮಹತ್ವದ ಘಟಕಗಳು.

ನೀರಾವರಿ ಅವಶ್ಯಕತೆ - ಭೂಮಿ ಎಷ್ಟೇ ಫಲವತ್ತಾಗಿದ್ದರೂ ಬಿಜಾಪುರ ಜಿಲ್ಲೆಯಂತೆ ಕಡಿಮೆ ಮಳೆ ಬರುವ ಭೂಮಿಗೆ ನೀರಾವರಿ ನೆರವು. ಅತಿ ಅವಶ್ಯ. ನೀರಿನ ನೆರವು ಇರದ ಪರಿಣಾಮವಾಗಿಯೇ ಬಿಜಾಪುರ ಜಿಲ್ಲೆಯು ಅದರಲ್ಲೂ ಸಿಂದಗಿ, ಇಂಡಿ ತಾಲ್ಲೂಕುಗಳು ಉತ್ತಮ ಭೂಮಿ ಇದ್ದರೂ ಆಹಾರ ಸಮಸ್ಯೆಯನ್ನು ಸದಾ ಎದುರಿಸುತ್ತಲೇ ಇರುತ್ತವೆ.

ಬಿಜಾಪುರ ಜಿಲ್ಲೆಗೆ ಕರ್ನಾಟಕ ಸರ್ಕಾರವು ಕೃಷ್ಣಾ ಮೇಲ್ದಂಡೆಯ ಯೋಜನೆ, ದೋಣಿ ನದಿಯ ಯೋಜನೆ, ಪಸರುವ ಕೆರೆಗಳು (ಪರ್‌ಕೋಲೇಷನ್ ಟ್ಯಾಂಕ್) ಸಣ್ಣ ನೀರಾವರಿಗಳು ಮತ್ತು ನೀರಾವರಿ ಬಾವಿಗಳನ್ನು ನಮ್ಮ ಭಾಗದಲ್ಲಿ ಮಾಡಿಸಿಕೊಡಬೇಕು. ಮುಖ್ಯವಾಗಿ ಭೀಮಾ ನದಿ ದಂಡೆಗುಂಟಾ ಇರುವ ಸಿಂದಗಿ ಇಂಡಿ ತಾಲ್ಲೂಕುಗಳ ಎಲ್ಲ ಊರುಗಳಿಗೂ ಲಿಫ್ಟ್ ಇರಿಗೇಷನ್ ಮಾಡಿಸಿಕೊಡಬೇಕು. ರೈತರಾದರೂ ಯಾವಾಗಲೂ ಕೇವಲ ಸರ್ಕಾರದ ಮೇಲೆ ಅವಲಂಬಿಸಿ ಕೈಕಟ್ಟಿಕೊಂಡು ಕೊಡದೆ ತಮ್ಮ ಭೂಮಿಯನ್ನು ಸುಧಾರಿಸಿಕೊಂಡು ನೀರಾವರಿ ಬಾವಿಗಳನ್ನು ಮಾಡಿಕೊಂಡು ಆಹಾರದ ದೃಷ್ಟಿಯಿಂದ ಸ್ವಾವಲಂಬಿಗಳಾಗಬೇಕು. ಇಂದು ನಮ್ಮ ಜನತೆಗೆ ಪ್ರತಿ ಮಾತಿಗೂ ಸರ್ಕಾರದ ಸಾಲದ ಕಡೆಗೆ ನೋಡುತ್ತಾ ಕೂಡುವ ಕೆಟ್ಟ ಚಟ ಬಿದ್ದಿದೆ.

(ಶ್ರೀ ಎಸ್. ವೈ. ಪಾಟೀಲ್)

ಗೊಬ್ಬರ ವಿಷಯ—ಇತ್ತೀಚೆಗೆ ರೈತರಿಗೆ ಗೊಬ್ಬರ ಹಾಕುವ ಪ್ರವೃತ್ತಿ ಸಾಕಷ್ಟು ಬೆಳೆದಿದೆ. ಆದರೆ ಯಾವ ಯಾವ ಗೊಬ್ಬರ ಯಾವ ಯಾವ ಪ್ರಮಾಣದಲ್ಲಿ, ಯಾವ ಯಾವ ಸಮಯದಲ್ಲಿ ಎಷ್ಟೆಷ್ಟು ಸಲ ಹಾಕಬೇಕೆನ್ನುವ ಜ್ಞಾನವಿಲ್ಲ.

ಸಗಣಿ ಗೊಬ್ಬರ ಹಾಕದೆ ಕೇವಲ ಅಮೋನಿಯ ಸಲ್ಫೇಟ್, ಯೂರಿಯಾ ಸೂಪರ್ ಫಾಸ್ಫೇಟ್ ಇತ್ಯಾದಿ ಆಧುನಿಕ ಗೊಬ್ಬರ ಹಾಕುತ್ತಾ ಹೋದರೆ 10-15 ವರ್ಷಗಳಲ್ಲಿ ಭೂಮಿಯು ಕಲ್ಲುಬಂಡೆಯಂತೆ ಆಗುವುದು ಮುಂದೆ ಬೆಳೆಯುವುದೇ ಇಲ್ಲ. ಆದ್ದರಿಂದ ಸಗಣಿ ಗೊಬ್ಬರ ಹಾಕದೆ ಆಧುನಿಕ ಗೊಬ್ಬರ ಹಾಕಬಾರದು. ಸಗಣಿ ಗೊಬ್ಬರ ನಿರ್ಮಾಣ ಮಾಡಲು ದನಗಳು ಬೇಕು. ಬಡವರಿಗೆ ದನಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಪಶುಸಂಗೋಪನಾ ಶಾಖೆಯವರು 10 ರೂಪಾಯಿಗಳಿಗಿಂತ ಕಡಿಮೆ ಕಂದಾಯ ಕೊಡುವ ರೈತರಿಗೆಲ್ಲಾ ಒಕ್ಕಲುತನ ಖಾತೆಯಿಂದ ಒಂದೊಂದು ಉತ್ತಮ ಆಕಳನ್ನು 20 ಕಂತಿನಿಂದ ಸಾಲರೂಪವಾಗಿ ಕೊಡಿಸಬೇಕು. ಇದರಿಂದ ಗೊಬ್ಬರದ ಸಹಾಯವಾಗುವುದಲ್ಲದೆ ರೈತನಿಗೆ ಹೈನದ ಉಪದಂಥೆಯಿಂದ ಆರ್ಥಿಕ ನೆರವು ಸಿಕ್ಕುತ್ತದೆ.

ಸರ್ಕಾರದವರು ಪ್ರತಿ ತಾಲ್ಲೂಕಿಗೊಂದು ಅಲ್ಲಿ ಸಿಗುವ ಕಸಕಡ್ಡಿಯನ್ನೂ, ತೊಪ್ಪಲವನ್ನೂ (ಸೊಪ್ಪನ್ನು) ಉಪಯೋಗಿಸಿ ಗೊಬ್ಬರ ತಯಾರುಮಾಡುವ ಕಾರ್ಖಾನೆಯನ್ನು ನಿರ್ಮಾಣ ಮಾಡಬೇಕು. ಸಗಣಿ ಗೊಬ್ಬರ ಸಿಗದಿದ್ದಲ್ಲಿ ಹಿಂದಿನ ಹಿರಿಯರಂತೆ ಬದಲಾವಣೆ (ಕಾಲ್ಗೈ ಮಾಡುವ) ಪದ್ಧತಿಯನ್ನು ಅನುಸರಿಸಬೇಕು. ಸಗಣಿ ಗೊಬ್ಬರವಿಲ್ಲದೆ ಕೇವಲ ಸರ್ಕಾರಿ ಗೊಬ್ಬರವನ್ನು ಹಾಕುವುದು ಸರ್ವಥಾ ಸರಿಯಲ್ಲ. ಹಾಕಲೇಬಾರದು.

ಉತ್ತಮ ಬೀಜ—ಅಧಿಕಾರಿಗಳ ತಪ್ಪು ಸಲಹೆಗಳಿಂದ ಉತ್ತಮ ಬೀಜ ಸಿಗಲಾರದೆ ಅವರು ಹೇಳಿದ ದೋಷಯುಕ್ತ ಜೋಳದ ಬೀಜವನ್ನು ಬಿತ್ತಿ, ಒಂದು ವರ್ಷ ಬೆಳೆಬಾರದೆ ಅಪಾರ ಲುಕ್ಸಾನು ಆದದ್ದು ನನ್ನ ಸ್ವಂತ ಅನುಭವದ ಮಾತು. ಆದ್ದರಿಂದ ಅಧಿಕಾರಿಗಳು ಯಾರ ಆಶೆ ಮೂರವತ್ತುಗಳಿಗೆ ಬದ್ಧ ಕೆಟ್ಟ ಬೀಜವನ್ನು ಶಿಫಾರಸ್ಸು ಮಾಡುವ ಪಾಪ ಕಾರ್ಯವನ್ನು ಎಂದೂ ಮಾಡಬಾರದು ಎಂದು ನಾನು ಬೇಡಿಕೊಳ್ಳುತ್ತೇನೆ. ಭಾರತ ಸರ್ಕಾರದ ಪ್ರತಿನಿಧಿಗಳು ಸ್ವಾತಂತ್ರ್ಯವಾದಂದಿನಿಂದಲೂ ಇಂದಿನವರೆಗೂ ಹೊರದೇಶಕ್ಕೆ ಆಹಾರದ ಸಲುವಾಗಿ ಬಿಕ್ಷೆ ಬೇಡಲು ಮಾಡುವ ಪ್ರವಾಸದ ಸಂಗತಿ ಮತ್ತು ಆ ಬಗ್ಗೆ ಪರದೇಶಗಳೊಡನೆ ಮಾಡಿಕೊಳ್ಳುವ ಒಪ್ಪಂದ ಪೇಪರಿನಲ್ಲಿ ಓದಿದಾಗ ಸ್ವಾಭಿಮಾನಿ ಭಾರತೀಯರು ತಲೆತಗ್ಗಿಸಬೇಕಾಗುತ್ತದೆ.

ಸುಧಾರಣೆಯಾದ ಭೂಮಿ, ನೀರಿನ ಅನುಕೂಲತೆ ಉತ್ತಮ ಗೊಬ್ಬರ ಸಹಾಯ ಸಿಕ್ಕಿದರೆ ರೈತರು ಈ ದೇಶಕ್ಕೆ ಸಾಕಾಗುವಷ್ಟು ಆಹಾರವನ್ನು ನಿರ್ಮಾಣ ಮಾಡಬಲ್ಲರು. ಆಮೇಲೆ ಹೊರ ದೇಶಕ್ಕೆ ಆಹಾರಕ್ಕಾಗಿ ಕೈ ಒಡ್ಡುವ ಪ್ರಸಂಗ ತಪ್ಪುತ್ತದೆ.

ಈ ಡಿಮ್ಯಾಂಡುಗಳಿಂದ ನನ್ನ ಜಿಲ್ಲೆಯ ಉದ್ಧಾರವಾಗಲಾರದು. ಈಗ ಸಮಯವಿಲ್ಲದ್ದರಿಂದ ಒಂದೇ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಮಂತ್ರಿ ಶ್ರೀ ಕೆ. ಎಚ್. ಪಾಟೀಲರು ಅಸೆಂಬ್ಲಿ ಮುಗಿದನಂತರ ಸಹಕಾರ ಮತ್ತು ಪಶುಸಂಗೋಪನ ಮಂತ್ರಿಗಳೊಂದಿಗೆ ಬಿಜಾಪುರಕ್ಕೆ ಹೋಗಿ (ಆರ್) ಕಾಂಗ್ರೆಸ್ (ಒ) ಕಾಂಗ್ರೆಸ್ ಎಂದು ಬೇಧ ಮಾಡದೆ ಎಲ್ಲಾ ಎಂ.ಎಲ್.ಎ. ಗಳನ್ನೂ ಅನುಭವಿಕ ರೈತರನ್ನೂ ಕರೆಸಿ ಚರ್ಚಿಸಿ ಹಿಂದುಳಿದ ಬಿಜಾಪುರ ಜಿಲ್ಲೆಯ ಅದರಲ್ಲಿಯೂ ದುರ್ದೈವಿ ಸಿಂದಗಿ, ಇಂಡಿ ತಾಲ್ಲೂಕುಗಳ ರೈತರ ಸಮಸ್ಯೆ ಬಿಡಿಸಲು ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ.

ಡೈರಿ ಸ್ಕೀಮು—ಇದರಿಂದ ಬಿಜಾಪುರ ಜಿಲ್ಲೆಗೆ ಎಳ್ಳಷ್ಟೂ ಉಪಯೋಗವಾಗಿಲ್ಲ. ಇದರ ಉಪಯೋಗ ನಮಗೆ ಮಾಡಿಕೊಡಿರಿ. ಇಲ್ಲವೇ ಈ ಖಾತೆ ಬಂದುಮಾಡಿರಿ. ಹೈನದ ಉದ್ಯೋಗಕ್ಕೆ ಬಿಜಾಪುರ ಜಿಲ್ಲೆಯಲ್ಲಿ ಸಾಕಷ್ಟು ಅವಕಾಶವಿದೆ. ಆದ್ದರಿಂದ ಇಂಡಿ, ಸಿಂದಗಿ ತಾಲ್ಲೂಕುಗಳ ಸಲುವಾಗಿ ಈ ಹೈನದ ಉದ್ಯೋಗದ ಬಗ್ಗೆ ಒಂದು ಸ್ಪೆಷಲ್ ಯೋಜನೆ ಮಾಡಿ ನಿರುದ್ಯೋಗ ಸಮಸ್ಯೆಯನ್ನು ಬಿಡಿಸಬೇಕು. ಸರ್ಕಾರದ ಕಾಗದ ಪತ್ರದಲ್ಲಿ ಸ್ಕೀಮುಗಳ ಸಂಖ್ಯೆ ಬಹಳ, ಆದರೆ ಅವುಗಳಲ್ಲಿ ಕೃತಿಯಲ್ಲಿ ಬರುವುದು ಕಡಿಮೆ. ಪ್ರತಿ ಊರಿಗೂ ಕನಿಷ್ಟ ನೂರಾರು ಜನಗಳಿಗಾದರೂ ಹೈನದ ಉದ್ಯೋಗ ಒದಗಿಸಿಕೊಡಬೇಕು.

ಕೇವಲ ಅಧಿಕಾರಿಗಳಿಂದಲೇ ಜನತೆಯ ಕಲ್ಯಾಣವಾಗಲಾರದು. ಅವರೊಂದಿಗೆ ಸಾರ್ವಜನಿಕರೂ ಕೂಡಿ ಕೆಲಸ ಮಾಡಬೇಕು. ಅಧಿಕಾರಿಗಳು ಲಂಚಕೋರರೆಂದು ಟೀಕಿಸಿದರೆ ಆಗದು. ಅವರು ಲಂಚತಿನ್ನುವುದನ್ನು ನಿಮ್ಮ ಟೀಕೆಗೆ ಅಂಜಿ ಬಿಡಲಾರರು. ದೇವರು, ನೀತಿಗಳ ಭಯವಿದ್ದರೆ ಮಾತ್ರ ಸಾಧ್ಯ. ಲಂಚ ತಿನ್ನುವುದು ಎಂದೂ ಬಂದಾಗಲಾರದು. ಕೊಡುವುದು ಬಂದಾಗಬೇಕು.

ಲಂಚಕೋರರನ್ನು ಟೀಕಿಸುವುದರಿಂದ ಮತಷ್ಟು ತೊಂದರೆ ಕೊಡುವುದು ಆಗುತ್ತದೆ. ಆದ್ದರಿಂದ ಸಾಧ್ಯವಿದ್ದರೆ ಯುಕ್ತಿ ಪ್ರಯುಕ್ತಿಗಳಿಂದ ಲಂಚಕೋರರನ್ನು ಹಿಡಿಯಬೇಕು. ಮತ್ತು ಅವರಿಗೆ ತಕ್ಕ ಶಾಸನ ಮಾಡಿಸಬೇಕು. ಮುಂದಿಗೆ ಬೋಧಿಸುವವರು ತಮ್ಮ ಆತ್ಮ ನಿರೀಕ್ಷಣೆಯನ್ನು ಮೊದಲು ಮಾಡಿಕೊಳ್ಳಬೇಕು.

ಕಳ್ಳಸಾಗಾಣಿಕೆಯ ಗಂಧದ ಮರಗಳನ್ನು ಹಿಡಿದ ಬಗ್ಗೆ ಶ್ರೀ ಕೆ. ಎಚ್. ಪಾಟೀಲರಿಗೆ ಭಾರತದ ಭೀಮನಿಗೆ ಹೋಲಿಸಿದ್ದೀರಿ. ಶ್ರೀ ಪಾಟೀಲರು ಭೀಮನಾಗಿದ್ದರೆ ಕಳ್ಳರು ಬಲಭೀಮರಾಗಿದ್ದಾರೆ, ಗಿಡಗಳ ಬೆಳವಣಿಗೆ—ಕಳೆದ 20 ವರ್ಷಗಳಲ್ಲಿ ನಮ್ಮ ಭಾಗದಲ್ಲಿ ಬಡತನಕ್ಕಾಗಿ ಇದ್ದ ಗಿಡಗಳನ್ನೆಲ್ಲಾ ಕಡಿದು. ಹೊಟ್ಟೆಪಾಡಿಗಾಗಿ ಮಾರಿಕೊಂಡಿದ್ದಾರೆ. ಸರ್ಕಾರದವರು ಗಿಡ ಬೆಳೆಸುವ ಕುರಿತು ಮಾಡಿದ ಪ್ರಯತ್ನ ಯಶಸ್ವಿಯಾಗಿಲ್ಲ. ರೈತರು ಪ್ರತಿಹೊಲದಲ್ಲೂ 5 ಗಿಡಗಳನ್ನು ಇಡಲೇಬೇಕೆಂದೂ ಸಾಲ ಮಂಜೂರು ಮಾಡುವಾಗ ಹೊಸದಾಗಿ 5 ಗಿಡಗಳನ್ನು ಹಚ್ಚೀ ತೀರಬೇಕೆಂದೂ ಕಾಯಿದೆ ಮಾಡಬೇಕು. ಗೊಬ್ಬರಕ್ಕೆ ಅತಿ ಉಪಯುಕ್ತವಿರುವ ಸಗಣಿಯನ್ನು ಉರುವಲಕ್ಕೆ ಉಪಯೋಗಿಸಿದವರಿಗೆ ಶಾಸನವಾಗಲೇಬೇಕು.

ಅಧಿಕಾರಿಗಳಲ್ಲಿ ಪ್ರಾರ್ಥನೆ. ನಿಮಗೆ ನಾನು ಬೇಡಿಕೊಳ್ಳುವುದು ಏನೆಂದರೆ ಗಾಂಧೀಜಿಯವರು ಕಷ್ಟಪಟ್ಟು ಸ್ವಾತಂತ್ರ್ಯ ಗಳಿಸಿಕೊಟ್ಟರು. ಸ್ವತಂತ್ರ ಭಾರತದ ಅಧಿಕಾರಿಗಳಾದ ತಾವು ಲಂಚ ಬಿಡುವ ಮನಸ್ಸು ಮಾಡಿರಿ. ಆ ಧೈರ್ಯ ನಿಮಗೆ ಇರದಿದ್ದರೆ ಸ್ವಲ್ಪವಾದರೂ ಕಡಿಮೆ ಮಾಡಿ. ಬಡರೈತರ ಹಣದಿಂದ ತಮಗೆ ಪಗಾರ ಸಿಗುತ್ತಿದ್ದು ಅವನ ಕಲ್ಯಾಣಕ್ಕಾಗಿ ಮಾನವೀಯತೆಯಿಂದ ಪ್ರಯತ್ನಿಸಿರಿ.

ಕೊನೆಯದಾಗಿ ಈ ರಾಜ್ಯಸರ್ಕಾರವು ಇಲ್ಲಿಯವರೆಗೆ ಅಲಕ್ಷಿಸಿದಂತೆ ಇನ್ನು ಮುಂದೆ ನಮ್ಮ ಭಾಗವನ್ನು ಅಲಕಿಸಬೇಡಿ. ಈ ಮೇಲೆ ಪ್ರಾರ್ಥಿಸಿದಂತೆ ಬಿಜಾಪುರ ಜಿಲ್ಲೆಯ ಎಲ್ಲ ಭೂಮಿಯನ್ನೂ ಟ್ರ್ಯಾಕ್ಟರುಗಳಿಂದ ಸ್ವಚ್ಛ ಮಾಡಿಸಿ, ಉತ್ತಮ ಒಡ್ಡುಗಳನ್ನು ಹಾಕಿ ಬುಲ್ಡೋಜರ್‌ನಿಂದ ಸಮಪಾತಳಿ ಮಾಡಿಸಿ, ಕೃಷ್ಣಾ ಮೇಲ್ದಂಡೆ ಯೋಜನೆಯಂತಹ ದೊಡ್ಡ ಮತ್ತು ನೀರಾವರಿ ಸಣ್ಣ ಯೋಜನೆಗಳನ್ನು ಕಾರ್ಯಗತಗೊಳಿಸಿ ಅನ್ನ ನಿರ್ಮಾಣವಾಗುವಂತೆ ಮಾಡಿ ದುಷ್ಕಾಲ ರಾಕ್ಷಸನ ದವಡೆಯಲ್ಲಿ ಸಿಕ್ಕಿರುವ ನಮ್ಮನ್ನು ಉದ್ಧರಿಸಬೇಕೆಂದು ಪ್ರಾರ್ಥಿಸಿ ಸಭಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

7-00 P.M.

## CALLING ATTENTION TO MATTERS OF URGENT PUBLIC IMPORTANCE

### (i) *re*: Fall in Prices of Arecanut in the State.

SRI S. M. SHEERNALY CHANDRASEKHAR (Hosanagar).—I call the attention of the Minister for Agriculture and Forest to the steep fall in the prices of Arecanut in the various Markets in the State.

†SRI K. H. PATIL (Minister for Agriculture).—Sir, in reply to the Call Attention Notice given by Sriyuths V. N. Patil, Kagodu Thimmappa and B. V. Kakkilaya, I state as follows:

Government are aware of the present fall in the prices of Arecanut in the various Markets in the State. Government have also received representations from the Areca growers requesting Government to take steps to arrest further fall in the prices of Areca.